ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಅಪ್ಪ ಅಮ್ಮನೇ ಇಲ್ಲದ ಮಕ್ಕಳು ಭ್ರೂಣಶಾಸ್ತ್ರದ ಹೊಸ ಹೆಜ್ಜೆ



ವಿಪಕ್ಷಗಳ ಒಗ್ಗಟ್ಟಿನಲ್ಲಿ ಗ್ಯಾರಂಟಿ ಇಲ್ಲ: ಮೋದಿ ವ್ಯಂಗ್ಯ 8

ಬಿಜೆಪಿಯಲ್ಲಿ ಬಗೆಹರಿಯದ ಗೊಂದಲ

ವಾಣಿಜ್ಯ ಬಳಕೆ ಸಿಲಿಂಡರ್ ದರ ಹೆಚ್ಚಳ 9

ವಿರೋಧ ಪಕ್ಷ ನಾಯಕ ಯಾರು? 7

ತನಿಖಾ ವರದಿಗಳೆಂಬ ಪ್ರಹಸನ

• ವಿ.ಎಸ್. ಸುಬ್ರಹ್ಮಣ್ಯ



ಬೆಂಗಳೂರು: 2013–2018ರ ಅವಧಿಯಲ್ಲಿ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸದನ ಸಮಿತಿಗಳು, ನ್ಯಾಯಾಂಗ ಆಯೋಗಗಳ ಮೂಲಕ ಎದುರಾಳಿಗಳ ವಿರುದ್ಧ 'ತನಿಖೆ'ಯ ಅಸ್ತ್ರ ಝಳಪಿಸಿತ್ತು. ಐದು ವರ್ಷ ಕಳೆದು ಪುನಃ ಸಿದ್ದರಾಮಯ್ಯ ನೇತೃತ್ವದ ಸರ್ಕಾರವೇ ಅಧಿಕಾರದ ಚುಕ್ಕಾಣಿ ಹಿಡಿದಿದ್ದರೂ ತನಿಖಾ ವರದಿಗಳನ್ನು ಆಧರಿಸಿ ಕ್ರಮ ಕೈಗೊಳ್ಳುವುದು 'ಕನ್ನಡಿಯೊಳಗಿನ ಗಂಟು' ಎಂಬಂತಹ ಸ್ಥಿತಿಯೇ ಇದೆ.

ಆಗಲೂ ವಿರೋಧಪಕ್ಷದಲ್ಲಿದ್ದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ರಾಜಕೀಯವಾಗಿ ಕಟ್ಟಿಹಾಕಲು ಬಲವಾದ ಪಟ್ಟು ಹಾಕತೊಡಗಿದ್ದವು. ಆಗ, 2008–2013ರ ಅವಧಿಯ ಬಿಜೆಪಿ ಸರ್ಕಾರ ಮತ್ತು ಅದಕ್ಕೂ ಹಿಂದಿನ ಸರ್ಕಾರಗಳ ವಿರುದ್ಧದ ಆರೋಪಗಳ ದಾಖಲೆಗಳನ್ನು ತಿರುವಿ ಹಾಕುವ ಕೆಲಸಕ್ಕೆ ಕಾಂಗ್ರೆಸ್ ಸರ್ಕಾರ ಮುಂದಾಗಿತ್ತು. ನೈಸ್ ಅಕ್ರಮ, ವಿದ್ಯುತ್ ಖರೀದಿಯಲ್ಲಿನ ಭ್ರಷ್ಟಾಚಾರ, ಅಕ್ರಮ ಗಣಿಗಾರಿಕೆ, ಕೆರೆಗಳ ಜಮೀನು ಒತ್ತುವರಿ ಕುರಿತ ವಿಚಾರಣೆಗೆ ಸರ್ಕಾರವೇ ಆಸಕ್ತಿ ವಹಿಸಿ ಸದನ ಸಮಿತಿಗಳನ್ನು ನೇಮಿಸಿತ್ತು.

'ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳನ್ನು 'ರೀಡೂ' ಹೆಸರಿನಲ್ಲಿ ಅಕ್ರಮವಾಗಿ ಡಿನೋಟಿಫೈ ಮಾಡಲಾಗಿದೆ' ಎಂದು 2014ರಲ್ಲಿ ಸಿದ್ದರಾಮಯ್ಯ ವಿರುದ್ಧ ಆರೋಪ ಮಾಡಿದ್ದ ವಿರೋಧ ಪಕ್ಷಗಳು, ಅವರನ್ನು ಡಿನೋಟಿಫಿಕೇಷನ್ ಹಗರಣದ ಬಲೆಗೆ ಬೀಳಿಸುವ ದಾಳ ಉರುಳಿಸಿದ್ದವು. ತಮ್ಮ ಅವಧಿಯೂ ಸೇರಿದಂತೆ ಅರ್ಕಾವತಿ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಆರಂಭದ ಹಂತದಿಂದ ಸಮಗ್ರ ತನಿಖೆಗೆ ಆದೇಶಿಸುವ ಮೂಲಕ ವಿಪಕ್ಷಗಳನ್ನೂ ಇಕ್ಕಟ್ಟಿಗೆ ಸಿಲುಕಿಸಲು ಸಿದ್ದರಾಮಯ್ಯ ಯತ್ನಿಸಿದ್ದರು.

ಪ್ರತಿಯೊಂದು ಸದನ ಸಮಿತಿಯ ಕಾರ್ಯನಿರ್ವಹಣೆಗೆ ಹತ್ತಾರು ಕೋಟಿ ರೂಪಾಯಿ ವೆಚ್ಚವಾಗಿದೆ. ನ್ಯಾಯಾಂಗ ವಿಚಾರಣೆಗೂ ಹಲವು ಕೋಟಿಗಳು ವ್ಯಯವಾಗಿವೆ.

6ನೇ ಪುಟ ನೋಡಿ

ಒಳನೋಟ

ವ್ಯರ್ಥವಾದ ಸಾರ್ವಜನಿಕ ಹಣ

ಪ್ರತಿಕ್ರಿಯಿಸಿ: 9606038256
feedback@prajavani.co.in

ನಾಟಕೀಯ ಎಂಬಂತಾಗಿದೆ: ಟಿ.ಬಿ.ಜಯಚಂದ್ರ

'ಸದನ ಸಮಿತಿಗಳು, ವಿಚಾರಣಾ ಆಯೋಗಗಳನ್ನು ರಚಿಸುವುದು, ವರದಿ ಪಡೆದು ಮೌನಕ್ಕೆ ಶರಣಾಗುವುದು ಇವೆಲ್ಲವೂ ಒಂದರ್ಥದಲ್ಲಿ ನಾಟಕೀಯ ಎನಿಸುತ್ತಿದೆ. ಶಾಸನಸಭೆಗಳು ಮಹತ್ವ ಕಳೆದುಕೊಳ್ಳುತ್ತಿರುವುದರ ಲಕ್ಷಣ ಇದು. ವರ್ಷಗಟ್ಟಲೆ ತನಿಖೆ, ವಿಚಾರಣೆ ನಡೆಸಿ ವರದಿ ಸಲ್ಲಿಸಿದರೂ ಏನೂ ಪ್ರಯೋಜನ ಆಗುತ್ತಿಲ್ಲ' ಎಂದು ನೈಸ್ ಅಕ್ರಮದ ಕುರಿತ ವಿಚಾರಣೆ ನಡೆಸಿದ್ದ ಸದನ ಸಮಿತಿಯ ಅಧ್ಯಕ್ಷರಾಗಿದ್ದ ಹಾಲಿ ಶಾಸಕ ಟಿ.ಬಿ. ಜಯಚಂದ್ರ ಪ್ರತಿಕ್ರಿಯಿಸಿದರು.

'ನೈಸ್ ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು ಆಧರಿಸಿ ಏಕೆ ಕ್ರಮ ಆಗಲಿಲ್ಲ ಎಂಬುದನ್ನು ಈಗ ನಾನು ಹೇಳುವುದು ಕಷ್ಟ. ವರದಿ ಸದನದ ಮುಂದಿದೆ' ಎಂದರು.

ತೆರಿಗೆ ಹಣ ಪೋಲು: ಎ.ಟಿ.ರಾಮಸ್ವಾಮಿ

'ವಿವಿಧ ಪ್ರಕರಣಗಳ ಕುರಿತು ತೀವ್ರ ಚರ್ಚೆ ಆದಾಗ ಸರ್ಕಾರಗಳು ಅನೇಕ ಸಮಿತಿ, ಆಯೋಗಗಳನ್ನು ರಚಿಸಿ ವಿಚಾರಣೆ, ತನಿಖೆ ನಡೆಸುತ್ತವೆ. ಸದನ ಸಮಿತಿಗಳನ್ನೂ ನೇಮಿಸಲಾಗುತ್ತದೆ. ಆದರೆ, ಅವುಗಳ ವರದಿಗಳನ್ನು ಆಧರಿಸಿ ಕ್ರಮ ಕೈಗೊಳ್ಳುವುದು ಮರೀಚಿಕೆಯಾಗುತ್ತಿದೆ. ಯಾವ ಪಕ್ಷದ ಸರ್ಕಾರವೂ ಅಂತಹ ಬದ್ಧತೆ ಪ್ರದರ್ಶಿಸುತ್ತಿಲ್ಲ. ಇದರಿಂದ ಸಾರ್ವಜನಿಕರ ತೆರಿಗೆಯ ಹಣದ ಪೋಲಾಗುತ್ತಿದೆ' ಎನ್ನುತ್ತಾರೆ ಬೆಂಗಳೂರು ನಗರದಲ್ಲಿನ ಸರ್ಕಾರಿ ಜಮೀನುಗಳ ಒತ್ತುವರಿ ಕುರಿತು ತನಿಖೆ ನಡೆಸಿದ್ದ ಜಂಟಿ ಸದನ ಸಮಿತಿ ಅಧ್ಯಕ್ಷರಾಗಿದ್ದ ಎ.ಟಿ. ರಾಮಸ್ವಾಮಿ.

'ಮಹಾಲೇಖಪಾಲರಂತಹ (ಸಿಎಜಿ) ಸಾಂವಿಧಾನಿಕ ಸಂಸ್ಥೆಗಳು ಸಲ್ಲಿಸುವ ವರದಿಗಳನ್ನೇ ಸರ್ಕಾರಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಎಲ್ಲವೂ ಆ ಕ್ಷಣದ ರಾಜಕೀಯ ಲಾಭಕ್ಕಾಗಿ ಬಳಕೆಯಾಗುತ್ತಿವೆ' ಎಂದರು.

ಏನು? ಎತ್ತ?

ಸದನ ಸಮಿತಿ: ಯಾವುದೇ ವಿಷಯದ ಕುರಿತು ವಿಧಾನಸಭೆ ಅಥವಾ ವಿಧಾನ ಪರಿಷತ್‌ನಲ್ಲಿ ಹೆಚ್ಚು ಚರ್ಚೆ ನಡೆದು ಆಳವಾದ ಅಧ್ಯಯನ ಅಥವಾ ತನಿಖೆ, ವಿಚಾರಣೆಗಾಗಿ ಸದನ ಸಮಿತಿ ರಚಿಸುವಂತೆ ಸದಸ್ಯರು ಪಟ್ಟು ಹಿಡಿದಾಗ ಸರ್ಕಾರದ ಅಭಿಪ್ರಾಯವನ್ನೂ ಪಡೆದು ವಿಧಾನಸಭೆಯ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸಭಾಪತಿ ಸದನ ಸಮಿತಿ ರಚಿಸುವ ನಿರ್ಧಾರ ಕೈಗೊಳ್ಳುತ್ತಾರೆ.

ಸದನ ಸಮಿತಿಗಳು ಸಲ್ಲಿಸುವ ವರದಿಯನ್ನು ಸದನದ ಮುಂದೆ ಮಂಡಿಸುವ ಅಧಿಕಾರವು ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ. ಮಂಡನೆ, ಚರ್ಚೆ ಮತ್ತು ಅಂಗೀಕಾರ ಎಲ್ಲವೂ ಸರ್ಕಾರದ ನಿಲುವನ್ನು ಆಧರಿಸಿಯೇ ತೀರ್ಮಾನವಾಗುತ್ತದೆ.

ವಿಚಾರಣಾ ಆಯೋಗ: ಯಾವುದೇ ಪ್ರಕರಣದ ಕುರಿತು ವಿಚಾರಣೆ ನಡೆಸಲು ಸರ್ಕಾರ ನಿರ್ಧರಿಸಿದರೆ ವಿಚಾರಣಾ ಆಯೋಗಗಳ ಕಾಯ್ದೆ–1952ರ ಅಡಿಯಲ್ಲಿ ಆಯೋಗಗಳನ್ನು ನೇಮಿಸಲಾಗುತ್ತದೆ. ಆಯೋಗದ ಅಧಿಕಾರ ವ್ಯಾಪ್ತಿ, ವಿಚಾರಣೆ ನಡೆಸಬೇಕಾದ ವಿಷಯಗಳು, ಆಯೋಗದ ಅಧಿಕಾರದ ಅವಧಿ ಎಲ್ಲವನ್ನೂ ಸರ್ಕಾರವೇ ನಿರ್ಧರಿಸುತ್ತದೆ. ಆಯೋಗವು ಸಲ್ಲಿಸುವ ವರದಿಯನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವೂ ಸರ್ಕಾರಕ್ಕೆ ಇರುತ್ತದೆ.

ಮಹಾರಾಷ್ಟ್ರದ ಬುಲ್ಧಾನ ಜಿಲ್ಲೆಯ ಸಮೃದ್ಧಿ ಎಕ್ಸ್‌ಪ್ರೆಸ್ ವೇನಲ್ಲಿ ಸುಟ್ಟು ಕರಕಲಾದ ಸ್ಲೀಪರ್ ಕೋಚ್ ಬಸ್ –ಪಿಟಿಐ ಚಿತ್ರ

ಮಹಾರಾಷ್ಟ್ರದ ಸಮೃದ್ಧಿ ಎಕ್ಸ್‌ಪ್ರೆಸ್ ವೇನಲ್ಲಿ ಬಸ್‌ಗೆ ಬೆಂಕಿ

26 ಮಂದಿ ಸಜೀವ ದಹನ

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ಬುಲ್ಧಾನ ಜಿಲ್ಲೆಯ ಸಮೃದ್ಧಿ ಎಕ್ಸ್‌ಪ್ರೆಸ್ ವೇನಲ್ಲಿ ಶುಕ್ರವಾರ ತಡರಾತ್ರಿ ಖಾಸಗಿ ಸ್ಲೀಪರ್ ಕೋಚ್ ಬಸ್‌ಗೆ ಬೆಂಕಿ ಹೊತ್ತಿಕೊಂಡು ಸಂಭವಿಸಿದ ಭೀಕರ ದುರಂತದಲ್ಲಿ 26 ಪ್ರಯಾಣಿಕರು ಸಜೀವ ದಹನಗೊಂಡಿದ್ದಾರೆ.

ಚಾಲಕ, ಕ್ಲೀನರ್ ಸೇರಿದಂತೆ ಎಂಟು ಪ್ರಯಾಣಿಕರು ಕಿಟಕಿಯಿಂದ ಹಾರಿ ಜೀವ ಉಳಿಸಿಕೊಂಡಿದ್ದಾರೆ. ಗಾಯಗೊಂಡಿರುವ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ಎಲ್ಲರೂ ಚೇತರಿಸಿಕೊಂಡಿದ್ದಾರೆ. ಪ್ರಯಾಣಿಕರಲ್ಲಿ ಹೆಚ್ಚಿನವರು ಗಾಢ ನಿದ್ದೆಯಲ್ಲಿದ್ದರು. ಹಾಗಾಗಿ, ತಕ್ಷಣವೇ ಹೊರಬರಲು ಸಾಧ್ಯವಾಗಿಲ್ಲ. ಸಾವಿನ ಸಂಖ್ಯೆ ಹೆಚ್ಚಳಕ್ಕೆ ಇದೇ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

> **ಎಕ್ಸ್‌ಪ್ರೆಸ್ ವೇನಲ್ಲಿ ಒತ್ತಡದಲ್ಲಿ ವಾಹನಗಳನ್ನು ಚಲಾಯಿಸುವ ಚಾಲಕರಿಗೆ ಈ ಬಸ್ ದುರಂತ ಎಚ್ಚರಿಕೆಯ ಗಂಟೆಯಾಗಿದೆ**
> **ಏಕನಾಥ ಶಿಂದೆ**
> ಮುಖ್ಯಮಂತ್ರಿ, ಮಹಾರಾಷ್ಟ್ರ

ಬುಲ್ಧಾನ ಜಿಲ್ಲೆಯ ಸಿಂಧಖೇಡರಾಜ ಸಮೀಪದ ಪಿಂಪಲಖುಟ ಗ್ರಾಮದ ಬಳಿ ಮಧ್ಯರಾತ್ರಿ 1.30ರ ಸುಮಾರಿಗೆ ಈ ದುರಂತ ಸಂಭವಿಸಿದೆ. ಮಹಾರಾಷ್ಟ್ರ ಸರ್ಕಾರವು ಅವಘಡದ ಬಗ್ಗೆ ತನಿಖೆಗೆ ಆದೇಶಿಸಿದ್ದು, ಮೃತಪಟ್ಟವರ ಕುಟುಂಬಕ್ಕೆ ತಲಾ ₹ 5 ಲಕ್ಷ ಪರಿಹಾರವನ್ನೂ ಘೋಷಿಸಿದೆ.

ಬೆಂಕಿ ಹೊತ್ತಿಕೊಂಡಿದ್ದು ಹೇಗೆ?: ಬಸ್ ವೇಗವಾಗಿ ಚಲಿಸುತ್ತಿದ್ದಾಗ ಟೈರ್ ಸ್ಫೋಟಗೊಂಡಿದ್ದರಿಂದ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿ ಬದಿಯ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಬಳಿಕ ವಿಭಜಕಕ್ಕೂ ಅಪ್ಪಳಿಸಿ ಬಲಭಾಗಕ್ಕೆ ಉರುಳಿದೆ. ಆಗ ಡೀಸೆಲ್ ಟ್ಯಾಂಕ್ ಸಿಡಿದ ಪರಿಣಾಮ ಬೆಂಕಿ ಹೊತ್ತಿಕೊಂಡಿದೆ.

ಕೆಲವೇ ನಿಮಿಷಗಳಲ್ಲಿ ಬೆಂಕಿಯ ಕೆನ್ನಾಲಿಗೆ ಇಡೀ ಬಸ್ ಅನ್ನು ವ್ಯಾಪಿಸಿದೆ. ಬಸ್‌ನ ಬಾಗಿಲು ಭದ್ರವಾಗಿ ಲಾಕ್ ಆಗಿದ್ದರಿಂದ ಪ್ರಯಾಣಿಕರು ಹೊರಬರಲು ಸಾಧ್ಯವಾಗಿಲ್ಲ ಎನ್ನುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅವಘಡದ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಬುಲ್ಧಾನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುನಿಲ್ ಕಡಸ್ನೆ ತಿಳಿಸಿದ್ದಾರೆ.

5ನೇ ಪುಟ ನೋಡಿ

ಐಎಸ್ ನಂಟು: ಎನ್‌ಐಎ ಪೂರಕ ಆರೋಪಪಟ್ಟಿ

ನವದೆಹಲಿ (ಪಿಟಿಐ): ಐಎಸ್ ಉಗ್ರ ಸಂಘಟನೆಯ ಜೊತೆ ಸೇರಿ ದೇಶದಾದ್ಯಂತ ಭಯೋತ್ಪಾದನಾ ಕೃತ್ಯ ನಡೆಸಲು ಸಂಚು ರೂಪಿಸಿದ ಪ್ರಕರಣದಲ್ಲಿ ಕರ್ನಾಟಕದ ಒಂಬತ್ತು ಮಂದಿಯ ಮೇಲೆ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಮೊದಲ ಪೂರಕ ಆರೋಪ ಪಟ್ಟಿ ಸಲ್ಲಿಸಿದೆ.

ಮೊಹಮ್ಮದ್ ಶಾರಿಕ್ (25), ಮಾಝ್ ಮುನೀರ್ ಅಹಮ್ಮದ್ (23), ಸಯ್ಯದ್ ಯಾಸಿನ್ (22), ರಿಶಾನ್ ತಾಜುದ್ದೀನ್ ಶೇಖ್ (22), ಹುಝೈರ್ ಫರ್ಹಾನ್ ಬೇಗ್ (22), ಮಝಿನ್ ಅಬ್ದುಲ್ ರಹಮಾನ್ (22), ನದೀಂ ಅಹಮ್ಮದ್ ಕೆ.ಎ. (22), ಜಬೀವುಲ್ಲಾ (32) ಮತ್ತು ನದೀಂ ಫೈಸಲ್ ಎನ್. (27) ಎಂಬವರ ವಿರುದ್ಧ ಪೂರಕ ಆರೋಪಪಟ್ಟಿ ಸಲ್ಲಿಸಲಾಗಿದೆ.

ಕಾನೂನುಬಾಹಿರ ಚಟುವಟಿಕೆ ನಿಗ್ರಹ ಕಾಯ್ದೆ (ಯುಎಪಿಎ), ಭಾರತೀಯ ದಂಡ ಸಂಹಿತೆ ಮತ್ತು ಆಸ್ತಿ ನಾಶ ಮತ್ತು ಧ್ವಂಸ ತಡೆ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿ ಆರೋಪ ದಾಖಲಿಸಲಾಗಿದೆ ಎಂದು ಎನ್‌ಐಎ ತಿಳಿಸಿದೆ. ದಾಳಿಗಳನ್ನು ನಡೆಸುವ ಕೌಶಲಕ್ಕಾಗಿ ಆರೋಪಿಗಳಲ್ಲಿ ಐವರಿಗೆ ರೊಬೊಟಿಕ್ಸ್ ಕೋರ್ಸ್ ಮಾಡಲು ಐಎಸ್ ಸಂಘಟನೆಯನ್ನು ನಿರ್ವಹಣೆ ಮಾಡುವವರು ಸೂಚಿಸಿದ್ದರು ಎಂದೂ ಆರೋಪಿಸಿದೆ.

8 ನೇ ಪುಟ ನೋಡಿ

ಸರ್ಕಾರ ಭರಿಸಲಿದೆ ₹15 ಶುಲ್ಕ • 1.28 ಕೋಟಿ ಮಹಿಳೆಯರಿಗೆ ಸೌಲಭ್ಯ

'ಗೃಹ ಲಕ್ಷ್ಮಿ' ಜಾರಿಗೆ 'ಪ್ರಜಾಪ್ರತಿನಿಧಿ'

• ರಾಜೇಶ್ ರೈ ಚಟ್ಲ

ಬೆಂಗಳೂರು: ಮನೆಯ ಯಜಮಾನಿಗೆ ತಿಂಗಳಿಗೆ ₹2 ಸಾವಿರ ನೀಡುವ ಗೃಹ ಲಕ್ಷ್ಮಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಪ್ರಜಾಪ್ರತಿನಿಧಿಗಳನ್ನು ನೇಮಿಸಿಕೊಳ್ಳಲು ಸರ್ಕಾರ ಮುಂದಾಗಿದೆ.

'ಅರ್ಜಿ ಸ್ವೀಕರಿಸಲು ಅನುಕೂಲವಾಗುವಂತೆ ಪ್ರತಿ ಜಿಲ್ಲೆಯಲ್ಲಿ 50ರಿಂದ 100 ಜನರನ್ನು ಪ್ರಜಾಪ್ರತಿನಿಧಿಗಳನ್ನಾಗಿ ನೇಮಿಸಲಾಗುತ್ತದೆ. ಇದರ ಹೊಣೆಯನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ವಹಿಸಲಾಗುವುದು. ಯೋಜನೆ ಅನುಷ್ಠಾನಕ್ಕೆ ಅಗತ್ಯವಾದ ತಂತ್ರಾಂಶ 'ಗೃಹಲಕ್ಷ್ಮಿ' ಆ್ಯಪ್ ಅನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. ಪ್ರತಿನಿಧಿಗಳಾಗಿ ನೇಮಕಗೊಂಡವರ ಮೊಬೈಲ್‌ಗೆ ಈ ಆ್ಯಪ್ ಅಳವಡಿಸಿ, ಲಾಗಿನ್ ಆಗಲು ಪಾಸ್‌ವರ್ಡ್ ಕೊಡಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೂಲಗಳು ಹೇಳಿವೆ.

ಈ ಪ್ರಜಾಪ್ರತಿನಿಧಿಗಳು ಆ್ಯಪ್‌ಗೆ ಲಾಗಿನ್ ಆಗಿ ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡಿ, ಪೂರಕ ದಾಖಲೆಗಳನ್ನು (ರೇಷನ್ ಕಾರ್ಡ್, ಆಧಾರ್, ಬ್ಯಾಂಕ್ ಖಾತೆ ವಿವರ) ಅಪ್‌ಲೋಡ್ ಮಾಡಲಿದ್ದಾರೆ.

5ನೇ ಪುಟ ನೋಡಿ

'10ರಿಂದ ಅನ್ನ ಭಾಗ್ಯ ಹಣ'

ಅನ್ನ ಭಾಗ್ಯ ಯೋಜನೆಯ ಫಲಾನುಭವಿಗಳಿಗೆ ತಲಾ 5 ಕೆ.ಜಿ ಅಕ್ಕಿಯ ಹಣವನ್ನು ಜುಲೈ 10ರಿಂದ ಪಾವತಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಅನ್ನ ಭಾಗ್ಯ ಮತ್ತು ಗೃಹ ಜ್ಯೋತಿ ಎರಡೂ ಯೋಜನೆಗಳು ಜುಲೈ ತಿಂಗಳಲ್ಲೇ ಅನುಷ್ಠಾನಕ್ಕೆ ಬರುತ್ತಿವೆ. ಗೃಹ ಜ್ಯೋತಿ ಯೋಜನೆ ಶನಿವಾರದಿಂದಲೇ ಜಾರಿಯಾಗಿದೆ. ಈ ಯೋಜನೆಯಡಿ ಮೊದಲ ವಿದ್ಯುತ್ ಬಿಲ್ ಅನ್ನು ಆಗಸ್ಟ್ ತಿಂಗಳಿನಲ್ಲಿ ನೀಡಲಾಗುವುದು' ಎಂದು ಹೇಳಿದರು.

'ಅನ್ನ ಭಾಗ್ಯ ಯೋಜನೆಯ ಈ ತಿಂಗಳ ಬಾಬ್ತಿನ ಹಣವನ್ನು ಇದೇ ತಿಂಗಳಲ್ಲಿ ಪಾವತಿಸುತ್ತೇವೆ. ಜುಲೈ 10ರ ನಂತರ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಆಗಲಿದೆ' ಎಂದರು.

'ದೈಹಿಕ ಸಂಬಂಧ: ಹೆಣ್ಣಿನ ವಯಸ್ಸು 16ಕ್ಕೆ ಇಳಿಸಿ'

ಗ್ವಾಲಿಯರ್ (ಪಿಟಿಐ): ಸಹಮತದ ಲೈಂಗಿಕ ಸಂಬಂಧಕ್ಕೆ ಹೆಣ್ಣಿನ ವಯಸ್ಸನ್ನು 18ರಿಂದ 16 ವರ್ಷಕ್ಕೆ ಇಳಿಸಬೇಕೆಂದು ಮಧ್ಯಪ್ರದೇಶ ಹೈಕೋರ್ಟ್‌ನ ಗ್ವಾಲಿಯರ್ ಪೀಠವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಬಾಲಕಿ ಮೇಲಿನ ಅತ್ಯಾಚಾರ, ಗರ್ಭಧರಿಸಿದ ಪ್ರಕರಣದಲ್ಲಿ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾದ ಎಫ್‌ಐಆರ್ ಅನ್ನು ರದ್ದುಪಡಿಸಿ ಆದೇಶ ನೀಡಿದ ನ್ಯಾಯಮೂರ್ತಿ ದೀಪಕ್ ಕುಮಾರ್ ಅಗರ್‌ವಾಲ್ ನೇತೃತ್ವದ ನ್ಯಾಯಪೀಠವು, ಈ ಮೇಲಿನಂತೆ ಕೇಂದ್ರ ಸರ್ಕಾರವನ್ನು ಕೋರಿದೆ.

'ಈಚೆಗೆ, ಸಾಮಾಜಿಕ ಮಾಧ್ಯಮ ಜಾಗೃತಿಯಿಂದಾಗಿ ಹೆಣ್ಣಾಗಲೀ ಗಂಡಾಗಲೀ 14ನೇ ವರ್ಷಕ್ಕೇ ಪ್ರೌಢಾವಸ್ಥೆಗೆ ತಲುಪುತ್ತಿದ್ದಾರೆ. ಚಿಕ್ಕವಯಸ್ಸಿನಲ್ಲೇ ಪ್ರೌಢಾವಸ್ಥೆ ತಲುಪುತ್ತಿರುವುದು ಪರಸ್ಪರ ಆಕರ್ಷಿತರಾಗಿ ಒಪ್ಪಿತ ದೈಹಿಕ ಸಂಬಂಧಕ್ಕೆ ಕಾರಣವಾಗುತ್ತಿದೆ. ಆದರೆ, ಸಹಮತದ ಲೈಂಗಿಕ ಸಂಬಂಧಕ್ಕೆ ಹೆಣ್ಣಿನ ವಯಸ್ಸು 18ಕ್ಕೆ ನಿಗದಿಪಡಿಸಿರುವುದರಿಂದ ಬಾಲಕರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಒಪ್ಪಿತ ದೈಹಿಕ ಸಂಬಂಧಕ್ಕೆ ಹೆಣ್ಣಿನ ವಯಸ್ಸನ್ನು 18ರಿಂದ 16 ವರ್ಷಕ್ಕೆ ಇಳಿಸಲು ಚಿಂತನೆ ನಡೆಸಬೇಕು. ಕಾನೂನು ತಿದ್ದುಪಡಿಯ ಮೂಲಕ ಈ ಅನ್ಯಾಯ ಸರಿಪಡಿಸಬೇಕು' ಎಂದು ಪೀಠ ಹೇಳಿದೆ.

ಏಕದಿನ ವಿಶ್ವಕಪ್: ಅರ್ಹತೆ ಪಡೆಯಲು ವಿಂಡೀಸ್ ವಿಫಲ

ಹರಾರೆ (ರಾಯಿಟರ್ಸ್): ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡ ಇದೇ ಮೊದಲ ಬಾರಿ ಏಕದಿನ ಕ್ರಿಕೆಟ್ ವಿಶ್ವಕಪ್‌ನಲ್ಲಿ ಆಡುತ್ತಿಲ್ಲ. ಅರ್ಹತಾ ಟೂರ್ನಿಯಲ್ಲಿ ಶನಿವಾರ ಸ್ಕಾಟ್ಲೆಂಡ್ ಎದುರು ಏಳು ವಿಕೆಟ್‌ಗಳಿಂದ ಸೋತು ಮುಖಭಂಗ ಅನುಭವಿಸುವ ಮೂಲಕ ವಿಶ್ವಕಪ್‌ನಲ್ಲಿ ಸ್ಥಾನ ಪಡೆಯುವ ಆ ತಂಡದ ಕನಸು ಭಗ್ನಗೊಂಡಿತು.

ಸೂಪರ್ ಸಿಕ್ಸ್ ಪಂದ್ಯದಲ್ಲಿ ಟಾಸ್ ಗೆದ್ದ ಸ್ಕಾಟ್ಲೆಂಡ್, ವೆಸ್ಟ್ ಇಂಡೀಸ್ ತಂಡವನ್ನು ಬ್ಯಾಟಿಂಗಿಗೆ ಇಳಿಸಿ 43.2 ಓವರುಗಳಲ್ಲಿ 181 ರನ್‌ಗಳಿಗೆ ಕಟ್ಟಿಹಾಕಿತು. ಈ ಮೊತ್ತವನ್ನು ಸ್ಕಾಟ್ಲೆಂಡ್ ಇನ್ನೂ 39 ಎಸೆತಗಳಿರುವಂತೆ (3 ವಿಕೆಟ್‌ಗೆ 185) ದಾಟಿತು. 3 ವಿಕೆಟ್ ಪಡೆದಿದ್ದ ಮೆಕ್‌ಮುಲೆನ್ ಬ್ಯಾಟಿಂಗ್‌ನಲ್ಲೂ ಮಿಂಚಿ 69 ರನ್ ಬಾರಿಸಿದರು. ಆರಂಭ ಆಟಗಾರ ಮ್ಯಾಥ್ಯೂ ಕ್ರಾಸ್ 74 ರನ್ ಗಳಿಸಿ ಅಜೇಯರಾಗುಳಿದರು.

ಅರ್ಹತಾ ಟೂರ್ನಿಯಿಂದ ಎರಡು ತಂಡಗಳಷ್ಟೇ ವಿಶ್ವಕಪ್‌ನಲ್ಲಿ ಸ್ಥಾನ ಪಡೆಯಲಿವೆ. ಅಕ್ಟೋಬರ್ 5ರಿಂದ ನವೆಂಬರ್ 19ರವರೆಗೆ ಭಾರತದಲ್ಲಿ ವಿಶ್ವಕಪ್ ನಡೆಯಲಿದೆ.

ಸೂಪರ್ ಸಿಕ್ಸ್ ಹಂತದಲ್ಲಿ ವೆಸ್ಟ್ ಇಂಡೀಸ್ ಮೂರು ಪಂದ್ಯಗಳಿಂದ ಒಂದೂ ಪಾಯಿಂಟ್ ಪಡೆದಿಲ್ಲ. ಶ್ರೀಲಂಕಾ ಮತ್ತು ಆತಿಥೇಯ ಜಿಂಬಾಬ್ವೆ ತಂಡಗಳು ಈಗಾಗಲೇ 3 ಪಂದ್ಯಗಳಿಂದ ಆರು ಪಾಯಿಂಟ್ಸ್ ಪಡೆದಿವೆ.

14ನೇ ಪುಟ ನೋಡಿ

ನಾಲ್ಕನೇ ಬಾರಿಗೆ ₹1.6 ಲಕ್ಷ ಕೋಟಿ ದಾಟಿದ ಜಿಎಸ್‌ಟಿ

₹1.61 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಜೂನ್ ತಿಂಗಳಿನಲ್ಲಿ ₹1.61 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಶನಿವಾರ ತಿಳಿಸಿದೆ.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದಾಗಿನಿಂದ ಈವರೆಗೆ ಸರಾಸರಿ ವರಮಾನ ಸಂಗ್ರಹವು ಸತತ ನಾಲ್ಕನೇ ಬಾರಿಗೆ ₹1.6 ಲಕ್ಷ ಕೋಟಿಯನ್ನು ದಾಟಿದೆ.

ಜೂನ್‌ನಲ್ಲಿ ಸಂಗ್ರಹ ಆಗಿರುವ ಒಟ್ಟು ಮೊತ್ತದಲ್ಲಿ ಕೇಂದ್ರ ಜಿಎಸ್‌ಟಿ ₹31,013 ಕೋಟಿ, ರಾಜ್ಯ ಜಿಎಸ್‌ಟಿ ₹38,292 ಕೋಟಿ, ಸಮಗ್ರ ಜಿಎಸ್‌ಟಿ ₹80,292 ಕೋಟಿ ಹಾಗೂ ಸೆಸ್ ₹11,900 ಕೋಟಿ ಒಳಗೊಂಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಜೂನ್‌ನಲ್ಲಿ ಸಂಗ್ರಹ ಆಗಿರುವ ತೆರಿಗೆ ವರಮಾನವು ಕಳೆದ ವರ್ಷದ ಜೂನ್‌ಗಿಂತ ಶೇ 12ರಷ್ಟು ಹೆಚ್ಚಾಗಿದೆ. ಏಪ್ರಿಲ್ ತಿಂಗಳಿನಲ್ಲಿ ತೆರಿಗೆ ವರಮಾನವು ಸಾರ್ವಕಾಲಿಕ ದಾಖಲೆ ₹1.87 ಲಕ್ಷ ಕೋಟಿಗೆ ತಲುಪಿತ್ತು.

ತಿಂಗಳ ಸರಾಸರಿ ಜಿಎಸ್‌ಟಿ ಸಂಗ್ರಹವು 2021-22ರ ಏಪ್ರಿಲ್–ಜೂನ್ ಅವಧಿಗೆ ₹1.10 ಲಕ್ಷ ಕೋಟಿ, 2022-23ರ ಏಪ್ರಿಲ್–ಜೂನ್ ಅವಧಿಗೆ ₹1.51 ಲಕ್ಷ ಕೋಟಿ ಮತ್ತು 2023-24ರ ಏಪ್ರಿಲ್–ಜೂನ್ ಅವಧಿಗೆ ₹1.69 ಲಕ್ಷ ಕೋಟಿಯಷ್ಟು ಆಗಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಮುಖ್ಯಾಂಶಗಳು

- 16ನೇ ತಿಂಗಳಿನಲ್ಲೂ ₹1.4 ಲಕ್ಷ ಕೋಟಿ ದಾಟಿದ ಜಿಎಸ್‌ಟಿ ಸಂಗ್ರಹ
- 7ನೇ ಬಾರಿಗೆ ₹1.5 ಲಕ್ಷ ಕೋಟಿ ದಾಟಿದ ತೆರಿಗೆ ವರಮಾನ

ಒಳ ಪುಟ

ಐಎಫ್‌ಎಸ್: ರಾಜ್ಯದ 10 ಮಂದಿ ಆಯ್ಕೆ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹಲವು ಗ್ರಾಮ ಪಂಚಾಯಿತಿಗಳಿಂದ ಮಾದರಿ ಕಾರ್ಯ; ತರಬೇತಿಗೂ ವ್ಯವಸ್ಥೆ

ಆದಾಯ ಗಳಿಕೆಗೆ ಕಸವೇ ಬಂಡವಾಳ!

• ಪ್ರಮೋದ

ಪ್ರಜಾವಾಣಿ ವಿಶೇಷ

ಕೊಪ್ಪಳ: ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡುವುದು ಸವಾಲಾಗಿರುವ ಇಂದಿನ ದಿನಗಳಲ್ಲಿ ಕಸವನ್ನೇ ಬಂಡವಾಳ ಮಾಡಿಕೊಂಡಿರುವ ಕೊಪ್ಪಳ ತಾಲ್ಲೂಕಿನ 30 ಹಳ್ಳಿಗಳು 'ಬಹು ಗ್ರಾಮ ಪಂಚಾಯಿತಿ ತ್ಯಾಜ್ಯ ಸಂಸ್ಕರಣಾ ಘಟಕ'ದ ಮೂಲಕ ಸುಲಭವಾಗಿ ಕಸ ವಿಲೇವಾರಿ ಮಾಡುತ್ತಿವೆ. ಇದರಿಂದ ಸಂಸ್ಕರಣಾ ಘಟಕ ಆದಾಯ ತರುವ ಮೂಲವಾಗಿಯೂ ಬದಲಾಗಿದೆ.

ಉತ್ತರ ಕರ್ನಾಟಕದ ಪ್ರಸಿದ್ಧ ಧಾರ್ಮಿಕ ತಾಣ ಹುಲಿಗಿ, ಹೊಸಳ್ಳಿ, ಮುನಿರಾಬಾದ್ ಡ್ಯಾಂ, ಹಿಟ್ನಾಳ, ಅಗಳಕೇರಾ, ಶಿವಪುರ, ಬಂಡಿ ಹರ್ಲಾಪುರ, ಗುಳದಳ್ಳಿ ಹಾಗೂ ಬುದಗುಂಪಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 30 ಹಳ್ಳಿಗಳು ಬರುತ್ತವೆ. ನಿತ್ಯ 4ರಿಂದ 5 ಟನ್ ತ್ಯಾಜ್ಯ ಸಂಗ್ರಹವಾಗುತ್ತಿದ್ದು, ಇದನ್ನು ನಿರ್ವಹಣೆ ಮಾಡಲು ಹೊಸಳ್ಳಿ ಹೊನ್ನೂರುಮಟ್ಟಿಯಲ್ಲಿರುವ ಸಂಸ್ಕರಣಾ ಘಟಕದಲ್ಲಿ 15 ಜನ ಸಿಬ್ಬಂದಿ ಇದ್ದಾರೆ. 2014–15ರಲ್ಲಿ ನಿರ್ಮಲ್ ಭಾರತ್ ಅಭಿಯಾನ (ಈಗ ಸ್ವಚ್ಛ ಭಾರತ್ ಅಭಿಯಾನ) ಯೋಜನೆಯಡಿ ಸರ್ಕಾರದಿಂದ ಘಟಕ ಆರಂಭವಾಗಿದೆ.

ಕೊಪ್ಪಳ ತಾಲ್ಲೂಕಿನ ಹೊಸಳ್ಳಿಯ ಬಹು ಗ್ರಾಮ ಪಂಚಾಯಿತಿಗಳ ಸಂಸ್ಕರಣಾ ಘಟಕದಲ್ಲಿ ತಯಾರಿಸಿದ ಗೊಬ್ಬರ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಬರುವ ಹಸಿ ಹಾಗೂ ಒಣ ತ್ಯಾಜ್ಯವನ್ನು ಯಂತ್ರಗಳ ನೆರವಿನೊಂದಿಗೆ ವಿಂಗಡಿಸಲಾಗುತ್ತಿದೆ. ಇವುಗಳನ್ನು ಸಂಸ್ಕರಣೆ ಮಾಡಿ ತಯಾರಿಸುವ ಎರೆಹುಳು ಗೊಬ್ಬರವನ್ನು₹7ಕ್ಕೆ ಒಂದು ಕೆ.ಜಿ.ಯಂತೆ ಮಾರಾಟ ಮಾಡಲಾಗುತ್ತಿದೆ. ಸಸಿಗಳ ಬೆಳವಣಿಗೆಗೆ ಅನುಕೂಲವಾಗುವ ಎರೆಹುಳು ಜಲವೂ ಲಭ್ಯವಿದ್ದು ಒಂದು ಲೀಟರ್‌ಗೆ ₹80 ಬೆಲೆ ನಿಗದಿ ಮಾಡಲಾಗಿದೆ.

> **ಕಸವನ್ನು ಸಂಸ್ಕರಣಾ ಘಟಕದಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಿ ಗೊಬ್ಬರ ತಯಾರಿಸಲಾಗುತ್ತಿದೆ. ಘಟಕಕ್ಕೆ ಬಂದವರಿಗೆ ತರಬೇತಿ ನೀಡುವ ವ್ಯವಸ್ಥೆಯೂ ಇದೆ**
> **ವೀರೇಶ್ ಜಿ.ಎ.**
> ಹೊಸಳ್ಳಿ ಗ್ರಾಮ ಪಂಚಾಯಿತಿ ಪಿಡಿಒ

5ನೇ ಪುಟ ನೋಡಿ

Hearing Date: 28.07.2023

IN THE COURT OF VIII ADDITIONAL CITY CIVIL AND SESSIONS JUDGE, AT BANGALORE. (CCH-15)

EX PETITION No. 2412/2022 IN O.S. No. 6045/1989

BETWEEN :

1. SMT. ANURADHA.H, 2. SRI H. SATISH, 3. SMT. H. LAKSHMI, ALL CHILDREN OF LATE. HANUMANTHARAYA SHETTY ALL ARE RESIDING AT No.214, MYSORE BANK COLONY, BENGALURU-560 050.

4. SRI B.N. SUBRAMANI, SON OF NARAYANA SHETTY, ITI SOCIETY, PAPAREDDY PALYA, AGED ABOUT 55 YEARS, RESIDING AT 977, 2nd FLOOR. BENGALURU-560 072. ....DECREE HOLDERS

AND ....JUDGMENT DEBTORS/ RESPONDENTS

SHRI. SHRISHA.R.BHATTA & OTHERS

Notice Through Paper Publication to Impleaders No. 2, 6, 8, 16, 19, 36, 48, 54, 82, 84, 126, 127, 136, 137, 138, 177, 243, 233, 247, 255, 262, 268, 271, 273, 277, 287, 299, 305, 313, 314, 323, 327, 347, 356, 357, 359, 360, 362, 367, 368, 369, 381, 383, 385, 386, 390, 392, 304, 322, 324, 401, 419, 421, 422, 471, 473, 475, 485, 499, 501, 505, 508, 519, 534, 537, 541, 558, 561, 572, 594, 605, 612, 613, 632, 648, 649, 659, 672, 687, 702, 705, 711, 716, 724, 737, 738, 754, 763, 773, 792, 777, 801, 804, 818, 820, 825, 835, 839, 856, 858

AND

JUDGMENT DEBTORS No. 1, 11, 13, 14, 3, 6, 12, 17, 19, 20, 21, 22.

To,

2. Smt. T Bhagya W/o. H R Krishnegowda, R/at; No 38,1st cross, 1st main, Nandini layout, Bangalore-560096.

6. Smt.G. Usha W/o. Ramulunaidu R/at; No 5, V K R complex, 4th Cross, 1st Phase, Peenya, Bengalore-560058.

8. Sri. Suresh R B S/o. Ramachandra Badigar R/at; No 17, 4th Cross, Kuvempu Road, Chikkalasandra, Subramanyapura Post, Bangalore-560061

16. Sri .G N Tulasi Prasad S/o. G. Narayanaswamy Modali R/at : No 199/4, Hegganahalli Main Road, Vishwaneedam Post, Bangalore -560091

19. Sri. H S Manjunatha Sharma S/o. Srinavasa Sharma R/at: No 205/E/1, A Block, 14th Main Road, Subramanya nagar, Shrirampura, Rajajinagar, Bangalore-560021.

36. Sri. Muneer Khan S/o. Lathif khan R/at ; No.762,1st Cross, S R S Road, Ward No. 38, Peenya 1st Stage, Bangalore -560058

48. Smt. Kavya S W/o. Dileep R. N, R/at; No 318, Near Gangavahi School, 8th Cross, 4th Main, 2nd Block, Nandini Layout, Bangalore-560096

54. Sri. Manuvachan S/o. S Mahesh Address: No 1305/A, 6th A Main Road, Prakash nagar, Bangalore-560021

84. Sri. D G Gavali S/o Gangaram Address: No. 1117, 3rd Main Road, M C Layout, Vijaynagar, Bangalore-560040

82. Smt .N Srivalli W/o Sathyanarayanaprasad R/at ; No 360, 19th F Main Road, 1st N Block, Rajajinagar, Bangalore -560010

126. SMT. LAKSHMI W/o. Ramu Address: No 49, 3rd cross, Subedar palya, Yashwanthpura, Bangalore-560022

127. SMT. MANJULA N W/o. Shivakumar No 54/A,7th Cross, Balajinagar, Thigalarapalya main Road, 2nd stage Peenya, Bangalore-560058

136. SMT. KALAVATHI W/o. Gangadhar R/at : No 33, 4th Cross, Rajivgandhi Nagar, Kebbehalla, Sunkadakatte Bangalore-560091.

127. SMT. MANJULA N W/o Shivakumar S, No 54/A,7th Cross, Balajinagar , Thigalarapalya Main Road, 2nd stage Peenya, Bangalore-560058

136. SMT. KALAVATHI W/o. Gangadhar M.S. Aged R/at : No. 33, 4th Cross, Rajivgandhi Nagar, Kebbehalla, Sunkadakatte, Bangalore-560091.

137. SMT. VANITHA.S W/o. Kumar M.R. R/at : No. 62, 9th Cross, Muneshwara Badavane, Laggere, Bangalore-560058

138. SMT. SHOBHA.N W/o. Rakesh R/at : No. 83, 51 Karivobhanahalli Village, Yashwanthapura Hobli, Bangalore North Pin-560058

177. SMT. MEENAKSHI H K W/o. Lingaraju R/at; No. M 231/1, Swathantrayodhanagar, Laggere, Bangalore-560058

243. SMT. SHUBHA SUMEEL D/o. Mayigaiah R/ At ; No. 217, Karivobanahalli, Peenya 2nd Stage, Bangalore-560058

233. SRI. T.N. MURTHACHAR S/o. Narayanachar **SMT. B.G. BHUVANESHWARI** W/o. T.N. Murthachar R/ At ; 2nd Cross, Sri Rajalakshmi Nursing Home Near, Valmiki Nagar, Tumkur-572 102,

247. SRI. H.K. HARISH S/o. Kariyappa R/ At ; No. 11/1, Pipelane Road, Srinagar, Bangalore-560 050

255. SRI. CHANDRAPPA S/o. Siddalinga Shetty R/ At ; 9th Main, 2nd Block, Nandini Layout, Bangalore-560 096

262. SRI. S. SURESH S/o. Late Sreekantaiah R/ At ; No.24, 9th Cross, Near D.M. Public School, Rajeshwari Nagar, Laggere, Bangalore-560 058.

268. SMT. RASHMI M.K W/o. Deepak M.V. Age, No. 129 5th Cross Road, Kurubarahalli, Mysore- 570011.

271. SMT. P. SARASWATHI W/o, Palani.M R/At. No. 217, 28th Cross, 2nd Block, Rajajinagara, Bengaluru- 560010.

273. SMT. NAGARATHNA W/o. Mahesh R/ At ; 53, KSCB Quarters, 5th Main, Lakshmidevi Nagar, Nandini Layout, Bangalore-560 096.

277. SRI. B.S. SHANTH KUMAR S/o. B.C. Shankarappa R/ At ; 117/1, Rajgopalnagar Main Road, Ramaiah Building, Peenya 2nd Stage, Bangalore-560 058.

287. SMT. A.PRABHAVATHAMMA W/o. B. Sreenivasalu R/ At; No. 37, Sreenivasalu Building 1st Floor, 6th Cross, Karim Sab Layout Road, Hegganahalli Main Road, V.N. Post, Bangalore-560 091

299. SMT. SHOBA RANI W/o. S C Jagadish Babu R/A. No. 298, EWS KHB Colony, 2nd Stage, 2nd Cross, 2nd Main, Basaveshwara Nagar, Bangalore-560079,

305. SRI. K.G. SHANMUGAM S/o. Gopala Odeyar #B2, Andanappa Vatara, Vidhansoudha Layout, Lakshmidevi Nagar, Bangalore-560096

313. SMT. LALITHA W/o. Nagarj R/ At ; Thigalarapalya, Peenya 2nd Stage Post, Yashwanthapura Hobli, Bangalore-560 058

314. SMT. NARASAMMA W/o. Kenchegowda R/ At ; No. 316, 1st Main Road, MTS Colony, T. Dasarahalli, Bangalore-560 057

323. SRI. ARUN PRASAD S/o. Mr Ravi A R/ At ; 88/3, 8th A Cross, Thigalarapalya Main Road, Peenya 2nd Stage, Karivobhanahalli, Peenya Small Industries, Bangalore - 560058

327. SMT. S GEETHA W/o. Shekhar R/ At ; - No. 1;A/2, 1st Main Road, S.C. Garden, Bangalore - 560042

347. SMT D. GEETHA W/o. Doreswamy R/ At ; No. 1132, 7th Cross Road, Kalyananagar, T. Dasarahalli, Bangalore – 560057

356. SMT. B.R. VEENAKUMARI W/o. Manjunath Rao #163, 18th A Cross, Raghavendra Layout, Thigalarapalya Main Road, Peenya 2nd Stage, Bangalore-560058

357. SMT. S.R. LALITHA W/o. S. Basavalingaiah #202, No.48B 1st Floor, 3rd Cross, 8th Main, Kalyan nagar, Hampinagar, Vijayanagar, 2nd Stage, Bangalore-560104

359. SRI. GANAPATHI S/o. Badiyanaidu #2126, 6th Cross, Prashanth Nagar, T. Dasarahalli, Bangalore-560057

360. SMT. C. LAKSHMAMMA W/o. Doddegowda **SMT. D. HEMAVATHI** W/O Somashekar #18/1, 9th Cross, Agrahara Dasarahalli, Bangalore-560079

362. SMT. MAMATHA Y.U W/o. Kantharaju #25, Raghavendra Layout, Thigalarapalya Main Road, Peenya 2nd Stage, Bangalore-560058.

367. SRI. T. AJITH KUMAR S/o. Thankappan Pillai #49, Msh Layout, Anandanagar, Hebbal, Bangalore-560024

368. SRI. PRAMOD B S/o. Sri Balakrishna #146/A, Kalappa Block, Srinagar, Bangalore-560050

369. SMT. PADMA W/o. Hanumanthaiah. H.C Aged #406, Preethinagar, 6th B Cross, Lakshmidevinagar, Bangalore-560058

381. SRI V VENKATESH S/o Venkatappa R/at; No 55, 4th Cross, Near Pataki Godown, Sanjeevininagar, Hegganahalli, Vishwaneedam post, Bangalore-560091,

383. SRI. MARIYAPPA S/o Sabanna R/at; 1st cross, 1st Main, Munivenkappa Compound, Lakshmaiah Block, Ganganagar, Bangalore-560032

385. SRI. ANJANAIAH S/o Kashiyappa R/at; 1st Cross, 1st Main, Munivenkappa Compound, Lakshmaiah Block, Ganganagar, Bangalore-560032

386. SRI. RAVI G S S/o. Srinivasappa R/at; No 37, Karivobanhalli, Andrahalli Main Road, Saneswaranagar, Bangalore-560058

390. SMT. B D VINUTHA W/o. C R Ranganath R/at; No 626, 7th Main, RHCS Layout, Srigandhadakavalu, Bangalore-560091

392. SRI. B SHIVAKUMARASWAMY S/o. Basavaraja R/at; No. 142, Balajinagar, Thigalarapalaya Main road, Peenya 2nd stage, Bangalore-560058

304. SRI. GANESH GOWDA S/o. Late Shivanna Gowda R/At, No.45, Raghavendra Nagar, Thigalarapalya, Peenya 2nd Stage, Bangalore-560058

322. SRI. H.M. YOGANANDA S/o. Mariguddaiah And **SMT. M.K. JAYASREE** W/O H.M. Yogananda R/ At ; No. 57, C/o. Venkatappa M. N.S. Palya, Bangalore-560 076

324. SRI. JAYASHANKAR S/o. Veluchamy R/At No. 819/112, 6th E Cross, Prakash Nagar, Srirampuram, Bangalore – 560021

401. SRI. H T UMESH S/o. H T Tirumalaiah, R/at; No 736/14, 9th Cross, 5th Main, M C Layout, Vijaynagar, Bangalore-560040

419. SMT. RUDRAMMA W/o, Ningaraju. N R/At . No. 72, 3rd 'A' Cross 2nd Main Road, Sampige Road Rajeshwari Nagara, Laggere, Bengaluru- 560058.

421. SMT. RADHA W/o Nandeesh R/at; No 23,5th Cross, Ullal Main Road, Jnanajyothinagar, Bangalore-560056

422. SRI. H K HARISH S/o Kariyappa R/at; No 11/1, Pipe Line Road, Kalappa Block, Srinagar, Bangalore-560050

471. SRI. SURESH KUMAR K N S/o. S J Narayana Rao No 2677, Manjunatha Nilaya, 17th D Cross, 5th Main Road Banashankari 2nd Stage Bangalore 560070

473. SMT. SOWMYA M S D/o. Srinivas M B R/A No.80, Railway Mens Layout, Ramakrishna Nagar, Nandini Layout, Bangalore-560096

475. SRI RAVI K MENON S/o. K G K Menon No. 12, Balaji Enclave, Doddanekundi, Marathahalli, Bangalore – 560037

485. SRI. P. VISHWANATHA UPADHYA S/o. P Ganapaiah Upadhya No. 1266, 10th Main Road, Vijayanagar, Bangalore – 560040

499. SRI TIMMA SHETTY S/o. Sannatimma Shetty R/At . No. 131, 1st Cross, 1st Main Road, Basavanna Devara Bidi Kamalanagara, Bengaluru- 560079

501. SRI. V. VENKATESH S/o. Late. Venkatapathishetty, R/ At; No. 117/5, 3rd Main, Near Saroja Dental Clinic, Hegganahalli, Bangalore-560 091.

505. SMT. NAGAMANI W/o. Dasegowda B.R., R/ At ; No. 13, 1st Floor, Akshaya Nilya, 3rd Cross, Hosalli, Vijayanagar, Bangalore-560 040.

508. SMT. R.KUMUDINI D/o. M.S. Rajaram, R/ At ; No. 47, 1st D. Cross. 15th Main, Sathya Narayana Badavane, 4th Block, 2nd Stage, Basaveshwaranagar, Bangalore-560079

519. SMT. LAKSHMI W/o. D. Kempanna, R/ At ; No. 4, 13th Cross, 1st K. Block, Rajajinagar, Bangalore-560010

534. SRI. AMJADULLA KHAN S/o. Late Mehboob Khan, R/ At ; No.13, 4th Cross, Krishna Garden, Munireddy Palya, Bangalore-560 006

537. SMT. JAYANTHI R. BHAT W/o. Sri. K.Raghavendra Bhat, R/ At ; No.133/Type-2, Done Malai Town Ship Post, Sandoor Taluk, Ballari-583118

541. SRI. SAIKRISHNA S/o. Late. Venkatappa, R/ At; No. 374/1, 2nd Cross, Badrappa Layout, Kodigehalli Main Road, Nagashettihalli, Bangalore-560 094

558. SRI. G R LOKESH S/o. G Ranganath Gowda No. 659/2, 1st Main Road, Lakshmana Nagar, Hegganahalli Cross, Vishwaneedam Post, Bangalore 560091

561. SRI. S. PARVATHI S/o. V. Shekar, R/ At ; No.B-8, Dairy Colony, DRC Post, Dr. M.H.Marigowda Road, Bangalore-560 029.

572. SMT. SHWETHA D/o. Gangaiah And Gangamma, R/At ; No.13, 15th A. Main Road, Balaji Nagar, Thigalarapalya Main Road, Peenya 2nd Stage, Bangalore-560 058

594. SRI. M.S. ANAND S/o. Govindaraj R/ At ; No. 74, 2nd Main Road, L.G. Ramanna Badavane, Laggere Peenya Post, Bangalore-560 058.

605. SRI. THIMMA SHETTY S/o, Sanna Thimma Shetty No.131, 1st Cross, 1st Main Road, Basavanna Devara Beedi, Kamalanagara, Bengaluru-79

612. SMT. R REVATHI W/o. Ramalingam S. R/At; 1247, Ground Floor, 6th Main, Prakash Nagar, Rajajinagar, Bangalore - 560021.

613. SMT. DILSHAD W/o. Sharif Khan R/ At ; 148/A, 3rd Cross, 26th Main, Sakamma Badavane, Nandini Layout, Bangalore -560096.

632. SRI. S. YASHODHARA S/o. B. Srinivas R/ At; No.380, 9th Cross, West of Chord Road, 3rd Stage, 4th Block, J.C. Nagar, Basaveshwaranagar, Bangalore-560 079.

648. SMT. PADMASRI M. W/o. Nagarj S. R/ At ; No. 62, Rose Building, Ganapathi Nagar, 3rd Cross, Bangalore-560 058

649. SRI. C RADHAKRISHNA REDDY S/o. Kuppireddy No. 205, Hesaraghatta Main Road, Havanooru Layout, Nagasandra Post, Bangalore – 560073

659. SMT. K.C LAKSHMIDEVAMMA W/o. M.T. Krishna R/At, No. 34, Muneshwara Nagar, Hosakerehalli, Banashankari 3rd Stage, Bangalore – 560085

672. SRI. ESHWARA RAO S/o. Vital Rao **SMT. GEETHA** W/O Eshwara Rao No. 407, Opposite Vishal School, Anchepalya, Tumkur Road, Nagasandra Post, Bangalore – 560073

687. SRI. R PANDURANGAN S/o. V Radhakrishnan Aged No. P-198/3, 7th Camp Area, Jalahalli East, Bangalore – 560014

702. SRI. G NANDA S/o. G Keshava Aged About 43 Years No. 15/4, 9th Cross Road, 6th Block, Rajajinagar, Bangalore – 560010

705. SRI. SIDDEGOWDA S/o. Singrigowda No. 78, 5th Cross Road, 11th Main Road, Raghavendra Block, Srinagar, Bangalore – 560050

711. SRI. B R MANJUNATH S/o. Rangaswamaiah 49/1, Thimmaiah Building, Near Basavanna Temple, Chokka Sandra, Bangalore -560057

716. SMT. S VIJAYA W/o. Shiva Lingam, No. 585/A, 7th B Cross Road, 3rd Main Road, Prakash Nagar, Bangalore-560021

724. SRI. SATISH N R S/o. Rame Gowda, No.34/B, Kusumanilaya, 6th Cross Road, Apolo School Main Road, Madduramma Layout, Heggnahalli Cross, Sunkadakatte, Vishwaneedam Post, Bangalore 560091.

737. SMT. LATHA H S W/o. not known No. 742, 8th Cross Road, 8th Main Road, 3rd Block, Nandini Layout, Bangalore – 560096

738. SRI. R CHANDRA MOHAN S/o. G Rathaiah Shetty No. 742, 8th Cross Road, 8th Main Road, 3rd Block, Nandini Layout, Bangalore – 560096

754. SRI. J VIJAYKUMAR S/O Jayaraj R/A . B/5/4, FTI Quarters, Tumkur Road, Bangalore-560022

763. SRI. K SRINIVAS SHENOY S/o. Ramanath Shenoy No. 9/1, Radhamma Nilaya, 2nd e Guttahalli, Bangalore–560003

772. SMT. SARASWATHI W/o. Ramachandra No. 12/3, 4th Cross Road, Vidhyapeeta Layout, Banashankari 3rd Stage, Bangalore – 560028

777. SMT. M NEELA W/o. Chakravarthy No. 38-B, 2nd Main Road, Telephone Colony, Adambakkam, Chennai – 600088

792. SMT. P MANJULA W/o. S Palani No. 18/1, 33 Cross Road, 2nd Main Road, 2nd Block, Juganahalli, Rajajinagar, Bangalore – 560010,

801. SMT. TUNGA W/o. Varadaraya Swamy No. 597, Ranganathapura, Kamakshipalya, Bangalore – 560079

804. SRI. S H HUCCHAPPA S/o. Hucchappa No. 202, 9th Main, 4th Block, Nandini Layout, Bangalore – 560096

818. SMT. C. N. SAROJAMMA W/o. D.K.Srinivas #1089, 5th Cross, SLV Industrial Area, Andrahalli Main Road, Peenya 2nd Stage, Bangalore-560058

820. Smt. L Chandrakala W/o. Nagaraju And; **Sri. Ramesh L** S/o Late Lingaiah No. 15, 1st Cross Road, Near Garden School, Kempegowda Nagar, T Dasarahalli Bengaluru-560057

825. SMT. T. VARALAKSHMI W/o. D.G. Lakkanna #28, 4th Cross, Thigalarapalya Main Road, Peenya 2nd Stage, Bangalore-560058

835. SMT. K SHASHIKALA W/o. K Haribabu No. 610, 9th Cross Road, 5th Main Road, Ganesha Temple Road, Rajagopalanagar, Peenya 2nd Stage, Bangalore – 560058

839. SRI. BASAVA RAJU S/o. B Shivamallappa No. 12, 1st Main Road, 3rd Cross, Nagarabhavi Main Road, Priyadarshini Layout, Bangalore – 560072

856. SRI. SUBHASUMEL S/o. Mayigaiah No. 217, Karivobanahalli Peenya 2nd Stage, Bengaluru-560058

858. MADAN KUMAR H S/o. K Hari No.77A, 9th cross, 15th Main Road, JC Nagara Kurubarahalli Bengaluru-86.

JUDGMENT DEBTORS

1. SRI SHRISHA R BHATTA S/o. Late Vadiramanda Bhatta, R/At Hesaraghatta Road, Dasarahali, Bangalore-560057

11. SRI SRINIVASA S/o. Annamalai Mudaliar R/At Mariyappanapalya, Sriramapura, Kalamma Temple Street. Bangalore-560021

13.SMT KANNIKAMBA W/o. Late Venkataramaiah R/At No.18, Krishna Krupa Shoe Land Building, 1st Floor Near Shiva Temple, Rajagopalanagar Main Road Peenya 2nd Stage, Bangalore-560058

14. SRI KRISHNAMURTHY S/o. Late Venkataramaiah R/At No.18 Krishna Krupa Shoe Land Building, 1st Floor Near Shiva Temple, Rajagopalanagar Main Road Peenya 2nd Stage, Bangalore-560058

3. SRI PYGA DODDA MUNISWAMY R/O Kethamaranahalli 1st Block Rajajinagar Bangalore - 560010

6. SRI MURALI S/o. Late Rajanna R/At No. 77/1112 13th Cross, 1 K Block, Kethanamaranahalli, Rajajinagar, Bangalore-560010

17. SMT LAKSHMAMMA W/o. Late K N Lakshmaiah R/At No.59, 10th A Cross, West Of Chord Road, 2nd Stage, Mahalakshmipuram, Bangalore-560086

19. SRI K L SATISH S/o. Late K N Lakshmaiah R/At No.59, 10th A Cross, West Of Chord Road, 2nd Stage Mahalakshmipuram, Bangalore-560086

20. SRI K. N. VENKATESH S/o. Nanjappa R/O Kethamaranahalli, 1st Block, Rajajinagar, Bangalore-560010

21. SRI K. N. CHOWDAPPA S/o. Nanjappa R/O Kethamaranahalli 1st Block, Rajajinagar, Bangalore - 560010

22. SRI R. VENUGOPALA REDDY S/o. Late N Ramalinga Reddy, R/O No.181, Link Road, Malleswaram Bangalore-560003

a) where as the above named decree-holders **Smt. Anuradha.H and others** have filed above Execution proceeedings seeking execution of decree and judgment obtained in the suit namely O.S. No. 6045 of 1989.

b) you are hereby directed to appear before the court **on 28-07-2023 at 11 a.m.** either in person or by duly authorised person, failing which the case/Petition will be decided Ex-parte.

SCHEDULE PROPERTIES

1. LAND BEARING SURVEY NO. 45, MEASURING 11 ACRE 6 GUNTAS, SITUATED AT KARIVABANAHALLI, YESHWANTHPURA HOBLI, BENGALURU NORTH TALUK, BENGALURU, COMING WITHIN THE TERRITORIAL LIMITS OF WARD NO.40 BBMP, BENGALURU–560 058, BOUNDED ON :

EAST BY : LAND BEARING SY NOS. 41, 43, 44,
WEST BY : LAND BEARING SY NOS. 55,
NORTH BY : LAND BEARING SY NOS. 38 & 44,
SOUTH BY : LAND BEARING SY NOS.46 & 47

2. LAND BEARING SURVEY NO. 55, MEASURING 21 ACRE 07 GUNTAS, SITUATED AT KARIVABANAHALLI, YESHWANTHPURA HOBLI, BENGALURU NORTH TALUK, BENGALURU, COMING WITHIN THE TERRITORIAL LIMITS OF WARD NO. 40 BBMP, BENGALURU – 560 058, BOUNDED ON :

EAST BY : LAND BEARING SY NOS. 37, 38, 45 & 45,
WEST BY : LAND BEARING SY NOS. 56,
NORTH BY : LAND BEARING SY NOS. 36,
SOUTH BY : LAND BEARING SY NOS. 54

3. LAND BEARING SURVEY NO. 56, MEASURING 12 ACRE 12 GUNTAS, SITUATED AT KARIVABANAHALLI, YESHWANTHPURA HOBLI, BENGALURU NORTH TALUK, BENGALURU, COMING WITHIN THE TERRITORIAL LIMITS OF WARD NO. 40 BBMP, BENGALURU – 560 058, BOUNDED ON :

EAST BY : LAND BEARING SY NOS. 55,
WEST BY : LAND BEARING SY NOS. 95 & 99,
NORTH BY : LAND BEARING SY NOS. 57,
SOUTH BY : LAND BEARING SY NOS. 54

4. LAND BEARING SURVEY NO. 57, MEASURING 07 ACRE 12 GUNTAS, SITUATED AT KARIVABANAHALLI, YESHWANTHPURA HOBLI, BENGALURU NORTH TALUK, BENGALURU, COMING WITHIN THE TERRITORIAL LIMITS OF WARD NO. 40 BBMP, BENGALURU – 560 058, BOUNDED ON :

EAST BY : LAND BEARING SY NOS. 36,
WEST BY : LAND BEARING SY NOS. 95,
NORTH BY : LAND BEARING SY NOS. 58,
SOUTH BY : LAND BEARING SY NOS. 56

GIVEN UNDER MY HAND AND THE SEAL OF THE COURT THIS 30th JUNE 2023.

Advocate for Decree Holder
ASHWIN KUMAR .H, Advocate,
 # 699/A, 1st Floor, KGS Arcade, 60 Feet Road, 11th Block,
Nagarabhavi 2nd Stage, Bengaluru-560072. Mob : 6364371175 /72 /79

BY ORDER OF THE COURT
ASSISTANT REGISTRAR
CITY CIVIL COURT,
BANGALORE

ದೇವಸಂದ್ರ– ಹೂಡಿ ಮುಖ್ಯರಸ್ತೆಯಲ್ಲಿ ನಿತ್ಯ ವಾಹನ ಸವಾರರ ಪರದಾಟ

ದಶಕ ಕಳೆದರೂ ವಿಸ್ತರಣೆಯಾಗದ ರಸ್ತೆ

• ಶಿವರಾಜ್ ಮೌರ್ಯ

ದೇವಸಂದ್ರ– ಹೂಡಿ ಮುಖ್ಯರಸ್ತೆಯಲ್ಲಿ ಸಂಚಾರ ದಟ್ಟಣೆ

ವರ್ತಕರು ಮತ್ತು ಕೆಲವು ಪ್ರಭಾವಿಗಳ ಒತ್ತಡದಿಂದ ರಸ್ತೆ ವಿಸ್ತರಣೆ ಯೋಜನೆ ಜಾರಿಯಾಗಿಲ್ಲ. ಸ್ಥಳೀಯ ಶಾಸಕರ ನಿರಾಸಕ್ತಿಯಿಂದಲೂ ಯೋಜನೆ ನನೆಗುದಿಗೆ ಬಿದ್ದಿದೆ

ಗಂಗನಬೀಡು ವೆಂಕಟಸ್ವಾಮಿ, ನಿವಾಸಿ

ಕಿರಿದಾದ ರಸ್ತೆಯನ್ನು ವಿಸ್ತರಣೆ ಮಾಡಿದರೆ ಅನುಕೂಲವಾಗುತ್ತದೆ. ಈ ರಸ್ತೆಯ ಮೇಲೆ ವಾಹನಗಳನ್ನು ನಿಲ್ಲಿಸುವುದರಿಂದಲೂ ಸಮಸ್ಯೆ ತಪ್ಪದಾಗಿದೆ

ವಿಕಾಸ್, ಕ್ಯಾಬ್ ಚಾಲಕ

ಕೆ.ಆರ್.ಪುರ: ದೇವಸಂದ್ರದಿಂದ ಅಯ್ಯಪ್ಪನಗರ ಮೂಲಕ ಹೂಡಿ ಕಡೆಗೆ ಸಂಪರ್ಕ ಕಲ್ಪಿಸುವ ರಸ್ತೆ ಕಿರಿದಾಗಿರುವುದರಿಂದ ಇಲ್ಲಿ ನಿತ್ಯವೂ ಸಂಚರಿಸುವ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಈ ರಸ್ತೆಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಕಿರಿದಾಗಿದ್ದು, ವಿಸ್ತರಣೆ ಮಾಡುವ ಯೋಜನೆ ನನೆಗುದಿಗೆ ಬಿದ್ದಿರುವ ಕಾರಣ ಸಂಚಾರ ಸಮಸ್ಯೆ ಉಂಟಾಗುತ್ತಿದೆ.

ವೈಟ್ ಫೀಲ್ಡ್, ವರ್ತೂರು, ಕುಂದಲಹಳ್ಳಿ, ಹೂಡಿ, ಬೆಳತ್ತೂರು, ಕೊಡಿಗೆಹಳ್ಳಿ ಸಾದರಮಂಗಲ, ಶೀಗೆಹಳ್ಳಿ ಮುಂತಾದ ಕಡೆ ತೆರಳಲು ಪ್ರಮುಖ ಮಾರ್ಗ ಇದಾಗಿದೆ.

ಈ ಭಾಗದಲ್ಲಿ ಐಟಿಪಿಎಲ್ ಕೈಗಾರಿಕಾ ಪ್ರದೇಶ, ಪ್ರತಿಷ್ಠಿತ ಆಸ್ಪತ್ರೆ, ಬಹು ರಾಷ್ಟ್ರೀಯ ಕಂಪನಿಗಳು ಹಾಗೂ ಶಿಕ್ಷಣ ಸಂಸ್ಥೆಗಳು ತಲೆಎತ್ತಿವೆ. ಹೀಗಾಗಿ ಇಲ್ಲಿ ನಿತ್ಯ ಸಂಚರಿಸುವ ಸವಾರರು ಸಂಚಾರ ದಟ್ಟಣೆಯ ಸಮಸ್ಯೆ ಎದುರಿಸುತ್ತಿದ್ದಾರೆ. ಆಂಬುಲೆನ್ಸ್ ಸಂಚಾರವೂ ಕಷ್ಟವಾಗಿದೆ. ಶಾಲಾ ಮಕ್ಕಳನ್ನು ಕರೆದೊಯ್ಯಲು ಪೋಷಕರು ಹರಸಾಹಸ ಪಡುವಂತಾಗಿದೆ.

ದೇವಸಂದ್ರದಿಂದ ಅಯ್ಯಪ್ಪ ನಗರ ಮೂಲಕ ಹೂಡಿ ಕಡೆಗೆ ಸಾಗುವ ಪ್ರಮುಖ ರಸ್ತೆಯಲ್ಲಿ ಅಂಗಡಿ ಮುಂಗಟ್ಟುಗಳು ಹೆಚ್ಚಾಗಿದ್ದು, ಇದು ವಿಸ್ತರಣೆಗೆ ತೊಡಕಾಗಿದೆ. ಈ ರಸ್ತೆಯಲ್ಲಿ ಬೆಳಿಗ್ಗೆ– ಸಂಜೆ ಹೆಚ್ಚಿನ ದಟ್ಟಣೆ ಇರುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ.

ಐಟಿಪಿಎಲ್ ಕೈಗಾರಿಕಾ ಕ್ಷೇತ್ರವೂ ಹತ್ತಿರದಲ್ಲಿದೆ. ಇಲ್ಲಿ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಂಡರೆ ಒಂದು ಗಂಟೆಗೂ ಹೆಚ್ಚು ಸಮಯ ಹಿಡಿಯುತ್ತದೆ. ಮಹದೇವಪುರ ಹಾಗೂ ಕೆ.ಆರ್.ಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ದೇವಸಂದ್ರ ಮತ್ತು ಅಯ್ಯಪ್ಪ ನಗರ ಇದೆ. ಆದರೆ, ರಸ್ತೆ ವಿಸ್ತರಣೆ ಕಾರ್ಯ ಕೈಗೊಳ್ಳುವಂತೆ ಇಲ್ಲಿನ ಜನರ ಬೇಡಿಕೆಗೆ ಸ್ಪಂದನೆ ದೊರೆತಿಲ್ಲ ಎಂದು ದೂರುತ್ತಾರೆ.

‘ಅನಧಿಕೃತ ಒಎಫ್‌ಸಿ ಕೇಬಲ್ ನಿಯಂತ್ರಿಸಿ’

ಬೆಂಗಳೂರು: ‘ದಾಸರಹಳ್ಳಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಟೆಲಿಕಾಂ ಕಂಪನಿಗಳು ಅನಧಿಕೃತವಾಗಿ ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ) ಅಳವಡಿಸಲು ರಸ್ತೆಗಳನ್ನು ಅಗೆದಿದ್ದಾರೆ’ ಎಂದು ಮಾಜಿ ಶಾಸಕ ಆರ್. ಮಂಜುನಾಥ್ ದೂರಿದ್ದಾರೆ.

ಈ ಬಗ್ಗೆ ಬಿಬಿಎಂಪಿ ದಾಸರಹಳ್ಳಿ ವಲಯ ಆಯುಕ್ತರಿಗೆ ಪತ್ರ ಬರೆದಿರುವ ಅವರು, ‘ಒಎಫ್‌ಸಿ ಅಳವಡಿಕೆಗೆ ಕೇಬಲ್ ಕಂಪನಿಗಳು ಅನುಮತಿ ಪಡೆದು ನಿಗದಿತ ಗಡುವು ಮುಕ್ತಾಯವಾದರೂ, ಕೇಬಲ್ ಹಾಕುವ ಕೆಲಸ ಮಾಡುತ್ತಿವೆ. ಬಡಾವಣೆಯ ಎಲ್ಲ ರಸ್ತೆಗಳಲ್ಲಿ ಜಿ.ಐ ಪೋಲ್‌ಗಳನ್ನು ಅಳವಡಿಸಲಾಗುತ್ತಿದ್ದು, ಕೂಡಲೇ ಇವುಗಳನ್ನು ತೆರವುಗೊಳಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಕೇಬಲ್ ಅಳವಡಿಕೆಯಿಂದ ಕುಡಿಯುವ ನೀರಿನ ಹಾಗೂ ಒಳಚರಂಡಿ ಪೈಪ್‌ಲೈನ್‌ಗೆ ಹಾನಿಯಾಗುತ್ತಿದೆ. ಜನರು ತೊಂದರೆ ಪಡುತ್ತಿದ್ದಾರೆ. ಒಎಫ್‌ಸಿ ಕೇಬಲ್ ಅಳವಡಿಕೆಯಿಂದ ಬೆಸ್ಕಾಂ ಅಳವಡಿಸಿರುವ ಯು.ಜಿ. ಕೇಬಲ್‌ಗಳಿಗೆ ಹಾನಿ ಆಗುತ್ತಿದೆ. ಇದರಿಂದ ವಿದ್ಯುತ್ ವ್ಯತ್ಯಯವಾಗುತ್ತಿದೆ. ಈ ಸಮಸ್ಯೆ ಪರಿಹಾರಕ್ಕೆ ಬಿಬಿಎಂಪಿ ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದೂ ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ
ನಂ.113, ಆರ್.ವಿ. ರಸ್ತೆ, ವಿ.ವಿ. ಪುರಂ, ಬೆಂಗಳೂರು – 560 004
Ph: 080-26601152/53 Website: www.sreenidhibank.com
e-mail: sssbn@sreenidhibank.com
Ref:SSSBN/APT/ 414 /2023-24 ದಿನಾಂಕ: 01/07/2023

ನೇಮಕಾತಿ ಪ್ರಕಟಣೆ

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತದಲ್ಲಿ ಈ ಕೆಳಗೆ ನಮೂದಿಸಿರುವ ಹುದ್ದೆಗಳ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ವಿವರವಾದ ಅಧಿಸೂಚನೆಯನ್ನು www.sreenidhibank.com ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಕ್ರ ಸಂ.	ಹುದ್ದೆಗಳು	ಹುದ್ದೆಗಳ ಸಂಖ್ಯೆ
1.	a) ಶಾಖಾ ವ್ಯವಸ್ಥಾಪಕರು/ ಉಪ ವ್ಯವಸ್ಥಾಪಕರು/ ಲೆಕ್ಕಾಧಿಕಾರಿ	3
	b) ಕಂಪ್ಯೂಟರ್ ಪ್ರೋಗ್ರಾಮರ್ ಹಾಗೂ ಡಿ.ಬಿ.ಎ	1
2.	ಸಹಾಯಕ ವ್ಯವಸ್ಥಾಪಕರು/ ಸಹಾಯಕ ಲೆಕ್ಕಾಧಿಕಾರಿಗಳು/ ಕ್ಷೇತ್ರಾಧಿಕಾರಿಗಳು/ ವಸೂಲಾಧಿಕಾರಿಗಳು/ ಸಹಾಯಕ ಡಿ.ಬಿ.ಎ	5
3.	ಹಿರಿಯ ಸಹಾಯಕರು/ಹಿರಿಯ ದತ್ತಾಂಶ ನಮೂದು ಆಯೋಜಕರು	2
4.	ಕಿರಿಯ ಸಹಾಯಕರು/ ಗುಮಾಸ್ತ/ ಬೆರಳಚ್ಚುಗಾರ/ ದತ್ತಾಂಶ ನಮೂದು ಆಯೋಜಕರು	6
5.	ಸೇವಕರು/ ಜವಾನರು/ ಭದ್ರತಾ ರಕ್ಷಕರು/ ವಾಹನ ಚಾಲಕರು	1

ಅರ್ಜಿ ಸಲ್ಲಿಸುವ ವಿಧಾನ: ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು www.sreenidhibank.com ನಿಂದ ಡೌನ್‌ಲೋಡ್ ಮಾಡಿಕೊಂಡು, ಲಿಖಿತ/ ಮುದ್ರಿತ ರೂಪದಲ್ಲಿ ಭರ್ತಿ ಮಾಡಬೇಕು. ಭರ್ತಿಮಾಡಿದ ಅರ್ಜಿಯನ್ನು ವೆಬ್‌ಸೈಟ್‌ನಲ್ಲಿ ನೀಡಿರುವ ವಿವರಗಳ ಪ್ರಕಾರ ಅಗತ್ಯ ದಾಖಲೆಗಳೊಂದಿಗೆ ಮೇಲ್ಕಂಡ ವಿಳಾಸಕ್ಕೆ ಅಂಚೆ/ಕೊರಿಯರ್ ಅಥವಾ ಖುದ್ದಾಗಿ ತಲುಪಿಸಬೇಕು.

ಅನುಭವ: ಮೇಲ್ಕಂಡ ಕ್ರಮ ಸಂ.1 ರಿಂದ 4ರ ವರೆಗಿನ ಹುದ್ದೆಗಳಿಗೆ ಬ್ಯಾಂಕಿಂಗ್ ಕೆಲಸದ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಹಾಗೂ ಕ್ರಮ ಸಂ.5ರ ಹುದ್ದೆಗೆ ನಾಲ್ಕು ಚಕ್ರ ವಾಹನದ ಡ್ರೈವಿಂಗ್ ಲೈಸೆನ್ಸ್ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 17/07/2023 (ಸಂಜೆ 5.00 ಗಂಟೆಯೊಳಗೆ)

ಅರ್ಜಿ ಶುಲ್ಕ:ಕ್ರ.ಸಂ.1–4ರ ಹುದ್ದೆಗಳಿಗೆ=ರೂ.300/– +54/–(GST)=ಒಟ್ಟು ರೂ.354/–
& ಕ್ರ.ಸಂ 5ರ ಹುದ್ದೆಗೆ = ರೂ.150/– +27/–(GST)= ಒಟ್ಟು ರೂ.177/–

ತಾವು ಸಲ್ಲಿಸುತ್ತಿರುವ ಹುದ್ದೆಗೆ ಸಂಬಂಧಿಸಿದ ಅರ್ಜಿ ಶುಲ್ಕವನ್ನು ‘ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ’ (Sreenidhi Souharda Sahakari Bank Niyamitha) ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ (ಡಿಮ್ಯಾಂಡ್ ಡ್ರಾಫ್ಟ್) ತೆಗೆದು, ಮುದ್ರಿತ ಅರ್ಜಿಯ ಜೊತೆ ಲಗತ್ತಿಸಿ ಕಳುಹಿಸುವುದು.

ಆಡಳಿತ ಮಂಡಳಿಯ ಆದೇಶದ ಮೇರೆಗೆ
ಸಹಿ/– (ಜಿ. ಪ್ರವೀಣ್ ಕುಮಾರ್) ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಭೋವಿ (ವಡ್ಡರ) ಸಂಘ (ರಿ)
ನಂ. 177/4, 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಭೋವಿಪಾಳ್ಯ, ಮಹಾಲಕ್ಷ್ಮೀಪುರಂ, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು–560086.

ಪ್ರಕಟಣೆ

ಕನಾಟಕ ರಾಜ್ಯ ಭೋವಿ(ವಡ್ಡರ) ಸಂಘದ ವತಿಯಿಂದ 2022–23ನೇ ಸಾಲಿನ ಪ್ರತಿಭಾ ಪುರಸ್ಕಾರವನ್ನು ಎಸ್.ಎಸ್.ಎಲ್.ಸಿ , ಪಿ.ಯು.ಸಿ. ಹಾಗೂ ಸಿ.ಬಿ.ಎಸ್.ಇ ಮತ್ತು ಐ.ಸಿ.ಎಸ್.ಇ ಪರೀಕ್ಷೆಯಲ್ಲಿ ಶೇಕಡಾ 85%ಕ್ಕಿಂತ ಮೇಲ್ಪಟ್ಟು ಅಂಕಗಳನ್ನು ಪಡೆದಿರುವ ಭೋವಿ ಜನಾಂಗದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರವನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
1) ಮೊದಲನೇ ಪ್ರೋತ್ಸಾಹ ಧನ ರೂ. 15,000/– 2) ಎರಡನೇ ಪ್ರೋತ್ಸಾಹ ಧನ ರೂ, 10,000/–
3) ಮೂರನೇ ಪ್ರೋತ್ಸಾಹ ಧನ ರೂ, 8,000/– ಹಾಗೂ ಪ್ರಮಾಣ ಪತ್ರವನ್ನು ನೀಡಿ ಗೌರವಿಸಿ ಪ್ರೋತ್ಸಾಹಿಸಲಾಗುವುದು.
ಪ್ರತಿಯೊಂದು ಜಿಲ್ಲೆಗೆ 3 ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು, ಅರ್ಹ ಭೋವಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ದಿನಾಂಕ: 31/08/2023 ರಂದು ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಲು ಕೋರಿದೆ.
ಯಾವುದೇ ಕರ್ನಾಟಕದ ವಿಶ್ವವಿದ್ಯಾಲಯದಿಂದ 2022–23ನೇ ಸಾಲಿನಲ್ಲಿ ಗೋಲ್ಡ್ ಮೆಡಲ್ ಪಡೆದ ವಿದ್ಯಾರ್ಥಿಗಳಿಗೆ ರೂ, 25,000/–ಪ್ರೋತ್ಸಾಹ ಧನ ನೀಡಲಾಗುವುದು. ಚಿನ್ನದ ಪದಕ ಪಡೆದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು,
1) ಎಸ್.ಎಸ್.ಎಲ್.ಸಿ/ಪಿಯುಸಿ/ಸಿಬಿಎಸ್‌ಸಿ ಅಥವಾ ಐಸಿಎಸ್‌ಇ ಅಂಕಪಟ್ಟಿಯ ಜೆರಾಕ್ಸ್
2) ಜಾತಿ ಪ್ರಮಾಣ ಪತ್ರ
3) ಆಧಾರ್ ಕಾರ್ಡ್ ಮತ್ತು ಇತ್ತೀಚಿನ ಬ್ಯಾಂಕ್ ಪಾಸ್ ಪುಸ್ತಕದ ಉಳಿತಾಯ ಖಾತೆ ಸಂಖ್ಯೆ ಐ.ಎಫ್.ಎಸ್.ಸಿ. ಕೋಡ್ ಪುಟವಿರುವ ಜೆರಾಕ್ಸ್ ಪ್ರತಿ ಸಲ್ಲಿಸುವುದು.
4) ಪಾಸ್‌ಪೋರ್ಟ್ ಸೈಜ್ ಫೋಟೋ ಎರಡು ಸಲ್ಲಿಸುವುದು.
5) ಅಂಚೆ ವಿಳಾಸ ಮತ್ತು ನಿಮ್ಮ ಮೊಬೈಲ್ ನಂಬರ್ ಕಡ್ಡಾಯವಾಗಿ ನೀಡುವುದು.
ಈ ಎಲ್ಲಾ ದಾಖಲಾತಿಗಳನ್ನು ಸಂಘದ ವಿಳಾಸಕ್ಕೆ ಕೋರಿಯರ್ ಅಥವಾ ಸ್ಪೀಡ್ ಪೋಸ್ಟ್ ಮೂಲಕ ಮಾತ್ರ ಕಳುಹಿಸಿಕೊಡಬೇಕು ಯಾವುದೇ ಕಾರಣಕ್ಕೂ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಬಾರದು.

ಡಾ॥ ಚೌಡಯ್ಯ, ಲೇಖಕರು
ಪ್ರಧಾನ ಕಾರ್ಯದರ್ಶಿ

ಎಸ್ ಎಲ್ ಗಂಗಾಧರಪ್ಪ, ಐಎಎಸ್, ನಿವೃತ್ತ
ಅಧ್ಯಕ್ಷರು

‘ಬಿಜೆಪಿ ನಾಯಕರ ಸಲಹೆಯಂತೆ ಹೆಚ್ಚುವರಿ ಅಕ್ಕಿ ಬದಲು ಹಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲವು ರಾಜ್ಯದವರು ಒಂದೆರಡು ತಿಂಗಳು ಅಕ್ಕಿ ಪೂರೈಸಲು ಮುಂದಾಗಿದ್ದರು. ನಮಗೆ ತಾತ್ಕಾಲಿಕ ಪರಿಹಾರಕ್ಕಿಂತ ಶಾಶ್ವತ ಪರಿಹಾರ ಬೇಕು. ನಾವು ಆರಂಭದಲ್ಲಿ ಅಕ್ಕಿಯನ್ನು ನೀಡಿ ನಂತರ ಅದನ್ನು ಸ್ಥಗಿತಗೊಳಿಸುವಂತೆ ಆಗಬಾರದು. ಹೀಗಾಗಿ, ಬಿಜೆಪಿ ನಾಯಕರು ಕೊಟ್ಟಿರುವ ಸಲಹೆಯಂತೆ ಹಣ ನೀಡಲು ನಿರ್ಧರಿಸಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಅಕ್ಕಿ ಖರೀದಿಗೆ ನಮ್ಮ ಸಚಿವರು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಈಗ 5 ಕೆ.ಜಿ ಅಕ್ಕಿ ಮತ್ತು ಹೆಚ್ಚುವರಿಯಾಗಿ ಅಕ್ಕಿ ಸಿಗುವವರೆಗೂ ಬೇರೆ ಪಕ್ಷಗಳ ಸಲಹೆಯಂತೆ ಹಣ ನೀಡುತ್ತೇವೆ’ ಎಂದರು.

‘ಆರಂಭದಲ್ಲಿ ಹಣ ನೀಡಿ’ ಎಂದು ಹೇಳಿದ ಬಿಜೆಪಿ ನಾಯಕರು ಈಗ ಪೂರ್ಣ ಪ್ರಮಾಣದಲ್ಲಿ ಅಕ್ಕಿ ನೀಡಿ ಎಂದು ಹೇಳುತ್ತಿರುವ ಬಗ್ಗೆ ಕೇಳಿದಾಗ, ‘ಇದರಿಂದ ಅವರ ಇಬ್ಬಗೆಯ ನೀತಿ ಗೊತ್ತಾಗುತ್ತಿದೆ’ ಎಂದು ಅವರು ಹೇಳಿದರು.

‘ಬಿಜೆಪಿಯವರು ಅಕ್ಕಿ ವಿಚಾರದಲ್ಲೂ ರಾಜಕೀಯ ಮಾಡುತ್ತಿದ್ದಾರೆ. ಅಕ್ಕಿ ನೀಡಲು ನಾವು ಎಷ್ಟು ಪ್ರಯತ್ನ ಮಾಡುತ್ತಿದ್ದೇವೆ ಎಂಬುದು ಜನರಿಗೆ ಅರ್ಥವಾಗುತ್ತಿದೆ. ಸದನದ ಒಳಗೆ ಮತ್ತು ಹೊರಗೆ ಪ್ರತಿಭಟನೆ ಮಾಡಲು ಮುಂದಾಗಿರುವ ಅವರನ್ನು ನಾವು ತಡೆಯುವುದಿಲ್ಲ. ಅವರ ಪ್ರತಿಭಟನೆಯಿಂದ ನಮ್ಮ ಯೋಜನೆಗೆ ಪ್ರಚಾರ ಸಿಗುತ್ತದೆ’ ಎಂದರು.

ಚಾತುರ್ಮಾಸ ವ್ರತ ನಾಳೆಯಿಂದ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್‌ನ ಚಾತುರ್ಮಾಸ ಮಹೋತ್ಸವ ಸಮಿತಿಯಿಂದ ಜುಲೈ 3ರಿಂದ ಸೆ. 29ರವರೆಗೆ ಹರಿಹರಪುರ ಮಠದ ಶಂಕರಾಚಾರ್ಯ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಅವರ 23ನೇ ಚಾತುರ್ಮಾಸ ವ್ರತವು ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘದಲ್ಲಿ ನಡೆಯಲಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಪ್ರಧಾನ ಸಂಚಾಲಕ ಬಿ.ಎಸ್.ರಾಘವೇಂದ್ರ ಭಟ್, ‘ಇದೇ 3ರಿಂದ ವ್ಯಾಸಪೂಜೆ, ಉತ್ತರ ಪೂಜಾ ವ್ಯಾಸಾಕ್ಷತೆ ಕಾರ್ಯಕ್ರಮಗಳು ನಡೆಯಲಿವೆ. ಈ ಚಾತುರ್ಮಾಸದ 90 ದಿನದ ಕಾಲಾವಧಿಯಲ್ಲಿ ಪ್ರತಿನಿತ್ಯ ಅನ್ನಸಂತರ್ಪಣೆ, ವಿಶೇಷ ಪೂಜೆಗಳು, ಭಜನೆ, ಸತ್ಸಂಗಗಳು ಜರುಗಲಿವೆ. ಶ್ರೀಲಕ್ಷ್ಮಿನರಸಿಂಹ ಸ್ವಾಮಿಯ ಪ್ರತಿದಿನ ಕಲ್ಯಾಣೋತ್ಸವ ಸೇವೆಯು ಇರಲಿದೆ. ಶಿವ ಪಂಚಾಕ್ಷರಿ ಕೋಟಿ ಜಪ ಮಹಾಯಜ್ಞವನ್ನು ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಜುಲೈ 3ರಂದು ಪ್ರಾರಂಭಿಸಲಾಗುವುದು. ಇದರಲ್ಲಿ ಜಾತಿ, ಮತ ಮತ್ತು ಲಿಂಗ ಭೇದವಿಲ್ಲದೇ ಎಲ್ಲರೂ ಪಾಲ್ಗೊಳ್ಳಬಹುದು’ ಎಂದರು.

ನಿಧನ ವಾರ್ತೆ

ನಾರಾಯಣಸ್ವಾಮಿ

ಬೆಂಗಳೂರು: ಭಾಷಾಂತರ ಇಲಾಖೆಯ ಉಪ ನಿರ್ದೇಶಕರಾಗಿದ್ದ ನಾರಾಯಣಸ್ವಾಮಿ (52) ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಮತ್ತು ಪುತ್ರ ಇದ್ದಾರೆ.

ಭಾನುವಾರ ಬೆಳಿಗ್ಗೆ 11 ಗಂಟೆಗೆ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಜೋಡಿಪುರ ಗ್ರಾಮದಲ್ಲಿ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

RAMRAJ
mithu® TOWELS
Signature Collection
SOFTNESS REDEFINED.
PREMIUM COTTON TOWELS FOR YOUR DELIGHT.
Crafted using 100% premium cotton, Mrithu Towels by Ramraj are stylish, super-soft, and highly absorbent. Our Towels are safe for the skin, fade-resistant and long-lasting. Experience the difference every time.
MRP ₹240 Onwards

SCAN QR CODE FOR STORE LOCATION
EXCLUSIVE RAMRAJ COTTON SHOWROOMS
BANGALORE : SHIVAJI NAGAR • J.P.NAGAR • GANDHI BAZAR • R.T.NAGAR • HSR LAYOUT • KANAKAPURA • UTTARAHALLI • MARATHAHALLI • KENGERI RAMAMURTHY NAGAR • HESARAGATTA • RAMNAGARA • NELAMANGALA • TUMKUR • RR NAGAR • YESHWANTHPUR • BANASHANKARI • MALLESHWARAM JAYANAGAR • YELACHENAHALLI • KG ROAD • RAJAJI NAGAR • VIJAYANAGAR • CHINTAMANI • YELHANKA • KORAMANGALA • DEVANAHALLI • ULSOOR
Available at Ramraj Cotton Showrooms and All Leading Textile Shops | shop online @ www.ramrajcotton.in

43 ಕಂಪನಿಗಳು ಫರ್ನಿಚರ್ಸ್ ಒಂದೇ ಸೂರಿನಡಿ ಲಭ್ಯ! ಕೊನೆಯ 2 ದಿನಗಳು
FURNITURE FAIR™
INTERIOR & EXTERIOR

30 ಜೂನ್ - 3 ಜುಲೈ 2023
ಬೆಳಗ್ಗೆ 10.00 ರಿಂದ ರಾತ್ರಿ 8.30ರ ವರೆಗೆ
ತ್ರಿಪುರವಾಸಿನಿ ಅರಮನೆ ಮೈದಾನ
ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು

ಸೋಫಾ ಸೆಟ್ಸ್ • ಡೈನಿಂಗ್ ಸೆಟ್ಸ್ • ಬೆಡ್‌ರೂಮ್ ಸೆಟ್ಸ್ • ಹೋಮ್ ಡೆಕೋರ್ • ಲೆದರ್ ಸೋಫಾ • ಟೀಕ್‌ವುಡ್ ಫರ್ನೀಚರ್ • ರಿಕ್ಲೈನರ್ ಸೋಫಾ ಸೆಟ್ಸ್ • ಶೀಶಮ್ ವುಡ್ ಫರ್ನೀಚರ್ • ಔಟ್‌ಡೋರ್ ಫರ್ನೀಚರ್ • ಎಂಡಿಎಫ್ ಫರ್ನೀಚರ್ • ಆ್ಯಂಟಿಕ್ ಫರ್ನೀಚರ್ • ಎಥ್ನಿಕ್ ಫರ್ನೀಚರ್ • ಡೆಕೊರೇಟಿವ್ ಮಿರರ್ಸ್ • ಲೆದರೆಟ್ಟೀಸ್ • ಮಾರ್ಬಲ್ ವಿಗ್ರಹಗಳು • ಇಂಟೀರಿಯರ್ ಸೊಲ್ಯೂಷನ್ಸ್ • ಮಸಾಜ್ ಚೇರ್ • ಕಾರ್ಪೆಟ್ & ರಗ್ಸ್ • ಫ್ರೇಮ್ಸ್ & ಫೌಂಟೈನ್ಸ್ • ಕಂಪ್ಲೀಟ್ ಹೋಮ್ ಪ್ಯಾಕೇಜ್ • ಕನ್ಸೂಮರ್ ಪ್ರಾಡಕ್ಟ್ಸ್ & ಇನ್ನೂ ಅನೇಕ....
www.iadsandevents.com
exhibitions_iadsnevents
iadsnevents
ಪ್ರವೇಶ ಉಚಿತ
+91 9342577908
ಕನಿಷ್ಠ ದರದ ಇಎಂಐ
HDFC BANK We understand your world | BAJAJ FINSERV | EMI FINANCE
EVENT PARTNER NANOFOLD
AN EVENT BY iads & events COMPLETE BUSINESS SOLUTIONS

BLDE
(DEEMED TO BE UNIVERSITY)
Declared as Deemed to be University u/s 3 of UGC Act, 1956
THE CONSTITUENT COLLEGE
SHRI B. M. PATIL MEDICAL COLLEGE, HOSPITAL AND RESEARCH CENTRE
Smt. Bangaramma Sajjan Campus, B. M. Patil (Sholapur) Road, Vijayapura - 586103, Karnataka, India.
Accreditations: 3.09 CGPA | DSIR RECOGNIZED SIRO | NABH | nirf | UNESCO uniTwin | INDIA TODAY 8th Rank | ARIIA PERFORMER | EducationWorld 7th Rank
AY : 2023-24
ADMISSION OPEN
FOR MEDICAL, ALLIED HEALTH SCIENCE AND APPLIED SCIENCE & TECHNOLOGY PROGRAMMES

Applications are invited from the eligible candidates for admission to various UG, PG & Ph.D. programmes including fellowship and certification programmes under the Faculty of Medicine, Faculty of Allied Health Science and Faculty of Science & Technology for the Academic Year 2023-2024.
NAAC Accredited with 'A' Grade by NAAC (Cycle-2)
PROGRAMMES / COURSES
nirf BLDE (DU) Ranked in the band of 101-150 by NIRF - India

FACULTY OF MEDICINE
PG PROGRAMMES
- Anatomy
- Physiology
- Biochemistry
FELLOWSHIP PROGRAMMES
- Neonatology
- Minimal Access Surgery
- Pediatric Dermatology
- Functional Endoscopic Sinus Surgery
- Micro Ear Surgery
- Minimal Invasive Surgery
- High Risk Pregnancy
- Urogynaecology
- Urology OT Technician
- Female Urology
- Andrology
Ph.D PROGRAMMES
- All Faculties

FACULTY OF ALLIED HEALTH SCIENCE
PG PROGRAMMES
- Master of Public Health (MPH)
- Master of Hospital Administration (MHA)
UG PROGRAMMES
- Bachelor of Physiotherapy (BPT)
- Bachelor of Optometry
- B.Sc.- Radiology & Imaging Technology (MIT)
- B.Sc.-Medical Laboratory Technology (MLT)
- B.Sc.-Anaesthesia Technology
- B.Sc.-Operation Theater Technology
- B.Sc.- Echocardiogram Technology
- B.Sc.- Forensic Science
- B.Sc.- Perfusion Technology
DIPLOMA PROGRAMME
- Diploma in Yoga & Meditation
CERTIFICATE COURSE
- Surgical Operation Theater Technology

FACULTY OF SCIENCE AND TECHNOLOGY
PG PROGRAMMES
- M.Sc.-Chemistry
- M.Sc.-Microbiology
- M.Sc.-Biotechnology
- M.Sc.-Biochemistry
- M.Sc.-Psychology
- M.Sc.-Computer Science
- M.Lib.I.Sc. (Master of Library & Information Science)

The Candidates desirous of seeking admission to the aforesaid programmes/courses may apply online through our website: www.bldedu.ac.in and upload the requisite documents with the application fee. The selection will be made on merit basis of the marks secured in the qualifying examination.
HURRY UP !! LIMITED SEATS
NOTE : NEET UG & PG 2023 eligible candidates may apply Medical UG & PG Admissions at Medical Counselling Committee (MCC) www.mcc.nic.in for online counselling & Seat allotment to Shri B. M. Patil Medical College, Hospital & Research Centre, VIJAYAPURA.
Note: The last date for submission of online application is July 15th 2023
SCAN HERE
FOR MORE DETAILS AND FURTHER UPDATES
Visit our website: www.bldedu.ac.in or Office: 08352-262770 Extn: 2269, BPT: 8108801220 (Prof. Basavaraj Chandu), Science & Technology: 9611092764 (Prof. A. V. Raghu), FoAHS: 9480117039 (Dr. B. S. Patil)

ಉಚಿತ ಟ್ಯೂಶನ್: 36 ವಿದ್ಯಾರ್ಥಿಗಳು ಉತ್ತೀರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಮುಖ್ಯ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಲು ಮುಂದಾಗಿದ್ದ 36 ವಿದ್ಯಾರ್ಥಿಗಳು, ಬಂಡೇಪಾಳ್ಯ ಪೊಲೀಸರ ಸಹಯೋಗದಲ್ಲಿ ಆಯೋಜಿಸಿದ್ದ 20 ದಿನಗಳ ಉಚಿತ ಟ್ಯೂಶನ್‌ನಲ್ಲಿ ಪಾಲ್ಗೊಂಡು ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಬಂಡೇಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಬಡವರು ಹಾಗೂ ಮಧ್ಯಮ ವರ್ಗದ 65 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಮುಖ್ಯಪರೀಕ್ಷೆಯಲ್ಲಿ ಅನುತ್ತೀರ್ಣವಾಗಿದ್ದರು. ಠಾಣೆಯ ಇನ್‌ಸ್ಪೆಕ್ಟರ್ ಎಲ್.ವೈ. ರಾಜೇಶ್ ಹಾಗೂ ಸಿಬ್ಬಂದಿ, 65 ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ಶಿಕ್ಷಕರಿಂದ ತರಬೇತಿ ಕೊಡಿಸಿದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯ ಪ್ರತಿಯೊಂದು ವಿಷಯಗಳ ಬಗ್ಗೆ ಪರಿಣಿತ ಶಿಕ್ಷಕರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದರು. ಅಣಕು ಪರೀಕ್ಷೆಗಳನ್ನು ನಡೆಸಿದ್ದ ಶಿಕ್ಷಕರು, ವಿದ್ಯಾರ್ಥಿಗಳನ್ನು ಪೂರಕ ಪರೀಕ್ಷೆಗೆ ಅಣಿಗೊಳಿಸಿದ್ದರು. ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ಫಲಿತಾಂಶ ಶುಕ್ರವಾರ ಪ್ರಕಟಗೊಂಡಿದ್ದು, 65 ವಿದ್ಯಾರ್ಥಿಗಳ ಪೈಕಿ 36 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

'6ಕ್ಕೆ 6 ವಿಷಯಗಳಲ್ಲಿ ಅನುತ್ತೀರ್ಣವಾಗಿ ಕೆಲಸಕ್ಕೆ ಹೋಗುವ ಪರಿಸ್ಥಿತಿ ಬಂದಿತ್ತು. ಪೊಲೀಸರು ನನಗೆ ತರಬೇತಿ ಕೊಡಿಸಿದರು. ಇದೀಗ 6 ವಿಷಯಗಳಲ್ಲಿ ಉತ್ತೀರ್ಣವಾಗಿದ್ದೇನೆ' ಎಂದು ವಿದ್ಯಾರ್ಥಿಯೊಬ್ಬರು ಹೇಳಿದರು.

ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಜೊತೆ ಬಂಡೇಪಾಳ್ಯ ಠಾಣೆಯ ಪೊಲೀಸರು

ಭೂಮಿಕಾ ಕ್ಲಬ್
presented by
SINCE 1939
P. C. CHANDRA JEWELLERS
A jewel of jewels

ಭೂಮಿಕಾ ಕ್ಲಬ್‌ನ ಕಾರ್ಯಕ್ರಮದಲ್ಲಿ ಗಾಯಕಿ ಚೈತ್ರಾ ಜೆ. ಆಚಾರ್ ಹಾಡಿದರು

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ ಭೂಮಿಕಾ ಕ್ಲಬ್ ಶನಿವಾರ ಆಯೋಜಿಸಿದ್ದ 6ನೇ ಆವೃತ್ತಿಯ ಕಾರ್ಯಕ್ರಮದಲ್ಲಿ ರೂಪದರ್ಶಿಯರು ಫ್ಯಾಷನ್ ಶೋನಲ್ಲಿ ಹೆಜ್ಜೆ ಹಾಕಿದರು —ಪ್ರಜಾವಾಣಿ ಚಿತ್ರಗಳು

'ಭೂಮಿಕಾ ಕ್ಲಬ್'ನ 6ನೇ ಆವೃತ್ತಿಗೆ ಗಾಯಕಿ ಚೈತ್ರಾ ಜೆ.ಆಚಾರ್ ಚಾಲನೆ

ಕಣ್ಮನ ತಣಿಸಿದ ಫ್ಯಾಷನ್ ಶೋ, ನೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಣ್ಣು ತಂಪಾಗಿಸುವ ಫ್ಯಾಷನ್ ಶೋ, ಹುಬ್ಬೇರಿಸಿದ ನೃತ್ಯ, ಚೈತ್ರಾ ಜೆ. ಆಚಾರ್ ಅವರ ಮನ ಸೆಳೆದ ಹಾಡು, ಶೈನಿ ಅಲೆಕ್ಸಾಂಡರ್ ಅವರ ಆಭರಣದ ವಿವರಗಳು... ಇವೆಲ್ಲವನ್ನು ನೋಡಿ, ಕೇಳಿ, ಭಾಗವಹಿಸಿ ಆನಂದಿಸಿದ ಪ್ರೇಕ್ಷಕರು..

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ ಭೂಮಿಕಾ ಕ್ಲಬ್ ಕೋರಮಂಗಲ ಕ್ಲಬ್‌ನಲ್ಲಿ ಶನಿವಾರ ಆಯೋಜಿಸಿದ್ದ 6ನೇ ಆವೃತ್ತಿಯ ಕಾರ್ಯಕ್ರಮ ಈ ಸಂಭ್ರಮಕ್ಕೆ ವೇದಿಕೆಯಾಯಿತು.

ಪಿ.ಸಿ.ಚಂದ್ರ ಜ್ಯುವೆಲರ್ಸ್ ಸಹಯೋಗದಲ್ಲಿ ನಡೆದ ಕಾರ್ಯಕ್ರಮಕ್ಕೆ ಹಟ್ಟಿ ಕಾಫಿ ಹಾಗೂ ಐಎಫ್‌ಎಂ (ಫ್ಯಾಷನ್ ಶೋ ಪಾರ್ಟನರ್) ಪ್ರಾಯೋಜಕತ್ವ ನೀಡಿದ್ದವು.

ನಟಿಯೂ ಆಗಿರುವ ಗಾಯಕಿ ಚೈತ್ರಾ ಜೆ.ಆಚಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. 'ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಡಬ್ಬಾ ಮಾತು ಸೃಷ್ಟಿಸಿದವರು ಯಾರು? ಒಂದು ಮನೆಯಲ್ಲಿ ತಾಯಿ, ಮಗಳು ಇದ್ದರೆ ಅವರು ಹೇಗೆ ಶತ್ರುಗಳು. ಇಲ್ಲಿ ಮಹಿಳೆಯರೇ ಹೆಚ್ಚಿದ್ದೇವೆ. ನಾವು ಪರಸ್ಪರ ಹೇಗೆ ಶತ್ರುಗಳು' ಎಂದು ಅವರು ಪ್ರಶ್ನಿಸಿದರು.

'ಹುಡುಗರು ಒಂದು ಕ್ಷೇತ್ರದಲ್ಲಿ ಸಾಧನೆ ಮಾಡಿದರೆ, ಹುಡುಗಿಯರು 10 ಕ್ಷೇತ್ರಗಳಲ್ಲಿ ಸಾಧನೆ ಮಾಡಬಲ್ಲರು. ಅಷ್ಟು ಶಕ್ತಿ ಅವರಿಗಿದೆ' ಎಂದು ಸ್ಫೂರ್ತಿಯ ಮಾತುಗಳನ್ನಾಡಿದರು.

'ನಾನು ಎಂಜಿನಿಯರಿಂಗ್ ಮಾಡಿದ ಮೇಲೆ ಚಿತ್ರರಂಗಕ್ಕೆ ಹೋಗುತ್ತೀನಿ ಅಂದಾಗ ಹೆತ್ತವರಿಗೆ ತಲೆ ಬಿಸಿಯಾಯಿತು. ಇಷ್ಟೆಲ್ಲ ಹಣ ಖರ್ಚು ಮಾಡಿ ಓದಿಸಿದರೆ ಗೊತ್ತಿಲ್ಲದ ಕ್ಷೇತ್ರಕ್ಕೆ ಹೋಗುತ್ತಿದ್ದಾಳಲ್ಲ ಎಂಬುದು ಅವರ ಆತಂಕವಾಗಿತ್ತು. ಈಗ ಅವರಿಗೆ ನಂಬಿಕೆ ಬಂದಿದೆ' ಎಂದು ತಮ್ಮ ಅನುಭವಗಳನ್ನು ಬಿಚ್ಚಿಟ್ಟರು.

'ಸೋಜುಗದ ಸೂಜಿ ಮಲ್ಲಿಗೆ' ಹಾಡು ಹಾಡಿ ರಂಜಿಸಿದರು. ತಾನು ಅಭಿನಯಿಸಿರುವ 'ಸಪ್ತ ಸಾಗರದ ಆಚೆ', 'ಟೋಬಿ' ವೀಕ್ಷಿಸಿ ಪ್ರೋತ್ಸಾಹಿಸುವಂತೆ ಮನವಿ ಮಾಡಿದರು.

ಫ್ಯಾಷನ್ ಡಿಸೈನರ್ ಮತ್ತು ಸ್ಟೈಲಿಸ್ಟ್ ಶೈನಿ ಅಲೆಕ್ಸಾಂಡರ್ ಅವರು ಆಭರಣಗಳ ವಿನ್ಯಾಸವನ್ನಷ್ಟೇ ತೆರೆದಿಟ್ಟಿದ್ದಲ್ಲದೇ ಯಾವ ಬಟ್ಟೆಗೆ ಯಾವ ರೀತಿಯ ಆಭರಣ ಧರಿಸಬೇಕು? ಯಾವ ಕಾರ್ಯಕ್ರಮಕ್ಕೆ ಯಾವ ಆಭರಣ ಒಳ್ಳೆಯದು ಎಂಬುದನ್ನು ವಿವರಿಸಿದರು. ಮನೆಯಲ್ಲಿ ಇರುವಾಗ ಧರಿಸುವ ಆಭರಣಗಳು, ಕೆಲಸಕ್ಕೆ ಹೋಗುವಾಗ, ಪಾರ್ಟಿಗೆ ಹೋಗುವಾಗ, ಮದುವೆಗೆ ಹೋಗುವಾಗ ಹೀಗೆ ಯಾವಾಗ ಏನು ಧರಿಸಬೇಕು ಎಂಬುದನ್ನು ತಿಳಿಸಿದರು.

ಜೆ.ಎನ್.ರವಿ ನಿರ್ದೇಶನ ಹಾಗೂ ಸಿರಿ ರಮೇಶ್ ನೃತ್ಯ ಸಂಯೋಜನೆಯಲ್ಲಿ ಐಎಫ್‌ಎಂ ಸಿನಿಮಾ ಸಂಸ್ಥೆಯ ರೂಪದರ್ಶಿಯರು ನಡೆಸಿಕೊಟ್ಟ ಜ್ಯುವೆಲರ್ಸ್ ಫ್ಯಾಷನ್ ಶೋ ಎಲ್ಲರ ಗಮನ ಸೆಳೆಯಿತು. ವಿವಿಧ ಆಭರಣ ಧರಿಸಿದ ಯುವತಿಯರು ಇಂಪಾದ ಹಿನ್ನೆಲೆ ಸಂಗೀತಕ್ಕೆ ಹೆಜ್ಜೆ ಹಾಕಿದರು.

ತಾರಕ್ ನೃತ್ಯ ಅಕಾಡೆಮಿಯ ಕಲಾವಿದರು ಬೆರಗುಗೊಳಿಸುವಂತೆ ನೃತ್ಯ ಮಾಡಿದ್ದಲ್ಲದೇ ಪ್ರೇಕ್ಷಕರನ್ನೂ ಕುಣಿಯುವಂತೆ ಮಾಡಿದರು. ನಿರೂಪಕಿ ಪ್ರತಿಭಾ ಗೌಡ ಪ್ರೇಕ್ಷಕರಿಗೆ ವಿವಿಧ ಆಟಗಳನ್ನು ಆಡಿಸಿ ಹುರಿದುಂಬಿಸಿದರು.

ಭೂಮಿಕಾ ಕ್ಲಬ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಾರಕ್ ನೃತ್ಯ ಅಕಾಡೆಮಿಯ ಕಲಾವಿದರು ನೃತ್ಯ ಪ್ರದರ್ಶಿಸಿದರು

BRAWFED organises
NATIONAL HANDLOOM EXPO 2022-23, BENGALURU
(for market promotion of Hand-woven Textile products under NHDP)
From: 24th June to 7th July 2023 daily 11 a.m to 8 p.m
Venue: Shubh Convenstion, Opp. to Brigade Millenium, J.P Nagar, Bengaluru.
"MY HANDLOOM MY PRIDE"
Azadi Ka Amrit Mahotsav
Organised by: Bodoland Regional Apex Weavers & Artisans Co-operative Federation Ltd. J.D Road, Kokrajhar, B.T,R., Assam.
Sponsored by: Development Commissioner, Handlooms, Govt. of India, Ministry of Textiles, New Delhi.

B / ARBI / Regn. 2557 / 72-73 Dt: 28th March 1973

ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ.)
ನಂ. 35, ರತ್ನವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು – 560 004.

ಸಹಕಾರಿ ವರ್ಷ 2022–2023 ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಪತ್ರಿಕಾ ಪ್ರಕಟಣೆಯ ಮೂಲಕ ತಿಳುವಳಿಕೆ

ಮಾನ್ಯರೇ,

ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ನಂ,35, ರತ್ನವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು –560004, ಇದರ ಸಹಕಾರಿ ವರ್ಷ **2022–2023ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯನ್ನು ಸಂಘದ ಸುವರ್ಣ ಮಹೋತ್ಸವ ಸಂಭ್ರಮದೊಂದಿಗೆ ಅಧ್ಯಕ್ಷರಾದ ಶ್ರೀ ಬಿ. ಉಮಾಮಹೇಶ್ವರರವರ ಅಧ್ಯಕ್ಷತೆಯಲ್ಲಿ ದಿನಾಂಕ: 16–07–2023 ಭಾನುವಾರ ಮಧ್ಯಾಹ್ನ 12 ಗಂಟೆಗೆ ಇದೇ ಬೆಂಗಳೂರಿನ ಗಿರಿನಗರ ನಾಲ್ಕನೇ ಹಂತ, ವಿವೇಕಾನಂದ ಉದ್ಯಾನವನದ ಎದುರಿನಲ್ಲಿರುವ 'ಅವಧಾನಿ ಕನ್‌ವೆನ್‌ಷನ್ ಹಾಲ್'** ನಲ್ಲಿ ನಡೆಸಲು ನಿರ್ಣಯಿಸಲಾಗಿದೆ. ಈ ಸಭೆಯಲ್ಲಿ ಮಾನ್ಯ ಎಲ್ಲಾ ಸದಸ್ಯರು ಭಾಗವಹಿಸುವ ಸಲುವಾಗಿ ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಸಂಘದಲ್ಲಿ ಲಭ್ಯವಿರುವ ಸದಸ್ಯರುಗಳ ವಿಳಾಸಕ್ಕೆ ಅಂಚೆ ಮೂಲಕ ರವಾನಿಸಲಾಗಿದೆ. ಒಂದು ವೇಳೆ ತಿಳುವಳಿಕೆ ಪತ್ರ ತಲುಪದೆ ಇರುವ ಸದಸ್ಯರುಗಳು, ಸಂಘದ ಕಛೇರಿಯ ಕೆಲಸದ ವೇಳೆಯಲ್ಲಿ ಭೇಟಿ ನೀಡಿ ತಮ್ಮ ಸದಸ್ಯತ್ವ ಮತ್ತು ಗುರುತಿನ ಚೀಟಿಯನ್ನು ತೋರಿಸಿ ತಿಳುವಳಿಕೆ ಪತ್ರ ಪಡೆಯಬಹುದಾಗಿರುತ್ತದೆ.

ವಂದನೆಗಳೊಂದಿಗೆ,

ಕಾರ್ಯಕಾರಿ ಮಂಡಳಿ

ಶ್ರೀ ಉಮಾಮಹೇಶ್ವರ, ಅಧ್ಯಕ್ಷರು
ಶ್ರೀಮತಿ ಸಂಧ್ಯಾರಾಣಿ, ಉಪಾಧ್ಯಕ್ಷರು
ಶ್ರೀ ನಂದಕಿಶೋರ್, ಕಾರ್ಯಕಾರಿ ನಿರ್ದೇಶಕರು

ನಿರ್ದೇಶಕರುಗಳಾದ: ಶ್ರೀ ವೆಂಕಟಸ್ವಾಮಿ, ಶ್ರೀ ಅಮರನಾಥ್, ಶ್ರೀ ಕೆ ಗೋವಿಂದರಾಜ ಶೆಟ್ಟಿ, ಶ್ರೀ ನಂಜೇಗೌಡ, ಶ್ರೀ ಜೆ.ಎನ್. ಗಂಗಾರಾಮ್ ರಾವ್, ಶ್ರೀ ಭಾರದ್ವಾಜ, ಶ್ರೀಮತಿ ಪರಿಮಳ ಎಸ್, ಶ್ರೀ ಎನ್ ಶಂಕರ್, ಶ್ರೀ ಎನ್ ವಿನಯ್

ಇಂತಿ ತಮ್ಮ ವಿಶ್ವಾಸಿ,
ಸಹಿ/–
ಕಾರ್ಯದರ್ಶಿ
(ಕಾರ್ಯಕಾರಿ ಮಂಡಳಿಯ ಅಪ್ಪಣೆ ಮೇರೆಗೆ)

ದಿನಾಂಕ : 29.06.2023
ಸ್ಥಳ : ಬೆಂಗಳೂರು

Canara Bank
A Government of India Undertaking
Syndicate
ದೊಡ್ಡ ಕಾರ್ಪೊರೇಟ್ ಶಾಖೆ, ಕಾಂಪ್ಲೆಕ್ಸ್, ಟಿಎಸ್‌ಆರ್ ಕಾಂಪ್ಲೆಕ್ಸ್, 2ನೇ ಮಹಡಿ, 1–7–1, ಎಸ್ಪಿ ರಸ್ತೆ, ಸಿಕಂದರಾಬಾದ್ 500003
E-mail:cb2657@canarabank.com

ಇ–ಹರಾಜು ಮಾರಾಟ ನೋಟಿಸು

ಸೆಕ್ಯುರಿಟೈಜೇಷನ್ ಆ್ಯಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ನಿಯಮಗಳು 8(6)&9ರ ನಿಬಂಧನೆಗಳನ್ನು ಓದಿಕೊಂಡಂತೆ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಅನ್ವಯ ಬ್ಯಾಂಕ್‌ಗೆ ಮಾಡಿರುವ ಸ್ಥಿರಾಸ್ತಿಯ ಇ–ಹರಾಜು ಮಾರಾಟ ಸೂಚನೆ. ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್ ಆದ **ಕೆನರಾ ಬ್ಯಾಂಕ್, ಎಲ್ ಸಿ ಬಿ ಸಿಕಂದರಾಬಾದ್, ಸಾಲದಾತರ ಒಕ್ಕೂಟದ ಪರವಾಗಿ**, ಅಧಿಕೃತ ಅಧಿಕಾರಿಯಾದ ಇವರಿಗೆ ಅಡಮಾನ/ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಬ್ಯಾಂಕಿನ ಅಧಿಕೃತ ಅಧಿಕಾರಿಯವರು ರಚನಾತ್ಮಕ/ಸಾಂಕೇತಿಕವಾಗಿ ಸ್ವಾಧೀನ ಪಡಿಸಿಕೊಂಡಿದ್ದು ಅವುಗಳನ್ನು **"ಎಲ್ಲಿ ಹೇಗಿದೆಯೊ ಹಾಗೆ", "ಎಲ್ಲಿ ಏನಿದೆಯೊ ಹಾಗೆ" ಮತ್ತು "ಮತ್ತ್ಯಾವುದಾದರೂ ಅಲ್ಲಿ ಇದ್ದಲ್ಲಿ"** ಆಧಾರದ ಮೇಲೆ ದಿನಾಂಕ : 18–8–2023 ರಂದು ಪ್ರಸ್ತುತ ಸಾಲ ರೂ. 908,20,79,941.37/– (30/04/2023 ರಂತೆ ಒಪ್ಪಂದದ ಬಾಕಿಗಳು) ಜೊತೆಗೆ 01–05–2023 ರಿಂದ ಅನ್ವಯಿಸದ ಬಡ್ಡಿ ಸಾಲದಾತರ ಒಕ್ಕೂಟದ (ಕೆನರಾ ಬ್ಯಾಂಕ್ ಸೇರಿದಂತೆ) ತೆಗೆದುಕೊಂಡ ಸಾಲ ಬಾಕಿಗಳಿಗೆ ಸಂಬಂಧಿಸಿದಂತೆ ಸಾಲಗಾರರು/ಜಾಮೀನುದಾರರು ಮೆ॥ ಎ ಎಸ್ ಆರ್ ಇಂಜಿನಿಯರಿಂಗ್ ಮತ್ತು ಪ್ರಾಜೆಕ್ಟ್ ಲಿಮಿಟೆಡ್ (ಹಿಂದಿನ ಮೆ॥ ಸಾಯಿ ಸುಧೀರ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್) ನೋಂದಾಯಿಸಲಾದ ಕಚೇರಿ / ಆಡಳಿತ ಕಚೇರಿ : 306, ಜಿ.ಪಿ. ಎಲೈಟ್, 8–2–283/4, ರಸ್ತೆ ಸಂಖ್ಯೆ 14, ಬಂಜಾರಾ ಹಿಲ್ಸ್, ಹೈದರಾಬಾದ್, ರಾಜ್ಯ– ತೆಲಂಗಾಣ – 500 034, ಶ್ರೀ ಡಿ ಶ್ರೀಧರ್ ರೆಡ್ಡಿ [ಜಾಮೀನುದಾರರು] ತಂದೆ ಡಿ ವೆಂಕಟ ರಾಮಿ ರೆಡ್ಡಿ ,ಫ್ಲಾಟ್ ಸಂಖ್ಯೆ 104& 204, ಜ್ಯೋತಿಯಲ್ಲಿ ವಾಸಿಸುತ್ತಿದ್ದಾರೆ ಲೋಟಸ್, ಹುಡಾ ಹೈಟ್ಸ್, ಬಂಜಾರಾ ಹಿಲ್ಸ್, ಹೈದರಾಬಾದ್ – 500033, ತೆಲಂಗಾಣ. ಶ್ರೀಮತಿ ಡಿ ಅಪರ್ಣಾ ರೆಡ್ಡಿ [ನಿರ್ದೇಶಕರು ಮತ್ತು ಜಾಮೀನುದಾರರು] ಗಂಡ ಡಿ .ಶ್ರೀಧರ್ ರೆಡ್ಡಿ ಫ್ಲಾಟ್ ಸಂಖ್ಯೆ 104 & 204, ಜ್ಯೋತಿ ಲೋಟಸ್, ಹುಡಾ ಹೈಟ್ಸ್, ಬಂಜಾರಾ ಹಿಲ್ಸ್, ಹೈದರಾಬಾದ್ – 500033, ತೆಲಂಗಾಣ, ಶ್ರೀ ಡಿ ವೆಂಕಟ ರಾಮಿ ರೆಡ್ಡಿ [ನಿರ್ದೇಶಕರು ಮತ್ತು ಜಾಮೀನುದಾರರು] ತಂದೆ ಶ್ರೀ ವೆಂಕಟ್ ರೆಡ್ಡಿ ಪ್ಲಾಟ್ ಸಂಖ್ಯೆ 27, ವಿದ್ಯುತ್ ನಗರ, ಅನಂತಪುರ – 516004, ಆಂಧ್ರಪ್ರದೇಶದಲ್ಲಿ ವಾಸಿಸುತ್ತಿದ್ದಾರೆ

ಇ–ಹರಾಜು ಮಾರಾಟ ದಿನಾಂಕ 18–08–2023, ಸಮಯ : ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30ರವರೆಗೆ
(ಪ್ರತಿ ಬಿಡ್ಡಿಗೆ 10 ನಿಮಿಷಗಳ ಅವಧಿಯ ಅಪರಿಮಿತ ವಿಸ್ತರಣೆಯೊಂದಿಗೆ ಬಿಡ್ಡ ಮುಗಿಯುವರೆಗೆ)
ಇಎಂಡಿ ಠೇವಣಿಯನ್ನು ದಿನಾಂಕ 16–08–2023 ಸಂಜೆ 4.00ಗಂಟೆ ಒಳಗೆ ಸಂದಾಯ ಮಾಡಬೇಕು

ಆಸ್ತಿಗಳ ವಿವರ

ಆಸ್ತಿಗಳ ವಿವರ ಮೆ॥ ಸಾಯಿ ಸುಧೀರ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಇವರ ಹೆಸರಿನಲ್ಲಿರುವ ಕರ್ನಾಟಕದ, ಬೆಂಗಳೂರು 92,ಯಲಹಂಕ,ಬ್ಯಾಟನಾರಾಯಣಪುರ, ಶಕರನಗರ ಕೊಡಿಗೇಹಳ್ಳಿ, ಬ್ಲಾಕ್ –ಸಿ,ವಾರ್ಡ್ ಸಂಖ್ಯೆ 7, ಬಿ ಬಿ ಎಂ ಪಿ ಕಥಾ ನಂ 1845, ಖಾಲಿ ಜಮೀನು, ವಿಸ್ತೀರ್ಣ 2400 ಚದರ ಅಡಿ, ಇದರ ಚಕ್ಕಬಂದಿ ಉತ್ತರದಲ್ಲಿ: ವಿಶಾಲ ರಸ್ತೆ, ದಕ್ಷಿಣದಲ್ಲಿ: ಸೈಟ್ ಸಂಖ್ಯೆ 1847,ಪೂರ್ವದಲ್ಲಿ: ಸೈಟ್ ಸಂಖ್ಯೆ 1846, ಪಶ್ಚಿಮದಲ್ಲಿ: ಸೈಟ್ ಸಂಖ್ಯೆ 1844

ಕಾಯ್ದಿರಿಸಿದ ಬೆಲೆ : ರೂ. 1,08,00,000/– ಲಕ್ಷ ಇಎಂಡಿ: ರೂ. 10,80,000/–

ಆಸ್ತಿಗಳ ವಿವರ ಶ್ರೀ ಡಿ ಶ್ರೀಧರ್ ರೆಡ್ಡಿ ಇವರ ಹೆಸರಿನಲ್ಲಿರುವ ಕರ್ನಾಟಕದ, ಬೆಂಗಳೂರು 97,ವಾರ್ಡ್ –9,ಕೊಡಿಗೇಹಳ್ಳಿ ಗ್ರಾಮ, ಧನಲಕ್ಷ್ಮಿ ಲೇಔಟ್ ಹತ್ತಿರ,ವಿರೂಪಾಕ್ಷಪುರ,ಸೈನೋ 188/2 ರಲ್ಲಿ ಪ್ಲಾಟ್ ಸಂಖ್ಯೆ 51,52,2 ನೇ ಮುಖ್ಯರಸ್ತೆ,, ಖಾಲಿ ಜಮೀನು, ವಿಸ್ತೀರ್ಣ 2400 ಚದರ ಅಡಿ, ಇದರ ಚಕ್ಕಬಂದಿ ಉತ್ತರ: ಪ್ಲಾಟ್ ಸಂಖ್ಯೆ 37 ಮತ್ತು 38, ದಕ್ಷಿಣ: ಕಾಂಕ್ರೀಟ್ ರಸ್ತೆ, ಪೂರ್ವ: ಕಾಂಕ್ರೀಟ್ ರಸ್ತೆ, ಪಶ್ಚಿಮ: ಪ್ಲಾಟ್ ಸಂಖ್ಯೆ 50.

ಕಾಯ್ದಿರಿಸಿದ ಬೆಲೆ : ರೂ. 1,68,00,000/– ಲಕ್ಷ ಇಎಂಡಿ: ರೂ. 16,80,000/–

ಬ್ಯಾಂಕಿಗೆ ತಿಳಿದುಬಂದಂತೆ ಆಸ್ತಿಗೆ ಯಾವುದೇ ಋಣಭಾರ ಇರುವುದಿಲ್ಲ. ಮಾರಾಟದ ಷರತ್ತು ಮತ್ತು ನಿಬಂಧನೆಗಳಿಗೆ ಕೆನರಾ ಬ್ಯಾಂಕ್ ವೆಬ್‌ಸೈಟ್ (www.canarabank.com) ನಲ್ಲಿ "E-Auction" ಲಿಂಕನಲ್ಲಿ ನೋಡಬಹುದು ಅಥವಾ ಶ್ರೀ ನಿಖಿಲ್ ಅರೋರಾ ಮುಖ್ಯ ವ್ಯವಸ್ಥಾಪಕರು,ಎಲ್‌ಸಿಬಿ, ಸಿಕಂದರಾಬಾದ್ ಶಾಖೆ, ಮೊಬೈಲ್ ಸಂಖ್ಯೆ: 9094957993 ಅನ್ನು ಯಾವುದೇ ಕೆಲಸದ ದಿನದಂದು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು

ಸೂಚನೆ : ಎ) ಕಾಯ್ದಿರಿಸಿದ ಮೊತ್ತದ ಶೇ 10% ರಷ್ಟು ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ಯನ್ನು ಡಿಡಿ ರೂಪದಲ್ಲಿ ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್, ದೊಡ್ಡ ಕಾರ್ಪೊರೇಟ್ ಶಾಖೆ ಸಿಕಂದರಾಬಾದ್ ಇವರಿಗೆ ಸಂದಾಯ ಮಾಡಬೇಕು ಅಥವಾ ಅಕೌಂಟ ನಂ. 209272434 ಐಎಫ್‌ಎಸ್‌ಸಿ ಕೋಡ CNRB0002657 (ಇಂಟರ ಬ್ಯಾಂಕ ಟ್ರಾನ್ಸಫರ್ ಸೆಲೆಕ್ಟ ಮಾಡಿ) ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಫಂಡ್ ಟ್ರಾನ್ಸಫರ್ ಮೂಲಕ ಖಾತೆಗೆ ಆನ್ ಲೈನ್ ಮೂಲಕ ಸಂದಾಯಮಾಡಬೇಕು. ಬಿ) ಅಧಿಕೃತ ಅಧಿಕಾರಿಯ ಪೂರ್ವ ಅನುಮತಿಯನ್ನು ಪಡೆದು ದಿನಾಂಕ 14–8–2023, ಬೆಳಿಗ್ಗೆ 11 ರಿಂದ ಸಂಜೆ 4 ರ ನಡುವೆ ಆಸ್ತಿಯನ್ನು ಕೆಲಸದ ವೇಳೆಯಲ್ಲಿ ಪರಿವೀಕ್ಷಿಸಬಹುದು. ಸಿ) ಹರಾಜನ್ನು ಕಾಯ್ದಿಟ್ಟ ಬೆಲೆಯಿಂದ ಆರಂಭಿಸಲಾಗುವುದು. ಬಿಡ್‌ದಾರರು ರೂ.1,00,000/– ಗಳ ಗಣಕಗಳಲ್ಲಿ ಆಫರ್‌ಗಳನ್ನು ಸುಧಾರಿಸಬಹುದು. ಯಾವ ಬಿಡ್ಡದಾರರು ಹೆಚ್ಚಿನ ಬಿಡ್ಡನ್ನು ಸಲ್ಲಿಸುತ್ತಾರೋ (ಕಾಯ್ದಟ್ಟ ಬೆಲೆಕ್ಕಿಂತ ಕಡಿಮೆ ಇಲ್ಲದ) ಆನ್ ಲೈನ್ ಹರಾಜು ಮುಗಿದ ನಂತರ ಅವರನ್ನು ಯಶಸ್ವಿ ಬಿಡ್‌ದಾರರೆಂದು ಘೋಷಿಸಲಾಗುವುದು. ಅಧಿಕೃತ ಅಧಿಕಾರಿಯವರ ದೃಢೀಕರಣಕ್ಕೆ ಒಳಪಟ್ಟು ಮಾರಾಟವು ಯಶಸ್ವಿ ಬಿಡ್‌ದಾರರಿಗೆ ತಿಳಿಸಲಾಗುವುದು. ಡಿ) ಹರಾಜಿನ ವಿಧಾನ : ಹರಾಜು/ಬಿಡ್ಡಿಂಗ್ ಅನ್ನು ವೆಬ್‌ಸೈಟ್ ಮೂಲಕ "ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್" ಮೂಲಕ ಮಾತ್ರ ಮಾಡಬೇಕು ವೆಬ್ ಸೈಟ್: www.bankeauctionwizard.com ಈ) ಹರಾಜಿನ ಸ್ಥಳ : ದೊಡ್ಡ ಕಾರ್ಪೊರೇಟ್ ಶಾಖೆ, ಕಾಂಪ್ಲೆಕ್ಸ್, ಟಿಎಸ್‌ಆರ್ ಕಾಂಪ್ಲೆಕ್ಸ್, 2ನೇ ಮಹಡಿ, 1–7–1, ಎಸ್ಪಿ ರಸ್ತೆ, ಸಿಕಂದರಾಬಾದ್ 500003

ಸ್ಥಳ : ಹೈದ್ರಾಬಾದ ದಿನಾಂಕ : 30–06–2023 ಸಹಿ/– ಅಧಿಕೃತ ಅಧಿಕಾರಿ ಕೆನರಾ ಬ್ಯಾಂಕ್

ಮಹಾರಾಷ್ಟ್ರದ ಸಂಸ್ಥೆಗೆ ಸಮವಸ್ತ್ರ ಪೂರೈಕೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಯ ಮಕ್ಕಳಿಗೆ ಸಮವಸ್ತ್ರ ಪೂರೈಕೆ ಮಾಡಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ (ಕೆಎಚ್‌ಡಿಸಿ) ನೀಡಿದ್ದ ಅನುಮತಿಯನ್ನು ಹಿಂಪಡೆದಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮಹಾರಾಷ್ಟ್ರದ ವಿಲಾಪಚಂದ್ ಜೈನ್ ಸಂಸ್ಥೆಗೆ ಹೊಣೆಗಾರಿಕೆ ನೀಡಿದೆ.

ಶಾಲಾ ಮಕ್ಕಳಿಗೆ ಕಳಪೆ ಗುಣಮಟ್ಟದ ಸಮವಸ್ತ್ರ ವಿತರಿಸಿದ ಆರೋಪ ನಿಗಮದ ಮೇಲಿದ್ದು, ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಸ್. ಮುದ್ದಯ್ಯ ಅವರನ್ನು ಈಚೆಗೆ ಅಮಾನತುಗೊಳಿಸಲಾಗಿತ್ತು.

2020–21ನೇ ಸಾಲಿನಲ್ಲಿ ವಿದ್ಯಾ ವಿಕಾಸ ಯೋಜನೆಯಲ್ಲಿ ಒಂದರಿಂದ 10ನೇ ತರಗತಿವರೆಗಿನ ಗಂಡು ಮಕ್ಕಳಿಗೆ ಮತ್ತು ಒಂದರಿಂದ ಏಳನೇ ತರಗತಿವರೆಗಿನ ಹೆಣ್ಣು ಮಕ್ಕಳಿಗೆ ಸಮವಸ್ತ್ರ, ಎಂಟರಿಂದ 10ನೇ ತರಗತಿವರೆಗಿನ ಹೆಣ್ಣು ಮಕ್ಕಳಿಗೆ ಚೂಡಿದಾರ್ ಸೇರಿ ಎರಡು ಜೊತೆ ಸಮವಸ್ತ್ರಕ್ಕೆ ಒಟ್ಟು 1.34 ಲಕ್ಷ ಮೀಟರ್ ಬಟ್ಟೆ ಪೂರೈಸಲು ಶಿಕ್ಷಣ ಇಲಾಖೆಯು ನಿಗಮಕ್ಕೆ ಅನುಮತಿ ನೀಡಿತ್ತು. ಆದರೆ, ನಿಗಮ ಪೂರೈಸಿದ ಬಟ್ಟೆಯು ಕಳಪೆ ಗುಣಮಟ್ಟದ್ದು ಎಂದು ಕೇಂದ್ರ ರೇಷ್ಮೆ ಮಂಡಳಿ ವರದಿ ನೀಡಿತ್ತು.

ಬಹುತೇಕ ಶಾಲೆಗಳಿಗೆ ಈಗಾಗಲೇ ಬಟ್ಟೆಗಳು ತಲುಪಿವೆ. ವಿತರಣೆಯಾಗದೇ ಇರುವ ಶಾಲೆಗಳಿಗೆ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ವಿತರಿಸದೇ ಉಳಿದಿರುವ ಬಟ್ಟೆಯೂ ಸೇರಿ 2 ಜತೆ ಸಮವಸ್ತ್ರ ಪೂರೈಸಬೇಕು ಎಂದು ಶಿಕ್ಷಣ ಇಲಾಖೆ ಆಯುಕ್ತರು ಸೂಚಿಸಿದ್ದಾರೆ.

ಕರ್ನಾಟಕ ಸರ್ಕಾರ
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ
ಪ್ರಾಚಾರ್ಯರ ಕಛೇರಿ, ಕೈಗಾರಿಕಾ ತರಬೇತಿ ಸಂಸ್ಥೆ, ತುಮಕೂರು ರಸ್ತೆ, ಯಶವಂತಪುರ, ಬೆಂಗಳೂರು–22.
ದೂ: 98443 58606, ಇಮೇಲ್: govtitipeenyab22@gmail.com
No. ITI/B-22/PUR/CR-02/2023-2024 Date: 01.07.2023

ಇ–ಹರಾಜು ರದ್ದು ಪಡಿಸುವ ಬಗ್ಗೆ ಪ್ರಕಟಣೆ

ಈ ಸಂಸ್ಥೆಯ ಉಗ್ರಾಣದಲ್ಲಿ ಶೇಖರಣೆಗೊಂಡಿರುವ 06 ವಿವಿಧ ಬಗೆಯ (3 LMV, 3 HMV) ಸ್ಕ್ರ್ಯಾಪ್ ವಾಹನಗಳನ್ನು "ಎಲ್ಲಿ ಹೇಗಿವೆಯೋ ಹಾಗೆ" ಇ–ಹರಾಜು ಮೂಲಕ ವಿಲೇವಾರಿ ಮಾಡಲು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ತುಮಕೂರು ರಸ್ತೆ, ಬೆಂಗಳೂರು–560022 ಇಲ್ಲಿ ದಿನಾಂಕ : **10.07.2023ರ ಬೆಳಿಗ್ಗೆ 10.00 ರಿಂದ ಸಂಜೆ 5.00 ರವರೆಗೆ** ಟೆಂಡರ್ ಕಂ ಹರಾಜು ಮೂಲಕ ಬಹಿರಂಗವಾಗಿ ವಿಲೇವಾರಿ ಮಾಡಲಾಗುತ್ತಿದೆ ಎಂಬ ಮಾಹಿತಿಯನ್ನು ಉಲ್ಲೇಖ(2)ರಲ್ಲಿ ಎರಡು ಕನ್ನಡ ಭಾಷೆಯ ದೈನಂದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ಕೋರಲಾಗಿತ್ತು ಅದರಂತೆ ಪ್ರಕಟಿಸಲಾಗಿತ್ತು, ಆದರೆ ತಾಂತ್ರಿಕ ಕಾರಣಗಳಿಂದಾಗಿ ಅನುಪಯುಕ್ತ ಸಾಮಾಗ್ರಿಗಳನ್ನು ವಿಲೇವಾರಿಯ ಪ್ರಕ್ರಿಯೆನ್ನು ರದ್ದುಪಡಿಸಲಾಗಿದೆ. ಸಹಿ/– ಪ್ರಾಚಾರ್ಯರು

ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/427/2023–24 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬೆಂಗಳೂರು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
(ಕಾರ್ಮಿಕ ಇಲಾಖೆ)
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029. ದೂ.: 080–29753350
ಇ–ಮೇಲ್: karbuildworkerswelfare@gmail.com
ಸಂಖ್ಯೆ: KBOCWWB/E-Auction/FD Non-callable/CR-04/2023-24 ದಿನಾಂಕ: 01.07.2023

ಇ–ಆಕ್ಷನ್ ಪ್ರಕಟಣೆ

ವಿಷಯ: ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತ ರೂ.1500.00 ಕೋಟಿ ಮತ್ತು ರೂ. 700.00 ಕೋಟಿಗಳನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ / Non- Callable ನಲ್ಲಿ ತೊಡಗಿಸಲು ಇ–ಆಕ್ಷನ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಮಂಡಳಿಯ ಹೆಚ್ಚುವರಿ ಸುಂಕದ ಅಂದಾಜು ಮೊತ್ತ **ರೂ. 1500.00 ಕೋಟಿ (ರೂಪಾಯಿ ಸಾವಿರದ ಐದು ನೂರು ಕೋಟಿ ಮಾತ್ರ)** ಮತ್ತು **ರೂ. 700.00 ಕೋಟಿ (ರೂಪಾಯಿ ಏಳು ನೂರು ಕೋಟಿ ಮಾತ್ರ)** ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ / Non-Callable ನಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ KPPP ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಆಹ್ವಾನಿಸಲಾಗಿದೆ.

ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://kppp.karnataka.gov.in/)** ಸಲ್ಲಿಸುವುದು. ಮಂಡಳಿಯ ಹೆಚ್ಚುವರಿ ಸುಂಕದ ಅಂದಾಜು ಮೊತ್ತ **ರೂ. 1500.00 ಕೋಟಿಗಳ** ಇ–ಆಕ್ಷನ್‌ಗಾಗಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **06.07.2023 ಸಂಜೆ 4:00** ರೊಳಗಾಗಿ ಮತ್ತು **ರೂ. 700.00 ಕೋಟಿಗಳ** ಇ–ಆಕ್ಷನ್‌ಗಾಗಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **11.07.2023 ಸಂಜೆ 4:00** ರೊಳಗಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಉಪ ನಿಯಂತ್ರಕರು, ಫೋನ್: **080–29753350/54/56**, ಮೊ: **9448533794** ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಜಂಟಿ ಕಾರ್ಯದರ್ಶಿ
ಕ.ಕ.&ಇ.ನಿ.ಕಾ.ಕ.ಮಂಡಳಿ

ವಾಸಾಸಂಇ/ವಾಪ್ರ/ಎಲ್‌ಸಿ/421/2023–24

ನಗರದಲ್ಲಿ ಇಂದು

'ಭಕ್ತಿ ಭಾವಾನಂದ' ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಬೆಳಿಗ್ಗೆ 9ರಿಂದ

ಭಾರತಿ ಹೆಗಡೆ ಅವರ 'ಪಂಚಮವೇದ', ಹರ್ಷ ಡಿ.ಎನ್. ಅವರ 'ವೇದ' ಪುಸ್ತಕಗಳ ಬಿಡುಗಡೆ: ಶ್ರೀನಿವಾಸಲು, ಆರ್.ಸಿ. ಜಗದೀಶ, ಪುಸ್ತಕಗಳ ಕುರಿತು: ಸುಧಾ ಶರ್ಮ ಚವತ್ತಿ, ಅಧ್ಯಕ್ಷತೆ: ಕಮಲಾ ಹಂಪನಾ, ಉಪಸ್ಥಿತಿ: ಹರ್ಷ ಡಿ.ಎನ್., ಭಾರತಿ ಹೆಗಡೆ, ವೇದಾ ಮನೋಹರ ಮಸ್ಕಿ, ಆಯೋಜನೆ: ಬೆನಕ ಬುಕ್ಸ್ ಬ್ಯಾಂಕ್, ಎಲ್.ಬಿ.ಎಸ್ ಪ್ರಕಾಶನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 9.45

ಸಾಧ್ಯತೆಗಳ ಪ್ರಪಂಚವನ್ನು ತಿಳಿಯಲು ರಸಪುರಿ ಬಿಡುಗಡೆ: 'ಮಕ್ಕಳಿಗಾಗಿ ಕನ್ನಡದ ಪ್ರಥಮ ಕೋಡಿಂಗ್ ವೇದಿಕೆ': ಅತಿಥಿಗಳು: ಪ್ರವೀಣ್ ಕುಮಾರ್ ಎಸ್., ಎಸ್.ಎನ್. ಓಂಕಾರ್, ರವೀಂದ್ರ ಭಟ್ಟ, ಗುರುಪ್ರಸಾದ್, ಬೇಳೂರು ಸುದರ್ಶನ, ಆಯೋಜನೆ: ಕ್ಲಾರಿಟ್ರೀ, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ, ಬೆಳಿಗ್ಗೆ 10

ಮೊದಲ ವರ್ಷದ ಡಿಪ್ಲೊಮಾ ತರಗತಿಗಳ ಉದ್ಘಾಟನೆ, ಸನ್ಮಾನ ಕಾರ್ಯಕ್ರಮ: ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿ: ಪದ್ಮನಾಭ ಬಿ., ಆಯೋಜನೆ: ಪಿಇಎಸ್ ಪಾಲಿಟೆಕ್ನಿಕ್, ಸ್ಥಳ: ಡಾ. ಎಂ.ಆರ್.ಡಿ. ಸಭಾಂಗಣ, ಪಿಇಎಸ್‌ಯು, ಆರ್.ಆರ್. ಕ್ಯಾಂಪಸ್, ಹೊಸಕೆರೆಹಳ್ಳಿ, ಬೆಳಿಗ್ಗೆ 10

ದೊರೆಸ್ವಾಮಿ

ಶಾಖಾ ಮಠದ ಭೂಮಿ ಪೂಜೆ, ಅಭಿನಂದನಾ ಸಮಾರಂಭ: ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಸಿದ್ಧರಾಮಾನಂದಪುರಿ ಸ್ವಾಮೀಜಿ, ಶಿವಾನಂದಪುರಿ ಸ್ವಾಮೀಜಿ, ತ್ರಿದಂಡಿ ವೆಂಕಟರಾಮಾನುಜ ಜೀಯರ್ ಸ್ವಾಮೀಜಿ, ಭೂಮಿ ಪೂಜೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಚ್. ವಿಶ್ವನಾಥ್, ಉದ್ಘಾಟನೆ: ಬೈರತಿ ಸುರೇಶ್, ಕಟ್ಟಡ ನಕ್ಷೆ ಅನಾವರಣ: ಎಚ್.ಎಂ. ರೇವಣ್ಣ, ಆಯೋಜನೆ: ಕಾಗಿನೆಲೆ ಮಹಾಸಂಸ್ಥಾನ ಕನಕ ಗುರು ಪೀಠ, ಬೆಂಗಳೂರು, ಸ್ಥಳ: ಕೇತೋಹಳ್ಳಿ ದೊಡ್ಡಆಲದಮರ ರಸ್ತೆ, ಬೆಳಿಗ್ಗೆ 10.30

ನಿರಂಜನಾನಂದ ಪುರಿ ಸ್ವಾಮೀಜಿ

ಜಿ. ನಾರಾಯಣ ಶತಮಾನೋತ್ಸವ ಆಚರಣೆ ಅಂಗವಾಗಿ ಒಂದು ದಿನದ ವಿಚಾರಣಸಂಕಿರಣದ ಉದ್ಘಾಟನೆ: ಪಿ.ಜಿ. ಆರ್ ಸಿಂಧ್ಯ, ಅತಿಥಿ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ನಾ.ಗೀತಾಚಾರ್ಯ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಬೆಳಿಗ್ಗೆ 10.30ರಿಂದ

ಹಸಿರು ಕರ್ನಾಟಕ ಕಾರ್ಯಾಗಾರ: 'ಆಹಾರ ಭದ್ರತೆ, ಸುರಕ್ಷತೆ ಮತ್ತು ಸುಸ್ಥಿರತೆಗಾಗಿ ನಾನು–ನೀವು': ಉದ್ಘಾಟನೆ: ಎನ್. ಚಲುವರಾಯಸ್ವಾಮಿ, ಅತಿಥಿಗಳು: ಟಿ.ರಮೇಶ್, ವೆಂಕಟೇಶ್ ಎಂ.ವಿ., ಆರ್.ಚಕ್ರಪಾಣಿ, ಅಬ್ರಹಾಂ ಸ್ಯಾಮ್ಯುಯೆಲ್, ಶಿವರಾಮನ್, ಅಧ್ಯಕ್ಷತೆ: ಮಹೇಶ ಚಂದ್ರಗುರು, ಆಯೋಜನೆ: ಕರ್ನಾಟಕ ನಗರ ಮತ್ತು ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಸ್ಥಳ: ಸ್ಯಾಂಕ್ ಟಮ್ ಹೋಟೆಲ್, ಶೇಷಾದ್ರಿ ರಸ್ತೆ, ಆನಂದರಾವ್ ವೃತ್ತ, ಬೆಳಿಗ್ಗೆ 10.30

'ಗೊರೂರು ರಾಮಸ್ವಾಮಿ ಅಯ್ಯಂಗಾರ್' ಜನ್ಮದಿನಾಚರಣೆ, ಕವಿಗೋಷ್ಠಿ: ಅತಿಥಿಗಳು: ರತ್ನಾ ನಾಗರಾಜ್, ವೈಷ್ಣವಿ ವಿನಯ್, ಉಪಸ್ಥಿತಿ: ಎಚ್.ಎಸ್. ಮಂಡ್ಯ ಬಾಲಸುಬ್ರಹ್ಮಣ್ಯಂ, ಕೆ.ಬಾಲಕೃಷ್ಣ ಶೆಣೈ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಎಸ್. ಗುರುಮೂರ್ತಿ ಅವರ 'ಕಂಬದಹಳ್ಳಿ ಕಂಬಾಪುರಿಯ ಪಂಚಕೂಟ ಬಸದಿ' ಪುಸ್ತಕ ಬಿಡುಗಡೆ: ಹಂ.ಪ. ನಾಗರಾಜಯ್ಯ, ಅತಿಥಿಗಳು: ದೇವರಕೊಂಡಾರೆಡ್ಡಿ, ಜಿ. ಅಶ್ವತ್ಥ ನಾರಾಯಣ, ಬಿ. ಪ್ರಸನ್ನಯ್ಯ, ಎಸ್.ವಿ. ರಂಗನಾಥ್, ಆಶೀರ್ವಚನ: ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ಆಯೋಜನೆ: ಭವತಾರಿಣಿ ಪ್ರಕಾಶನ ಮತ್ತು ಚಾರಿಟಬಲ್ ಟ್ರಸ್ಟ್, ಸ್ಥಳ: ಕರ್ನಾಟಕ ಜೈನ ಭವನ, ವಿವಿ ಪುರ, ಕಾಲೇಜು ಎದುರು, ಶಂಕರಪುರ, ಬೆಳಿಗ್ಗೆ 11



ಹಂ.ಪ. ನಾಗರಾಜಯ್ಯ

ಮಾಸದ ಮಂಥನ–52: 'ಪೊಲೀಸ್ ಮತ್ತು ಸಮಾಜ'ದ ಬಗ್ಗೆ ವಿಚಾರಸಂಕಿರಣ: ಬಿ.ಕೆ.ಶಿವರಾಮ್, ಸ್ಥಳ: ನಂ. 17, ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನೆಲಿ, ಬೆಳಿಗ್ಗೆ 11

ಎ.ಸೂರ್ಯಪ್ರಕಾಶ್ ಅವರೊಂದಿಗೆ ಸಂವಾದ: ಆಯೋಜನೆ: ವಿಶ್ವ ಸಂವಾದ ಕೇಂದ್ರ, ಸ್ಥಳ: ಉತ್ತುಂಗ, ಕಾನ್ಫರೆನ್ಸ್ ಹಾಲ್, ರಂಗರಾವ್ ರಸ್ತೆ, ಕೇಶ್ವಾಪುರ, ಶಂಕರಪುರ, ಬೆಳಿಗ್ಗೆ 11

ಸತ್ಸಂಗ ಮತ್ತು ಸಚಿವರಿಗೆ, ಯುಪಿಎಸ್‌ಸಿ, ಕೆಪಿಎಸ್‌ಸಿಗೆ ಆಯ್ಕೆಯಾದ ಅಭ್ಯರ್ಥಿಗಳು, ಇತರೆ ಉನ್ನತ ಅಧಿಕಾರಿಗಳಿಗೆ ಅಭಿನಂದನೆ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು, ಸನ್ಮಾನಿತರು: ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ, ಎನ್. ಚಲುವರಾಯಸ್ವಾಮಿ, ಕೆ. ವೆಂಕಟೇಶ್, ಡಾ. –ಎಂ.ಸಿ. ಸುಧಾಕರ್, ಕೆ. ಗೋವಿಂದರಾಜ್, ಅತಿಥಿಗಳು: ಬಿ. ಕೆಂಚಪ್ಪ ಗೌಡ, ಎಸ್.ಆರ್. ಉಮಾಶಂಕರ್, ಆರ್. ಹಿತೇಂದ್ರ, ಜಯರಾಂ ರಾಯಪುರ, ಅಧ್ಯಕ್ಷತೆ: ಗಾ.ನಂ. ಶ್ರೀಕಂಠಯ್ಯ, ಆಯೋಜನೆ: ಚುಂಚಶ್ರೀ ಬಳಗ, ಸ್ಥಳ: ಕುವೆಂಪು ಕಲಾಕ್ಷೇತ್ರ, ರಾಜ್ಯ ಒಕ್ಕಲಿಗರ ಸಂಘದ ಆವರಣ, ವಿವಿ ಪುರ, ಸಂಜೆ 4ರಿಂದ



ನಿರ್ಮಲಾನಂದ ನಾಥ ಸ್ವಾಮೀಜಿ

ರಾಷ್ಟ್ರೀಯ ವೈದ್ಯರ ದಿನಾಚರಣೆ: ಅಧ್ಯಕ್ಷತೆ: ವಿ. ರೇಣುಕ ಪ್ರಸನ್ನ, ಅತಿಥಿಗಳು: ವಿ.ಟಿ. ರಾಮಕೃಷ್ಣಯ್ಯ, ಯೂಸಫ್ ಎಚ್. ಬಿ., ಚೆನ್ನವೀರಯ್ಯ, ಎಂ. ಶಿವಸ್ವಾಮಿ, ಪ್ರಶಸ್ತಿ ಪುರಸ್ಕೃತರು: 'ವೈದ್ಯೋ ನಾರಾಯಣ ಹರಿ' ಪ್ರಶಸ್ತಿ: ಡಾ. ಪಿ. ನಾಗಮಣಿ, 'ಕಲಾ ಸೌರಭ' ಪ್ರಶಸ್ತಿ: ಎಸ್. ರಾಹುಲ್, 'ಸಜ್ಜನ ಸತಿಪತಿ' ಪ್ರಶಸ್ತಿ: ಸುಧಾ, ಡಿ. ಪದ್ಮನಾಭ, ಆಯೋಜನೆ: ವಿಶ್ವ ಚೇತನ ಬಳಗ, ಸ್ಥಳ: ವೀರಾಂಜನೇಯಸ್ವಾಮಿ ದೇವಸ್ಥಾನ, ಮಹಾಲಕ್ಷ್ಮೀಪುರ, ಮಧ್ಯಾಹ್ನ 1

ಅಮರೇಂದ್ರ ಹೊಲ್ಲಂಬಳ್ಳಿ ಅವರ 'ಬಣ್ಣ ನೆರಳು', 'ಚಂದ್ರಗುಪ್ತ' ಪುಸ್ತಕಗಳ ಬಿಡುಗಡೆ: ಮೂಡ್ನಾ ಕೂಡು ಚಿನ್ನಸ್ವಾಮಿ, ಅತಿಥಿ: ವಿ.ಆರ್. ಸುದರ್ಶನ್, ಪುಸ್ತಕಗಳ ಕುರಿತು: ಅಕ್ಷತಾ ಹುಂಚದಕಟ್ಟೆ, ಹುಲಿ ಕುಂಟೆ ಮೂರ್ತಿ, ಆಯೋಜನೆ: ಆಕೃತಿ ಪುಸ್ತಕ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4.30

ಮೂಡ್ನಾಕೂಡು ಚಿನ್ನಸ್ವಾಮಿ

ದೇಶದ ಪ್ರಥಮ ವಚನ ಸಾಂಸ್ಕೃತಿಕ ಅಭಿಯಾನ: 'ಬಸವಣ್ಣನವರ 38 ವಚನಗಳನ್ನು ಆಧರಿಸಿದ ಹಿಂದಿ ಭಾಷೆಯ ನೃತ್ಯರೂಪಕ (ತುಮಾರೆ ಸಿವಾ ಔರ್ ಕೋಯಿ ನಹಿ, ನೀನಲ್ಲದೇ ಮತ್ತಾರೂ ಇಲ್ಲವಯ್ಯಾ): ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಶಿವರಾಜ ತಂಗಡಗಿ, ಉಪಸ್ಥಿತಿ: ಶಾಮನೂರು ಶಿವಶಂಕರಪ್ಪ, ಎ. ನಾರಾಯಣಸ್ವಾಮಿ, ಎಂ.ಬಿ.ಪಾಟೀಲ, ಪಿ.ಜಿ.ಆರ್.ಸಿಂಧ್ಯ, ಬಿ.ಜಿ.ಗೋವಿಂದಪ್ಪ, ಎಂ.ಚಂದ್ರಪ್ಪ, ಆಯೋಜನೆ: ಶಿವಕುಮಾರ ಕಲಾಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 4.30

'ವಚನ ಪಿತಾಮಹ ಫ.ಗು.ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ, ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಪ್ರಶಸ್ತಿ ಪುರಸ್ಕೃತರು: ಎಸ್.ಜಿ. ಸಿದ್ಧರಾಮಯ್ಯ, ವಿ.ಪಿ.ನಿರಂಜನಾರಾಧ್ಯ, ಎಸ್.ಜಿ.ಸುಶೀಲಮ್ಮ, ಅಧ್ಯಕ್ಷತೆ: ಎಂ.ಬಿ.ಪಾಟೀಲ, ಉಪಸ್ಥಿತಿ: ಶೀಲಾ ಹಳಕಟ್ಟಿ, ಆಶಯ ನುಡಿ: ಮನು ಬಳಿಗಾರ್, ಆಯೋಜನೆ: ಡಾ. ಫ.ಗು.ಹಳಕಟ್ಟಿ ಫೌಂಡೇಷನ್, ಸ್ಥಳ: ಸರ್ ಪುಟ್ಟಣ್ಣ ಶೆಟ್ಟಿ ಪುರಭವನ, ಸಂಜೆ 5.30

ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ.ಶಿವಕುಮಾರ್, ಶಿವರಾಜ್ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಬಿ.ಗರುಡಾಚಾರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಬಿ.ಝಡ್ ಜಮೀರ್ ಅಹಮದ್ ಖಾನ್, ಸುರೇಶ್ ಬಿ.ಎಸ್., ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6

ಬೆಂಗಳೂರು ಕಿರುನಾಟಕೋತ್ಸವ: ಅತಿಥಿಗಳು: ವಿಶ್ವನಾಥ ಪಿ.ಹಿರೇಮಠ, ರವೀಂದ್ರ ಭಟ್ಟ, ಉಪಸ್ಥಿತಿ: ಬನಶಂಕರಿ ವಿ. ಅಂಗಡಿ, ಬಿ.ಸುರೇಶ, ಲಕ್ಷ್ಮಿ ಚಂದ್ರಶೇಖರ್, ಗೌರಿ ದತ್ತು, ಬೇಲೂರು ರಘುನಂದನ್, ಡಿ.ಜೆ.ಚಕ್ರವರ್ತಿ ಚಂದ್ರಚೂಡ್, ಕಿರಣ್ ಕುಮಾರ್ ಡಿ.ಕೆ., ಆಯೋಜನೆ: ಪ್ರವರ ಥಿಯೇಟರ್, ಅಶ್ವಘೋಷ ಟ್ರಸ್ಟ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 6ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ವಿಮಾನ ನಿಲ್ದಾಣ ರಸ್ತೆಯಲ್ಲಿ ದಟ್ಟಣೆ: ಜುಲೈ 15ರವರೆಗೆ ಕಾಮಗಾರಿ

ಹೆಬ್ಬಾಳ ಮೇಲ್ಸೇತುವೆಗೆ ಹೆಚ್ಚುವರಿ ರ‍್ಯಾಂಪ್: ಸರ್ವಿಸ್ ರಸ್ತೆ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ಬಳಿ ನಿತ್ಯವೂ ಉಂಟಾಗುವ ಸಂಚಾರ ದಟ್ಟಣೆ ತಗ್ಗಿಸಲು ಹೊಸದೊಂದು ರ‍್ಯಾಂಪ್ ನಿರ್ಮಿಸಲಾಗುತ್ತಿದ್ದು, ಇದರ ಕಾಮಗಾರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಸರ್ವಿಸ್ ರಸ್ತೆ ಸಂಪೂರ್ಣ ಬಂದ್ ಮಾಡಲಾಗಿದೆ.

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿರುವ ಹೆಬ್ಬಾಳ ಮೇಲ್ಸೇತುವೆ ಬಳಿ ದಟ್ಟಣೆ ಸಾಮಾನ್ಯವಾಗಿದೆ. ಎಸ್ಟಿಮ್ ಮಾಲ್‌ನಿಂದ ಹೆಬ್ಬಾಳ ಪೊಲೀಸ್ ಠಾಣೆಯವರೆಗೆ ಬೆಳಿಗ್ಗೆ ಹಾಗೂ ಸಂಜೆ ವಾಹನಗಳ ದಟ್ಟಣೆ ಹೆಚ್ಚಿರುತ್ತದೆ.

ಹೆಬ್ಬಾಳ ಪೊಲೀಸ್ ಠಾಣೆ ಎದುರು ಪಾದಚಾರಿಗಳು ರಸ್ತೆ ದಾಟಲು ಸುರಂಗ ಮಾರ್ಗ ಮಾಡಲಾಗಿದೆ. ಆದರೆ, ಹಲವರು ಈ ಮಾರ್ಗ ಬಳಸುತ್ತಿಲ್ಲ. ರಸ್ತೆಯನ್ನು ಅಪಾಯಕಾರಿ ರೀತಿಯಲ್ಲಿ ದಾಟುತ್ತಿದ್ದಾರೆ. ಇದೇ ಸ್ಥಳದಲ್ಲಿ ಅಪಘಾತಗಳು ಸಂಭವಿಸಿ, ಪಾದಚಾರಿಗಳು ಮೃತಪಟ್ಟಿರುವ ಬಗ್ಗೆ ಪ್ರಕರಣಗಳೂ ದಾಖಲಾಗಿವೆ.

‘ಹೆಬ್ಬಾಳ ಮೇಲ್ಸೇತುವೆಗೆ ಹೆಚ್ಚುವರಿಯಾಗಿ ಹೊಸದೊಂದು ರ‍್ಯಾಂಪ್ ನಿರ್ಮಿಸುವ ಕಾಮಗಾರಿ ಆರಂಭವಾಗಿದೆ. ಇದರಿಂದ ದಟ್ಟಣೆ ಹಾಗೂ ಅಪಘಾತ ಕಡಿಮೆಯಾಗುವ ವಿಶ್ವಾಸವಿದೆ’ ಎಂದು ಸಂಚಾರ ಪೊಲೀಸರು ಹೇಳಿದರು.

ಹೆಬ್ಬಾಳ ಮೇಲ್ಸೇತುವೆ ಬಳಿ ಹೆಚ್ಚುವರಿ ರ‍್ಯಾಂಪ್ ನಿರ್ಮಾಣ ಕಾಮಗಾರಿ ನಡೆಯುತ್ತಿರುವ ಸ್ಥಳ

‘ಹೆಬ್ಬಾಳ ಠಾಣೆ ಎದುರಿನ ಮುಖ್ಯ ರಸ್ತೆ ಹಾಗೂ ಸರ್ವಿಸ್ ರಸ್ತೆಗೆ ಹೊಂದಿಕೊಂಡು ಕಾಮಗಾರಿ ನಡೆಯುತ್ತಿದೆ. ಸರ್ವಿಸ್ ರಸ್ತೆಯಲ್ಲಿ ವಾಹನಗಳ ಸಂಚಾರ ಸಂಪೂರ್ಣ ಬಂದ್ ಮಾಡಲಾಗಿದೆ. ಮುಖ್ಯರಸ್ತೆಯ ಅರ್ಧ ಭಾಗದಲ್ಲಿ ಮಾತ್ರ ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಗಿದೆ’ ಎಂದರು.

‘ಜುಲೈ 15ರೊಳಗಾಗಿ ಕಾಮಗಾರಿ ಮುಕ್ತಾಯವಾಗುವ ನಿರೀಕ್ಷೆ ಇದೆ. ಅದಾದ ನಂತರವೇ ಸರ್ವಿಸ್ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶ ನೀಡಲಾಗುವುದು’ ಎಂದು ಪೊಲೀಸರು ತಿಳಿಸಿದರು.

ಸಂಚಾರ ದಟ್ಟಣೆ: ವಿಮಾನ ನಿಲ್ದಾಣದ ಕಡೆಯಿಂದ ಹಾಗೂ ಹೊರವರ್ತುಲ ರಸ್ತೆಯಿಂದ ನಗರಕ್ಕೆ ಬರುವ ಬಹುತೇಕ ವಾಹನಗಳು, ಹೆಬ್ಬಾಳ ಮೇಲ್ಸೇತುವೆ ಮೂಲಕ ಸಂಚರಿಸುತ್ತವೆ. ಸದ್ಯ ಕಾಮಗಾರಿ ನಡೆಯುತ್ತಿರುವುದರಿಂದ ಈ ಭಾಗದಲ್ಲಿ ವಾಹನಗಳ ಸಂಚಾರ ನಿಧಾನಗತಿಯಲ್ಲಿದ್ದು, ವಿಪರೀತ ದಟ್ಟಣೆ ಕಂಡುಬರುತ್ತಿದೆ.

ಮುಖ್ಯರಸ್ತೆಯ ಬದಿ ಕಾಮಗಾರಿ ನಡೆಯುವ ಸ್ಥಳದ ಸುತ್ತಮುತ್ತ ಕಬ್ಬಿಣದ ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗಿದೆ. ಮೇಲ್ಸೇತುವೆಯಿಂದ ಬರುವ ವಾಹನಗಳು, ಹೆಬ್ಬಾಳ ಪೊಲೀಸ್ ಠಾಣೆ ಎದುರು ನಿಧಾನವಾಗಿ ಸಂಚರಿಸುತ್ತಿವೆ. ಹೀಗಾಗಿ, ಮೇಲ್ಸೇತುವೆಯಲ್ಲೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ.

‘ಎಸ್ಟಿಮ್ ಮಾಲ್‌ನಿಂದ ಬ್ಯಾಪ್ಟಿಸ್ಟ್ ಆಸ್ಪತ್ರೆಯವರೆಗೆ ಮೇಲ್ಸೇತುವೆ ನಿರ್ಮಿಸುವ ಯೋಜನೆ ಇತ್ತು. ಆದರೆ, ಹೆಬ್ಬಾಳ ಠಾಣೆಯವರೆಗೆ ಮಾತ್ರ ಕಾಮಗಾರಿ ನಡೆದಿತ್ತು. ಕೆಲ ತಾಂತ್ರಿಕ ಕಾರಣಗಳಿಂದ, ಹೆಚ್ಚುವರಿ ರ‍್ಯಾಂಪ್ ನಿರ್ಮಾಣಕ್ಕೆ ಸಾಧ್ಯವಾಗಿರಲಿಲ್ಲ. ಇದೀಗ, ಎಲ್ಲ ಅಡೆತಡೆಗಳು ನಿವಾರಣೆಯಾಗಿವೆ. ಹೆಚ್ಚುವರಿ ರ‍್ಯಾಂಪ್ ನಿರ್ಮಾಣ ಕೆಲಸವೂ ಭರದಿಂದ ಸಾಗುತ್ತಿದೆ’ ಎಂದು ಬಿಡಿಎ ಮೂಲಗಳು ಹೇಳಿವೆ.

‘ಸದ್ಯ ಸೇವೆಗೆ ಲಭ್ಯವಿರುವ ಮೇಲ್ಸೇತುವೆಗೆ ಹೊಂದಿಕೊಂಡು ಈ ಹೆಚ್ಚುವರಿ ರ‍್ಯಾಂಪ್ ನಿರ್ಮಿಸಲಾಗುತ್ತಿದೆ. ಇದರಿಂದ ಸ್ಥಳೀಯರ ಸಂಚಾರಕ್ಕೆ ಹೆಚ್ಚು ಅನುಕೂಲವಾಗಲಿದೆ. ಜೊತೆಗೆ, ಮೇಲ್ಸೇತುವೆಯಲ್ಲಿ ಉಂಟಾಗುವ ದಟ್ಟಣೆಯೂ ಕಡಿಮೆಯಾಗಲಿದೆ’ ಎಂದು ತಿಳಿಸಿವೆ.

ಜಿಲ್ಲಾ ಆನೆ ಕಾರ್ಯಪಡೆ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಜಿಲ್ಲಾ ಆನೆ ಕಾರ್ಯಪಡೆಯನ್ನು ರಚಿಸಲಾಗಿದೆ.

ಒಬ್ಬರು ವಲಯ ಅರಣ್ಯಾಧಿಕಾರಿ, ಇಬ್ಬರು ಉಪ ವಲಯ ಅರಣ್ಯ ಅಧಿಕಾರಿಗಳು, 5 ಅರಣ್ಯ ರಕ್ಷಕರು, 24 ಹೊರಗುತ್ತಿಗೆ ಸಿಬ್ಬಂದಿ ಈ ಕಾರ್ಯಪಡೆಯಲ್ಲಿ ಇರಲಿದ್ದಾರೆ.

ರಾಮನಗರ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಕೇಂದ್ರವಾಗಿಟ್ಟುಕೊಂಡು ಈ ಆನೆ ಕಾರ್ಯಪಡೆಗಳು ಕಾರ್ಯ ನಿರ್ವಹಿಸಲಿವೆ. ಆಯಾ ಅರಣ್ಯ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯ ನಿರ್ದೇಶನದಂತೆ ಕೆಲಸ ಮಾಡಬೇಕು. ಗಸ್ತು ತಿರುಗುವುದು, ಆನೆಗಳ ಚಲನವಲನ ಗುರುತಿಸಿ, ಅವುಗಳನ್ನು ಅರಣ್ಯ ಪ್ರದೇಶಕ್ಕೆ ಹಿಮ್ಮೆಟ್ಟಿಸುವುದು, ಸಾರ್ವಜನಿಕರಿಗೆ ತಿಳಿವಳಿಕೆ ನೀಡುವುದು ಈ ಕಾರ್ಯಪಡೆಯ ಪ್ರಮುಖ ಕಾರ್ಯಗಳಾಗಿವೆ.

ಮತ್ತೆ ಮರು ಪರಿಶೀಲನಾ ಅರ್ಜಿ ಸಲ್ಲಿಸಿದ ಎಸ್. ಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2016 ಮತ್ತು 2017ರಲ್ಲಿ ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ನಡೆದ ಚಳಿಗಾಲದ ಅಧಿವೇಶನದ ಸಿದ್ಧತೆಯಲ್ಲಿ ಭ್ರಷ್ಟಾಚಾರ ನಡೆಸಿದ ಆರೋಪದ ಪ್ರಕರಣವನ್ನು ಪುನರ್‌ಪರಿಶೀಲನೆ ನಡೆಸಿ, ದೋಷ ಮುಕ್ತಗೊಳಿಸಿ, ತಮಗೆ ಹಿಂದಿನ ಹುದ್ದೆಯನ್ನು ನೀಡುವಂತೆ ವಿಧಾನಸಭೆಯ ಅಧೀನ ಕಾರ್ಯದರ್ಶಿ ಎಸ್. ಮೂರ್ತಿ ವಿಧಾನಸಭೆ ಸಚಿವಾಲಯದ ವಿಶೇಷ ಮಂಡಳಿಗೆ ಮತ್ತೆ ಮರು ಪರಿಶೀಲನಾ ಅರ್ಜಿ ಸಲ್ಲಿಸಿದ್ದಾರೆ.

ಜೂನ್ 30ರಂದು ಹೊಸದಾಗಿ ಮರು ಪರಿಶೀಲನಾ ಅರ್ಜಿ ಸಲ್ಲಿಸಿರುವ ಅವರು, ‘ಲೆಕ್ಕ ಪರಿಶೋಧನಾ ಇಲಾಖೆಯ ಕೆಲವು ಅಧಿಕಾರಿಗಳಿಂದ ಅನಧಿಕೃತವಾಗಿ ಪಡೆದ ಲೆಕ್ಕ ಪರಿಶೋಧನಾ ವರದಿ ಆಧಾರದಲ್ಲಿ ನನ್ನ ವಿರುದ್ಧ ಕ್ರಮ ಜರುಗಿಸಲಾಗಿದೆ. ದಂಡನೆ ವಿಧಿಸಿ ವಿಧಾನಸಭೆಯ ಕಾರ್ಯದರ್ಶಿ ಹುದ್ದೆಯಿಂದ ಅಧೀನ ಕಾರ್ಯದರ್ಶಿ ಹುದ್ದೆಗೆ ಹಿಂಬಡ್ತಿ ನೀಡಲಾಗಿದೆ. ಶೋಕಾಸ್ ನೋಟಿಸ್‌ಗೆ ನಾನು ಉತ್ತರಿಸಿದ್ದರೂ ಆ ಬಗ್ಗೆ ಉಲ್ಲೇಖಿಸದೇ ದಂಡನಾ ಆದೇಶ ಹೊರಡಿಸಲಾಗಿದೆ’ ಎಂದು ಹೇಳಿದ್ದಾರೆ.

‘ಎರಡೂ ಅಧಿವೇಶನಗಳಲ್ಲಿ ನಾನು ಕೈಗೊಂಡಿದ್ದ ತೀರ್ಮಾನಗಳಿಂದ ವಿಧಾನಸಭೆ ಸಚಿವಾಲಯಕ್ಕೆ ಆರ್ಥಿಕವಾಗಿ ಉಳಿತಾಯವಾಗಿದೆ. ಆದರೆ ತಪ್ಪು ಲೆಕ್ಕಾಚಾರವನ್ನು ಆಧರಿಸಿ ನನ್ನ ವಿರುದ್ಧ ಕ್ರಮ ಜರುಗಿಸಲಾಗಿದೆ. ನಾನು ಪರಿಶಿಷ್ಟ ಜಾತಿಯ ಅಧಿಕಾರಿ ಎಂಬ ಕಾರಣಕ್ಕೆ ದುರುದ್ದೇಶದಿಂದ ಇಂತಹ ನಿರ್ಧಾರ ಕೈಗೊಳ್ಳಲಾಗಿದೆ. ಪೂರ್ವಗ್ರಹಪೀಡಿತವಾದ ವಿಚಾರಣಾ ವರದಿ ಆಧಾರದಲ್ಲಿ ಹುದ್ದೆಯಿಂದ ಕೆಳಕ್ಕೆ ಇಳಿಸಲಾಗಿದೆ’ ಎಂದು ದೂರಿದ್ದಾರೆ.

‘ನಿಯಮಾನುಸಾರ ಮರು ಪರಿಶೀಲನೆ ನಡೆಸುವಂತೆ ರಾಜ್ಯಪಾಲರಿಗೆ ನಾನು ಮನವಿ ಸಲ್ಲಿಸಿದ್ದೆ. ರಾಜ್ಯಪಾಲರು ನನ್ನ ಮನವಿಯನ್ನು ಮುಂದಿನ ಕ್ರಮಕ್ಕಾಗಿ ವಿಶೇಷ ಮಂಡಳಿಗೆ ಕಳುಹಿಸಿದ್ದಾರೆ. ಆದರೆ, ಈವರೆಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಪ್ರಕರಣದ ಮರು ಪರಿಶೀಲನೆ ನಡೆಸಲು ಮಂಡಳಿಗೆ ಕಾನೂನಿನಲ್ಲಿ ಅವಕಾಶವಿದೆ. ದುರುದ್ದೇಶದಿಂದ ನೀಡಿದ ವಿಚಾರಣಾ ವರದಿ ಆಧಾರದಲ್ಲಿ ನನಗೆ ವಿಧಿಸಿರುವ ದಂಡನೆಯನ್ನು ರದ್ದುಪಡಿಸಿ, ವಿಧಾನಸಭೆ ಕಾರ್ಯದರ್ಶಿ ಹುದ್ದೆಗೆ ಮರು ನೇಮಕ ಮಾಡಬೇಕು. ಎಂ.ಕೆ. ವಿಶಾಲಾಕ್ಷಿ ಅವರಿಗೆ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಿರುವ ತೀರ್ಮಾನವನ್ನೂ ರದ್ದುಪಡಿಸಬೇಕು’ ಎಂದು ಮೂರ್ತಿ ಒತ್ತಾಯಿಸಿದ್ದಾರೆ.

ಬ್ರ್ಯಾಂಡ್ ಬೆಂಗಳೂರು: ಸಲಹೆಯ ಅವಧಿ ವಿಸ್ತರಣೆ

ಬೆಂಗಳೂರು: ನಗರದ ಸಮಗ್ರ ಅಭಿವೃದ್ಧಿಗಾಗಿ ನಾಗರಿಕರಿಂದ ಅಭಿಪ್ರಾಯ, ಸಲಹೆಗಳನ್ನು ನೀಡುವ ಅವಧಿಯನ್ನು ಜು. 15ರವರೆಗೆ ವಿಸ್ತರಿಸಲಾಗಿದೆ.

ಸಲಹೆ ನೀಡಲು ಜೂನ್ 30ರ ವರೆಗೆ ಅವಧಿ ನೀಡಲಾಗಿತ್ತು. ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಈ ಬಗ್ಗೆ ಸರ್ವಪಕ್ಷಗಳ ಶಾಸಕರ ಜತೆ ಹಾಗೂ ವಿವಿಧ ಕ್ಷೇತ್ರಗಳ ಗಣ್ಯರ ಜೊತೆ ಸಭೆ ನಡೆಸಿದ್ದರು. ಸಾರ್ವಜನಿಕರಿಗೆ ವೆಬ್ ಪೋರ್ಟಲ್ www.brandbengaluru.karnataka.gov.in ನೀಡಲಾಗಿತ್ತು. ನಿರೀಕ್ಷೆ ಮೀರಿ ಸಲಹೆಗಳು ಬಂದಿದ್ದವು.

ಬೆಂಗಳೂರಿನ ಅಭಿವೃದ್ಧಿಗಾಗಿ 7 ವಿಚಾರಗಳಾದ ಸಂಚಾರಯುಕ್ತ ಬೆಂಗಳೂರು, ಹಸಿರು ಬೆಂಗಳೂರು, ಸ್ವಚ್ಛ ಬೆಂಗಳೂರು, ಜನಹಿತ ಬೆಂಗಳೂರು, ಆರೋಗ್ಯಕರ ಬೆಂಗಳೂರು, ಟೆಕ್ ಬೆಂಗಳೂರು ಹಾಗೂ ಜಲಸುರಕ್ಷಾ ಬೆಂಗಳೂರು ಕುರಿತು ಸಾರ್ವಜನಿಕರು #BrandBengaluru, #BetterBengaluru ಸಮೀಕ್ಷೆಯಲ್ಲಿ ಪಾಲ್ಗೊಳ್ಳಬೇಕು. ವೆಬ್ ಪೋರ್ಟಲ್ ಅಲ್ಲದೇ ವಾಟ್ಸ್‌ಆ್ಯಪ್ (9480685700) ಮೂಲಕವೂ ಅಭಿಪ್ರಾಯ ಹಂಚಿಕೊಳ್ಳಬಹುದು. ಮಾಹಿತಿಗೆ ಟೋಲ್ ಫ್ರೀ ಸಂಖ್ಯೆ 1533ಗೆ ಕರೆ ಮಾಡಬಹುದು ಎಂದು ಮುಖ್ಯ ಆಯುಕ್ತರು ತಿಳಿಸಿದ್ದಾರೆ.

‘ಸಂಸ ಥಿಯೇಟರ್ ಬೆಂಗಳೂರು ಸಂಸ್ಥೆ’ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕೆ.ಎನ್. ವಿಜಯಲಕ್ಷ್ಮಿ ನಾಟಕೋತ್ಸವದ ಸಮಾರೋಪ ಸಮಾರಂಭದಲ್ಲಿ ಕೆ.ಎನ್. ವಿಜಯಲಕ್ಷ್ಮಿ ಅನುವಾದ ಪ್ರಶಸ್ತಿಯನ್ನು ಅಲ್ ಅಮೀನ್ ಕಾಲೇಜಿನ ಪ್ರಾಧ್ಯಾಪಕಿ ಶಾಕೀರ ಖಾನುಂ ಅವರಿಗೆ ಪ್ರದಾನ ಮಾಡಲಾಯಿತು. (ಎಡದಿಂದ) ಉಪನ್ಯಾಸಕಿ ಕೆ.ಎನ್. ಚಂದನ, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕಿ ಕೆ.ಎನ್. ಕವನ, ಉಪನ್ಯಾಸಕಿ ಕೆ.ಎನ್. ಸಹನಾ, ಲೇಖಕ ಶೂದ್ರ ಶ್ರೀನಿವಾಸ್, ಸಂಶೋಧಕ ಪ್ರದೀಪ್ ಮಾಲ್ಗುಡಿ ಇದ್ದರು – ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಪಿಡಿಒ: ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಪಿಡಿಒ ಹುದ್ದೆಗಳ ಭರ್ತಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ ಗಳಿಗೆ ಉಚಿತ ತರಗತಿಗಳನ್ನು ಇನ್‌ಸ್ಪೈರ್ ಐಎಎಸ್ ಆ್ಯಂಡ್ ಕೆಎಎಸ್ ಕೋಚಿಂಗ್ ಇನ್‌ಸ್ಟಿಟ್ಯೂಟ್ ವತಿಯಿಂದ ನಡೆಸಲಾಗುತ್ತಿದೆ.

ಆಸಕ್ತರು ಜುಲೈ 6ರ ಒಳಗೆ ಇನ್‌ಸ್ಪೈರ್ ಐಎಎಸ್ ಆ್ಯಂಡ್ ಕೆಎಎಸ್ ಕೋಚಿಂಗ್ ಇನ್‌ಸ್ಟಿಟ್ಯೂಟ್, ಪ್ರೇಮ್ಸ್ ಟವರ್, 5ನೇ ಮುಖ್ಯರಸ್ತೆ, ಹಂಪಿನಗರ, ಆರ್‌ಪಿಸಿ ಬಡಾವಣೆ, ಬೆಂಗಳೂರು ಇಲ್ಲಿಗೆ ಸಂಪರ್ಕಿಸಬಹುದು. ಮಾಹಿತಿಗಾಗಿ 7090090033 ಕರೆ ಮಾಡಬಹುದು.

₹1 ಕೋಟಿ ಅನುದಾನ ಕೊಡಿ; ಲೇಖಕಿಯರ ಸಂಘದ ಮನವಿ

ಬೆಂಗಳೂರು: ‘ರಾಜ್ಯದಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ಕರ್ನಾಟಕ ಲೇಖಕಿಯರ ಸಂಘದ ಕಾರ್ಯ ಚಟುವಟಿಕೆಗಳಿಗೆ ₹ 1 ಕೋಟಿ ವಿಶೇಷ ಅನುದಾನ ನೀಡಬೇಕು’ ಎಂದು ಸಂಘದ ನಿಯೋಗ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿತು.

ಅಕಾಡೆಮಿ ಮತ್ತು ಪ್ರಾಧಿಕಾರಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು. ‘ನನ್ನ ಕವಿತೆ-ನನ್ನ ಹಾಡು’ ಯೋಜನೆಯ ಬಾಕಿ ಹಣವನ್ನು ಬಿಡುಗಡೆ ಮಾಡಲು ಸೂಚಿಸಬೇಕು ಎಂದು ಕೋರಿದರು. ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ಎಂ.ಎಸ್.ಆಶಾದೇವಿ, ಬಿ.ಟಿ.ಲಲಿತಾನಾಯಕ್ ಸೇರಿದಂತೆ ಹಲವು ಲೇಖಕಿಯರು ನಿಯೋಗದಲ್ಲಿದ್ದರು. ಬೇಡಿಕೆ ಈಡೇರಿಸುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದರು.

‘ನುಡಿ ಚತುರ ಮಾಣಿಕ್ಯ ಪ್ರಶಸ್ತಿ’ ಪ್ರದಾನ

ಸಂಗೀತ ದೊಡ್ಡ ಸಾಗರ: ಗಾಯಕಿ ಸುಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಗೀತ ದೊಡ್ಡ ಸಾಗರದಂತೆ. ಅಲ್ಲಿ ಕಲಿತಷ್ಟು ಹೊಸ ವಿಷಯಗಳು ಸಿಗುತ್ತವೆ’ ಎಂದು ಗಾಯಕಿ ಸುಮಾ ಎಲ್.ಎನ್. ಶಾಸ್ತ್ರಿ ತಿಳಿಸಿದರು.

ಗಾಯಕ ಜಗದೀಶ್ ಶಿವಪುರ ಅವರು ಸಂಗೀತ ಕ್ಷೇತ್ರದಲ್ಲಿ ಐದು ದಶಕಗಳನ್ನು ಪೂರೈಸಿದ ಕಾರಣ ಮಂಗಳೂರಿನ ಮಧುರತರಂಗ ನಗರದಲ್ಲಿ ಶನಿವಾರ ಹಮ್ಮಿಕೊಂಡ ‘ಸ್ವರಕಂಠೀರವ’ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

‘ಸಂಗೀತದಲ್ಲಿ ಎಲ್ಲರಿಗೂ ಆಸಕ್ತಿ ಇರುತ್ತದೆ. ಆದರೆ, ಕಲೆ ಕೆಲವರಿಗೆ ಮಾತ್ರ ಒಲಿಯುತ್ತದೆ. ಸಿನಿಮಾ ಗೀತೆಗಳನ್ನು ಹಾಡುವುದು ಸುಲಭವಲ್ಲ. ನಿಗದಿತ ಅವಧಿಯಲ್ಲಿ ಶ್ರುತಿ, ತಾಳ ನಿಖರವಾಗಿ ಇರುವಂತೆ ಹಾಡಬೇಕಾಗುತ್ತದೆ. ಹಾಡುಗಾರಿಕೆ ಕಲೆ ಮಕ್ಕಳಲ್ಲಿ ಇದ್ದರೆ ಅದನ್ನು ಗುರುತಿಸಿ, ಪ್ರೋತ್ಸಾಹಿಸಬೇಕು. ಎಂಜಿನಿಯರಿಂಗ್, ವೈದ್ಯಕೀಯ ಸೇರಿ ವಿವಿಧ ವೃತ್ತಿ ಶಿಕ್ಷಣದ ಜತೆಗೆ ಕಲೆಗೂ ಆದ್ಯತೆ ನೀಡಬೇಕು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಗದೀಶ್ ಶಿವಪುರ ಅವರು ‘ನುಡಿ ಚತುರ ಮಾಣಿಕ್ಯ ಪ್ರಶಸ್ತಿ’ಯನ್ನು ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ್ ಕುಮಾರ್ ಎಸ್. ಕಲ್ಕೂರ ಅವರಿಗೆ ಪ್ರದಾನ ಮಾಡಿದರು. ಸಂಗೀತ ನಿರ್ದೇಶಕ ಟಾಪ್ ಸ್ಟಾರ್ ರೇಣುಕುಮಾರ್, ಕಲಾ ಸಾಹಿತಿ ಎಚ್ ಜನಾರ್ದನ್ ಹಂದೆ ಹಾಗೂ ಮಾನಸ ಚಿದಾನಂದ ಪೈ ಇದ್ದಾರೆ —ಪ್ರಜಾವಾಣಿ ಚಿತ್ರ

ಉಡುಪಿ ನಗರಸಭಾ ಸದಸ್ಯೆ ಮಾನಸಾ ಚಿದಾನಂದ ಪೈ, ‘ಜಗದೀಶ್ ಅವರು ಏಕಲವ್ಯನಂತೆ ರಾಜ್‌ಕುಮಾರ್ ಅವರನ್ನು ಹೃದಯದಲ್ಲಿ ಇಟ್ಟುಕೊಂಡು, ನಟನೆ, ಸಂಗೀತ ರೂಢಿಸಿಕೊಂಡರು. ಈಗ ಸಂಗೀತದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳನ್ನೂ ಗುರುತಿಸಿ, ಪ್ರೋತ್ಸಾಹಿಸುವ ಅವರ ಕೆಲಸ ಶ್ಲಾಘನೀಯ’ ಎಂದರು.

ಸಂಗೀತ ನಿರ್ದೇಶಕ ವಿ. ಮನೋಹರ್, ‘ಕಲಾವಿದನಿಗೆ ಆರೋಗ್ಯ ಹಾಗೂ ಆರ್ಥಿಕ ಶಕ್ತಿ ಇದ್ದಲ್ಲಿ ಆತ ಅರಳುತ್ತಾ ಹೋಗುತ್ತಾನೆ’ ಎಂದು ಹೇಳಿದರು.

ಕ್ರೀಡಾಪಟು ಶರಣ್ಯ ಹಾಗೂ ತಬಲಾ ವಾದಕ ಬಿ.ಎಸ್. ವೇಣುಗೋಪಾಲ ರಾಜು ಅವರನ್ನು ಸನ್ಮಾನಿಸಲಾಯಿತು. ಜಗದೀಶ್ ಶಿವಪುರ ಅವರು ಗಾಯನ ಪ್ರಸ್ತುತಪಡಿಸಿದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಉಪಸ್ಥಿತರಿದ್ದರು.

ನಗರದ ವಿವಿಧ ಆಸ್ಪತ್ರೆಗಳಲ್ಲಿ ವೈದ್ಯರ ದಿನ ಆಚರಣೆ, ರಾಯ್ ಸ್ಮರಣೆ

ವೈದ್ಯರ ಸೇವೆಗೆ ಗೌರವ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಳಿ ಕೋಟನ್ನು ಧರಿಸಿ ಆಸ್ಪತ್ರೆಗಳಿಗೆ ಬಂದಿದ್ದ ವೈದ್ಯರ ಮೊಗದಲ್ಲಿ ಮಂದಹಾಸವಿತ್ತು. ಶುಶ್ರೂಷಕರು, ವೈದ್ಯಕೀಯ ಸಿಬ್ಬಂದಿ ಹಾಗೂ ರೋಗಿಗಳು ಶುಭ ಹಾರೈಸುತ್ತಿರುವಂತೆ ವೃತ್ತಿಯ ಬಗ್ಗೆ ತೃಪ್ತಿಯ ಭಾವ ಅವರಲ್ಲಿ ಮೂಡಿತ್ತು.

ಈ ದೃಶ್ಯ ನಗರದ ವಿವಿಧ ಆಸ್ಪತ್ರೆಗಳಲ್ಲಿ ಶನಿವಾರ ಕಂಡುಬಂದಿತು. ಡಾ.ಬಿ.ಸಿ. ರಾಯ್ ಅವರ ಜನ್ಮದಿನದ ಪ್ರಯುಕ್ತ ನಗರದ ವಿವಿಧೆಡೆ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಯಿತು. ವಿವಿಧ ಸಂಘ–ಸಂಸ್ಥೆಗಳು ಉತ್ತಮ ಸೇವೆ ನೀಡುತ್ತಿರುವ ಸರ್ಕಾರಿ ಆಸ್ಪತ್ರೆಗಳ ವೈದ್ಯರನ್ನು ಗೌರವಿಸಿದವು.

ಭಾರತೀಯ ವೈದ್ಯಕೀಯ ಸಂಘ (ಐಎಂಎ), ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಸೇರಿದಂತೆ ವಿವಿಧ ವೈದ್ಯಕೀಯ ಸಂಘಟನೆಗಳು ವೈದ್ಯರ ದಿನ ಆಚರಿಸಿ, ಡಾ.ಬಿ.ಸಿ. ರಾಯ್ ಅವರಿಗೆ ಗೌರವ ಸಲ್ಲಿಸಿದವು. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರು ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ವೈದ್ಯರ ದಿನ ಆಚರಿಸಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸೇರಿ ಪ್ರಮುಖ ಸರ್ಕಾರಿ ವೈದ್ಯಕೀಯ ಸಂಸ್ಥೆಗಳು, ಮಣಿಪಾಲ್, ಅಪೋಲೊ, ಫೋರ್ಟಿಸ್, ನಾರಾಯಣ ಹೆಲ್ತ್, ಆಸ್ಟರ್ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿಯೂ ವೈದ್ಯರ ದಿನ ಆಚರಣೆ ಮಾಡಲಾಯಿತು. ಶುಶ್ರೂಷಕರು ಹಾಗೂ ಆಸ್ಪತ್ರೆಗಳ ಸಿಬ್ಬಂದಿ ತಮ್ಮ ನೆಚ್ಚಿನ ವೈದ್ಯರಿಗೆ ಗುಲಾಬಿ ಹೂಗಳನ್ನು ನೀಡಿ ಶುಭ ಹಾರೈಸಿದರು.

38 ವೈದ್ಯರಿಗೆ ಪ್ರಶಸ್ತಿ ಪ್ರದಾನ: ಆರೋಗ್ಯ ಇಲಾಖೆಯು ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳ 38 ವೈದ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಿದರು.

ಈ ವೇಳೆ ಮಾತನಾಡಿದ ಸಿದ್ದರಾಮಯ್ಯ, 'ಸಮಾಜದಲ್ಲಿ ತಾರತಮ್ಯ ಇರುವ ಕಾರಣಕ್ಕೆ ಉತ್ತಮ ಆರೋಗ್ಯ, ಶಿಕ್ಷಣ ಹಾಗೂ ಅವಕಾಶಗಳು ಎಲ್ಲರಿಗೂ ಸಿಗುತ್ತಿಲ್ಲ. ಬಡವರು ಖಾಸಗಿ ಆಸ್ಪತ್ರೆಗಳಿಗೆ ಹೋಗುವ ಅನಿವಾರ್ಯತೆ ಬಾರದ ರೀತಿಯಲ್ಲಿ ಸರ್ಕಾರಿ ವೈದ್ಯರು ವೃತ್ತಿಪರತೆ, ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು' ಎಂದರು.

'ಅಗತ್ಯ ಸವಲತ್ತುಗಳನ್ನು ತಕ್ಕ ಮಟ್ಟಿಗೆ ದೊರಕಿಸಿಕೊಟ್ಟರೂ ಗ್ರಾಮೀಣ ಭಾಗದಲ್ಲಿ ವೈದ್ಯರು ಸೇವೆ ಸಲ್ಲಿಸಲು ಹಿಂದೇಟು ಹಾಕುತ್ತಿರುವುದು ಬೇಸರದ ಸಂಗತಿ. ಜನರ ನಿರೀಕ್ಷೆಗೆ ತಕ್ಕಂತೆ ಸರ್ಕಾರಿ ಹಾಗೂ ಖಾಸಗಿ ವೈದ್ಯರು ಕರ್ತವ್ಯ ನಿರ್ವಹಿಸಬೇಕು' ಎಂದು ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಠೋಡ, ಶಾಸಕ ರಿಜ್ವಾನ್ ಅರ್ಷದ್, ಆರೋಗ್ಯ ಇಲಾಖೆ ಕಾರ್ಯದರ್ಶಿ ಅನಿಲ್ ಕುಮಾರ್ ಇದ್ದರು.

ಆರೋಗ್ಯ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆಯಲ್ಲಿ ಡಾ.ಬಿ.ಸಿ. ರಾಯ್ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪ ನಮನ ಸಲ್ಲಿಸಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಠೋಡ ಇದ್ದಾರೆ – ಪ್ರಜಾವಾಣಿ ಚಿತ್ರ

ಹಣವಂತರಿಗೆ ಆರೋಗ್ಯ ಸೇವೆ ಪಡೆದುಕೊಳ್ಳುವುದು, ಆರೋಗ್ಯ ರಕ್ಷಣೆ ಕಷ್ಟದ ಕೆಲಸವಲ್ಲ. ಬಡವರಿಗೆ ಆರೋಗ್ಯ ಭಾಗ್ಯ ಕಲ್ಪಿಸುವ ಜವಾಬ್ದಾರಿ ಸರ್ಕಾರಿ ವೈದ್ಯರ ಮೇಲಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಸೇವಾ ಮನೋಭಾವ ರೂಢಿಸಿಕೊಳ್ಳಿ'

'ಮಾನವೀಯತೆ ಅಂತಃಕರಣದಿಂದ ವೈದ್ಯರು ಬಡವರಿಗೆ ಚಿಕಿತ್ಸೆ ನೀಡಲು ಮುಂದಾಗಬೇಕು. ಸೇವಾ ಮನೋಭಾವ ಇದ್ದಾಗ ಮಾತ್ರ ಉತ್ತಮ ವೈದ್ಯ ಎನಿಸಿಕೊಂಡು, ಜನರಿಗೆ ಹತ್ತಿರವಾಗಲು ಸಾಧ್ಯ. ಆರೋಗ್ಯ ಇಲಾಖೆಯಲ್ಲಿನ ಅಂಗಾಂಗ ತಜ್ಞ ವೈದ್ಯರ ಪ್ರಾವೀಣ್ಯತೆ ಬಡ ಜನರಿಗೂ ಸಿಗುವಂತಾಗಬೇಕು. ಈ ಬಗ್ಗೆ ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿದೆ' ಎಂದು ಇಲಾಖೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಪ್ರತಿಭಟನೆ

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿರುವ ಜಯತೀರ್ಥರ (ಟೀಕಾಚಾರ್ಯ) ಮೂಲವೃಂದಾವನ ಸನ್ನಿಧಿಯ ಬಗ್ಗೆ ಅಪಪ್ರಚಾರ ಮಾಡಿರುವುದನ್ನು ಖಂಡಿಸಿ ಜಯತೀರ್ಥ ಭಕ್ತ ವೃಂದದವರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಆಟೊ– ಸರಕು ಸಾಗಣೆ ಟ್ರಕ್ ಡಿಕ್ಕಿ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಆಟೊ ಹಾಗೂ ಸರಕು ಸಾಗಣೆ ಟ್ರಕ್ ನಡುವೆ ಅಪಘಾತ ಸಂಭವಿಸಿದ್ದು, ಆಟೊದಲ್ಲಿದ್ದ ಮಹಿಳೆ ಶಾಫಿಯಾ ಭಾನು (22) ಎಂಬುವವರು ಮೃತಪಟ್ಟಿದ್ದಾರೆ.

'ಶುಕ್ರವಾರ ರಾತ್ರಿ ಸಂಭವಿಸಿರುವ ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಪಘಾತದಲ್ಲಿ ಶಾಫಿಯಾ ಅವರ ಸಂಬಂಧಿಕರಾದ ಯಾಸ್ಮಿನ್ ತಾಜ್, ಅಯಾಷ್ ಶರೀಫ್ ಹಾಗೂ ಇಮ್ರಾನ್ ಖಾನ್ ಗಾಯಗೊಂಡಿದ್ದಾರೆ. ಅವರೆಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಕೆಂಗೇರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

ಪಾನಮತ್ತ ಚಾಲನೆಯಿಂದ ಅಪಘಾತ: 'ಶಾಫಿಯಾ ಹಾಗೂ ಸಂಬಂಧಿಕರು ಆಟೊದಲ್ಲಿ ಉತ್ತರಹಳ್ಳಿ ರಸ್ತೆಯ ವಿ.ವಿ ಕನ್ವೆಷನ್ ಹಾಲ್ ಬಳಿ ಹೊರಟಿದ್ದರು. ಸರಕು ಸಾಗಣೆ ಟ್ರಕ್ ಚಾಲಕ ಅರವಿಂದ್, ಮದ್ಯ ಕುಡಿದಿದ್ದ. ಅದರ ಅಮಲಿನಲ್ಲಿ ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಟ್ರಕ್ ಚಲಾಯಿಸಿದ್ದ. ಅದೇ ಟ್ರಕ್, ಆಟೊಗೆ ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಅಪಘಾತದಿಂದಾಗಿ ಆಟೊ ಉರುಳಿಬಿದ್ದಿತ್ತು. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮಾರ್ಗಮಧ್ಯೆಯೇ ಶಾಫಿಯಾ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದಿದ್ದಾರೆ.

'ಸರಕು ಸಾಗಣೆ ಟ್ರಕ್ ಚಾಲಕ ಅರವಿಂದ್‌ನನ್ನು ವಶಕ್ಕೆ ಪಡೆದು, ವೈದ್ಯಕೀಯ ಪರೀಕ್ಷೆ ಮಾಡಿಸಲಾಯಿತು. ಮದ್ಯ ಕುಡಿದಿದ್ದು ಪತ್ತೆಯಾಯಿತು. ಅಪಘಾತ ಪ್ರಕರಣದಲ್ಲಿ ಆತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಚೀಟಿ ವ್ಯವಹಾರ ಅಕ್ರಮ: ದಂಪತಿ ಮನೆಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಪೀಣ್ಯದಾಸರಹಳ್ಳಿ: ಅಕ್ರಮವಾಗಿ ಚೀಟಿ ವ್ಯವಹಾರ ನಡೆಸಿ ₹ 30 ಲಕ್ಷ ಪಡೆದು ವಂಚಿಸಿರುವ ಆರೋಪದಡಿ ಪುಣ್ಯ ಹಾಗೂ ಚಂದ್ರಶೇಖರ್ ದಂಪತಿ ಮನೆಗೆ ಸಂತ್ರಸ್ತರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಬಿಎಚ್‌ಇಎಲ್ ಮಿನಿ ಕಾಲೊನಿ ನಿವಾಸಿ ಪುಣ್ಯ, ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಉದ್ಯೋಗಿ. ಪತಿ ಚಂದ್ರಶೇಖರ್ ಜೊತೆ ಸೇರಿಕೊಂಡು ಅಕ್ರಮವಾಗಿ ಚೀಟಿ ವ್ಯವಹಾರ ನಡೆಸುತ್ತಿದ್ದರು. ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುವ ಮಹಿಳೆಯರು, ಚೀಟಿಗೆ ಹಣ ಕಟ್ಟುತ್ತಿದ್ದರು.

'ಚೀಟಿ ತುಂಬಿದ್ದ ನಮಗೆ ಹಣ ವಾಪಸ್ ನೀಡಿಲ್ಲ. ಅನ್ಯಾಯವಾಗಿದೆ' ಎಂದು ಆರೋಪಿಸಿ ಕೆಲ ಮಹಿಳೆಯರು, ಪುಣ್ಯ ಮನೆಗೆ ಶುಕ್ರವಾರ ರಾತ್ರಿ ಮುತ್ತಿಗೆ ಹಾಕಿದರು. ಪುಣ್ಯ ಹಾಗೂ ಚಂದ್ರಶೇಖರ್ ಅವರನ್ನು ತರಾಟೆಗೆ ತೆಗೆದುಕೊಂಡು, ಹಣ ವಾಪಸ್ ನೀಡುವಂತೆ ಒತ್ತಾಯಿಸಿದರು. ಶನಿವಾರ ಬೆಳಿಗ್ಗೆಯೂ ಮನೆ ಬಳಿ ಸಂತ್ರಸ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು.

'ಹಲವು ವರ್ಷಗಳಿಂದ ಪುಣ್ಯ ಚೀಟಿ ನಡೆಸುತ್ತಿದ್ದಾರೆ. ಅವರನ್ನು ನಂಬಿ ಹಣ ಕಟ್ಟಿದ್ದೆವು. ಇದೀಗ, ನಮ್ಮ ಹಣದಲ್ಲಿಯೇ ಪುಣ್ಯ, ಹೊಸ ಮನೆ ಖರೀದಿಸಿದ್ದಾರೆ. ಚೀಟಿ ಹಣ ವಾಪಸ್ ಕೇಳಿದರೆ, ಕೊಡುತ್ತಿಲ್ಲ' ಎಂದು ಸಂತ್ರಸ್ತರು ಅಳಲು ತೋಡಿಕೊಂಡರು.

ದೂರು ನೀಡದ ಸಂತ್ರಸ್ತರು: 'ಮನೆ ಬಳಿ ಗಲಾಟೆ ನಡೆಯುತ್ತಿದ್ದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಸಂತ್ರಸ್ತರ ಮನವೊಲಿಸಿ ಪರಿಸ್ಥಿತಿ ತಿಳಿಗೊಳಿಸಿದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅಕ್ರಮವಾಗಿ ಚೀಟಿ ವ್ಯವಹಾರ ನಡೆಸಿ ವಂಚಿಸಿರುವ ಬಗ್ಗೆ ದೂರು ನೀಡುವಂತೆ ಸಂತ್ರಸ್ತರನ್ನು ಕೋರಲಾಗಿದೆ. ಆದರೆ, ಯಾರೊಬ್ಬರೂ ದೂರು ನೀಡುತ್ತಿಲ್ಲ. ದೂರು ಹಾಗೂ ಪುರಾವೆಗಳು ಇಲ್ಲದೇ, ಆರೋಪಿಗಳ ಮೇಲೆ ಕ್ರಮ ಜರುಗಿಸಲು ಸಾಧ್ಯವಿಲ್ಲ. ಯಾರಾದರೂ ದೂರು ನೀಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಅಪರಾಧ ನಿಯಂತ್ರಣ: ಸಮನ್ವಯತೆ ಇರಲಿ'

ಪ್ರಜಾವಾಣಿ ವಾರ್ತೆ

ಅಲೋಕ್ ಮೋಹನ್

ಬೆಂಗಳೂರು: 'ಸಂಚಾರ ದಟ್ಟಣೆ ಹಾಗೂ ಅಪರಾಧ ನಿಯಂತ್ರಣಕ್ಕಾಗಿ ಪೊಲೀಸರು ಸಮನ್ವಯತೆಯಿಂದ ಕೆಲಸ ಮಾಡಬೇಕು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೂಚಿಸಿದರು.

ನಗರದ ಕಮಿಷನರ್ ಕಚೇರಿಗೆ ಶನಿವಾರ ಭೇಟಿ ನೀಡಿದ್ದ ಅವರು, ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರು. ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದರು.

'ಸಂಚಾರ ಪೊಲೀಸರು, ವಾಹನಗಳ ದಟ್ಟಣೆ ನಿಯಂತ್ರಣಕ್ಕಷ್ಟೇ ಸೀಮಿತವಾಗಬಾರದು. ರಸ್ತೆಯಲ್ಲಿ ಯಾವುದಾದರೂ ಅಪರಾಧ ನಡೆದರೆ, ತ್ವರಿತವಾಗಿ ಸ್ಪಂದಿಸಬೇಕು. ಕಾನೂನು ಸುವ್ಯವಸ್ಥೆ ಪೊಲೀಸರು ಸಹ, ಸಂಚಾರ ದಟ್ಟಣೆ ನಿಯಂತ್ರಣ ಕೆಲಸ ಮಾಡಬೇಕು. ಇಬ್ಬರೂ ಸಮನ್ವಯತೆಯಿಂದ ಕೆಲಸ ಮಾಡಿದರೆ, ಸಮಸ್ಯೆಗಳು ಬೇಗನೇ ನಿವಾರಣೆಯಾಗುತ್ತದೆ' ಎಂದು ಅಲೋಕ್ ಹೇಳಿದರು.

'ಪೊಲೀಸ್ ಸಭೆಯಲ್ಲಿ ಬಿಬಿಎಂಪಿ ಸಮಸ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಂಬಂಧಿ ಸಮಸ್ಯೆ ಆಲಿಸಲು ಪ್ರತಿ ತಿಂಗಳು ನಾಲ್ಕನೇ ಶನಿವಾರದಂದು ಜನಸಂಪರ್ಕ ಸಭೆ ಆಯೋಜಿಸಲಾಗುತ್ತಿದ್ದು, ಸಭೆಯಲ್ಲಿ ಬಿಬಿಎಂಪಿಗೆ ಸಂಬಂಧಪಟ್ಟ ಸಮಸ್ಯೆಗಳು ಹೆಚ್ಚಾಗಿ ಕೇಳಿಬರುತ್ತಿವೆ.

ಕಾನೂನು ಬಾಹಿರ ಚಟುವಟಿಕೆ, ಕಾನೂನು ಸುವ್ಯವಸ್ಥೆ, ಮಾದಕ ವಸ್ತು ಸಾಗಣೆ–ಮಾರಾಟ ತಡೆ, ಅಪರಾಧ ನಿಯಂತ್ರಣ ಹಾಗೂ ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ವಿಷಯಗಳನ್ನು ಗಂಭೀರವಾಗಿ ಪರಿಗಣಿಸುತ್ತಿರುವ ಕಮಿಷನರ್ ಬಿ. ದಯಾನಂದ್, ಅಂಥ ಸಮಸ್ಯೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ. ಆದರೆ, ಬಿಬಿಎಂಪಿ ಸಮಸ್ಯೆಗಳಿಗೆ ಯಾವುದೇ ಪರಿಹಾರ ಸಿಗುತ್ತಿಲ್ಲವೆಂಬ ಬೇಸರ ಜನರಲ್ಲಿದೆ.

ಬಿ. ದಯಾನಂದ್

'ಜನಸಂಪರ್ಕ ಸಭೆ ಪೊಲೀಸರಿಗೆ ಮಾತ್ರ ಸೀಮಿತವಾಗುತ್ತಿದೆ. ಬಿಬಿಎಂಪಿ ಅಧಿಕಾರಿಗಳನ್ನು ಕರೆಸಿ' ಎಂದು ಪ್ರತಿಬಾರಿಯೂ ಸಾರ್ವಜನಿಕರು ಕೋರುತ್ತಿದ್ದಾರೆ. ಇದಕ್ಕೆ ಸ್ಪಂದಿಸಿರುವ ಬಿ.ದಯಾನಂದ್, 'ಪೊಲೀಸ್ ಇಲಾಖೆಯಿಂದ ಹಮ್ಮಿಕೊಳ್ಳುವ ಜನಸಂಪರ್ಕ ಸಭೆಗೆ ಬಿಬಿಎಂಪಿ ಅಧಿಕಾರಿಗಳನ್ನು ಕಳುಹಿಸಿಕೊಡಿ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿದ್ದಾರೆ.

'ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಕಂಡುಕೊಳ್ಳಲು ಸಭೆ ನಡೆಸಲಾಗುತ್ತಿದೆ. ಪೊಲೀಸ್ ಇಲಾಖೆ ಜೊತೆಯಲ್ಲಿ ಬೇರೆ ಇಲಾಖೆಯ ಸಮಸ್ಯೆಗಳ ಬಗ್ಗೆಯೂ ಸಾರ್ವಜನಿಕರು ಉಲ್ಲೇಖಿಸುತ್ತಿದ್ದಾರೆ. ಅವರ ಸಮಸ್ಯೆಗಳು ಪೊಲೀಸರ ಕೆಲಸದ ಮೇಲೆ ಪರಿಣಾಮ ಬೀರುವಂತಿವೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಬಿಬಿಎಂಪಿ ಅಧಿಕಾರಿ ಅಥವಾ ಸಿಬ್ಬಂದಿಯನ್ನು ಮುಂಬರುವ ಜನಸಂಪರ್ಕ ಸಭೆಗೆ ಕಳುಹಿಸಿಕೊಡಬೇಕು. ಇದರಿಂದಾಗಿ, ತಮ್ಮ ವ್ಯಾಪ್ತಿಗೆ ಸಂಬಂಧಪಟ್ಟ ವಿಷಯಗಳ ಮಾಹಿತಿಯನ್ನು ಜನರಿಗೆ ತಿಳಿಸಲು ಅನುಕೂಲವಾಗಲಿದೆ. ಜನಸಂಪರ್ಕ ಸಭೆಯ ದಿನಾಂಕ, ಸ್ಥಳ, ಸಮಯವನ್ನು ಮುಂಚಿತವಾಗಿ ತಿಳಿಸಲಾಗುವುದು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ರ‍್ಯಾಪಿಡೊ ಗ್ರಾಹಕನ ಸೋಗು: ಚಾಲಕನಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರ‍್ಯಾಪಿಡೊ' ಆ್ಯಪ್ ಗ್ರಾಹಕನ ಸೋಗಿನಲ್ಲಿ ಆಟೊ ಕಾಯ್ದಿರಿಸಿದ್ದ ಆರೋಪಿಯೊಬ್ಬ, ಚಾಲಕನ ಖಾತೆಯಿಂದ ₹8,500 ಪಡೆದು ವಂಚಿಸಿರುವ ಬಗ್ಗೆ ಪಶ್ಚಿಮ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆಟೊ ಚಾಲಕ ಲಕ್ಷ್ಮಿನಾರಾಯಣ ಡಿ.ಎಸ್. ಅವರು ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಲಕ್ಷ್ಮಿನಾರಾಯಣ ಇತ್ತೀಚೆಗೆ ಪ್ರಯಾಣಿಕರಿಗಾಗಿ ಕಾಯುತ್ತ ನಿಂತುಕೊಂಡಿದ್ದರು. ರ‍್ಯಾಪಿಡೊ ಆ್ಯಪ್ ಮೂಲಕ ಆರೋಪಿ, ಮೆಜೆಸ್ಟಿಕ್‌ಗೆ ಹೋಗಲು ಆಟೊ ಕಾಯ್ದಿರಿಸಿದ್ದ. ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, 'ನಾನು ಸೇನೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಮೆಜೆಸ್ಟಿಕ್‌ಗೆ ಹೋಗಲು ನಿಮ್ಮ ಆಟೊ ಕಾಯ್ದಿರಿಸಿದ್ದೇನೆ' ಎಂದಿದ್ದ.

'ಲಕ್ಷ್ಮಿನಾರಾಯಣ ಸ್ಥಳಕ್ಕೆ ಹೋದಾಗ ಆರೋಪಿ ಇರಲಿಲ್ಲ. ಪುನಃ ಕರೆ ಮಾಡಿದ್ದ ಆರೋಪಿ, 'ಸಂಬಂಧಿಕರೊಬ್ಬರಿಗೆ ಹುಷಾರಿಲ್ಲ. ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ತುರ್ತಾಗಿ ಹಣ ಕಳುಹಿಸಬೇಕಾಗಿದೆ. ಅವರ ಬಳಿ ಗೂಗಲ್ ಪೇ ಮಾತ್ರ ಇದೆ. ನನ್ನ ಬಳಿ ಪೇಟಿಎಂ ಇದೆ. ಹಣ ಕಳುಹಿಸಲು ಆಗುತ್ತಿಲ್ಲ. ದಯವಿಟ್ಟು ನಿಮ್ಮ ಗೂಗಲ್ ಪೇ ಮೂಲಕ ಸಂಬಂಧಿಕರಿಗೆ ಹಣ ಕಳುಹಿಸಿ. ನಾನು ನಿಮ್ಮ ಪೇಟಿಎಂಗೆ ಹಣ ಹಾಕುತ್ತೇನೆ' ಎಂದಿದ್ದ. ಜೊತೆಗೆ, ಪೇಟಿಎಂಗೆ ಹಣ ವರ್ಗಾವಣೆ ಮಾಡಿರುವುದಾಗಿ ನಕಲಿ ರಶೀದಿಯೊಂದನ್ನು ಕಳುಹಿಸಿದ್ದ' ಎಂದು ಮೂಲಗಳು ತಿಳಿಸಿವೆ.

ರಶೀದಿ ನಿಜವೆಂದು ನಂಬಿದ್ದ ಚಾಲಕ, ಆರೋಪಿ ಹೇಳಿದ್ದ ಖಾತೆಗೆ ₹8,500 ಕಳುಹಿಸಿದ್ದರು. ಇದಾದ ನಂತರ, ಆರೋಪಿ ಮೊಬೈಲ್ ಸ್ವಿಚ್ ಆಫ್ ಆಗಿದೆ. ಪೇಟಿಎಂಗೂ ಹಣ ಜಮೆ ಆಗಿರಲಿಲ್ಲ. ಬಳಿಕವೇ ಚಾಲಕ ಠಾಣೆಗೆ ದೂರು ನೀಡಿದ್ದಾರೆ.

ಲಕ್ಷ್ಮಿನಾರಾಯಣ, 'ಮಕ್ಕಳ ಶಾಲೆಯ ಶುಲ್ಕ ಪಾವತಿಸಲು ಹಣ ಇಟ್ಟುಕೊಂಡಿದ್ದೆ. ಗ್ರಾಹಕರ ಸೋಗಿನಲ್ಲಿ ಆರೋಪಿ ವಂಚಿಸಿದ್ದಾನೆ' ಎಂದು ಅಳಲು ತೋಡಿಕೊಂಡರು.

ಅಪಘಾತ ಸ್ಥಳಕ್ಕೆ ಮುಖ್ಯಮಂತ್ರಿ ಶಿಂದೆ ಭೇಟಿ: ತನಿಖೆ ಚುರುಕು

ನಿದ್ರೆಗೆ ಜಾರಿದ್ದ ಬಸ್ ಚಾಲಕ?

ಮುಂಬೈ (ಪಿಟಿಐ): 'ತಡರಾತ್ರಿಯಾದ್ದರಿಂದ ಚಾಲಕನಿಗೆ ನಿದ್ರೆಯ ಮಂಪು ಆವರಿಸಿರುವ ಪರಿಣಾಮ ಈ ದುರಂತ ಸಂಭವಿಸಿರಬಹುದು' ಎಂದು ಮಹಾರಾಷ್ಟ್ರ ಹೆದ್ದಾರಿ ಪೊಲೀಸರು ಶಂಕಿಸಿದ್ದಾರೆ.

'ಟೈರ್ ಸ್ಫೋಟಗೊಂಡ ಬಳಿಕ ವಿಭಜಕಕ್ಕೆ ಬಸ್ ಡಿಕ್ಕಿ ಹೊಡೆಯಿತು ಎಂದು ಚಾಲಕ ಹೇಳಿದ್ದಾನೆ. ಆದರೆ, ಆತ ನಿದ್ರೆಯಲ್ಲಿದ್ದರಿಂದ ಬಸ್ ನಿಯಂತ್ರಣ ಕಳೆದುಕೊಂಡು ಮೊದಲು ತಡೆಗೋಡೆಗೆ ಡಿಕ್ಕಿ ಹೊಡೆದಿದೆ. ಬಳಿಕ ವಿಭಜಕಕ್ಕೆ ಅಪ್ಪಳಿಸಿದೆ. ಟೈರ್ ಸ್ಫೋಟ ಮತ್ತು ಚಾಲಕನ ನಿದ್ರೆ ಈ ಎರಡು ಕೋನಗಳಲ್ಲಿಯೂ ತನಿಖೆ ನಡೆಸಲಾಗುವುದು' ಎಂದು ತಿಳಿಸಿದ್ದಾರೆ.

ಆರ್‌ಟಿಒ ವರದಿ: ಟೈರ್ ಸ್ಫೋಟದಿಂದ ದುರಂತ ಸಂಭವಿಸಿಲ್ಲ ಎಂದು ಅಮರಾವತಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ.

'ಘಟನಾ ಸ್ಥಳದಲ್ಲಿ ಸ್ಫೋಟಗೊಂಡ ಟೈರ್‌ನ ತುಂಡುಗಳು ಅಥವಾ ಟೈರ್‌ನ ಗುರುತುಗಳು ಪತ್ತೆಯಾಗಿಲ್ಲ. ಟೈರ್‌ನ ಡಿಸ್ಕ್ ಬಾಗಿದ್ದರಿಂದ ಈ ಅವಘಡ ಸಂಭವಿಸಿರಬಹುದು' ಎಂದು ಬದುಕುಳಿದವರ ಹೇಳಿಕೆ ಆಧರಿಸಿ ಈ ವರದಿ ನೀಡಲಾಗಿದೆ.

300 ಮಂದಿ ಸಾವು: ಕಳೆದ ಡಿಸೆಂಬರ್‌ನಲ್ಲಿ ಈ ಎಕ್ಸ್‌ಪ್ರೆಸ್ ವೇ ಉದ್ಘಾಟನೆಗೊಂಡಿತ್ತು. ಅಂದಿನಿಂದ ಇಲ್ಲಿಯವರೆಗೆ ಈ ಹೆದ್ದಾರಿಯಲ್ಲಿ 300ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದಾರೆ.

'ಹೆದ್ದಾರಿಯಲ್ಲಿ ಅಪಘಾತಗಳ ತಡೆಗೆ ಸರ್ಕಾರ ಯಾವುದೇ ಕ್ರಮಕೈಗೊಂಡಿಲ್ಲ. ಈ ದುರಂತದ ಬಳಿಕವಾದರೂ ಜನರ ಪ್ರಾಣ ರಕ್ಷಣೆಗೆ ಸರ್ಕಾರ ಕಣ್ಣು ತೆರೆಯಬೇಕಿದೆ' ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಆಗ್ರಹಿಸಿದ್ದಾರೆ.

ಸ್ಥಳಕ್ಕೆ ಶಿಂದೆ ಭೇಟಿ: 'ನಾಗ್ಪುರ-ಸಮೃದ್ಧಿ ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳ ತಡೆಗೆ ಸರ್ಕಾರವು ಅಗತ್ಯ ಕ್ರಮಕೈಗೊಳ್ಳಲಿದೆ' ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.

ಘಟನಾ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಸ್ಥಳೀಯ ನಿವಾಸಿಗಳು, ಪ್ರತ್ಯಕ್ಷದರ್ಶಿಗಳು, ಜಿಲ್ಲಾಡಳಿತ ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಹೆದ್ದಾರಿಯಲ್ಲಿ ಸಂಚರಿಸುವ ಎಲ್ಲಾ ವಾಹನಗಳ ಚಾಲಕರು ವೇಗಮಿತಿಗೆ ಸಂಬಂಧಿಸಿದ ನಿಯಮಾವಳಿಗಳನ್ನು ಪಾಲಿಸುವುದು ಕಡ್ಡಾಯ. ಮಾನವ ಲೋಪದಿಂದಲೇ ಹೆದ್ದಾರಿಯಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಪರಿಣತರ ಜೊತೆಗೆ ಸಮಾಲೋಚನೆ ನಡೆಸಿ ಅವಘಡಗಳ ತಡೆಗೆ ಕಟ್ಟುನಿಟ್ಟಿನ ಸರ್ಕಾರವು ಕ್ರಮವಹಿಸಲಿದೆ ಎಂದರು.

ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಬಸ್ ದುರಂತ ಸಂಭವಿಸಿದ ಸ್ಥಳಕ್ಕೆ ಶನಿವಾರ ಭೇಟಿ ನೀಡಿದರು–ಪಿಟಿಐ ಚಿತ್ರ

26 ಮಂದಿ ಸಜೀವ ದಹನ

ಒಂದನೇ ಪುಟದಿಂದ

ನಾಗಪುರದಿಂದ ಹೊರಟಿದ್ದ ಬಸ್: ವಿದರ್ಭ ಟ್ರಾವೆಲ್ಸ್‌ಗೆ ಸೇರಿದ ಈ ಬಸ್ ನಾಗ್ಪುರದಿಂದ ಪುಣೆಗೆ ಹೊರಟಿತ್ತು. ಇದರಲ್ಲಿ ಒಟ್ಟು 33 ಮಂದಿ ಪ್ರಯಾಣಿಸುತ್ತಿದ್ದರು.

ಶುಕ್ರವಾರ ಸಂಜೆ 4 ಗಂಟೆಗೆ ಪ್ರಯಾಣ ಆರಂಭಿಸಿತ್ತು. ಯವತ್ಮಾಲ್ ಜಿಲ್ಲೆಯ ಕಾರಂಜಾ ಎಂಬಲ್ಲಿ ರಾತ್ರಿ ಊಟಕ್ಕೆ ನಿಲ್ಲಿಸಲಾಗಿತ್ತು. ಅಲ್ಲಿಂದ ಹೊರಟು ಪಿಂಪಲಖುಟ ಬಳಿ ತಲುಪಿದಾಗ ಅಪಘಾತ ಆಗಿದೆ. ಮೃತದೇಹಗಳು ಸುಟ್ಟು ಕರಕಲಾಗಿದ್ದು ಗುರುತು ಹಿಡಿಯಲು ಸಾಧ್ಯವಾಗಿಲ್ಲ. ಡಿಎನ್‌ಎ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲು ಸರ್ಕಾರ ನಿರ್ಧರಿಸಿದೆ.

ಅಪಘಾತ ಹೇಗೆ ನಡೆಯಿತು ಎಂಬುದನ್ನು ತಿಳಿದುಕೊಳ್ಳಲು ಚಾಲಕನನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ. ಆತನ ಬಂಧನ ಪ್ರಕ್ರಿಯೆಯೂ ನಡೆಯುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸಾಂತ್ವನ ಹೇಳಿದ ಪ್ರಧಾನಿ: ದುರಂತದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ.

'ಅಂಗಲಾಚಿದರೂ ಸಹಾಯಕ್ಕೆ ಬರಲಿಲ್ಲ'

'ಟೈರ್ ಸ್ಫೋಟಗೊಂಡ ತಕ್ಷಣವೇ ಬಸ್‌ಗೆ ಬೆಂಕಿ ಹೊತ್ತಿಕೊಂಡಿತು. ನನ್ನ ಬದಿಯಲ್ಲಿ ಪ್ರಯಾಣಿಕರೊಬ್ಬರು ಕುಳಿತಿದ್ದರು. ಕಿಟಕಿಗಳನ್ನು ಒಡೆದು ನಾನು ಹೊರಬಂದೆ' ಎಂದು ಬದುಕುಳಿದ ಪ್ರಯಾಣಿಕರೊಬ್ಬರು ತಿಳಿಸಿದರು.

'ಬಸ್‌ನಲ್ಲಿದ್ದವರು ಹೊರಬರಲು ಹರಸಾಹಸ ಪಡುತ್ತಿದ್ದರು. ಕಿಟಕಿಗಳ ಮೂಲಕ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಇತರ ವಾಹನಗಳತ್ತ ಕೈ ತೋರಿಸಿ ಸಹಾಯಕ್ಕೆ ಅಂಗಲಾಚುತ್ತಿದ್ದರು. ಆದರೆ, ವಾಹನಗಳು ನಿಲ್ಲಿಸದೆ ಮುಂದೆ ಚಲಿಸಿದವು, ಒಬ್ಬರೂ ನೆರವಿಗೆ ಬರಲಿಲ್ಲ' ಎಂದು ಸ್ಥಳೀಯ ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು.

ಅತಿವೇಗ ತಡೆಗೆ ಸ್ಮಾರ್ಟ್ ಸಿಸ್ಟಂ ಜಾರಿ: 'ಸಮೃದ್ಧಿ ಎಕ್ಸ್‌ಪ್ರೆಸ್ ವೇನಲ್ಲಿ ವಾಹನಗಳ ಅತಿವೇಗಕ್ಕೆ ಕಡಿವಾಣ ಹಾಕಲು ಸ್ಮಾರ್ಟ್ ಸಿಸ್ಟಂ ಅಳವಡಿಕೆಗೆ ನಿರ್ಧರಿಸಲಾಗಿದೆ. ಈ ವ್ಯವಸ್ಥೆಯು ವಾಹನಗಳ ವೇಗವನ್ನು ಪರೀಕ್ಷಿಸಿ ಎಚ್ಚರಿಕೆಯ ಸಂದೇಶ ರವಾನಿಸಲಿದೆ. ಶೀಘ್ರವೇ, ಇದರ ಜಾರಿಗೆ ಕ್ರಮ ವಹಿಸಲಾಗುವುದು' ಎಂದು ಡಿಸಿಎಂ ದೇವೇಂದ್ರ ಫಡಣವೀಸ್ ತಿಳಿಸಿದರು.

ಆದಾಯ ಗಳಿಕೆಗೆ ಕಸವೇ ಬಂಡವಾಳ!

ಒಂದನೇ ಪುಟದಿಂದ....

ಪ್ಲಾಸ್ಟಿಕ್ ತ್ಯಾಜ್ಯ ಬಳಸಿ ಪ್ಲಾಸ್ಟಿಕ್ ಇಟ್ಟಿಗೆ ತಯಾರಿಸುವ ಯಂತ್ರವೂ ಇಲ್ಲಿದೆ. ಚರಂಡಿ ಅಥವಾ ಸಿಂಕ್‌ನಲ್ಲಿ ವ್ಯರ್ಥವಾಗಿ ಹೋಗುವ ಅನ್ನದ ಅಗಳಿನ ಕಸವೂ ಸಂಸ್ಕರಣಾ ಘಟಕದಲ್ಲಿ ರಸವೇ. ಗೊಬ್ಬರ ತಯಾರಿಸಲು ಬಳಸುವ ಕಪ್ಪು ಸೈನಿಕ ನೊಣಗಳನ್ನು ಇಲ್ಲಿ ಸಾಕಾಣಿಕೆ ಮಾಡಲಾಗುತ್ತಿದ್ದು, ಇದಕ್ಕೆ ಅನ್ನದ ಅಗಳು ಪ್ರಮುಖ ಆಹಾರವಾಗಿ ಬಳಕೆಯಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಒಂದೇ ಸೂರಿನಡಿ ಇವೆಲ್ಲ ಸೌಲಭ್ಯಗಳು ಇರುವುದು ವಿಶೇಷ.

ಎರೆಹುಳು ಗೊಬ್ಬರ ತಯಾರಿಕೆಗೆ ದೇಶೀ ಗೋವುಗಳ ಮೂತ್ರ ಬಳಕೆ ಮಾಡಲಾಗುತ್ತಿದೆ. ಅದಕ್ಕಾಗಿ ಘಟಕದಲ್ಲಿಯೇ ಗೋ ಶಾಲೆ ನಿರ್ಮಿಸಲಾಗಿದೆ. ಕಸವನ್ನು ರಸ ಮಾಡಿ ಗೊಬ್ಬರ ತಯಾರಿಸಲು ಬೇಕಾಗುವ ಎಲ್ಲ ಸವಲತ್ತುಗಳು ಈ ಘಟಕದಲ್ಲಿವೆ. ಇಲ್ಲಿ ತಯಾರಿಸಿದ ಗೊಬ್ಬರವನ್ನು ಬಳಸಿಯೇ 50ಕ್ಕೂ ಹೆಚ್ಚು ನಮೂನೆಯ ಔಷಧ ಮತ್ತು ಅಲಂಕಾರಿಕ ಸಸಿಗಳನ್ನು ಬೆಳೆಸಿ ಮಾರಾಟ ಮಾಡಲಾಗುತ್ತಿದೆ. ರಾಜ್ಯದ ವಿವಿಧ ಜಿಲ್ಲಾ ಪಂಚಾಯಿತಿಗಳಿಂದ ಬಂದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇಲ್ಲಿರುವ ಸೌಲಭ್ಯಗಳನ್ನು ನೋಡಿದ್ದಾರೆ. ಬಂದವರಿಗೆ ಇಲ್ಲಿ ಕಸವನ್ನು ರಸ ಮಾಡುವ ಬಗ್ಗೆ ತರಬೇತಿಯೂ ನೀಡಲಾಗುತ್ತದೆ.

ಸಂಸ್ಕರಣಾ ಘಟಕವನ್ನು ನಿರ್ವಹಣೆ ಮಾಡಲು ಜಂಟಿ ಸಮಿತಿ ರಚಿಸಲಾಗಿದ್ದು, ಈ ಘಟಕದ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಪಿಡಿಒಗಳು ಸಮಿತಿಯ ಸದಸ್ಯರಾಗಿದ್ದಾರೆ. ಈಗ ಗ್ರಾ.ಪಂ.ಗಳಿಂದಲೇ ನಿರ್ವಹಣೆಯಾಗುತ್ತಿದೆ. ಹೀಗಾಗಿ ಗ್ರಾ.ಪಂ.ಗಳಿಗೆ ಕಸ ವಿಲೇವಾರಿ ಸಮಸ್ಯೆಯೇ ಆಗಿಲ್ಲ. ಕಸವನ್ನು ಹಸಿ ಹಾಗೂ ಒಣ ಎಂಬುದಾಗಿ ಮೂಲದಲ್ಲಿಯೇ ವಿಂಗಡಿಸಲು ವಾಹನಗಳಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಸಂಸ್ಕರಣಾ ಘಟಕದ ಸಿಬ್ಬಂದಿಗೂ ಅನುಕೂಲವಾಗಿದೆ.

'ದೊಡ್ಡ ಮಟ್ಟದಲ್ಲಿ ಮಾರಾಟಕ್ಕೆ ಹುಡುಕಾಟ'

ಜನಾರ್ದನ

'ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಪ್ಲಾಸ್ಟಿಕ್, ಚಪ್ಪಲಿ ತ್ಯಾಜ್ಯ, ಟೆಟ್ರಾ ಪಾಕೆಟ್ ಹೀಗೆ ಎಲ್ಲವನ್ನೂ ವಿಂಗಡಣೆ ಮಾಡಲಾಗುತ್ತದೆ. ಇವುಗಳನ್ನು ಕಚ್ಚಾವಸ್ತುವಾಗಿ ಬಳಸಿ ವಸ್ತುಗಳನ್ನು ಉತ್ಪಾದಿಸುವ ದೊಡ್ಡ ಕಾರ್ಖಾನೆಗಳಿಗೆ ಇವುಗಳನ್ನು ಮಾರಾಟ ಮಾಡುವುದಕ್ಕೆ ಯೋಜನೆ ರೂಪಿಸಲಾಗಿದೆ. ನಮಗೆ ಕಸವೇ ರಸವಾಗಿದೆ' ಎನ್ನುತ್ತಾರೆ ಘಟಕದ ಜಂಟಿ ಸಮಿತಿಯ ಗೌರವಾಧ್ಯಕ್ಷ ಜನಾರ್ದನ ಹುಲಿಗಿ.

'ವಾರ್ಷಿಕ 30 ಟನ್ ಎರೆಹುಳು ಗೊಬ್ಬರ ತಯಾರಿಸುತ್ತೇವೆ. ಇದರಿಂದಾಗಿ ಅಂದಾಜು ₹1.80 ಲಕ್ಷದಿಂದ ₹2 ಲಕ್ಷ ಆದಾಯ ಬರುತ್ತಿದೆ. 200 ಟನ್ ಪಟ್ಟಣದ ತ್ಯಾಜ್ಯದಿಂದ ತಯಾರಿಸಿದ ಗೊಬ್ಬರವಿದ್ದು, ಇದರ ಮೌಲ್ಯವರ್ಧನೆ ಮಾಡಿ ಘಟಕದ ಆದಾಯ ಹೆಚ್ಚಿಸಲು ಯೋಜನೆ ರೂಪಿಸಿದ್ದೇವೆ' ಎಂದಿದ್ದಾರೆ.

ಅಪಘಾತ: ಮೃತರ ಸಂಖ್ಯೆ 9ಕ್ಕೆ ಏರಿಕೆ

ಬಳ್ಳಾರಿ: ಹೊಸಪೇಟೆ ವಡ್ಡರಹಳ್ಳಿ ಬಳಿ ಶುಕ್ರವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 9ಕ್ಕೆ ಏರಿದೆ. ಶುಕ್ರವಾರ ಮಧ್ಯರಾತ್ರಿ ತಾಹೀರ್ (10) ಮೃತಪಟ್ಟಿದ್ದು, ಶಾನು ಅಲಿಯಾಸ್ ಶಾನುವಾಜ್ (35) ಹಾಗೂ ನವಾಜ್ (4) ವಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಕ್ಫ್ ಖಾತೆ ಸಚಿವ ಜಮೀರ್ ಅಹಮದ್ ಖಾನ್ ಅವರು ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಅರೋಗ್ಯ ವಿಚಾರಿಸಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೃತರ ಕುಟುಂಬಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಲಾ ₹ 2 ಲಕ್ಷ ಪರಿಹಾರ ಘೋಷಿಸಿದ್ದಾರೆ. ಗಾಯಾಳುಗಳ ಚಿಕಿತ್ಸೆಗೆ ತಲಾ ₹ 50 ಸಾವಿರ ಪರಿಹಾರ ಕೊಡಲಾಗುವುದು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ತಲಾ ₹ 1 ಲಕ್ಷ ಪರಿಹಾರ ಕೊಡಲು ಸಾಧ್ಯವೇ ಎಂಬ ಬಗ್ಗೆಯೂ ಪರಿಶೀಲಿಸಲಾಗುವುದು' ಎಂದರು.

ಲಂಚ: ಕಾರ್ಮಿಕ ಇಲಾಖೆ ನಿರೀಕ್ಷಕಿ ಲೋಕಾಯುಕ್ತ ಬಲೆಗೆ



ಮುಮ್ತಾಜ್

ರಾಣೆಬೆನ್ನೂರು: ₹5 ಸಾವಿರ ಲಂಚ ಪಡೆಯುವ ವೇಳೆ ಶನಿವಾರ ರಾಣೆಬೆನ್ನೂರು ತಾಲ್ಲೂಕಿನ ಕಾರ್ಮಿಕ ಇಲಾಖೆ ನಿರೀಕ್ಷಕಿ ಮುಮ್ತಾಜ್ ಬೇಗಂ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಕಾರ್ಮಿಕ ನಾರಾಯಣಪ್ಪ ಎಂಬುವರಿಗೆ ಕಾರ್ಮಿಕ ಇಲಾಖೆ ಕಾರ್ಡ್ ಕೊಡಲು ₹5 ಸಾವಿರ ಲಂಚದ ಬೇಡಿಕೆ ಇಟ್ಟಿದ್ದರು. ನಾರಾಯಪ್ಪ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

'ಗೃಹ ಲಕ್ಷ್ಮಿ' ಜಾರಿಗೆ 'ಪ್ರಜಾಪ್ರತಿನಿಧಿ'

ಒಂದನೇ ಪುಟದಿಂದ

ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿಯನ್ನು ಫಲಾನುಭವಿಗೆ ತಲುಪಿಸಲಿದ್ದಾರೆ. ಹೀಗೆ ತಲುಪಿಸಿದ ಪ್ರಜಾ ಪ್ರತಿನಿಧಿಗೆ ಸೇವಾ ಶುಲ್ಕವಾಗಿ ಪ್ರತಿ ಅರ್ಜಿಗೆ ಒಟ್ಟು ₹15ರಂತೆ (ಅರ್ಜಿ ಸಲ್ಲಿಕೆಗೆ ₹10, ಮುದ್ರಿತ ಪ್ರತಿಗೆ ₹5) ಇಲಾಖೆಯಿಂದ ನೀಡಲಾಗುತ್ತದೆ. ಅರ್ಜಿದಾರರು ಯಾವುದೇ ಶುಲ್ಕ ನೀಡಬೇಕಿಲ್ಲ.

'ಗೃಹಲಕ್ಷ್ಮಿ' ಯೋಜನೆಗೆ ಅರ್ಜಿ ಸ್ವೀಕರಿಸುವ ಪ್ರಕ್ರಿಯೆ ಜುಲೈ 14ರಂದು ಆರಂಭವಾಗಲಿದೆ. ಆಗಸ್ಟ್ 15ರಂದು ಫಲಾನುಭವಿಗಳ ಆಧಾರ್ ಜೋಡಣೆ ಆಗಿರುವ ಬ್ಯಾಂಕ್ ಖಾತೆಗೆ ಹಣ ಜಮೆ ಆಗಲಿದೆ.

ಎಪಿಎಲ್ ಮತ್ತು ಬಿಪಿಎಲ್ ರೇಷನ್ ಕಾರ್ಡ್‌ನಲ್ಲಿ ಕುಟುಂಬದ 'ಯಜಮಾನಿ' ಎಂದು ಗುರುತಿಸಿಕೊಂಡ ಮಹಿಳೆಯ ಖಾತೆಗೆ ಹಣ ವರ್ಗಾವಣೆಯಾಗಲಿದೆ. ಈ ಯೋಜನೆಯಡಿ ಪ್ರತಿ ತಿಂಗಳು ಅಂದಾಜು 1.28 ಕೋಟಿ ಮಹಿಳೆಯರ ಖಾತೆಗೆ ಹಣ ಸಂದಾಯವಾಗಲಿದೆ. ರಾಜ್ಯದಲ್ಲಿರುವ ಮಹಿಳೆಯರ ಪೈಕಿ ಶೇ 70ರಿಂದ 75ರಷ್ಟು ಮಂದಿ ಯೋಜನೆಯ ವ್ಯಾಪ್ತಿಗೆ ಬರುವ ನಿರೀಕ್ಷೆಯಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈ ಯೋಜನೆಗೆ ಸುಮಾರು ₹30 ಸಾವಿರ ಕೋಟಿ ಅಗತ್ಯವಿದೆ ಎಂದು ಇಲಾಖೆ ಅಂದಾಜಿಸಿದೆ.

'ಬೆಂಗಳೂರು ಒನ್, ಗ್ರಾಮ ಒನ್, ನಾಡ ಕಚೇರಿಗಳಲ್ಲೂ ಅರ್ಜಿ ಸ್ವೀಕರಿಸುವ ವ್ಯವಸ್ಥೆ ಇರಲಿದೆ, ಸೇವಾ ಸಿಂಧು ಪೋರ್ಟಲ್ ಮೂಲಕವೂ ಅರ್ಜಿ ಸ್ವೀಕರಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಹಲ್ಲಿ ಬಿದ್ದ ಉಪ್ಪಿಟ್ಟು ಸೇವಿಸಿ 70 ಮಕ್ಕಳು ಅಸ್ವಸ್ಥ

ರಾಯಚೂರು: ತಾಲ್ಲೂಕಿನ ಅಪ್ಪನದೊಡ್ಡಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಅಡುಗೆ ಪಾತ್ರೆಯಲ್ಲಿ ಹಲ್ಲಿ ಬಿದ್ದಿದ್ದ ಉಪ್ಪಿಟ್ಟು ಸೇವಿಸಿ 70 ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದಾರೆ.

ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ 40 ಹಾಗೂ 30 ವಿದ್ಯಾರ್ಥಿಗಳು ರಾಯಚೂರು ತಾಲ್ಲೂಕಿನ ಯಾಪಲದಿನ್ನಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಹುತೇಕ ಮಕ್ಕಳು ಚೇತರಿಸಿಕೊಂಡಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಅಡುಗೆ ಸಿಬ್ಬಂದಿ ನಿರ್ಲಕ್ಷ್ಯದಿಂದಾಗಿ ಅನಾಹುತ ಉಂಟಾಗಿದೆ. ಉಪ್ಪಿಟು ಮಾಡಿದ ನಂತರ ಪಾತ್ರೆ ಮುಚ್ಚಿರಲಿಲ್ಲ.

ಟೋಲ್ ಸಂಗ್ರಹ ಶುರು

ಪ್ರಜಾವಾಣಿ ವಾರ್ತೆ

ಮಂಡ್ಯ: ಕನ್ನಡಪರ ಸಂಘಟನೆಗಳ ಪ್ರತಿಭಟನೆ ನಡುವೆಯೂ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇ ಗಣಂಗೂರು ಟೋಲ್‌ನಲ್ಲಿ ಪೂರ್ವ ನಿಗದಿಯಂತೆ ಶನಿವಾರ ಬೆಳಿಗ್ಗೆ 8ರಿಂದ ಶುಲ್ಕ ಸಂಗ್ರಹ ಆರಂಭವಾಯಿತು.

'ಸರ್ವೀಸ್ ರಸ್ತೆ ಪೂರ್ಣಗೊಳಿಸದೇ, ಮೂಲ ಸೌಲಭ್ಯ ಒದಗಿಸದೇ ಈ ಟೋಲ್‌ನಲ್ಲಿ ಶುಲ್ಕ ಸಂಗ್ರಹಿಸಬಾರದು' ಎಂದು ಒತ್ತಾಯಿಸಿ ಕನ್ನಡಪರ ಸಂಘಟನೆಗಳ ಸದಸ್ಯರು ಟೋಲ್ ಕೇಂದ್ರದ ಬಳಿ ಪ್ರತಿಭಟಿಸಿದರು. ಹೆದ್ದಾರಿ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿದರು.

'ಸರ್ವೀಸ್ ರಸ್ತೆ ಕಾಮಗಾರಿ ಪೂರ್ಣಗೊಳ್ಳುವವರೆಗೂ ಟೋಲ್ ಸಂಗ್ರಹ ಮಾಡದಂತೆ ನೋಡಿಕೊಳ್ಳಬೇಕು' ಎಂದು ಸ್ಥಳೀಯ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದ್ದರು. ಈ ನಡುವೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಟೋಲ್ ಸಂಗ್ರಹ ಪ್ರಕ್ರಿಯೆ ಆರಂಭಿಸಿದರು.

ಸುರಕ್ಷತೆ ಪರಿಶೀಲನೆ ದಿನವೇ ದರೋಡೆ!

ಮದ್ದೂರು: ಪೊಲೀಸರ ಸೋಗಿನಲ್ಲಿ ಬಂದ ದುಷ್ಕರ್ಮಿಗಳು, ಎಕ್ಸ್‌ಪ್ರೆಸ್ ವೇ ಸಮೀಪ ಕಾರು ನಿಲ್ಲಿಸಿ ವಿಶ್ರಾಂತಿ ಪಡೆಯುತ್ತಿದ್ದ ಮಡಿಕೇರಿ ತಾಲ್ಲೂಕು ಅರಪಟ್ಟು ಗ್ರಾಮದ ಮುತ್ತಪ್ಪ ಅವರನ್ನು ಶುಕ್ರವಾರ ತಡರಾತ್ರಿ ಬೆದರಿಸಿ 75 ಗ್ರಾಂ. ಚಿನ್ನಾಭರಣ ಕಸಿದು ಪರಾರಿಯಾಗಿದ್ದಾರೆ.

ಸಂಚಾರ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಅವರು ಹೆದ್ದಾರಿ ಸುರಕ್ಷತೆ ಪರಿಶೀಲನೆ ನಡೆಸಿದ ಕೆಲವೇ ಗಂಟೆಗಳಲ್ಲಿ ಈ ಘಟನೆ ನಡೆದಿದೆ.

ಒಳಾಂಗಣ ವಿನ್ಯಾಸಕರಾದ ಮುತ್ತಪ್ಪ ಬೆಂಗಳೂರಿನ ಆಸ್ಪತ್ರೆಗೆ ತೆರಳಿ ಇನೋವಾ ಕಾರ್‌ನಲ್ಲಿ ಮರಳುತ್ತಿದ್ದರು. ನಸುಕಿನ 2.30ರ ವೇಳೆಗೆ ಹೊರವಲಯದ ಐಶ್ವರ್ಯ ಶಾಲೆಯ ಬಳಿ ಸರ್ವೀಸ್ ರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿ ವಿಶ್ರಾಂತಿ ಪಡೆಯುತ್ತಿದ್ದರು.

'ನಾವು ಪೊಲೀಸರು' ಎಂದು ಪರಿಚಯಿಸಿಕೊಂಡ ಮೂವರು, 'ನೀವು ಮದ್ಯಪಾನ ಮಾಡಿದ್ದೀರೋ ಇಲ್ಲವೋ ಎಂಬುದನ್ನು ಚೆಕ್ ಮಾಡಬೇಕಿದೆ' ಎಂದು ತಿಳಿಸಿದ್ದಾರೆ. ನಂತರ ಡ್ರ್ಯಾಗನ್ ತೋರಿಸಿ ಬೆದರಿಸಿದ್ದಾರೆ. ಮುತ್ತಪ್ಪ ಪ್ರತಿರೋಧ ವ್ಯಕ್ತಪಡಿಸಿದಾಗ ಕತ್ತು, ಕೈಗೆ ತಿವಿದಿದ್ದಾರೆ. ಕೊರಳಲ್ಲಿದ್ದ 60 ಗ್ರಾಂ. ಚಿನ್ನದ ಸರ ಹಾಗೂ 15 ಗ್ರಾಂ. ಚಿನ್ನದ ತಾಯಿತವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. 'ಗಸ್ತಿನಲ್ಲಿದ್ದ ನಾವು ಸ್ಥಳಕ್ಕೆ ಬಂದಾಗ ಈ ವಿಷಯ ತಿಳಿಯಿತು. ನಾವೇ ಮುತ್ತಪ್ಪ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದೆವು' ಎಂದು ಪೊಲೀಸರು ತಿಳಿಸಿದರು.

ಚಿನ್ನ ಸಾಲ ಹಗರಣ: ಮಾಹಿತಿ ಕೇಳಿದ ಇ.ಡಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ (ಡಿಸಿಸಿ) ಬ್ಯಾಂಕ್‌ನ ನಗರ ಶಾಖೆಯಲ್ಲಿ 2014ರಲ್ಲಿ ಬಯಲಿಗೆ ಬಂದಿದ್ದ ಬಹುಕೋಟಿ ಮೌಲ್ಯದ ನಕಲಿ ಬಂಗಾರ ಅಡಮಾನ ಸಾಲ ಪಡೆದ ಪ್ರಕರಣದಲ್ಲಿ ಸಾಲ ಪಡೆದವರ ಮಾಹಿತಿ ಒದಗಿಸುವಂತೆ ಕೋರಿ ಜಾರಿ ನಿರ್ದೇಶನಾಲಯ (ಇ.ಡಿ) ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಕಳುಹಿಸಿದೆ.

ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ 2003ರ ಸೆಕ್ಷನ್ 54ರ ಅಡಿ ಇ.ಡಿ ಈ ಪ್ರಕರಣದ ತನಿಖೆಗೆ ಮುಂದಾಗಿದೆ.

ನಗರ ಶಾಖೆಯಲ್ಲಿ 2012-14ರ ಅವಧಿಯಲ್ಲಿ ನಕಲಿ ಬಂಗಾರ ಅಡವಿಟ್ಟು ಮತ್ತು ಬಂಗಾರವನ್ನು ಅಡಮಾನ ಇರಿಸದೆಯೇ ಲಕ್ಷಗಟ್ಟಲೆ ಸಾಲ ಪಡೆದು ವಂಚಿಸಿರುವ 34 ಖಾತೆಗಳಿಗೆ ಸಂಬಂಧಿಸಿದ ಎಲ್ಲಾ ಗ್ರಾಹಕರ ಗುರುತಿನ (ಕೆವೈಸಿ) ದಾಖಲೆಗಳನ್ನು 3 ದಿನದೊಳಗೆ ಸಲ್ಲಿಸುವಂತೆ ಇ.ಡಿ ಯ ಬೆಂಗಳೂರು ಪ್ರಾದೇಶಿಕ ಕಚೇರಿಯ ಸಹಾಯಕ ನಿರ್ದೇಶಕ ಅಜಯ್ ಚೌಧರಿ ಅವರು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದ್ದಾರೆ.

ಹಗರಣ ನಡೆದ ಅವಧಿಯಲ್ಲಿ ಬ್ಯಾಂಕ್‌ನ ಅಧ್ಯಕ್ಷ, ಉಪಾಧ್ಯಕ್ಷ, ಆಡಳಿತ ಮಂಡಳಿ ನಿರ್ದೇಶಕರಾಗಿದ್ದವರು, ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ, ಉಪ ಮತ್ತು ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿದ್ದವರು, ಶಾಖಾ ವ್ಯವಸ್ಥಾಪಕರು, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಕ್ಯಾಷಿಯರ್, ಚಿನ್ನದ ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸಿದ್ದವರ ಹೆಸರು, ವಿಳಾಸ, ಸಂಪರ್ಕ ಸಂಖ್ಯೆ, ಇ-ಮೇಲ್ ವಿಳಾಸ ಹಾಗೂ ಹಗರಣದಲ್ಲಿ ಅವರ ಪಾತ್ರ ಮತ್ತು ಜವಾಬ್ದಾರಿ ಬಗ್ಗೆ, ಬ್ಯಾಂಕ್‌ನ ಹಾಲಿ ಶಾಖಾ ವ್ಯವಸ್ಥಾಪಕರ ವಿವರ ನೀಡುವಂತೆ ಸೂಚಿಸಲಾಗಿದೆ. 'ಮಾಹಿತಿ ನೀಡುವಂತೆ ಇ.ಡಿಯಿಂದ ನಮಗೆ ಇ-ಮೇಲ್ ಬಂದಿದೆ' ಎಂದು ಡಿಸಿಸಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ವಾಸುದೇವ್ ತಿಳಿಸಿದ್ದಾರೆ.

ವಿಚಾರಣಾ ವರದಿಗಳು ಏನಾದವು?

ನೈಸ್ ಸದನ ಸಮಿತಿ

● ಬೆಂಗಳೂರು -ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಯಲ್ಲಿ 'ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪ್ರೈಸಸ್' (ನೈಸ್) ಕಂಪನಿ ನಡೆಸಿದೆ ಎನ್ನಲಾಗಿರುವ ಅಕ್ರಮಗಳ ಬಗ್ಗೆ ವರದಿ ಸಲ್ಲಿಸಲು 2013–2018ರ ಅವಧಿಯಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದ ಟಿ.ಬಿ. ಜಯಚಂದ್ರ ಅಧ್ಯಕ್ಷತೆಯಲ್ಲಿ 2014ರಲ್ಲಿ ಸದನ ಸಮಿತಿ ರಚಿಸಲಾಯಿತು. 2016ರ ನವೆಂಬರ್‌ನಲ್ಲಿ ಈ ಸಮಿತಿಯು 350 ಪುಟಗಳ ವರದಿ ಸಲ್ಲಿಸಿತ್ತು. ಮೂಲ ಒಪ್ಪಂದದಲ್ಲಿದ್ದ 30 ಷರತ್ತುಗಳ ಪೈಕಿ 26 ಷರತ್ತುಗಳನ್ನು ನೈಸ್ ಕಂಪನಿ ಉಲ್ಲಂಘಿಸಿದೆ ಎಂದು ವರದಿಯಲ್ಲಿ ಹೇಳಲಾಗಿತ್ತು.

ಕಂಪನಿಯ ವಶದಲ್ಲಿರುವ 11,600 ಎಕರೆ ಹೆಚ್ಚುವರಿ ಜಮೀನನ್ನು ವಶಕ್ಕೆ ಪಡೆಯಬೇಕು, ಕಂಪನಿ ಅಕ್ರಮವಾಗಿ ಸಂಗ್ರಹಿಸಿರುವ ₹ 1,350 ಕೋಟಿ ಟೋಲ್ ಶುಲ್ಕವನ್ನು ಮರು ವಸೂಲಿ ಮಾಡಬೇಕೆಂಬ ಶಿಫಾರಸುಗಳು ವರದಿಯಲ್ಲಿದ್ದವು. ಹಗರಣದ ಕುರಿತು ಸಿಬಿಐ ಅಥವಾ ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಸುವಂತೆ ಶಿಫಾರಸು ಮಾಡಲಾಗಿತ್ತು. ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದ ಈಗಿನ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರತ್ತಲೂ ವರದಿ ಬೆರಳು ಮಾಡಿತ್ತು. ಪ್ರತಿಪಕ್ಷಗಳ ಪಟ್ಟಿಗೆ ಮಣಿದ ಸರ್ಕಾರ, 2016ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಸದನ ಸಮಿತಿ ವರದಿಯನ್ನು ಮಂಡಿಸಿತ್ತು. ಮುಂದೆ ಯಾವ ಕ್ರಮವೂ ಆಗಿಲ್ಲ.



ಇಂಧನ ಖರೀದಿ ಸದನ ಸಮಿತಿ

● 2004ರಿಂದ 2014ರ ಅವಧಿಯಲ್ಲಿ ರಾಜ್ಯದಲ್ಲಿ ವಿದ್ಯುತ್ ಖರೀದಿಯ ಪ್ರಮಾಣದಲ್ಲಿ ಗಣನೀಯ ಹೆಚ್ಚಳವಾಗಿರುವುದು ಹಾಗೂ ದುಬಾರಿ ದರ ಪಾವತಿ ಕುರಿತು ತನಿಖೆಗಾಗಿ ಆಗಿನ ಇಂಧನ ಸಚಿವ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ 2014ರ ಜುಲೈನಲ್ಲಿ ಸದನ ಸಮಿತಿ ರಚಿಸಲಾಗಿತ್ತು. 2017ರ ನವೆಂಬರ್‌ನಲ್ಲಿ ಈ ಸಮಿತಿ ವರದಿ ಸಲ್ಲಿಸಿತ್ತು. ಶೋಭಾ ಕರಂದ್ಲಾಜೆ ಅವರು ಇಂಧನ ಸಚಿವರಾಗಿದ್ದ ಅವಧಿಯಲ್ಲಿ ದುಬಾರಿ ದರ ನೀಡಿದ ಪರಿಣಾಮ ವಿದ್ಯುತ್ ಖರೀದಿಯಲ್ಲಿ ₹ 1,046 ಕೋಟಿ ನಷ್ಟವಾಗಿದೆ ಎಂದು ವರದಿ ಹೇಳಿತ್ತು. ಜೆಎಸ್‌ಡಬ್ಲ್ಯೂ ಎನರ್ಜಿ ಕಂಪನಿಗೆ ಹೆಚ್ಚುವರಿಯಾಗಿ ಪಾವತಿಸಿರುವ ₹ 1,046 ಕೋಟಿಯನ್ನು ವಸೂಲಿ ಮಾಡುವಂತೆ ಶಿಫಾರಸು ಮಾಡಲಾಗಿತ್ತು. ವಿದ್ಯುತ್ ಖರೀದಿಗೆ ದೀರ್ಘಾವಧಿ ಒಪ್ಪಂದ ಮಾಡಿಕೊಳ್ಳದೇ ಅಲ್ಪಾವಧಿ ಒಪ್ಪಂದ ಮಾಡಿಕೊಂಡಿರುವುದೇ ನಷ್ಟಕ್ಕೆ ಕಾರಣ ಎಂದು ಸಮಿತಿ ಹೇಳಿತ್ತು. ಅಲ್ಪಾವಧಿ ಒಪ್ಪಂದ ಮಾಡಿಕೊಳ್ಳುವುದರ ಹಿಂದೆ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುವ ಉದ್ದೇಶವಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಸದನದಲ್ಲಿ ವರದಿಯ ಮಂಡನೆಯೂ ಆಗಿತ್ತು. ಈವರೆಗೆ ಯಾವ ಕ್ರಮವೂ ಅನುಷ್ಠಾನಕ್ಕೆ ಬಂದಿಲ್ಲ. ಆಗ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿವೆ ಎಂದು ಗುರುತಿಸಲಾಗಿತ್ತು ಬಹುತೇಕ ಅಲ್ಪಾವಧಿ ಒಪ್ಪಂದಗಳು ಯಥಾವತ್ತಾಗಿ ಮುಂದುವರಿದಿವೆ.

● ವಿದ್ಯುತ್ ಖರೀದಿ ಮತ್ತು ಸೋಲಾರ್ ವಿದ್ಯುತ್ ಉತ್ಪಾದನೆಗೆ ಪ್ರೋತ್ಸಾಹಧನ ನೀಡುವ ವಿಚಾರದಲ್ಲಿ 2013–18ರ ಕಾಂಗ್ರೆಸ್ ಸರ್ಕಾರ ಹಾಗೂ ನಂತರ ಬಂದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿದ್ದ ಹಿಂದಿನ ಬಿಜೆಪಿ ಸರ್ಕಾರ, ಆ ಬಗ್ಗೆಯೂ ತನಿಖೆಗೆ ಮುಂದಾಗಿತ್ತು. ಆದರೆ, ಯಾವ ನಿರ್ಧಾರವೂ ಹೊರಬೀಳಲಿಲ್ಲ.

● ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿನ ಸೌರ ವಿದ್ಯುತ್ ಯೋಜನೆಗಳ ಅನುಷ್ಠಾನದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಬಿಜೆಪಿ ಸರ್ಕಾರದಲ್ಲಿ ಇಂಧನ ಸಚಿವರಾಗಿದ್ದ ವಿ. ಸುನಿಲ್ ಕುಮಾರ್ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಟಿಪ್ಪಣಿಯೊಂದನ್ನು ಸಲ್ಲಿಸಿದ್ದರು. ಆದರೆ, ಆ ಬಗ್ಗೆಯೂ ತನಿಖೆಗೆ ಆದೇಶ ಹೊರಬೀಳಲಿಲ್ಲ.

ಕೆರೆ ಒತ್ತುವರಿ ಸದನ ಸಮಿತಿ

● 'ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕೆರೆಗಳ ಜಮೀನು ಒತ್ತುವರಿಯಾಗಿರುವ ಕುರಿತು ತನಿಖೆ ನಡೆಸಲು ವಿಧಾನಸಭಾಧ್ಯಕ್ಷರಾಗಿದ್ದ ಕೆ.ಬಿ. ಕೋಳಿವಾಡ ಅಧ್ಯಕ್ಷತೆಯಲ್ಲಿ 2014ರ ಅಕ್ಟೋಬರ್ 27ರಂದು ಸದನ ಸಮಿತಿ ರಚಿಸಲಾಗಿತ್ತು. ಎರಡೂ ಜಿಲ್ಲೆಗಳಲ್ಲಿ 1,547 ಕೆರೆಗಳಿದ್ದು, ಒಟ್ಟು 57,932 ಎಕರೆ ವಿಸ್ತೀರ್ಣ ಹೊಂದಿವೆ. ಈ ಪೈಕಿ 10,785 ಎಕರೆ 35 ಗುಂಟೆಯಷ್ಟು ಕೆರೆ ಜಮೀನು ಒತ್ತುವರಿಯಾಗಿದೆ. ಒಟ್ಟು 158 ಕೆರೆಗಳು ಮಾತ್ರ ಒತ್ತುವರಿ ಆಗಿಲ್ಲ ಎಂದು ಸದನ ಸಮಿತಿ ವರದಿ ನೀಡಿತ್ತು. ಒತ್ತುವರಿಯಾಗಿರುವ ಕೆರೆಗಳ ಜಮೀನನ್ನು ವಶಕ್ಕೆ ಪಡೆದು, ಜಲಮೂಲಗಳನ್ನು ರಕ್ಷಿಸಬೇಕು. ಒತ್ತುವರಿಯಾಗಿರುವ ಜಮೀನುಗಳಲ್ಲಿ ಬಡಾವಣೆ ನಿರ್ಮಿಸಿ, ನಿವೇಶನ ಮಾರಾಟ ಮಾಡಲು, ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದ್ದ ಅಧಿಕಾರಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಕೆರೆಗಳ ಜಮೀನು ಒತ್ತುವರಿ ಮಾಡಿರುವವರಿಂದ ಆ ಸ್ವತ್ತಿನ ಈಗಿನ ಮಾರುಕಟ್ಟೆ ಮೌಲ್ಯವನ್ನು ವಸೂಲಿ ಮಾಡಬೇಕು. ಹಾಗೆ ಸಂಗ್ರಹಿಸಿದ ಹಣವನ್ನು ಕೆರೆಗಳ ಪುನರುಜ್ಜೀವನ ಮತ್ತು ಸಂರಕ್ಷಣೆಗಾಗಿಯೇ ಬಳಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು. ವಿಧಾನಸಭೆಯ ಅಧ್ಯಕ್ಷರೇ ನೇತೃತ್ವ ವಹಿಸಿದ್ದ ಸದನ ಸಮಿತಿ ನೀಡಿರುವ ವರದಿ ದೀರ್ಘ ನಿದ್ರಾವಸ್ಥೆಯಲ್ಲಿ ಕುಳಿತಿದೆ.

ತನಿಖಾ ವರದಿಗಳೆಂಬ ಪ್ರಹಸನ

ಒಂದನೇ ಪುಟದಿಂದ..

ನೂರಾರು ಸರ್ಕಾರಿ ಅಧಿಕಾರಿಗಳು, ನೌಕರರು ವರ್ಷಗಟ್ಟಲೆ ಕಡತಗಳನ್ನು ಹುಡುಕಿ ಸತ್ಯಕ್ಕಾಗಿ 'ಶೋಧ' ನಡೆಸಿದ್ದಾರೆ. ಆದರೆ, ಹೆಚ್ಚಿನ ವರದಿಗಳ ಮಂಡನೆಯೇ ಆಗಿಲ್ಲ. ಬೆರಳೆಣಿಕೆಯಷ್ಟು ವರದಿಗಳು ಸದನದಲ್ಲಿ ಮಂಡನೆಯಾದರೂ ಚರ್ಚೆ ಇಲ್ಲದೇ ನೇಪಥ್ಯಕ್ಕೆ ಸರಿದಿವೆ.

ರಾಜಿ ರಾಜಕಾರಣದ ಅಸ್ತ್ರ: ಬಹುತೇಕ ಸಂದರ್ಭಗಳಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವ ಪಕ್ಷಗಳು ಸದನ ಸಮಿತಿಗಳು, ಆಯೋಗಗಳ ವರದಿಗಳನ್ನು ಆಧರಿಸಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸುತ್ತವೆ. ಆದರೆ, ಅಧಿಕಾರದ ಗದ್ದುಗೆಗೇರಿದ ಬಳಿಕ ಈ ವಿಚಾರದಲ್ಲಿ ವರಸೆಯೇ ಬದಲಾಗುತ್ತದೆ. ಇದಕ್ಕೆಲ್ಲ ಅಪವಾದ ಎಂಬಂತೆ ಎ.ಟಿ. ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ ವರದಿ ಆಧಾರದಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಸರ್ಕಾರಿ ಜಮೀನಿನ ಒತ್ತುವರಿ ತೆರವಾಗಿದ್ದೂ ಇದೆ.

'ಅರ್ಕಾವತಿ ಬಡಾವಣೆ ರೀಡೂ ಹಗರಣ ಕುರಿತ ನ್ಯಾಯಮೂರ್ತಿ ಕೆಂಪಣ್ಣ ಆಯೋಗದ ವರದಿ ಆಧಾರದಲ್ಲಿ ತನಿಖೆ ನಡೆಸುವಂತೆ ನಾವು ಹಲವು ಬಾರಿ ಒತ್ತಾಯಿಸಿದ್ದೆವು. ಸೌರಶಕ್ತಿ ಯೋಜನೆಗಳ ಅಕ್ರಮದ ಬಗ್ಗೆಯೂ ತನಿಖೆಗೆ ಆಗ್ರಹಿಸಿದ್ದೆವು. ಯಾವುದೂ ಆಗಲಿಲ್ಲ. ನಮ್ಮ ಸರ್ಕಾರದಲ್ಲೂ ಕೆಲವರ ರಾಜಿ ರಾಜಕಾರಣದಿಂದ ಚುನಾವಣೆಯಲ್ಲಿ ಹಿನ್ನಡೆಯಾಯಿತು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಇತ್ತೀಚೆಗೆ ಹೇಳಿದ್ದರು. ಇದು ಸದನ ಸಮಿತಿಗಳು, ನ್ಯಾಯಾಂಗ ಆಯೋಗಗಳು ರಾಜಕೀಯ ದಾಳವಾಗಿ ಬಳಕೆಯಾಗುತ್ತಿರುವುದನ್ನು ದೃಢಪಡಿಸುವಂತಿದೆ.

ರಾಜಕೀಯದ ಆಟ: ಸದನ ಸಮಿತಿಗಳ ರಚನೆ, ತನಿಖೆ, ವಿಚಾರಣೆ, ವರದಿ ಸಲ್ಲಿಕೆ, ಮಂಡನೆ ಎಲ್ಲವೂ ರಾಜಕೀಯ ಆಟಕ್ಕೆ ಬಳಕೆಯಾಗುತ್ತಿರುವುದೇ ಹೆಚ್ಚು. 'ನೈಸ್' ಪ್ರಕರಣದ ಸದನ ಸಮಿತಿಯೇ ಇದಕ್ಕೆ ದೊಡ್ಡ ಸಾಕ್ಷಿ. 2013-2018ರ ಅವಧಿಯಲ್ಲಿ ಅಶೋಕ್ ಖೇಣಿ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು. ಕಾಂಗ್ರೆಸ್ ಸರ್ಕಾರ ಅವರ ಕಂಪನಿಯ ಅಕ್ರಮಗಳ ವಿರುದ್ಧ ಸದನ ಸಮಿತಿ ರಚಿಸಿ ತನಿಖೆ ನಡೆಸಿತ್ತು. ನಂತರ ಕಾಂಗ್ರೆಸ್ ಸೇರಿದ್ದರು. 2023ರ ಚುನಾವಣೆಯಲ್ಲಿ ಬೀದರ್ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಸೋತಿದ್ದಾರೆ.

ಅಕ್ರಮ ಗಣಿಗಾರಿಕೆ ಕುರಿತ ಸಂಪುಟ ಉಪ ಸಮಿತಿ ವರದಿಯ ಕತೆಯೂ ಹೀಗೆಯೇ ಇದೆ. ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ ಹಲವು ಅಧಿಕಾರಿ ಗಳು ಈಗಲೂ ಆಯಕಟ್ಟಿನ ಸ್ಥಾನಗಳಲ್ಲಿದ್ದಾರೆ. ನೂರಾರು ಮಂದಿ ನಿವೃತ್ತರಾಗಿದ್ದಾರೆ. ಅಕ್ರಮ ಗಣಿಗಾರಿಕೆ ಆರೋಪದಡಿ ಬಂಧಿತರಾಗಿದ್ದ ಬಿ. ನಾಗೇಂದ್ರ ನಂತರ ಕಾಂಗ್ರೆಸ್ ಸೇರಿ ಈಗ ಸಿದ್ದರಾಮಯ್ಯ ಸಂಪುಟದಲ್ಲೇ ಸಚಿವರಾಗಿದ್ದಾರೆ. ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ವರ್ಷಗಳ ಕಾಲ ಜೈಲಿನಲ್ಲಿದ್ದ ಜಿ. ಜನಾರ್ದನ ರೆಡ್ಡಿ ಗಂಗಾವತಿ ಶಾಸಕರಾಗಿ ಈಗ ಸಿದ್ದರಾಮಯ್ಯ ಸರ್ಕಾರಕ್ಕೆ ಬೆಂಬಲವನ್ನೂ ಘೋಷಿಸಿದ್ದಾರೆ.

ಅರ್ಕಾವತಿ ಬಡಾಣೆ ಭೂಸ್ವಾಧೀನದಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎಚ್.ಎಸ್. ಕೆಂಪಣ್ಣ ಆಯೋಗ ಸಲ್ಲಿಸಿದ್ದ ವರದಿಯನ್ನು ಯಾವ ಪಕ್ಷದ ಸರ್ಕಾರವೂ ಸದನದ ಮುಂದೆ ತರಲಿಲ್ಲ.

ಸಮಿತಿಯಲ್ಲಿದ್ದವರೂ ಮೌನಕ್ಕೆ ಶರಣು: ಸದನ ಸಮಿತಿಗಳ ಮುಖ್ಯಸ್ಥರು, ಸದಸ್ಯರಾಗಿದ್ದವರೂ ವರದಿಗಳ ಕುರಿತು ಚಕಾರ ಎತ್ತುವುದಿಲ್ಲ. ವರದಿ ತಯಾರಿಸುವ ಅವಧಿಯಲ್ಲಿ ರೋಷಾವೇಶ ಪ್ರದರ್ಶಿಸುವವರು, ಸಮಿತಿಯ ಅವಧಿ ಮುಗಿದ ಬಳಿಕ ಆಶ್ಚರ್ಯಕರ ಎಂಬಂತೆ ಮೌನಿಗಳಾಗುತ್ತಿದ್ದಾರೆ.

ನೈಸ್ ಅಕ್ರಮ ಕುರಿತ ಸದನ ಸಮಿತಿ
ಅಧ್ಯಕ್ಷ : ಟಿ.ಬಿ. ಜಯಚಂದ್ರ
ವರದಿ ಸಲ್ಲಿಕೆ : ನವೆಂಬರ್ 24, 2016
ಪುಟಗಳು : 350

ವಿದ್ಯುತ್ ಖರೀದಿ ಕುರಿತ ಸದನ ಸಮಿತಿ
ಅಧ್ಯಕ್ಷ– ಡಿ.ಕೆ. ಶಿವಕುಮಾರ್
ವರದಿ ಸಲ್ಲಿಕೆ– ನವೆಂಬರ್, 2016

ಕೆರೆ ಒತ್ತುವರಿ ತನಿಖೆಗೆ ಸದನ ಸಮಿತಿ
ಅಧ್ಯಕ್ಷ– ಕೆ.ಬಿ.ಕೋಳಿವಾಡ
ವರದಿ ಸಲ್ಲಿಕೆ– ಆಗಸ್ಟ್, 2017
ಪುಟಗಳು– 8,000

ಗಣಿ ಅಕ್ರಮ ಕುರಿತ ಸಂಪುಟ ಉಪ ಸಮಿತಿ
ಅಧ್ಯಕ್ಷ– ಎಚ್.ಕೆ. ಪಾಟೀಲ
ವರದಿ ಸಲ್ಲಿಕೆ– ಹಲವು ಕಂತುಗಳಲ್ಲಿ
ಪುಟಗಳು– ಹಲವು ಸಂಪುಟಗಳಲ್ಲಿ

ಅರ್ಕಾವತಿ ಬಡಾವಣೆ ಪ್ರಕರಣ: ನ್ಯಾಯಾಂಗ ತನಿಖೆ
ಮುಖ್ಯಸ್ಥ– ನಿವೃತ್ತ ನ್ಯಾಯಮೂರ್ತಿ ಎಚ್.ಎಸ್. ಕೆಂಪಣ್ಣ
ವರದಿ ಸಲ್ಲಿಕೆ– ಆಗಸ್ಟ್ 2017
ಪುಟಗಳು– 1,861

ಕೆಂಪಣ್ಣ ಆಯೋಗ

● ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಕಾವತಿ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದ ಜಮೀನಿನಲ್ಲಿ 540 ಎಕರೆಯನ್ನು ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ರೀಡೂ' ಹೆಸರಿನಲ್ಲಿ ಅಕ್ರಮವಾಗಿ ಡಿನೋಟಿಫೈ ಮಾಡಿದ್ದಾರೆ ಎಂದು ಪ್ರತಿಪಕ್ಷಗಳು 2014ರಲ್ಲಿ ಆರೋಪಿಸಿದ್ದವು. ಇದು ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಭಾರಿ ಜಟಾಪಟಿಗೆ ಕಾರಣವಾಗಿತ್ತು. ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎಸ್. ಕೆಂಪಣ್ಣ ನೇತೃತ್ವದಲ್ಲಿ ಆಯೋಗವೊಂದನ್ನು 2014ರ ಆಗಸ್ಟ್‌ನಲ್ಲಿ ನೇಮಿಸಲಾಗಿತ್ತು. ಅರ್ಕಾವತಿ ಬಡಾವಣೆಗೆ ಸ್ವಾಧೀನಪಡಿಸಿಕೊಂಡಿದ್ದ ಜಮೀನಿನಲ್ಲಿ 2004ರಿಂದ 2014ರವರೆಗೆ 983 ಎಕರೆ ವಿಸ್ತೀರ್ಣವನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರಗಿಟ್ಟಿರುವ ಕುರಿತು ವಿಚಾರಣೆ ನಡೆಸಿ, ವರದಿ ನೀಡುವಂತೆ ಆಯೋಗವನ್ನು ಕೋರಲಾಗಿತ್ತು. 2017ರ ಆಗಸ್ಟ್‌ನಲ್ಲಿ ಆಯೋಗವು 1,861 ಪುಟಗಳ ವರದಿಯನ್ನು ಆಯೋಗವು ರಾಜ್ಯ ಸರ್ಕಾರದ ಅಂದಿನ ಮುಖ್ಯ ಕಾರ್ಯದರ್ಶಿ ಸಿ. ಸುಭಾಶ್ಚಂದ್ರ ಕುಂಠಿಯಾ ಅವರಿಗೆ ಸಲ್ಲಿಸಿತ್ತು. ಆಯೋಗ ತಮ್ಮನ್ನು ದೋಷಮುಕ್ತಗೊಳಿಸಿ ವರದಿ ನೀಡಿದೆ ಎಂದು ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರು ಪ್ರತಿಪಾದಿಸುತ್ತಿದ್ದಾರೆ. 'ಸಿದ್ದರಾಮಯ್ಯ ಅವಧಿಯಲ್ಲಿ ಅಕ್ರಮವಾಗಿ ಜಮೀನು ಡಿನೋಟಿಫೈ ಮಾಡಿರುವುದು ವಿಚಾರಣೆಯಲ್ಲಿ ಸಾಬೀತಾಗಿದೆ' ಎಂದು ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಆರೋಪಿಸುತ್ತಿವೆ. ಈಗಲೂ ಸದನದಲ್ಲಿ ಆಯೋಗದ ವರದಿ ಮಂಡನೆ ಆಗಿಲ್ಲ. ಪ್ರತಿ ಬಾರಿಯೂ ರಾಜಕೀಯ ವಾಗ್ವಾದಗಳು ನಡೆದಾಗಲೆಲ್ಲ ಕೆಂಪಣ್ಣ ಆಯೋಗದ ವರದಿಯ ವಿಚಾರ ಮುನ್ನೆಲೆಗೆ ಬಂದು ಮತ್ತೆ ಹಿಂದಕ್ಕೆ ಸರಿದು ಹೋಗುತ್ತಿದೆ.

ಗಣಿ ಅಕ್ರಮ– ಸಂಪುಟ ಸಮಿತಿ

● ರಾಜ್ಯದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ 2000ರಿಂದ 2010ರವರೆಗೆ ನಡೆದಿದ್ದ ಕಬ್ಬಿಣದ ಅದಿರಿನ ಅಕ್ರಮ ಗಣಿಗಾರಿಕೆ ಕುರಿತು ಆಗಿನ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ತನಿಖೆ ನಡೆಸಿ, 2011ರಲ್ಲಿ ವರದಿ ನೀಡಿದ್ದರು. 617 ಅಧಿಕಾರಿಗಳು ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿದ್ದಾರೆ ಎಂದು ಲೋಕಾಯುಕ್ತರ ತನಿಖಾ ವರದಿ ಹೇಳಿತ್ತು. ಆರೋಪಿತ ಅಧಿಕಾರಿಗಳ ವಿರುದ್ಧದ ಆರೋಪಗಳನ್ನು ಪರಿಶೀಲಿಸಿ, ಕ್ರಮಕ್ಕೆ ಶಿಫಾರಸು ಮಾಡಲು ಆಗಿನ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆ. ಜೈರಾಜ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿತ್ತು. ಈ ಸಮಿತಿ ಪ್ರಕರಣವಾರು ಪರಿಶೀಲಿಸಿ ವರದಿ ನೀಡಿತ್ತು. ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದು ಹಾಗೂ ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ ವ್ಯಕ್ತಿಗಳಿಂದ ನಷ್ಟ ವಸೂಲಿ ಮಾಡುವ ಕುರಿತು ಅಧ್ಯಯನ ನಡೆಸಿ, ಶಿಫಾರಸು ಮಾಡಲು ಆಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ. ಪಾಟೀಲ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿತ್ತು. 500ಕ್ಕೂ ಹೆಚ್ಚು ಅಧಿಕಾರಿಗಳು, ನೌಕರರ ವಿರುದ್ಧ ಕ್ರಮ ಜರುಗಿಸುವಂತೆ ಈ ಸಮಿತಿ ಶಿಫಾರಸು ಮಾಡಿತ್ತು. ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ ಗಣಿ ಕಂಪನಿಗಳು ಹಾಗೂ ಖಾಸಗಿ ವ್ಯಕ್ತಿಗಳಿಂದ ₹ 1.47 ಲಕ್ಷ ಕೋಟಿ ನಷ್ಟ ವಸೂಲಿ ಮಾಡಬೇಕೆಂಬ ಶಿಫಾರಸು ಕೂಡ ಸಮಿತಿಯ ವರದಿಯಲ್ಲಿತ್ತು. ಬೆರಳೆಣಿಕೆಯಷ್ಟು ಅಧಿಕಾರಿಗಳು, ನೌಕರರ ವಿರುದ್ಧ ಮಾತ್ರ ಕ್ರಮ ಜರುಗಿಸಲಾಗಿದೆ. ನಷ್ಟ ವಸೂಲಿಗೆ ಯಾವ ಕ್ರಮವೂ ಆಗಿಲ್ಲ.

ಸುಭಾಷ್ ಮಾಲ್ಖಡೆ ವನ್ಯಜೀವಿ ವಿಭಾಗದ ಮುಖ್ಯಸ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ನೂತನ ಮುಖ್ಯಸ್ಥರನ್ನಾಗಿ 1989ನೇ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ ಸುಭಾಷ್ ಕೆ. ಮಾಲ್ಖಡೆ ಅವರನ್ನು ನೇಮಿಸಲಾಗಿದೆ.

ಅರಣ್ಯ ಪಡೆ ಮುಖ್ಯಸ್ಥರಾಗಿರುವ ಐಎಫ್‌ಎಸ್ ಅಧಿಕಾರಿ ರಾಜೀವ್ ರಂಜನ್ ಅವರು ವನ್ಯಜೀವಿ ವಿಭಾಗದ ಮುಖ್ಯಸ್ಥರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ಹೊಂದಿದ್ದರು. ಅವರನ್ನು ಹೆಚ್ಚುವರಿ ಪ್ರಭಾರದಿಂದ ಬಿಡುಗಡೆ ಮಾಡಿ, ಆ ಹುದ್ದೆಗೆ ಮಾಲ್ಖಡೆ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರು ಹುಲಿ ಯೋಜನೆಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯಲ್ಲಿದ್ದ ಜಗತ್ ರಾಮ್ ಸೇರಿದಂತೆ ಇತರ 13 ಐಎಫ್‌ಎಸ್ ಅಧಿಕಾರಿಗಳನ್ನೂ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ವರ್ಗಾವಣೆ ವಿವರ: ಜಗತ್ ರಾಮ್– ಸದಸ್ಯ ಕಾರ್ಯದರ್ಶಿ, ರಾಜ್ಯ ಜೀವವೈವಿಧ್ಯ ಮಂಡಳಿ; ಸೀಮಾ ಗರ್ಗ್– ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಮತ್ತು ತರಬೇತಿ ವಿಭಾಗ; ಜಗಮೋಹನ್ ಶರ್ಮಾ– ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ); ಶ್ರೀನಿವಾಸುಲು– ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನಾ ವಿಭಾಗ.

ಬಿಸ್ವಜಿತ್ ಮಿಶ್ರಾ– ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ ವಿಭಾಗ ಮತ್ತು ಮಾಹಿತಿ, ಸಂವಹನ ಹಾಗೂ ತರಬೇತಿ ವಿಭಾಗದ ಹೆಚ್ಚುವರಿ ಪ್ರಭಾರ; ಉಪೇಂದ್ರ ಪ್ರತಾಪ್ ಸಿಂಗ್– ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವೃತ್ತ; ಸುನೀಲ್ ಪನ್ವಾರ್– ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಲಬುರಗಿ ವೃತ್ತ; ಮರಿಯಾ ಕ್ರಿಸ್ತುರಾಜ– ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್), ರಾಜ್ಯ ಅರಣ್ಯ ಅಕಾಡೆಮಿ, ಧಾರವಾಡ; ಎ.ವಿ. ಸೂರ್ಯಸೇನ್– ಡಿಸಿಎಫ್, ರಾಮನಗರ ವಿಭಾಗ; ಅಂಥೋಣಿ ಎಸ್. ಮರಿಯಪ್ಪ– ಡಿಸಿಎಫ್, ಮಂಗಳೂರು ವಿಭಾಗ; ದಿನೇಶ್ ಕುಮಾರ್ ವೈ.ಕೆ.– ಡಿಸಿಎಫ್, ಬೆಂಗಳೂರು ನಗರ ವಿಭಾಗ; ಸರೀನಾ ಸಿಕ್ಕಲಿಗರ್– ಡಿಸಿಎಫ್, ಕಲಬುರಗಿ; ಎಂ.ವಿ. ಆಶೀಶ್ ರೆಡ್ಡಿ– ಡಿಸಿಎಫ್, ಭದ್ರಾವತಿ ವಿಭಾಗ.

ನಗರ ಭೂಪರಿವರ್ತನೆ ಸರಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಸ್ಟರ್ ಪ್ಲಾನ್' ಹೊಂದಿರುವ ನಗರ ಪ್ರದೇಶಗಳಲ್ಲಿನ ಭೂ ಪರಿವರ್ತನೆ ಪ್ರಕ್ರಿಯೆ ಸರಳಗೊಳಿಸಲು ಕಂದಾಯ ಇಲಾಖೆ ಚಿಂತನೆ ನಡೆಸಿದೆ.

ಬಹುತೇಕ ನಗರಗಳಲ್ಲಿ ಅಭಿವೃದ್ಧಿಗಾಗಿ ಹತ್ತಿಪ್ಪತ್ತು ವರ್ಷಗಳಿಗೆ 'ಮಾಸ್ಟರ್ ಪ್ಲಾನ್' ಸಿದ್ಧಪಡಿಸಲಾಗುತ್ತದೆ. ರಸ್ತೆ, ಹೊರವರ್ತುಲ ರಸ್ತೆ, ಸೇತುವೆ, ವಸತಿ, ಕೈಗಾರಿಕೆ, ಸಮುಚ್ಚಯ ಸೇರಿದಂತೆ ಯಾವಯಾವ ಪ್ರದೇಶದಲ್ಲಿ ಏನೇನು ಇರಬೇಕು ಎನ್ನುವುದು ಮೊದಲೇ ನಿರ್ಧರಿತವಾಗಿರುತ್ತದೆ. ಹೀಗಿದ್ದರೂ, ವಸತಿ, ವಾಣಿಜ್ಯ ಸೇರಿದಂತೆ ವಿವಿಧ ಉದ್ದೇಶಗಳಿಗೆ ಭೂಪರಿವರ್ತನೆ ಮಾಡಿಕೊಳ್ಳಲು ಜನರು ಕಚೇರಿಗಳಿಗೆ ಅಲೆಯುತ್ತಾರೆ. ಹಾಗಾಗಿ, ಈ ವ್ಯವಸ್ಥೆ ಬದಲಾಗಬೇಕು ಎನ್ನುವ ಚರ್ಚೆಗಳು ಆರಂಭವಾಗಿವೆ.

'ಮಾಸ್ಟರ್ ಪ್ಲಾನ್‌ನಲ್ಲಿ ನಿರ್ಧರಿಸಿದಂತೆ ಅಭಿವೃದ್ಧಿ ಕಾರ್ಯಗಳಿಗೆ ಭೂಮಿಯ ಬಳಕೆ ಮಾಡಿಕೊಳ್ಳಲು ಅವಕಾಶ ನೀಡಬೇಕು. ಜಿಲ್ಲಾಧಿಕಾರಿಗಳಿಗೆ ಇರುವ ಭೂಪರಿವರ್ತನೆ ಅಧಿಕಾರವನ್ನು ಮೊಟಕುಗೊಳಿಸಬೇಕು. ಇದರಿಂದ ಜನರಿಗೆ ಅನುಕೂಲವಾಗುತ್ತದೆ ಎನ್ನುವುದು ಇಲಾಖೆ ಆಲೋಚನೆ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಇಂತಹ ಅಡೆತಡೆಗಳು ಭೂ ಪರಿವರ್ತನೆ ಪ್ರಕ್ರಿಯೆ ವಿಳಂಬವಾಗುವುದರ ಜತೆಗೆ, ಭ್ರಷ್ಟಾಚಾರಕ್ಕೂ ದಾರಿಯಾಗಿದೆ. ಹಿಂದಿನ ಬಿಜೆಪಿ ಸರ್ಕಾರ ಕರ್ನಾಟಕ ಭೂಕಂದಾಯ ಕಾಯ್ದೆಗೆ ತಿದ್ದುಪಡಿ ತಂದು ಏಳು ದಿನಗಳಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಲು ಅವಕಾಶ ಮಾಡಿಕೊಟ್ಟಿತ್ತು. ಆದರೂ, ಭೂಪರಿವರ್ತನೆ ಪ್ರಕ್ರಿಯೆಯಲ್ಲಿ ಸಾಕಷ್ಟು ತೊಡಕುಗಳು ಉಳಿದುಕೊಂಡಿವೆ. ಎಲ್ಲ ತೊಡಕುಗಳನ್ನೂ ನಿವಾರಿಸಬೇಕು ಎನ್ನುವ ಚಿಂತನೆ ಇದೆ' ಎಂದರು.

ಬೆಳಗಾವಿ ವಿಭಾಗದ ಪ್ರಗತಿ ಪರಿಶೀಲನೆಯ ಸಭೆಯಲ್ಲಿ ಸಚಿವರು ಪ್ರಸ್ತಾಪಿಸಿದ ಈ ವಿಷಯಕ್ಕೆ ಭಾಗವಹಿಸಿದ್ದ ಜಿಲ್ಲಾಧಿಕಾರಿಗಳೂ ಸಹಮತ ಸೂಚಿಸಿದ್ದರು. ಕಂದಾಯ ಇಲಾಖೆಯ ಈ ಯೋಜನೆ 'ಮಾಸ್ಟರ್ ಪ್ಲಾನ್' ಹೊರತಾಗಿ ಇರುವ ಭೂಮಿಗಳಿಗೆ ಅನ್ವಯಿಸಲು ಸಾಧ್ಯವಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

'ಸ್ಮಾರ್ಟ್‌ಸಿಟಿ ಕಾಮಗಾರಿ ಅಕ್ರಮ: ಉನ್ನತ ತನಿಖೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದ ಯಾವುದೇ ನಗರದಲ್ಲಿ ಸ್ಮಾರ್ಟ್‌ಸಿಟಿ ಯೋಜನೆ ಕಾಮಗಾರಿಗಳು ನೀಲನಕ್ಷೆ ಪ್ರಕಾರ ಆಗಿಲ್ಲ. ಸಾಕಷ್ಟು ಅಕ್ರಮ ನಡೆದಿದ್ದು, ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಬೆಳಗಾವಿ ಸೇರಿ ಸ್ಮಾರ್ಟ್‌ಸಿಟಿಗೆ ಆಯ್ಕೆಯಾದ ಎಲ್ಲ ನಗರದಗಳ ಕಾಮಗಾರಿ ದುಬೈಗಿಂತ ದುಬಾರಿ ಆಗಿವೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಈ ಯೋಜನೆಯಲ್ಲಿ ಅಪಾರ ಪ್ರಮಾಣದ ಹಣ ಸುರಿದ ಬಗ್ಗೆ ಈಗಾಗಲೇ ಸಂಪುಟದಲ್ಲೂ ಚರ್ಚಿಸಲಾಗಿದೆ. ಸಂಶಯ ಇದ್ದ ಎಲ್ಲ ಕಾಮಗಾರಿಗಳ ಬಗ್ಗೆ ಅಧಿಕಾರಿಗಳಿಗೆ ನೋಟಿಸ್ ನೀಡಿ ವಿವರ ಪಡೆದಿದ್ದೇನೆ. ತಜ್ಞರ ಜತೆ ಚರ್ಚಿಸಿ, ಎಲ್ಲ ದಾಖಲೆ ಸಂಗ್ರಹಿಸಿ ಮುಂದಿನ ಹೆಜ್ಜೆ ಇಡುತ್ತೇವೆ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 2-7-1998

● **ಕೇಂದ್ರ ಸರ್ಕಾರಕ್ಕೆ ಜಯಾ ಬೆಂಬಲ ಮುಂದುವರಿಕೆ**

ಚೆನ್ನೈ, ಜುಲೈ 1 (ಪಿಟಿಐ)– ಕೇಂದ್ರ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಮುಂದುವರಿಸಲು ಜಯಲಲಿತಾ ನೇತೃತ್ವದ ಎಐಎಡಿಎಂಕೆ ಹಾಗೂ ಅದರ ಮಿತ್ರ ಪಕ್ಷಗಳು ಇಂದು ರಾತ್ರಿ ನಿರ್ಧರಿಸುವುದರೊಂದಿಗೆ ವಾಜಪೇಯಿ ಸರ್ಕಾರ ಸದ್ಯ ಕಂಟಕದಿಂದ ಪಾರಾಗಿದೆ.

ಆದರೆ, ತಮಿಳುನಾಡಿ ಡಿಎಂಕೆ ಸರ್ಕಾರ ವಜಾ ಮಾಡದಿದ್ದರೆ ಕೇಂದ್ರ ಸಂಪುಟದಲ್ಲಿರುವ ತನ್ನ ಇಬ್ಬರು ಸಚಿವರು ರಾಜೀನಾಮೆ ನೀಡುವರೆಂಬ ಸ್ಪಷ್ಟ ಸೂಚನೆಯನ್ನು ಎಐಎಡಿಎಂಕೆ ಬಿಜೆಪಿಗೆ ನೀಡಿದೆ.

50 ವರ್ಷಗಳ ಹಿಂದೆ

ಸೋಮವಾರ, 2-7-1973

● **ಬಿಹಾರ್ ಮುಖ್ಯಮಂತ್ರಿ ಸ್ಥಾನಕ್ಕೆ ಗಫೂರ್: ಇಂದಿರಾ ಗಾಂಧಿ ಒಪ್ಪಿಗೆ**

ನವದೆಹಲಿ, ಜುಲೈ 1– ಸಭಾಪತಿ ಅಬ್ದುಲ್ ಗಫೂರ್ ಅವರನ್ನು ರಾಜ್ಯ ಕಾಂಗ್ರೆಸ್ ಶಾಸಕರ ಪಕ್ಷದ ನಾಯಕರನ್ನಾಗಿ ಮಾಡಿ, ಬಿಹಾರ ರಾಜಕೀಯದಲ್ಲಿ ಕೆಲವು ದಿನಗಳಿಂದ ಉಳಿದುಬಂದಿದ್ದ ಡೋಲಾಯಮಾನ ಸ್ಥಿತಿಯನ್ನು ಇಂದು ಅಂತ್ಯಗೊಳಿಸಲಾಯಿತು.

ಪಕ್ಷದಲ್ಲಿ ಜೂನ್ 24ರಂದು ವಿಶ್ವಾಸಮತ ಕಳೆದುಕೊಂಡ ಬಳಿಕ ರಾಜೀನಾಮೆಯಿತ್ತ ಮುಖ್ಯಮಂತ್ರಿ ಕೇದಾರ್ ಪಾಂಡೆ ಅವರ ಸ್ಥಾನವನ್ನು ಗಫೂರ್ ಪಡೆಯುತ್ತಾರೆ. ನಾಯಕರಾಗಿ ಗಫೂರ್ ಅವರ ಆಯ್ಕೆಗೆ ಪ್ರಧಾನಿ ಇಂದಿರಾಗಾಂಧಿ ಸಮ್ಮತಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜುಲೈ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ಚತುರ್ದಶಿ ಗಂ. 20-22 ನಕ್ಷತ್ರ: ಜ್ಯೇಷ್ಠ ಗಂ. 13-18 ಯೋಗ: ಶುಕ್ಲ (ಶುಕ್ರ) ಗಂ. 19-26 ಕರಣ: ಗರ ಗಂ. 09-49, ಮಿಥುನ ಮಾಸದ 17 ನೇ ದಿನ, ಮಳೆನಕ್ಷತ್ರ: ಆರ್ದ್ರಾ 3.
ರಾಹುಕಾಲ: ಸಾಯಂಕಾಲ 04-30 - 06-00
ಸೂರ್ಯೋದಯ: 06-11 ಸೂರ್ಯಾಸ್ತ: 06-58, ಮುಸ್ಲಿಂ ದಿನಾಂಕ: 13 ಜುಲ್‌ಹಿಜಾ,
ದಿನ ವಿಶೇಷ: ಮೇಳಾ ಜ್ವಾಲಾಮುಖಿ (ಕಾಶ್ಮೀರ),
ಅದೃಷ್ಟ ಸಂಖ್ಯೆ: 6, 11

ಮೇಷ: ಸಂಗತಿಗಳನ್ನು ಹಗುರವಾಗಿ ಪರಿಗಣಿಸುವ ಸ್ವಭಾವ ಬದಲಿಸಿಕೊಳ್ಳಬೇಕಾಗುವುದು. ಬಂಧುಗಳ ಸಹಾಯದಿಂದ ಪುತ್ರನಿಗೆ ಕಾರ್ಯಾನುಕೂಲವಾಗುವುದು. ಹೈನುಗಾರಿಕೆಯವರಿಗೆ ವೃತ್ತಿಯಲ್ಲಿ ಆಸಕ್ತಿ ಮೂಡಲಿದೆ.

ವೃಷಭ: ಶನೈಶ್ಚರನ ಆರಾಧನೆಯಿಂದ ಜಟಿಲ ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು. ನಿಮ್ಮ ವ್ಯಾಪಾರ ವ್ಯವಹಾರದಲ್ಲಿ ಹಿಡಿತ ಸಾಧಿಸುವಿರಿ. ನೆರೆಯವರ ಸಹಾಯದಿಂದ ಮಗಳ ಮದುವೆ ನಿಶ್ಚಯವಾಗಲಿದೆ.

ಮಿಥುನ: ಟ್ರಾವೆಲ್ಸ್ ಉದ್ಯೋಗದವರಿಗೆ ಬಹಳಷ್ಟು ಲಾಭದಾಯಕವಾದ ಬೆಳವಣಿಗೆ ಇರುತ್ತದೆ. ನಿಮ್ಮ ಹಠಿತದ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗುವುದು. ಆರೋಗ್ಯದಲ್ಲಿ ಉದಾಸೀನತೆ ತೋರುವುದು ಸರಿಯಲ್ಲ.

ಕರ್ಕಾಟಕ: ಯಾವುದೇ ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಹಲವಾರು ರೀತಿಯ ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಹೊಸ ಒಪ್ಪಂದಗಳಿಂದ ಲಾಭ.

ಸಿಂಹ: ಈ ದಿನ ಸಮಾಜದಲ್ಲಿ ಅದರಲ್ಲೂ ವಿಶೇಷವಾಗಿ ಹೆಂಡತಿಯ ಬಳಗದಲ್ಲಿ ಆದಷ್ಟು ಮೌನವಾಗಿರಲು ನಿಶ್ಚಯಿಸಿ. ಮನೆಯಲ್ಲಿ ಶುಭ ಕಾರ್ಯಗಳಿಗೆ ಪ್ರಯತ್ನ ಮಾಡುವಿರಿ. ಹಿರಿಯರೊಂದಿಗೆ ವ್ಯಾಪಾರದ ವಿಚಾರದಲ್ಲಿ ಚರ್ಚೆ ನಡೆಯಲಿದೆ.

ಕನ್ಯಾ: ಬೇಕರಿ ಪದಾರ್ಥಗಳ ಮಾರಾಟದಿಂದ ಹೆಚ್ಚಿನ ಲಾಭ. ಇತರರಿಗೆ ಸಹಾಯ ಮಾಡುವ ವಿಚಾರದಲ್ಲಿ ಮುಂದಾಲೋಚನೆಯಿಲ್ಲದೆ ಮುಂದುವರಿಯುವುದನ್ನು ಬದಲು ಮಾಡಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿ.

ತುಲಾ: ಒಮ್ಮೊಮ್ಮೆ ನಿಮ್ಮನ್ನು ಕಾಡುವ ಸಮಸ್ಯಾಸರಪಳಿ ಹೆಚ್ಚಿನ ಶ್ರಮವಿಲ್ಲದೆ ಪರಿಹಾರವಾಗುವುದು. ಆಯ್ಕೆ ಮಾಡುವ ವಿಚಾರದಲ್ಲಿ ಮನಸ್ಸಿನ ಚಂಚಲ ಸ್ವಭಾವದಿಂದ ಇಂದಿನ ದಿನ ವಿಫಲರಾಗುವ ಸನ್ನಿವೇಶಗಳಿರುವುದು.

ವೃಶ್ಚಿಕ: ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದಲ್ಲಿರುವ ನಿಮಗೆ ಅನುಕೂಲಕರವಾದ ಸ್ಥಳ ದೊರಕುವುದು. ಶೀತ ಬಾಧೆಯಿಂದ ಮುಕ್ತರಾಗಲು ಗಿಡ ಮೂಲಿಕೆಯ ಕಷಾಯವನ್ನು ಸೇವಿಸಿ.

ಧನು: ಸಾಲದ ಹಣ ಹಿಂದುರಿಗಿ ಕೈಸೇರುವುದರಿಂದ ಮನೆ ರಿಪೇರಿ ಕೆಲಸಗಳಿಗೆ ಹಣ ಖರ್ಚು ಮಾಡುವಿರಿ. ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಮುಂದುವರಿಯಲಿದೆ. ಧಾರ್ಮಿಕ ಚಿಂತನೆ ಮುಂದುವರಿಸಿ.

ಮಕರ: ರಸಗೊಬ್ಬರ ಮತ್ತು ಕೀಟ ನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ. ಈ ದಿನದ ಸಂಜೆ ವಾಹನ ಚಾಲನೆಯಲ್ಲಿ ಜಾಗರೂಕರಾಗಿರಿ. ಹೋರಾಟದಿಂದ ಯಶಸ್ಸು ಲಭಿಸಲಿದೆ.

ಕುಂಭ: ಕೆಲಸ ಕಾರ್ಯದಲ್ಲಿ ಸಮಾನ ಮನಸ್ಕರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆ ನಡೆದು ಕಾರ್ಯಭಾರ ಸುಗಮವಾಗುತ್ತದೆ. ಅಪರೂಪದ ಸಮಾರಂಭಕ್ಕೆ ಆಹ್ವಾನ ಬರುವುದು. ನಿಮ್ಮ ಮಾನಸಿಕ ಸ್ಥೈರ್ಯ ದೃಢವಾಗಿರಲಿ.

ಮೀನ: ಯಂತ್ರೋಪಕರಣಗಳ ಮಾರಾಟದಿಂದ ಮತ್ತು ಪಶು ಸಂಗೋಪನೆಯಿಂದ ಹೆಚ್ಚಿನ ಲಾಭ. ಬದುಕಿನ ಕವಲುದಾರಿಯಲ್ಲಿರುವ ನಿಮಗೆ ಸರಿಯಾದ ಮಾರ್ಗದರ್ಶನ ದೊರೆಯಲಿದೆ. ಪ್ರವಾಸದಿಂದ ಪ್ರಯಾಸ ಆಗಲಿದೆ.

ಪದಬಂಧ 5367

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ನಡುವೆ ರಾಜಿ ಇದ್ದರೂ ಈತ ಸೋಲಿಸಲ್ಪಟ್ಟವನು (4)
5.ಮಲಗುವಿಕೆಗೊಂದು ಪರ್ಯಾಯ ಪದ (3)
6.ಕರದಲ್ಲಿರುವ ಚಿನ್ನ! (4)
8.ರತ್ನಗಳನ್ನು ಅಡಗಿಸಿಕೊಂಡಿರುವ ಸಮುದ್ರ (4)
12.ಇದಿನ್ನೂ ಎಳೆಯ ಮಗು (4)
14.ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
15.ಆಕಾಶದಲ್ಲಿ ಹಾಡುವ ಪಕ್ಷಿ (3)
16.ಮದಿಸಿದ ಆನೆ (4)

ಮೇಲಿಂದ ಕೆಳಕ್ಕೆ
1.ಮೃಗದ ನಡುವಳಿಕೆಯಿದು (5)
2.ವರ ಪಡೆದಿರುವ ಬೇಡ (4)
3.ಕರ ಕೊನೆಗಿದ್ದಾಗಿನ ಸಾಮಾನು (4)
4.ತವರಲ್ಲಿರುವ ಲೋಹ (3)
7.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಪದರ (2)
9.ಇನ್ನೂ ಕರು ಹಾಕದ ಹಸು (3)
10.ಲಾಂಗೂಲ ಹಿಡಿದು ಬಂದಿರುವ ಅನುಯಾಯಿ (5)
11.ಕಮರಿಯಲ್ಲಿರುವ ಆನೆ (2)
12.ಸುಮಾರು ಮೂರು ಮೈಲುಗಳ ಒಂದು ಅಳತೆ (4)
13.ಇದು ಹೂವಿನ ಶರ (4)
14.ಈತ ಬಲು ದುಷ್ಟ! (3)



5366ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುವಾದ 3.ಕರಣಿಕ
5.ಆನೆ 6.ನವನೀತ
8.ಭವ್ಯ 9.ರಚ್ಚು
10.ಯಜಮಾನ 12.ನಾರಿ
15.ಬಹಿರಂಗ 16.ಮಕರಂದ

ಮೇಲಿಂದ ಕೆಳಕ್ಕೆ:
1.ಅಣು 2.ವಾಸನೆ
3.ಕಲರವ 4.ಕತ್ತೆ
5.ಆಯವ್ಯಯ 6.ನಯನ
7.ತರಕಾರಿ 11.ಮಾವಟಿಗ
12.ನಾವಿಕ 13.ಜಂಬ
14.ಮುದ

ಸುಡೊಕು 5753

		1		8	3		7	5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				
1		8	5			3		4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5752 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿಯಲ್ಲಿ ಬಗೆಹರಿಯದ ಗೊಂದಲ • ವರಿಷ್ಠರ ಬುಲಾವ್ • ಯಡಿಯೂರಪ್ಪ ಇಂದು ದೆಹಲಿಗೆ

ವಿರೋಧ ಪಕ್ಷ ನಾಯಕ ಯಾರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: 16ನೇ ವಿಧಾನಸಭೆಯ ಮೊದಲ ಜಂಟಿ ಅಧಿವೇಶನದ ಆರಂಭಕ್ಕೆ ಒಂದೇ ದಿನ ಬಾಕಿ ಇದ್ದರೂ, ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕು ಎಂಬ ಗೊಂದಲ ಬಿಜೆಪಿಯಲ್ಲಿ ಬಗೆಹರಿದಿಲ್ಲ.

ಭಾನುವಾರ (ಜು.2) ಮಧ್ಯಾಹ್ನದ ಬಳಿಕ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಅಲ್ಲಿ ಬಸವರಾಜ ಬೊಮ್ಮಾಯಿ ಅವರನ್ನು ನಾಯಕರಾಗಿ ಆಯ್ಕೆ ಮಾಡುವ ಸಂಭವ ಇದೆ ಎಂದು ಪಕ್ಷದ ಮೂಲಗಳು ಹೇಳಿದ್ದವು.

'ಶಾಸಕಾಂಗ ಪಕ್ಷದ ನಾಯಕ ಹಾಗೂ ವಿರೋಧ ಪಕ್ಷದ ನಾಯಕ ಯಾರಾಗಬೇಕು ಎಂಬ ಬಗ್ಗೆ ಇನ್ನೂ ಸ್ಪಷ್ಟತೆ ಬಂದಿಲ್ಲ. ಹಾಗಾಗಿ, ಭಾನುವಾರ ಸಭೆ ನಡೆಯುವುದು ಅನುಮಾನ. ಸೋಮವಾರ ಬೆಳಿಗ್ಗೆ ಕಲಾಪ ಆರಂಭವಾಗುವುದಕ್ಕೆ ಮುನ್ನ, ನಾಯಕನ ಆಯ್ಕೆಗೆ ವರಿಷ್ಠರು ಸೂಚನೆ ನೀಡುವ ಸಾಧ್ಯತೆ ಇದೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದರು.

ಶನಿವಾರ ಸಂಜೆ ನಡೆದ ದಿಢೀರ್ ಬೆಳವಣಿಗೆಯಲ್ಲಿ ಪಕ್ಷದ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ದೆಹಲಿಗೆ ಬರುವಂತೆ ವರಿಷ್ಠರು ಸಂದೇಶ ಕಳುಹಿಸಿದ್ದಾರೆ. ಭಾನುವಾರ ಮಧ್ಯಾಹ್ನ 2ಗಂಟೆಗೆ ಅವರು ದೆಹಲಿ ತಲುಪಲಿದ್ದಾರೆ. ಅವರ ಜತೆ ಸಮಾಲೋಚನೆ ನಡೆಸಿದ ಬಳಿಕ, ನಾಯಕನ ಆಯ್ಕೆಯ ಸೂತ್ರ ಹೊರಬೀಳಲಿದೆ. ಅದಾದ ಬಳಿಕ, ಯಡಿಯೂರಪ್ಪ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಬೆಂಗಳೂರಿಗೆ ಬರಲಿದ್ದಾರೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ನಾಯಕನ ಆಯ್ಕೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

ಕೇಂದ್ರ ಸಚಿವ ಸಂಪುಟ ಸದ್ಯವೇ ಪುನಾರಚನೆಯಾಗಲಿದೆ. ರಾಜ್ಯದಿಂದ ಯಾರನ್ನು ಕೈಬಿಟ್ಟು, ಮತ್ತೆ ಯಾರನ್ನು ಸೇರ್ಪಡೆ ಮಾಡಬೇಕು ಎಂಬ ವಿಷಯದ ಕುರಿತು ವರಿಷ್ಠರು ಯಡಿಯೂರಪ್ಪನವರ ಜತೆ ಚರ್ಚೆ ನಡೆಸಲಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಬಸನಗೌಡ ಪಾಟೀಲ ಯತ್ನಾಳ ತೀವ್ರ ಯತ್ನ ನಡೆಸಿದ್ದಾರೆ. ತಮ್ಮ ವಿರುದ್ಧ ನಿರಂತರ ವಾಗ್ದಾಳಿ ನಡೆಸಿಕೊಂಡು ಬಂದು, ಸರ್ಕಾರದ ವರ್ಚಸ್ಸು ಕೆಡಲು ಯತ್ನಾಳ ಕಾರಣ ಎಂದು ವಾದಿಸುತ್ತಿರುವ ಯಡಿಯೂರಪ್ಪ, ಯತ್ನಾಳ ಆಯ್ಕೆಗೆ ಸುತರಾಂ ಒಪ್ಪುವುದಿಲ್ಲ. ಹೀಗಾಗಿ, ಬಸವರಾಜ ಬೊಮ್ಮಾಯಿ ಆಯ್ಕೆ ಸಾಧ್ಯತೆ ಹೆಚ್ಚು ಎಂದು ಮೂಲಗಳು ತಿಳಿಸಿವೆ.

'ವಿಪಕ್ಷದ ನಾಯಕ ಬೇಕಾಗಿದ್ದಾರೆ'– ಕಾಂಗ್ರೆಸ್ ಲೇವಡಿ

'ತುರ್ತಾಗಿ ವಿರೋಧ ಪಕ್ಷದ ನಾಯಕರೊಬ್ಬರು ಬೇಕಾಗಿದ್ದಾರೆ' ಎಂದು ಟ್ವೀಟ್ ಮೂಲಕ ಜಾಹೀರಾತು ರೂಪದ ಪೋಸ್ಟರ್ ಹಂಚಿಕೊಂಡಿರುವ ಕಾಂಗ್ರೆಸ್ ಬಿಜೆಪಿಯನ್ನು ಲೇವಡಿ ಮಾಡಿದೆ.

'ಖಾಲಿ ಇರುವ ಕರ್ನಾಟಕದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಹುದ್ದೆಗೆ ಸೂಕ್ತ ವ್ಯಕ್ತಿ ಬೇಕಾಗಿದ್ದಾರೆ' ಎಂದೂ ಆ ಪೋಸ್ಟರ್‌ನಲ್ಲಿದೆ.

'ಸಂವಿಧಾನವನ್ನು ತಿಳಿದವರು, ಪ್ರಜಾಪ್ರಭುತ್ವವನ್ನು ಅರಿತವರು ವಿಪಕ್ಷ ನಾಯಕರೊಬ್ಬರು ಬೇಕಾಗಿದ್ದಾರೆ. ಸಿ.ಡಿಗೆ ತಡೆಯಾಜ್ಞೆ ತರದವರು, ಭ್ರಷ್ಟಾಚಾರಿಯಲ್ಲದ ವಿಪಕ್ಷ ನಾಯಕ ಬೇಕಾಗಿದ್ದಾರೆ' ಎಂದು ಕಾಂಗ್ರೆಸ್ ಪಟ್ಟಿ ಮಾಡಿದೆ.

'ಆರ್‌ಎಸ್‌ಎಸ್ ಕೈಗೊಂಬೆಯಾಗದವರು, ಕೋಮುವಾದಿ ಅಲ್ಲದವರು ವಿಪಕ್ಷ ನಾಯಕ ಬೇಕಾಗಿದ್ದಾರೆ. ವಾಟ್ಸ್ ಆ್ಯಪ್ ಯೂನಿವರ್ಸಿಟಿಯಲ್ಲಿ ಪದವಿ ಪಡೆದಿರಬಾರದು, ಸುಳ್ಳು ಹೇಳಬಾರದು. ಘನತೆಯ ವ್ಯಕ್ತಿತ್ವದವರು, ತೂಕದ ಮಾತಿರುವ ವಿಪಕ್ಷ ನಾಯಕ ಬೇಕಾಗಿದ್ದಾರೆ. ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ವಿಪಕ್ಷ ನಾಯಕರೊಬ್ಬರು ಬೇಕಾಗಿದ್ದಾರೆ!' ಎಂದೂ ಟ್ವೀಟ್‌ನಲ್ಲಿದೆ.

ಮತ್ತೊಂದು ಟ್ವೀಟ್‌ನಲ್ಲಿ, 'ಚುನಾವಣೆ ಮುಗಿದು 50ಕ್ಕೂ ಹೆಚ್ಚು ದಿನ ಕಳೆಯಿತು. ನಮ್ಮ ಸರ್ಕಾರ ರಚನೆ ಆಗಿ ತಿಂಗಳು ಕಳೆಯಿತು. ಮಂತ್ರಿಮಂಡಲವೂ ರಚನೆಯಾಯ್ತು. ಸರ್ಕಾರ ಕೆಲಸ ಶುರು ಮಾಡಿಯಾಯ್ತು. ಹಲವು ಕ್ಯಾಬಿನೆಟ್ ಸಭೆಗಳಾದವು, ಹಲವು ತೀರ್ಮಾನಗಳಾದವು. ಮೂರು ಗ್ಯಾರಂಟಿಗಳೂ ಜಾರಿಯಾದವು. ಇಷ್ಟೆಲ್ಲಾ ಆದರೂ ಬಿಜೆಪಿಗೆ ಒಬ್ಬ ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲಾಗಿಲ್ಲ' ಎಂದು ಕಾಂಗ್ರೆಸ್ ಟೀಕಿಸಿದೆ.

'ಆಡಳಿತ ಮಾಡಲು ಬಿಜೆಪಿ ಸಮರ್ಥವಲ್ಲ ಎಂದು ಈಗಾಗಲೇ ಜನರು ಸರ್ಟಿಫಿಕೇಟ್ ಕೊಟ್ಟಾಗಿದೆ. ಈಗ ವಿರೋಧ ಪಕ್ಷವಾಗಿರಲೂ ಸಹ ಅಸಮರ್ಥರು ಎಂದು ತಿಳಿಯುತ್ತಿದೆ. ಪ್ರಜಾಪ್ರಭುತ್ವದ ಸೌಂದರ್ಯಕ್ಕಾಗಿ ಸಮರ್ಥ ವಿಪಕ್ಷ ನಾಯಕನನ್ನು ಎದುರು ನೋಡುತ್ತಿದ್ದೇವೆ. ನಮ್ಮ ಆಸೆ ಈಡೇರುತ್ತದೆಯೋ, ಇಲ್ಲವೋ ಗೊತ್ತಿಲ್ಲ' ಎಂದು ವ್ಯಂಗ್ಯವಾಡಿದೆ.

ಜನ್ಮದಿನ ಸಂಭ್ರಮ

ಧರ್ಮಸ್ಥಳದಲ್ಲಿ 'ಶಿವಾನಿ' ಆನೆ ಮರಿಯ ತೃತೀಯ ಜನ್ಮದಿನವನ್ನು ಶನಿವಾರ ಆಚರಿಸಲಾಯಿತು. ಶಿವಾನಿಗೆ ಕಬ್ಬು, ಹಣ್ಣು ಹಾಗೂ ತರಕಾರಿಗಳ ಫಲಾಹಾರ ನೀಡಿ ಶುಭ ಹಾರೈಸಲಾಯಿತು. ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ವೀ. ಹೆಗ್ಗಡೆ, ಡಿ. ಹರ್ಷೇಂದ್ರ ಕುಮಾರ್ ಹಾಗೂ ಸಚಿವ ಡಿ. ಸುಧಾಕರ್ ಪಾಲ್ಗೊಂಡಿದ್ದರು

ಐಎಫ್‌ಎಸ್: ರಾಜ್ಯದ 10 ಮಂದಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಅರಣ್ಯ ಸೇವೆ ಪರೀಕ್ಷೆಯ 2022ನೇ ಸಾಲಿನ ಫಲಿತಾಂಶ ಶನಿವಾರ ಪ್ರಕಟವಾಗಿದ್ದು, ಕರ್ನಾಟಕದ 10 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಕೇಂದ್ರ ಲೋಕಸೇವಾ ಆಯೋಗ ಕಳೆದ ನವೆಂಬರ್‌ನಲ್ಲಿ 150 ಹುದ್ದೆಗಳಿಗೆ ಮುಖ್ಯ ಪರೀಕ್ಷೆ ನಡೆಸಿತ್ತು. ಜೂನ್‌ನಲ್ಲಿ ಸಂದರ್ಶನಗಳು ಪೂರ್ಣಗೊಂಡಿದ್ದವು.

ದೇಶದ ವಿವಿಧ ರಾಜ್ಯಗಳ 147 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಸಾಮಾನ್ಯ ವರ್ಗದ 39, ಆರ್ಥಿಕ ದುರ್ಬಲವರ್ಗದ 21, ಹಿಂದುಳಿದ ವರ್ಗಗಳ 54, ಪರಿಶಿಷ್ಟ ಜಾತಿಯ 22 ಹಾಗೂ ಪರಿಶಿಷ್ಟ ಪಂಗಡದ 11 ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ.

ರಾಜ್ಯದ ವೀರಜ್ ಹೊಸೂರು 9ನೇ ರ್‍ಯಾಂಕ್, ಶಿಡ್ಲಘಟ್ಟದ ಟಿ.ಎಂ.ಆಕರ್ಷ್ 20ನೇ ರ್‍ಯಾಂಕ್, ಸುಚೇತ್ ಬಾಳ್ಕಲ್ 30ನೇ ರ್‍ಯಾಂಕ್, ಎಂ. ಪೂಜಾ 45ನೇ ರ್‍ಯಾಂಕ್ ಪಡೆದಿದ್ದಾರೆ.

'ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ಅಪ್ಪ ರಾಮಕೃಷ್ಣಭಟ್, ಅಮ್ಮ ಶ್ರೀಮತಿ ಅವರು ಚೇತನಾ ಮುದ್ರಣಾಲಯ ಇಟ್ಟುಕೊಂಡಿದ್ದಾರೆ. ಬೆಂಗಳೂರಿನ ಆರ್.ವಿ.ಕಾಲೇಜಿನಲ್ಲಿ ಎಂಜಿನಿಯರಿಂಗ್ ಮುಗಿಸಿದ ನಂತರ ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಂಡಿದ್ದೆ. ಮೂರನೇ ಪ್ರಯತ್ನದಲ್ಲಿ ಯಶಸ್ಸು ಸಿಕ್ಕಿದೆ. ದೇಶದ ಅರಣ್ಯ ಸಂಪತ್ತು, ವನ್ಯಜೀವಿ ಸಂರಕ್ಷಣೆಯ ಹೊಣೆ ನಿಭಾಯಿಸುವ ಅವಕಾಶ ದೊರೆತಿರುವುದು ಸಂತಸ ತಂದಿದೆ' ಎಂದು ಸುಚೇತ್ ಹೇಳಿದರು.

'ಆತ್ಮವಿಶ್ವಾಸ ಹೆಚ್ಚಿಸಿದ ತಯಾರಿ'

ಆಕರ್ಷ್

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): 'ಮುಖ್ಯ ಪರೀಕ್ಷೆಯನ್ನೂ ಚೆನ್ನಾಗಿ ಮಾಡಿದ್ದೆ. ಸಂದರ್ಶನದಲ್ಲೂ ಉತ್ತಮವಾಗಿ ಉತ್ತರಿಸಿದ್ದೆ. ನಿರೀಕ್ಷಿತ ಫಲಿತಾಂಶ ಬಂದಿದೆ. ಈ ಪರೀಕ್ಷೆ ಶಿಸ್ತು ಮತ್ತು ಶ್ರಮ ಬೇಡುತ್ತದೆ. ಉತ್ತಮ ತಯಾರಿ ಸಹಜವಾಗಿ ಆತ್ಮವಿಶ್ವಾಸ ಮೂಡಿಸುತ್ತದೆ. ಅದುವೇ ನನ್ನ ಧೈರ್ಯವಾಗಿತ್ತು' ಎಂದು ಟಿ.ಎಂ.ಆಕರ್ಷ್ ತಿಳಿಸಿದರು.

ತಲದುಮ್ಮನಹಳ್ಳಿ ಮತ್ತು ಶಿಡ್ಲಘಟ್ಟದಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಪಡೆದ ಆಕರ್ಷ್, ಬೆಂಗಳೂರಿನ ಜಿಕೆವಿಕೆಯಿಂದ ಬಿ.ಎಸ್‌ಸಿ (ಕೃಷಿ) ಪದವಿ ಪಡೆದಿದ್ದಾರೆ. ಒಂದು ವರ್ಷ ಎಂ.ಎಸ್ಸಿ (ಕೃಷಿ) ನಂತರ ನವದೆಹಲಿಯಲ್ಲಿ ತರಬೇತಿ ಪಡೆದಿದ್ದಾರೆ. ಅವರ ತಂದೆ ಟಿ.ಡಿ.ಮುನೇಗೌಡ ಮತ್ತು ಆರ್.ಸೌಭಾಗ್ಯ ಕೃಷಿಕರಾಗಿದ್ದು, ತಲದುಮ್ಮನಹಳ್ಳಿಯಲ್ಲಿ ವಾಸವಾಗಿದ್ದಾರೆ.

'ನಿತ್ಯ 7–8 ತಾಸು ಓದು'

ಎಂ.ಪೂಜಾ

ಮೈಸೂರು: 'ದಿನಕ್ಕೆ ಕನಿಷ್ಠ 7–8 ಗಂಟೆ ಓದಿಗಾಗಿ ಮೀಸಲಿಟ್ಟಿದ್ದೆ. ಇಂತಿಷ್ಟೇ ಸಮಯ ಓದಬೇಕು ಎನ್ನುವುದಕ್ಕಿಂತ ಇಷ್ಟು ಪಠ್ಯ ಓದಿ ಮುಗಿಸಲೇಬೇಕು ಎನ್ನುವ ಗುರಿ ಇಟ್ಟುಕೊಳ್ಳುತ್ತಿದ್ದೆ. ಆತ್ಮವಿಶ್ವಾಸದಿಂದ ಓದಿದ್ದರಿಂದ ಈ ಸಾಧನೆ ಸಾಧ್ಯವಾಯಿತು' ಎಂದು ಪೂಜಾ ಹೇಳಿದರು.

'ಯುಪಿಎಸ್‌ಸಿಯಲ್ಲಿ ಸಿಕ್ಕಿರುವ ರ್‍ಯಾಂಕ್ ಆಧರಿಸಿ ನನಗೆ ಐಪಿಎಸ್ ಸಿಗುವ ಸಾಧ್ಯತೆ ಇದೆ. ಇದರೊಟ್ಟಿಗೆ ಐಎಫ್‌ಎಸ್ ಅವಕಾಶವೂ ಇದೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಇನ್ನೂ ನಿರ್ಧರಿಸಿಲ್ಲ' ಎಂದು ತಿಳಿಸಿದರು. ಪೂಜಾ ಅವರು 2022ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ 390ನೇ ರ್‍ಯಾಂಕ್ ಪಡೆದಿದ್ದರು. ಯಾವುದೇ ತರಬೇತಿ ಪಡೆಯದೇ ಸಾಧನೆ ತೋರಿರುವುದು ಅವರ ವಿಶೇಷ. ಇಲ್ಲಿನ ಮುಕುಂದರಾವ್ ಬೇದ್ರೆ ಹಾಗೂ ಎಂ. ಪದ್ಮಾವತಿ ದಂಪತಿ ಪುತ್ರಿ ಪೂಜಾ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ.

'ನೋಟಿಸ್‌ನಿಂದ ಬಾಯಿ ಮುಚ್ಚಲ್ಲ'

ಪ್ರಜಾವಾಣಿ ವಾರ್ತೆ

ರೇಣುಕಾಚಾರ್ಯ

ಬೆಂಗಳೂರು: 'ಪಕ್ಷದ ನೋಟಿಸ್‌ಗೆ ಹೆದರಿ ಬಾಯಿ ಮುಚ್ಚಿಕೊಳ್ಳುತ್ತೇನೆ ಎಂದು ಭಾವಿಸಿದ್ದರೆ ಅದು ಅವರ ಭ್ರಮೆ. ನಾನು ಯಾರಿಗೂ ಹೆದರುವುದಿಲ್ಲ' ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಶನಿವಾರ ಭೇಟಿ ಮಾಡಿ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ. ಪಕ್ಷದಲ್ಲಿನ ಬೆಳವಣಿಗೆಗಳ ಕುರಿತು ಮಾತ್ರ ಚರ್ಚಿಸಿದ್ದೇನೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆ ಆಗಬಾರದು ಎಂಬ ಉದ್ದೇಶದಿಂದ ಮಾತನಾಡಿದ್ದೆ' ಎಂದರು.

'ನೋಟಿಸ್ ಕೊಟ್ಟ ಬಳಿಕವೇ ಪಕ್ಷದಲ್ಲಿ ಶಿಸ್ತು ಸಮಿತಿ ಇರುವುದು ನನಗೆ ಗೊತ್ತಾಯಿತು. ನನ್ನದು ಪಕ್ಷ ವಿರೋಧಿ ಚಟುವಟಿಕೆ ಆದರೆ ಇದೇ ರೀತಿ ಉಳಿದವರು ಮಾತನಾಡಿರುವುದು ಏನು? 11 ಮಂದಿಗೆ ನೋಟಿಸ್ ಜಾರಿ ಮಾಡಿರುವುದಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳುತ್ತಾರೆ. ಆದರೆ, ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಅವರು ನನಗೊಬ್ಬನಿಗೇ ನೋಟಿಸ್ ಕೊಡಲಾಗಿದೆ ಎಂದು ಹೇಳುತ್ತಾರೆ. ಇದರ ಹಿಂದಿನ ಮರ್ಮ ಏನು' ಎಂದು ಪ್ರಶ್ನಿಸಿದರು.

'ಯಡಿಯೂರಪ್ಪ ಅವರ ಪರವಾಗಿ ಮಾತನಾಡುತ್ತೇನೆ ಎಂಬ ಕಾರಣಕ್ಕಾಗಿ ನನಗೆ ನೋಟಿಸ್ ನೀಡಲಾಗಿದೆ. ಇನ್ನು ಮಾಧ್ಯಮಗಳಿಗೆ ಬಹಿರಂಗ ಹೇಳಿಕೆ ನೀಡದಂತೆ ಯಡಿಯೂರಪ್ಪ ಸೂಚಿಸಿದ್ದಾರೆ. ಅವರ ಸೂಚನೆಯನ್ನು ಪಾಲಿಸುತ್ತೇನೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶೀಘ್ರದಲ್ಲಿ ಭೇಟಿಮಾಡಿ ಬಿಜೆಪಿ ರಾಜ್ಯ ಘಟಕದಲ್ಲಿನ ಬೆಳವಣಿಗೆಗಳ ಕುರಿತು ತಿಳಿಸುತ್ತೇನೆ. ನಾನು ಸುಮ್ಮನೆ ಕೂರುವುದಿಲ್ಲ' ಎಂದು ರೇಣುಕಾಚಾರ್ಯ ಹೇಳಿದರು.

ಸಿದ್ಧರಾಮಯ್ಯ ಸೇರಿ ಮೂವರಿಗೆ ಹಳಕಟ್ಟಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಸಿದ್ಧರಾಮಯ್ಯ

ಸುಶೀಲಮ್ಮ

ನಿರಂಜನಾರಾಧ್ಯ

ಬೆಂಗಳೂರು: ಡಾ. ಫ.ಗು. ಹಳಕಟ್ಟಿ ಫೌಂಡೇಷನ್ ನೀಡುವ 'ವಚನ ಪಿತಾಮಹ ಫ.ಗು. ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ'ಗೆ ಸಾಹಿತ್ಯ ಕ್ಷೇತ್ರದಿಂದ ಎಸ್. ಜಿ. ಸಿದ್ಧರಾಮಯ್ಯ, ಶಿಕ್ಷಣ ಕ್ಷೇತ್ರದಿಂದ ವಿ.ಪಿ. ನಿರಂಜನಾರಾಧ್ಯ ಮತ್ತು ಸಮಾಜ ಸೇವೆ ಕ್ಷೇತ್ರದಿಂದ ಎಸ್.ಜಿ. ಸುಶೀಲಮ್ಮ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹1 ಲಕ್ಷ ನಗದು ಒಳಗೊಂಡಿದೆ. ಜುಲೈ 2ರಂದು ಬೆಂಗಳೂರಿನ ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಹು ಮಾಧ್ಯಮ ಪ್ರಜಾವಾಣಿ 75 www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು ಅತಿಥಿಗಳು

ಜಾಹ್ನವಿ, ಕಿರುತೆರೆ ನಟಿ

'ಬ್ಯಾಡ್ ಕಮೆಂಟ್ ಡಿಲೀಟ್ ಮಾಡಲ್ಲ'

ಜು. 2, ಭಾನುವಾರ ಬೆಳಿಗ್ಗೆ 11 ಗಂಟೆಗೆ

ಸೆಲೆಬ್ರಿಟಿ PREMIER

ಯುಟ್ಯೂಬ್‌ನಲ್ಲಿ: ನ್ಯೂಸ್ ಎಕ್ಸ್‌ಪ್ರೆಸ್: ರಾತ್ರಿ 8ಕ್ಕೆ

ಪಾಡ್‌ಕಾಸ್ಟ್ ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

Prajavani.net Prajavani Prajavani

ಬಗೆದಷ್ಟೂ ವಿಸ್ತಾರ ಅಜಿತ್ ಸಾಮ್ರಾಜ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ **ಅಜಿತ್** ಕೆ.ಆರ್.ಪುರ ತಾಲ್ಲೂಕಿನ ಹಿಂದಿನ ತಹಶೀಲ್ದಾರ್ ಅಜಿತ್ ಕುಮಾರ್ ರೈ ಅವರ ಆರ್ಥಿಕ ವಹಿವಾಟಿನ ಕುರಿತು ಲೋಕಾಯುಕ್ತ ಪೊಲೀಸರಿಗೆ ಮಾಹಿತಿಗಳ ಮಹಾಪೂರವೇ ಹರಿದು ಬರುತ್ತಿದೆ. ತನಿಖೆಯ ಆಳ-ಅಗಲ ಹಿಗ್ಗುತ್ತಲೇ ಇದೆ.

ತನಿಖಾ ತಂಡದ ವಶದಲ್ಲಿರುವ ಅಜಿತ್ ರೈ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಇಡೀ ದಿನ ವಿಚಾರಣೆ ನಡೆಸಿದ್ದಾರೆ. ಅವರ ಅಣ್ಣ ಆಶಿತ್ ರೈ, ಬೇನಾಮಿ ಹರ್ಷವರ್ಧನ ಅವರನ್ನೂ ದಿನವಿಡೀ ಪ್ರಶ್ನಿಸಲಾಗಿದೆ. ಮೂವರಿಂದಲೂ ಮತ್ತಷ್ಟು ಮಾಹಿತಿಗಳನ್ನು ಹೊರ ತೆಗೆಯಲಾಗಿದೆ ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಆರೋಪಿ ಅಧಿಕಾರಿಯು ಪತ್ನಿಯ ಹೆಸರಿನಲ್ಲಿ ಮಂಗಳೂರಿನಲ್ಲಿ ಹೂಡಿಕೆ ಮಾಡಿರುವ ಕುರಿತು ತನಿಖಾ ತಂಡಕ್ಕೆ ಮಾಹಿತಿ ಲಭಿಸಿದೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಬೆಂಗಳೂರಿನ ಕೆಲವು ಕಂಪನಿಗಳಲ್ಲಿ ಅಜಿತ್ ರೈ ಬೇನಾಮಿಯಾಗಿ ಹೂಡಿಕೆ ಮಾಡಿರುವ ಸುಳಿವು ಲಭಿಸಿದ್ದು, ಈ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಬಸವೇಶ್ವರ ನಗರ ನಿವಾಸಿ ಗೌರವ್ ಶೆಟ್ಟಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಕೃಷ್ಣಪ್ಪ ಹೆಸರಿನಲ್ಲಿ ಹೆಚ್ಚಿನ ಬೇನಾಮಿ ಆಸ್ತಿಗಳಿರುವುದು ತನಿಖೆ ವೇಳೆ ಕಂಡುಬಂದಿದೆ.

ಈ ದಾಖಲೆಗಳನ್ನು ಪ್ರತ್ಯೇಕಿಸುತ್ತಿರುವ ತನಿಖಾ ತಂಡ, ಅವರನ್ನೂ ವಿಚಾರಣೆಗೆ ಕರೆಸಲು ಸಿದ್ಧತೆ ಮಾಡಿಕೊಳ್ಳುತ್ತಿದೆ.

ದೂರುಗಳ ಮಹಾಪೂರ: 'ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ಕೆ.ಆರ್. ಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅಜಿತ್ ರೈ ಅವರಿಂದ ತೊಂದರೆಗೊಳಗಾದ ಹಲವರು ಲೋಕಾಯುಕ್ತ ಕಚೇರಿಗೆ ಬಂದು ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. ಕೆಲವರು ಲಿಖಿತ ದೂರುಗಳನ್ನೂ ಸಲ್ಲಿಸಿದ್ದಾರೆ. ಎಲ್ಲವನ್ನೂ ತನಿಖೆಯ ವ್ಯಾಪ್ತಿಗೆ ತರಲಾಗುವುದು' ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ದೇವನಹಳ್ಳಿ ವಿಮಾನ ನಿಲ್ದಾಣದ ಸಮೀಪದಲ್ಲಿ ಫಾರ್ಮುಲಾ–1 ರೇಸಿಂಗ್ ಟ್ರ್ಯಾಕ್ ನಿರ್ಮಾಣಕ್ಕೆ ಯೋಜನೆ ರೂಪಿಸುತ್ತಿದ್ದ ಕುರಿತು ಆರೋಪಿಯು ತನಿಖಾ ತಂಡದ ಎದುರು ಒಪ್ಪಿಕೊಂಡಿದ್ದಾರೆ. ಈ ಯೋಜನೆಯ ಹಿಂದೆ ಇರುವ ವ್ಯಕ್ತಿಗಳು, ಹೂಡಿಕೆ ಯೋಜನೆ, ಈವರೆಗೆ ನಡೆದಿರುವ ಪ್ರಯತ್ನದ ಬಗ್ಗೆಯೂ ತನಿಖಾ ತಂಡ ಮಾಹಿತಿ ಕಲೆಹಾಕುತ್ತಿದೆ.

ಸೇವೆಯಿಂದ ಅಮಾನತು

ಅಜಿತ್ ಕುಮಾರ್ ರೈ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಕಂದಾಯ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಅಜಿತ್ ರೈ ಹಾಗೂ ಅವರ ಬೇನಾಮಿಗಳೆಂದು ಶಂಕಿಸಲಾಗಿರುವ ವ್ಯಕ್ತಿಗಳ ಮನೆಗಳ ಮೇಲೆ ಲೋಕಾಯುಕ್ತ ಪೊಲೀಸರು ಬುಧವಾರ ದಾಳಿ ನಡೆಸಿದ್ದರು. ಶುಕ್ರವಾರ ಅವರನ್ನು ಬಂಧಿಸಲಾಗಿತ್ತು. ಸೇವೆಯಿಂದ ಅಮಾನತು ಮಾಡುವಂತೆ ಶುಕ್ರವಾರವೇ ಲೋಕಾಯುಕ್ತದ ಪೊಲೀಸ್ ಮಹಾನಿರ್ದೇಶಕರು ಶಿಫಾರಸು ಮಾಡಿದ್ದರು. ಅದೇ ದಿನ ಅಮಾನತು ಆದೇಶವನ್ನೂ ಹೊರಡಿಸಲಾಗಿದೆ.

ಪಶುವೈದ್ಯಕೀಯ ವಿವಿ: ಬ್ಯಾಕ್‌ಲಾಗ್ ಪಟ್ಟಿ ತಡೆಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದರ್‌ನ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಪಟ್ಟಿ ತಡೆಹಿಡಿಯುವಂತೆ ಸಮಾಜ ಕಲ್ಯಾಣ ಇಲಾಖೆ ಕುಲಸಚಿವರಿಗೆ ಪತ್ರ ಬರೆದಿದೆ.

ವಿಶ್ವವಿದ್ಯಾಲಯದಲ್ಲಿ ಖಾಲಿ ಇದ್ದ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ ಸೇರಿದಂತೆ ಬೋಧಕ ವೃಂದದ 22 ಬ್ಯಾಕ್‌ಲಾಗ್ ಹುದ್ದೆಗಳಿಗೆ ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು. ಕರ್ನಾಟಕ ಪರಿಶಿಷ್ಟ ಜಾತಿ, ಪಂಗಡಗಳ ಬ್ಯಾಕ್‌ಲಾಗ್ ಅಧಿನಿಯಮವನ್ನು ಪಾಲಿಸದೇ ಆಯ್ಕೆ ಮಾಡಿಲಾಗಿದೆ. ಪಟ್ಟಿಯನ್ನು ರದ್ದು ಮಾಡಿ ಹೊಸದಾಗಿ ಆಯ್ಕೆ ಮಾಡಬೇಕು ಎಂದು ಭಾರತೀಯ ರಿಪಬ್ಲಿಕ್ ಪಕ್ಷದ ಅಧ್ಯಕ್ಷ ವೆಂಕಟಸ್ವಾಮಿ, ರಾಜ್ಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ರಕ್ಷಣಾ ಒಕ್ಕೂಟದ ಎಚ್.ಇಂದ್ರಯ್ಯ ಮುಖ್ಯಮಂತ್ರಿಗೆ ಮನವಿ ಸಲ್ಲಿದ್ದರು.

ದಾಖಲೆ ಪರಿಶೀಲಿಸಿರುವ ಸಮಾಜ ಕಲ್ಯಾಣ ಇಲಾಖೆ ಆಯ್ಕೆ ಪ್ರಕ್ರಿಯೆಯಲ್ಲಿನ ಲೋಪಗಳನ್ನು ಪಟ್ಟಿ ಮಾಡಿದ್ದು, ನ್ಯೂನತೆಗಳನ್ನು ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಂಡು ಅಂತಿಮ ಆಯ್ಕೆಪಟ್ಟಿ ಪ್ರಕಟಿಸುವಂತೆ ಸೂಚಿಸಿದೆ.

ಪಾರ್ಶ್ವನಾಥ, ಪ್ರೇಮಾಗೆ ಕಸಾಪ ದತ್ತಿ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2023ನೇ ಸಾಲಿನ 'ಅಭಯಲಕ್ಷ್ಮಿ ದತ್ತಿನಿಧಿ ಪ್ರಶಸ್ತಿಗೆ'ಗೆ ರಂಗಭೂಮಿ ಕ್ಷೇತ್ರದಿಂದ ಎಚ್.ಎ. ಪಾರ್ಶ್ವನಾಥ, ಸಾಹಿತ್ಯ ಕ್ಷೇತ್ರದಿಂದ ಪ್ರೇಮಾ ಭಟ್ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ. ರಂಗಭೂಮಿ ಹಾಗೂ ಸಾಹಿತ್ಯ ಕ್ಷೇತ್ರದ ಮೂಲಕ ಕನ್ನಡ ನಾಡು–ನುಡಿ ಸೇವೆಯಲ್ಲಿ ನಿರತರಾದ ಇಬ್ಬರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಪಾರ್ಶ್ವನಾಥ

ಪ್ರೇಮಾ ಭಟ್

ಆರತಿ ಮುಟ್ಟಿದ ಪರಿಶಿಷ್ಟ ಶಿಕ್ಷಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ರಾಮನಗರ/ಕುದೂರು: ಮಾಗಡಿ ತಾಲ್ಲೂಕಿನ ಹೇಮಾಪುರ ಗ್ರಾಮದೇವತೆ ಉತ್ಸವದಲ್ಲಿ ದೇವರಿಗಾಗಿ ತರುತ್ತಿದ್ದ ಆರತಿ ಮುಟ್ಟಿದ್ದಕ್ಕಾಗಿ ಪರಿಶಿಷ್ಟ ಸಮುದಾಯದ ಶಿಕ್ಷಕರೊಬ್ಬರನ್ನು ಒಕ್ಕಲಿಗ ಸಮುದಾಯದವರು ಮನಬಂದಂತೆ ಥಳಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ.

ಜೂನ್ 28ರಂದು ನಡೆದ ಈ ಘಟನೆ ಸಂಬಂಧ ಶುಕ್ರವಾರ ಮಾಗಡಿ ತಾಲ್ಲೂಕಿನ ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಂಜುನಾಥ ಎಚ್.ಎಸ್. ಹಲ್ಲೆಗೊಳಗಾದ ಶಿಕ್ಷಕ.

> **ಘಟನೆ ಬಳಿಕ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಅವರ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ**
>
> **ಯು.ಡಿ. ಕೃಷ್ಣಕುಮಾರ್**
> ಡಿವೈಎಸ್ಪಿ, ಮಾಗಡಿ ಉಪ ವಿಭಾಗ

ಪರಿಶಿಷ್ಟ ಜಾತಿ ಮತ್ತು ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿ ಗ್ರಾಮದ ಲೋಕೇಶ್ ಎಚ್.ಆರ್, ದೀಪಕ್ ಎಚ್.ಎಂ, ವೆಂಕಟೇಶ್ ಎಚ್.ಟಿ ಹಾಗೂ ಇತರರ ವಿರುದ್ಧ ದೂರು ದಾಖಲಾಗಿದೆ. ಎಲ್ಲರೂ ತಲೆಮರೆಸಿಕೊಂಡಿದ್ದಾರೆ.

ಗ್ರಾಮದೇವತೆ ಹಬ್ಬದ ಅಂಗವಾಗಿ ಸಂಜೆ ದೇವಸ್ಥಾನಕ್ಕೆ ಒಕ್ಕಲಿಗ ಸಮುದಾಯದವರು ಆರತಿ ತರುತ್ತಿದ್ದರು. ಮಂಜುನಾಥ ಅವರಿಗೆ ಆಕಸ್ಮಿಕವಾಗಿ ಆರತಿ ತಾಕಿತು. ದೇವರ ಆರತಿ ಮುಟ್ಟಿ ಮೈಲಿಗೆ ಮಾಡಿದ ಎಂದು ಗ್ರಾಮದ ಕೆಲವರು ಅವರ ಮೇಲೆ ಹಲ್ಲೆ ನಡೆಸಿದರು. 'ಆರತಿ ಮುಟ್ಟಿ ಮೈಲಿಗೆ ಮಾಡಿದೆ ಎಂದು ಗ್ರಾಮದ ಲೋಕೇಶ್ ಮತ್ತು ಸಹಚರರು ನಿಂದಿಸಿ ನನ್ನ ಮೇಲೆ ಹಲ್ಲೆ ನಡೆಸಿದರು. ದೇವಿಗೆ ಬಲಿ ಕೊಡಲು ಕೋಣ ತಂದಿದ್ದೇವೆ. ಯಾರಾದರೂ ಅಡ್ಡ ಬಂದರೆ (ಮಾದಿಗರ) ತಲೆ ಕಡಿಯುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು' ಎಂದು ಮಂಜುನಾಥ್ ದೂರಿನಲ್ಲಿ ತಿಳಿಸಿದ್ದಾರೆ.

ಹೆಬ್ಬಾರ, ಸುನೀಲ್ ಮಿತಿ ಮೀರಿ ವೆಚ್ಚ: ಆಯೋಗಕ್ಕೆ ಮಾಹಿತಿ

ಪ್ರಜಾವಾಣಿ ವಾರ್ತೆ

ಕಾರವಾರ: ಕಳೆದ ಮೇ ತಿಂಗಳಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಜಿಲ್ಲೆಯ ಯಲ್ಲಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಿವರಾಮ ಹೆಬ್ಬಾರ ಮತ್ತು ಭಟ್ಕಳ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸುನೀಲ ನಾಯ್ಕ ಚುನಾವಣಾ ಆಯೋಗ ನಿಗದಿಪಡಿಸಿದ್ದ ಮಿತಿಗಿಂತ ಹೆಚ್ಚು ವೆಚ್ಚ ಮಾಡಿದ ವಿಚಾರದ ಬಗ್ಗೆ ಆಯೋಗಕ್ಕೆ ಮಾಹಿತಿ ರವಾನೆಯಾಗಿದೆ.

'ಒಬ್ಬ ಅಭ್ಯರ್ಥಿಗೆ ಗರಿಷ್ಠ ₹40 ಲಕ್ಷ ವೆಚ್ಚ ಮಾಡಲು ಮಾತ್ರ ಅವಕಾಶ ಇತ್ತು. ಶಿವರಾಮ ಹೆಬ್ಬಾರ ಅವರು ಮಿತಿಗಿಂತ ₹1.5 ಲಕ್ಷ, ಸುನೀಲ ನಾಯ್ಕ ₹5 ಲಕ್ಷದಷ್ಟು ಹೆಚ್ಚುವರಿ ವೆಚ್ಚ ಮಾಡಿದ್ದಾರೆ ಎಂದು ಚುನಾವಣೆಯ ವೆಚ್ಚ ವೀಕ್ಷಕರು ತಿಳಿಸಿದ್ದಾರೆ. ಇದನ್ನು ಆಧರಿಸಿ ಮುಖ್ಯ ಚುನಾವಣಾಧಿಕಾರಿಗೆ ಮಾಹಿತಿ ಸಲ್ಲಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ತಿಳಿಸಿದ್ದಾರೆ.

ರಾಮಯ್ಯ, ಸುಂದರ್ ರಾಜ್‌ಗೆ ಬರಗೂರು ಪ್ರಶಸ್ತಿ



ರಾಮಯ್ಯ



ಸುಂದರ್ ರಾಜ್

ಬೆಂಗಳೂರು: ನಾಡೋಜ ಡಾ. ಬರಗೂರು ಪ್ರತಿಷ್ಠಾನ ನೀಡುವ 'ಬರಗೂರು ಪ್ರಶಸ್ತಿ'ಗೆ ಸಾಹಿತ್ಯ ಕ್ಷೇತ್ರದಿಂದ ಕೋಟಿಗಾನಹಳ್ಳಿ ರಾಮಯ್ಯ ಹಾಗೂ ಸಿನಿಮಾ ಕ್ಷೇತ್ರದಿಂದ ಸುಂದರ್ ರಾಜ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ. ಕೋಟಿಗಾನಹಳ್ಳಿ ರಾಮಯ್ಯ ಅವರು ದಲಿತ ಚಳವಳಿಯ ಭಾಗವಾಗಿದ್ದರು. ಕೋಲಾರದಲ್ಲಿ 'ಆದಿಮ' ಎಂಬ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದಾರೆ. ಸುಂದರ್ ರಾಜ್ ಅವರು ಹವ್ಯಾಸಿ ರಂಗಭೂಮಿಯಿಂದ ಬಂದು, ಪ್ರಯೋಗಾತ್ಮಕ ಮತ್ತು ಮುಖ್ಯವಾಹಿನಿ ಸಿನಿಮಾಗಳ ಮೂಲಕ ಪ್ರಸಿದ್ಧ ಕಲಾವಿದರಾಗಿ ಬೆಳೆದಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಎ.ವಿ. ಲಕ್ಷ್ಮೀನಾರಾಯಣ ತಿಳಿಸಿದ್ದಾರೆ. ದೇ 7ರಂದು ಸಂಜೆ 4.30ಕ್ಕೆ ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಹೋರಾಟಗಾರ ಪಟ್ಟಾಭಿರಾಮ ಸೋಮಯಾಜಿ ನಿಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಮಾಜಿಕ ಹೋರಾಟಗಾರ ಪ್ರೊ.ಪಟ್ಟಾಭಿರಾಮ ಸೋಮಯಾಜಿ (64) ನಗರದ ದೇರೆಬೈಲ್ ಗಿರಿನಗರದಲ್ಲಿರುವ ತಮ್ಮ ಮನೆಯಲ್ಲಿ ಶನಿವಾರ ನಿಧನರಾದರು.

ಒಬ್ಬರೇ ವಾಸವಿದ್ದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಕೆಲ ದಿನಗಳ ಹಿಂದೆ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದರು. ಶುಕ್ರವಾರ ರಾತ್ರಿ ಕೆಲವು ಆಪ್ತರೊಡನೆ ದೂರವಾಣಿಯಲ್ಲಿ ಮಾತನಾಡಿದ್ದರು. ಶನಿವಾರ ಬೆಳಿಗ್ಗೆ ಅವರು ಮನೆಯಿಂದ ಹೊರಗೆ ಬರದಿದ್ದುದನ್ನು ಕಂಡು ಅಕ್ಕಪಕ್ಕದ ನಿವಾಸಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದರು. ಮನೆಯ ಬಾಗಿಲನ್ನು ಒಡೆದು ನೋಡಿದಾಗ ಅವರು ಮಲಗಿದಲ್ಲೇ ಕೊನೆಯುಸಿರೆಳೆದಿದ್ದುದು ಕಂಡು ಬಂತು.

ಅವರ ಅಂತ್ಯಕ್ರಿಯೆ ಹುಟ್ಟೂರಾದ ಉಡುಪಿ ಜಿಲ್ಲೆಯ ಬ್ರಹ್ಮಾವರ ಬಳಿಯ ಕೂರಾಡಿಯಲ್ಲಿ ಭಾನುವಾರ ಬೆಳಿಗ್ಗೆ ನೆರವೇರಲಿದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಕರಾವಳಿಯಲ್ಲಿ ಕೋಮು ಸಾಮರಸ್ಯ ಮೂಡಿಸುವಲ್ಲಿ ಹಾಗೂ ಮತೀಯ ಗೂಂಡಾಗಿರಿಯ ವಿರುದ್ಧದ ಹೋರಾಟ ರೂಪಿಸುವಲ್ಲಿ ಮುಂಚೂಣಿಯಲ್ಲಿದ್ದರು. ಕೋಮುಸೌಹಾರ್ದತೆಗಾಗಿ ಜನಜಾಗೃತಿ ಮೂಡಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ನಗರದ ಹಂಪನಕಟ್ಟೆಯಲ್ಲಿರುವ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು. ಅವರು ಪತ್ರಿಕೆಗಳಿಗೆ ಲೇಖನಗಳನ್ನೂ ಬರೆಯುತ್ತಿದ್ದರು. ಹಲವು ಕೃತಿಗಳನ್ನು ಸಂಪಾದಿಸಿದ್ದಾರೆ.

ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವ

ಕೋಲಾರದ ಧರಣಿಗೆ 16 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಕೋಲಾರ ತಾಲ್ಲೂಕಿನ ಸಗಟೂರಿನ ಬಿ.ಎಸ್ಸಿ ಪದವೀಧರೆ ಧರಣಿ ಎನ್.ಶೆಟ್ಟಿ ಅವರು ಇಲ್ಲಿ ಶನಿವಾರ ನಡೆದ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ 16 ಚಿನ್ನದ ಪದಕಗಳನ್ನು ಪಡೆದರು.

ಎಂ.ಎಸ್ಸಿ ಪದವಿಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿದ ರಾಯಚೂರಿನ ಅನುಷಾ ಕುರುಬರ್ 6 ಚಿನ್ನದ ಪದಕಗಳಿಗೆ ಭಾಜನರಾದರು.

ಬಿ.ಎಸ್ಸಿ ವಿಭಾಗದಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರದ ನಿಶ್ಚತ್ ಎನ್. 4 ಚಿನ್ನದ ಪದಕ, ಸಚಿನ್ ಮೊದಗಿ, ಸರಸ್ವತಿ ಆರ್, ಪ್ರಿಯಾಂಕಾ ಎಚ್.ಎಲ್, ತಲಾ 3 ಪದಕ, ಎಸ್.ಪಿ. ಶ್ರುತಿ, ಕುಣೆ ಲಾವಣ್ಯಾ, ಹೇಮಂತಗೌಡ, ಭುವನೇಶ್ವರಿ ಎಸ್.ಕೆ ತಲಾ 2, ಕಾವ್ಯಶ್ರೀ ಡಿ.ಸಿ, ವರ್ಷಾ ಲಿಂಗರಾಜ ಮೋಜಿ, ದಿವ್ಯಭಾರತಿ ಹೆಗಡೆ, ಸುಷ್ಮಾ ಎನ್, ಶೀತಲ್ ಬಿ.ಆರ್, ಮಂಜುನಾಥ ಎಂ, ಲಾವಣ್ಯ ವೈಎಸ್, ಅಮಲ್ ಕಿಶೋರ ತಲಾ 1 ಪದಕ ಪಡೆದರು.

ಎಂ.ಎಸ್ಸಿ ವಿಭಾಗದಲ್ಲಿ ಅಜಿತ್ ಕುಮಾರ್ 3, ವಿದ್ಯಾ, ಸುಚಿತಾ ಎ, ಸ್ನೇಹಾ ಎಚ್ ತಲಾ 2, ಶಾಂತಾ, ದಿವಾಕರ ಸಿ.ಜಿ, ಧನುಜಾ ಜಿ.ಎಸ್, ಸಹನಾ ಜಿ.ಎಸ್ ತಲಾ 1 ಚಿನ್ನದ ಪದಕ ಪಡೆದರು.

ಪಿಎಚ್.ಡಿ ವಿಭಾಗದಲ್ಲಿ ರುಚಿತಾ.ಟಿ ಅವರು 3 ಮತ್ತು ಜಮುನಾರಾಣಿ ಜಿ.ಎಸ್. 2 ಚಿನ್ನದ ಪದಕ ಭಾಜನರಾದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಪದಕಗಳನ್ನು ಪ್ರದಾನ ಮಾಡಿದರು.

ಘಟಿಕೋತ್ಸವದಲ್ಲಿ ಚಿನ್ನದ ಪದಕಗಳನ್ನು ಪಡೆದ ಪುತ್ರಿ ಧರಣಿ ಎನ್ ಶೆಟ್ಟಿ ಅವರಿಗೆ ತಂದೆ ನಾಗೇಂದ್ರ ಮತ್ತು ತಾಯಿ ಸುಮಿತಾ ಮುತ್ತು ನೀಡಿ ಸಂಭ್ರಮಿಸಿದರು (ಎಡಚಿತ್ರ), ಎಂ.ಎಸ್ಸಿ ವಿಭಾಗದಲ್ಲಿ ಚಿನ್ನದ ಪದಕಗಳನ್ನು ಪಡೆದ ಅನುಷಾ ಜೊತೆ ತಂದೆ ಅಮಯೋಗಿ ಮತ್ತು ತಾಯಿ ಸುರೇಖಾ ಇದ್ದಾರೆ

'ಮೂರು 'ಎಫ್' ಕಾರಣ'

'16 ಚಿನ್ನದ ಪದಕ ಪಡೆಯಲು ಫ್ಯಾಮಿಲಿ, ಫ್ಯಾಕಲ್ಟಿ ಮತ್ತು ಫ್ರೆಂಡ್ಸ್ ಎಂಬ '3 ಎಫ್' ಕಾರಣ. ಪದಕಗಳನ್ನು ತಂದೆ–ತಾಯಿಗೆ ಅರ್ಪಿಸುವೆ' ಎಂದು ಕೊಪ್ಪಳ ಜಿಲ್ಲೆಯ ಮುನಿರಾಬಾದ್ ತೋಟಗಾರಿಕಾ ಕಾಲೇಜಿನ ಬಿ.ಎಸ್ಸಿ ಪದವೀಧರೆ ಧರಣಿ ಎನ್. ಶೆಟ್ಟಿ ತಿಳಿಸಿದರು. 'ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಗೊಂಡು ಸಾರ್ವಜನಿಕ ಸೇವೆ ಮಾಡುವ ಆಸೆಯಿದೆ. ತರಬೇತಿ ಪಡೆಯುತ್ತಿದ್ದೇನೆ' ಎಂದರು.

'ತಂದೆಯೇ ಸ್ಫೂರ್ತಿ': 'ತೋಟಗಾರಿಕಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ರೈತರ ಸೇವೆ ಮಾಡುತ್ತಿರುವ ತಂದೆಯೇ ನನಗೆ ಸ್ಫೂರ್ತಿ' ಎಂದು ಅನುಷಾ ಕುರುಬರ್ ತಿಳಿಸಿದರು. 'ವಿಜ್ಞಾನಿಯಾಗಿ ಹೊಸ ತಳಿಗಳ ಸಂಶೋಧನೆ ಮತ್ತು ತಾಂತ್ರಿಕತೆ ಸುಧಾರಣೆ ಮೂಲಕ ರೈತರಿಗೆ ನೆರವಾಗುವ ಉದ್ದೇಶವಿದೆ' ಎಂದರು.

ಕಾಂಗ್ರೆಸ್ ಸೇರಿದಂತೆ ಕುಟುಂಬ ಕೇಂದ್ರಿತ ಪಕ್ಷಗಳ 'ಖಾತ್ರಿ' ಯೋಜನೆಗಳ ಬಗ್ಗೆ ಎಚ್ಚರಿಕೆ ವಹಿಸಿ– ಪ್ರಧಾನಿ ಸಲಹೆ

ವಿಪಕ್ಷಗಳ ಒಗ್ಗಟ್ಟಿನಲ್ಲಿ ಗ್ಯಾರಂಟಿ ಇಲ್ಲ: ಮೋದಿ

ಶಹದೋಲ್ (ಮಧ್ಯಪ್ರದೇಶ), (ಪಿಟಿಐ): 'ಕಾಂಗ್ರೆಸ್ ಸೇರಿದಂತೆ ಕುಟುಂಬ ಕೇಂದ್ರಿತ ಇತರ ಪಕ್ಷಗಳು ಸುಳ್ಳು ಗ್ಯಾರಂಟಿಗಳ ಭರವಸೆಗಳನ್ನು ಜನರಿಗೆ ನೀಡುತ್ತಿವೆ. ಪರಸ್ಪರರ ದೂಷಣೆಯಲ್ಲಿ ತೊಡಗಿರುವ ವಿರೋಧಪಕ್ಷಗಳು ಒಗ್ಗಟ್ಟಾಗುವ ಯಾವುದೇ ಖಾತ್ರಿ (ಗ್ಯಾರಂಟಿ) ಇಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಶಹದೋಲ್‌ನಲ್ಲಿ ಸಿಕಲ್ ಸೆಲ್ ಅನೀಮಿಯಾ (ಕುಡಗೋಲು ಕಣ ರಕ್ತಹೀನತೆ) ನಿರ್ಮೂಲನೆ ರಾಷ್ಟ್ರೀಯ ಮಿಷನ್ 2047 ಪೋರ್ಟಲ್ ಮತ್ತು ರೋಗನಿರ್ವಹಣೆಯ ಮಾರ್ಗಸೂಚಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಂಶಪಾರಂಪರಿಕವಾಗಿ ಪಕ್ಷಗಳು ತಮ್ಮ ಕುಟುಂಬಗಳ ಹಿತಾಸಕ್ತಿಗೆ ಮಾತ್ರ ಕೆಲಸ ಮಾಡುತ್ತವೆ. ಇಂಥವರು ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವ, ಜಾಮೀನಿನ ಮೇಲೆ ಹೊರಗಿರುವ ಮತ್ತು ಹಗರಣಗಳಲ್ಲಿ ಷಾಮೀಲಾಗಿರುವವರ ಜತೆಗೆ ಇರುತ್ತಾರೆ' ಎಂದೂ ಆರೋಪಿಸಿದ್ದಾರೆ.

ಪಟ್ನಾದಲ್ಲಿ ಈಚೆಗೆ ನಡೆದ ಬಿಜೆಪಿ ವಿರೋಧಿ ವಿಪಕ್ಷಗಳ ಸಭೆಯನ್ನು ಉಲ್ಲೇಖಿಸಿ, 'ಕಾಂಗ್ರೆಸ್ ಸೇರಿದಂತೆ ಕುಟುಂಬ ಕೇಂದ್ರಿತ ಇತರ ರಾಜಕೀಯ ಪಕ್ಷಗಳು ಒಗ್ಗಟ್ಟಾಗಲು ಯತ್ನಿಸುತ್ತಿವೆ. ಇಂಥ ಪಕ್ಷಗಳ ಸುಳ್ಳು ಗ್ಯಾರಂಟಿಗಳ ಬಗ್ಗೆ ಜನರು ಎಚ್ಚರಿಕೆಯಿಂದ ಇರಬೇಕು. ಈ ರೀತಿಯ ಪಕ್ಷಗಳಿಗೆ ತಮ್ಮದೇ ಆದ ರಾಜಕೀಯ ಖಾತ್ರಿ (ಗ್ಯಾರಂಟಿ) ಇಲ್ಲದಿದ್ದರೂ ಜನರಿಗೆ ಗ್ಯಾರಂಟಿ ಯೋಜನೆಗಳ ಭರವಸೆ ನೀಡುತ್ತಾರೆ' ಎಂದು ಪ್ರಧಾನಿ ವ್ಯಂಗ್ಯವಾಡಿದರು.

'ಇಂಥ ಪಕ್ಷಗಳು ನೀಡುವ ಸುಳ್ಳು ಗ್ಯಾರಂಟಿ ಭರವಸೆಗಳ ಹಿಂದಿನ ಗುಪ್ತ ವಂಚನೆಗಳನ್ನು ಜನರು ಗುರುತಿಸಬೇಕಿದೆ' ಎಂದು ಹೇಳಿದರು.

'ವಿರೋಧಪಕ್ಷಗಳು ಇಂದು ಒಗ್ಗಟ್ಟಾಗುತ್ತಿರುವ ಕುರಿತು ಪ್ರತಿಪಾದಿಸುತ್ತಿವೆ ಎಂದರೆ ಅದರ ಹಿಂದೆ ಏನೋ ತಪ್ಪಾಗಿದೆ ಎಂದರ್ಥ. ಅವರ ಹಳೆಯ ಹೇಳಿಕೆಗಳೇ ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ನಿತ್ಯವೂ ವಿಪಕ್ಷಗಳು ಪರಸ್ಪರ ಆರೋಪ–ಪ್ರತ್ಯಾರೋಪಗಳಲ್ಲಿ ತೊಡಗಿರುವುದು ಅವರಲ್ಲಿ ಒಗ್ಗಟ್ಟಿನ ಗ್ಯಾರಂಟಿ ಇಲ್ಲದಿರುವುದನ್ನು ತೋರಿಸುತ್ತದೆ' ಎಂದರು.

'ವಿರೋಧಪಕ್ಷಗಳು ಉಚಿತ ವಿದ್ಯುತ್‌ನ ಗ್ಯಾರಂಟಿ ನೀಡಿದಾಗ ಅವರು ವಿದ್ಯುತ್ ದರವನ್ನು ಹೆಚ್ಚಿಸಲು ಹೊರಟಿದ್ದಾರೆ ಎಂದರ್ಥ. ಅಂತೆಯೇ ಅವರ ಉಚಿತ ಪ್ರಯಾಣದ ಗ್ಯಾರಂಟಿಯು ರಾಜ್ಯದ ಸಾರಿಗೆಯನ್ನು ಹಾಳು ಮಾಡುತ್ತದೆ ಎಂದರ್ಥ' ಎಂದು ಅವರು ವಾಗ್ದಾಳಿ ನಡೆಸಿದರು.

ಇದೇ ವೇಳೆ ಪ್ರಧಾನಿ ಅವರು ಮಧ್ಯಪ್ರದೇಶದಲ್ಲಿ 1 ಕೋಟಿ ಪಿವಿಸಿ ಆಯುಷ್ಮಾನ ಭಾರತ್ ಕಾರ್ಡ್‌ಗಳು ಹಾಗೂ ದೇಶದಾದ್ಯಂತ 3 ಕೋಟಿ ಡಿಜಿಟಲ್ ಆಯುಷ್ಮಾನ್ ಕಾರ್ಡ್‌ಗಳ ವಿತರಣೆಗೆ ಚಾಲನೆ ನೀಡಿದರು.

ಇದೇ ವರ್ಷ ಮಧ್ಯಪ್ರದೇಶದಲ್ಲಿ ನಡೆಯಲಿರುವ ಚುನಾವಣೆ ಹಿನ್ನೆಲೆಯಲ್ಲಿ ಅಲ್ಲಿನ ಬುಡಕಟ್ಟು ಜನರನ್ನು ಗುರಿಯಾಗಿಸಿಕೊಂಡು ಮಾತನಾಡಿದ ಅವರು, 'ದೇಶದಾದ್ಯಂತ ರಾಣಿ ದುರ್ಗಾವತಿ ಅವರ 500ನೇ ಜನ್ಮದಿನಾಚರಣೆಯನ್ನು ಆಚರಿಸಲಾಗುವುದು. ಅಂಚೆ ಚೀಟಿಯನ್ನೂ ಬಿಡುಗಡೆ ಮಾಡಲಾಗುವುದು' ಎಂದರು.

ಮಧ್ಯಪ್ರದೇಶದ ಶಹದೋಲ್‌ನಲ್ಲಿ ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರು 'ಸಿಕಲ್ ಸೆಲ್ ಅನೀಮಿಯಾ' ನಿವಾರಣೆ ರಾಷ್ಟ್ರೀಯ ಮಿಷನ್‌ಗೆ ಚಾಲನೆ ನೀಡಿದರು. ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಇದ್ದರು –ಪಿಟಿಐ ಚಿತ್ರ

'ಕ್ಷಯ, ಕುಷ್ಠ ನಿರ್ಮೂಲನೆಗೆ ಕ್ರಮ'

'2025ರ ವೇಳೆಗೆ ಭಾರತದಿಂದ ಕ್ಷಯರೋಗ (ಟಿ.ಬಿ) ನಿರ್ಮೂಲನೆ ಮಾಡುವ ನಿಟ್ಟನಲ್ಲಿ ಕೇಂದ್ರ ಸರ್ಕಾರದ ಪ್ರಯತ್ನಗಳು ಸಾಗಿದ್ದು, ಈ ನಿಟ್ಟಿನಲ್ಲಿ ಪ್ರಕರಣಗಳ ಸಂಖ್ಯೆಗಳು ಕಡಿಮೆಯಾಗುತ್ತಿವೆ' ಎಂದು ಪ್ರಧಾನಿ ಮೋದಿ ಹೇಳಿದರು.

'ಅಂತೆಯೇ ದೇಶದಾದ್ಯಂತ 'ಕಾಲಾ ಅಜರ್'', ಕುಷ್ಠರೋಗ ಮತ್ತು ಮಲೇರಿಯಾದ ಪ್ರಕರಣಗಳಲ್ಲೂ ಗಮನಾರ್ಹವಾಗಿ ಇಳಿಕೆಯಾಗಿದೆ' ಎಂದು ಮಾಹಿತಿ ನೀಡಿದರು.

'ಶನಿವಾರ 1 ಕೋಟಿ ಜನರಿಗೆ ಆಯುಷ್ಮಾನ್ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಈ ಕಾರ್ಡ್‌ಗಳು ಆಸ್ಪತ್ರೆಗಳಲ್ಲಿ ಬಡವರಿಗೆ ₹ 5 ಲಕ್ಷದ ತನಕ ಚಿಕಿತ್ಸೆ ಪಡೆಯಲು ಎಟಿಎಂ ಕಾರ್ಡ್‌ಗಳಂತೆ ಕಾರ್ಯನಿರ್ವಹಿಸಲಿವೆ' ಎಂದೂ ಮೋದಿ ಹೇಳಿದರು.

ಸುದ್ದಿ 2 ನಿಮಿಷ

ವೈದ್ಯೆ ಹತ್ಯೆ: ಸಿಬಿಐ ತನಿಖೆ ಕೋರಿ ಕೇರಳ ಹೈಕೋರ್ಟ್‌ಗೆ ಅರ್ಜಿ

ಕೊಚ್ಚಿ (ಪಿಟಿಐ): ಡಾ.ವಂದನಾ ದಾಸ್ ಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ಕೋರಿ ಅವರ ಕುಟುಂಬದವರು ಕೇರಳ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಮೇ 10ರಂದು ಕೊಟ್ಟಾರಕರ ತಾಲ್ಲೂಕು ಆಸ್ಪತ್ರೆಗೆ ಪೊಲೀಸರು ಚಿಕಿತ್ಸೆಗಾಗಿ ಕರೆತಂದಿದ್ದ ಆರೋಪಿಯೊಬ್ಬ ಕತ್ತರಿಯಿಂದ ಇರಿದು ವಂದನಾ ಅವರನ್ನು ಹತ್ಯೆ ಮಾಡಿದ್ದ.

'ಕೊಟ್ಟಾರಕರ ಪೊಲೀಸರು ಎಫ್‌ಐಎಸ್ (ಪ್ರಥಮ ಮಾಹಿತಿ ಹೇಳಿಕೆ) ತಿರುಚಿದ್ದಾರೆ ಮತ್ತು ತಮ್ಮ ಕಡೆಯಿಂದಾದ ಲೋಪವನ್ನು ಮರೆಮಾಚಲು ಯತ್ನಿಸುತ್ತಿದ್ದಾರೆ' ಎಂದು ವಂದನಾ ಅವರ ಕುಟುಂಬದವರು ಅರ್ಜಿಯಲ್ಲಿ ಆರೋಪಿಸಿದ್ದಾರೆ.

'ಈ ಪ್ರಕರಣದಲ್ಲಿ ಸಾಕ್ಷ್ಯ ನಾಶವಾಗುವುದಕ್ಕೂ ಮುನ್ನ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು' ಎಂದೂ ಅರ್ಜಿಯಲ್ಲಿ ಕೋರಿದ್ದಾರೆ.

20ರಿಂದ ಸಂಸತ್ ಮುಂಗಾರು ಅಧಿವೇಶನ: ಸಚಿವ ಜೋಶಿ

ನವದೆಹಲಿ (ಪಿಟಿಐ): 'ಸಂಸತ್‌ನ ಮುಂಗಾರು ಅಧಿವೇಶನ ಜುಲೈ 20ರಿಂದ ಆಗಸ್ಟ್ 11ರವರೆಗೆ ನಡೆಯಲಿದೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ತಿಳಿಸಿದ್ದಾರೆ.

ಲೋಕಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗಟ್ಟಾಗಿ ಹೋರಾಡಲು ವಿರೋಧ ಪಕ್ಷಗಳು ಪ್ರಯತ್ನ ನಡೆಸುತ್ತಿವೆ. ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸುತ್ತಿದ್ದಾರೆ. ವಿವಿಧ ಪಕ್ಷಗಳು ಏಕರೂಪ ನಾಗರಿಕ ಸಂಹಿತೆಯನ್ನು ವಿರೋಧಿಸುತ್ತಿವೆ. ಹೀಗಾಗಿ ಈ ಬಾರಿಯ ಮುಂಗಾರು ಅಧಿವೇಶನವು ಸಂಘರ್ಷಮಯವಾಗಿರುವ ಸಾಧ್ಯತೆ ಹೆಚ್ಚಾಗಿದೆ.

ಹಳೆ ಸಂಸತ್ ಭವನದಲ್ಲಿಯೇ ಅಧಿವೇಶನಕ್ಕೆ ಚಾಲನೆ ನೀಡಿ, ನಂತರ ಹೊಸ ಭವನಕ್ಕೆ ಸ್ಥಳಾಂತರಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

'ಮಾನವ ಲೋಪವೇ ಕಾರಣ'

ಬಾಲೇಶ್ವರ ರೈಲು ದುರಂತ: ಸಿಆರ್‌ಎಸ್ ತನಿಖೆಯಲ್ಲಿ ಬಹಿರಂಗ

ಪ್ರಜಾವಾಣಿ ವಾರ್ತೆ

ನವದೆಹಲಿ: 291 ಪ್ರಯಾಣಿಕರ ಸಾವಿಗೆ ಕಾರಣವಾದ ಒಡಿಶಾದ ಬಾಲೇಶ್ವರದಲ್ಲಿ ನಡೆದ ರೈಲು ದುರಂತಕ್ಕೆ ಮಾನವನಿಂದಾದ ಲೋಪವೇ ಕಾರಣ ಎಂದು ರೈಲ್ವೆ ಸುರಕ್ಷತಾ ಕಮಿಷನರ್ (ಸಿಆರ್‌ಎಸ್) ತನಿಖೆಯಲ್ಲಿ ಬಹಿರಂಗವಾಗಿದೆ.

ಸಿಗ್ನಲಿಂಗ್ ಮತ್ತು ಟೆಲಿಕಾಂ ವಿಭಾಗ ಹಾಗೂ ಸಂಚಾರ ನಿರ್ವಹಣಾ ವಿಭಾಗದ ಸಿಬ್ಬಂದಿಯ ತಪ್ಪಿನಿಂದಲೇ ದುರಂತ ಸಂಭವಿಸಿದೆ ವರದಿಯಲ್ಲಿ ಎಂದು ಬೊಟ್ಟು ಮಾಡಲಾಗಿದೆ.

ಆಗ್ನೇಯ ರೈಲ್ವೆ ಸಿಆರ್‌ಎಸ್ ಎ.ಕೆ.ಚೌಧರಿ ಅವರು ರೈಲ್ವೆ ಮಂಡಳಿಗೆ ಗುರುವಾರ ವರದಿ ಸಲ್ಲಿಸಿದ್ದಾರೆ.

ಸಿಗ್ನಲ್ ವಿಭಾಗದ ಸಿಬ್ಬಂದಿ ದೋಷಯುಕ್ತ ಸಿಗ್ನಲ್ ವ್ಯವಸ್ಥೆಯನ್ನು ಸರಿಪಡಿಸಿದ್ದರು. ಆದರೆ ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಪಾಲನೆ ಮಾಡುವಲ್ಲಿ ವಿಫಲರಾಗಿದ್ದರು ಎಂದು ತನಿಖೆ ವೇಳೆ

ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿಗ್ನಲ್ ವ್ಯವಸ್ಥೆಯ ದುರಸ್ತಿಪಡಿಸುವಂತೆ ಸಂಬಂಧಪಟ್ಟ ಸಿಬ್ಬಂದಿಯು 'ಸಂಪರ್ಕ ಕಡಿತ'ಗೊಳಿಸುವಂತೆ ಸ್ಟೇಷನ್ ಮಾಸ್ಟರ್‌ಗೆ ಮನವಿ ಸಲ್ಲಿಸಿದ್ದರು. ಕೆಲಸ ಪೂರ್ಣಗೊಂಡ ನಂತರ ಪುನಃ ಸಂಪರ್ಕ ಕಲ್ಪಿಸುವ ಕುರಿತು ಮಾಹಿತಿ ನೀಡಲಾಗಿತ್ತು. ಆದರೆ ಈ ಮಾರ್ಗವಾಗಿ ರೈಲು ಹಾದು ಹೋಗುವ ಮೊದಲು ಸುರಕ್ಷತಾ ಕ್ರಮವಾಗಿ ಸಿಗ್ನಲ್ ವ್ಯವಸ್ಥೆ ಪರೀಕ್ಷಿಸಿರಲಿಲ್ಲ. ಹೀಗಾಗಿ ಭೀಕರ ದುರಂತಕ್ಕೆ ಸಿಗ್ನಲ್, ಟೆಲಿಕಾಂ ಇಲಾಖೆ ಮತ್ತು ಸ್ಟೇಷನ್ ಕಾರ್ಯಾಚರಣೆ ಸಿಬ್ಬಂದಿಯೇ ನೇರ ಹೊಣೆ ಎಂದು ವರದಿ ತಿಳಿಸಿದೆ.

ಆದರೆ, ಪ್ರಕರಣದ ಕುರಿತ ಸಿಬಿಐ ತನಿಖೆ ಮೇಲೆ ಯಾವುದೇ 'ಪ್ರಭಾವ ಅಥವಾ ಹಸ್ತಕ್ಷೇಪ' ಉಂಟಾಗದಿರಲಿ ಎಂಬ ಉದ್ದೇಶದಿಂದ ತ್ರಿವಳಿ ರೈಲು ದುರಂತ ಕುರಿತ ಸಿಆರ್‌ಎಸ್ ತನಿಖಾ ವರದಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸದೇ ಇರಲು ರೈಲ್ವೆ ಇಲಾಖೆ ನಿರ್ಧರಿಸಿದೆ. ವರದಿ ಕುರಿತು ಪ್ರತಿಕ್ರಿಯೆ ನೀಡಲು ಮಂಡಳಿಯ ವಕ್ತಾರರು ನಿರಾಕರಿಸಿದ್ದಾರೆ.

ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲು, ಯಶವಂತಪುರ–ಹೌರಾ ಎಕ್ಸ್‌ಪ್ರೆಸ್ ರೈಲು ಮತ್ತು ಸರಕು ಸಾಗಣೆ ರೈಲುಗಳ ಮಧ್ಯೆ ಒಡಿಶಾದ ಬಾಲೇಶ್ವರ ಜಿಲ್ಲೆಯಲ್ಲಿ ಜೂನ್ 2ರಂದು ಸಂಭವಿಸಿದ ಅಪಘಾತದಲ್ಲಿ 291 ಮಂದಿ ಮೃತಪಟ್ಟು, 1200ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದರು. ದುರಂತದ ನಂತರ ಆಗ್ನೇಯ ರೈಲ್ವೆ ಹಲವು ಉನ್ನತ ಅಧಿಕಾರಿಗಳನ್ನು ವರ್ಗಾವಣೆ ಮಾಡಿತ್ತು.

ತೀಸ್ತಾ ಒಂದು ವಾರ ನಿರಾಳ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಾಲಯಕ್ಕೆ ಕೂಡಲೇ ಶರಣಾಗುವಂತೆ ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರಿಗೆ ಗುಜರಾತ್ ಹೈಕೋರ್ಟ್ ಶನಿವಾರ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಒಂದು ವಾರದ ಮಟ್ಟಿಗೆ ತಡೆಯಾಜ್ಞೆ ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಎ.ಎಸ್. ಬೋಪಣ್ಣ ಮತ್ತು ದೀಪಂಕರ್ ದತ್ತ ಅವರಿದ್ದ ತ್ರಿಸದಸ್ಯ ಪೀಠವು, ಸಂಜೆ ವಿಭಾಗೀಯ ಪೀಠ ನಡೆಸಿದ್ದ ವಿಚಾರಣೆಯನ್ನು ಅವಲೋಕಿಸಿ ಈ ಆದೇಶ ಪ್ರಕಟಿಸಿದೆ.

ಗುಜರಾತ್ ಹೈಕೋರ್ಟ್ ಆದೇಶದ ವಿರುದ್ಧ ತೀಸ್ತಾ ಅವರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಮೇಲ್ಮನವಿಯನ್ನು ಅಭಯ್ ಎಸ್. ಓಕಾ ಮತ್ತು ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರು ವಿಸ್ತೃತ ಪೀಠಕ್ಕೆ ವರ್ಗಾಯಿಸಿದ್ದರು.

2002ರ ಗುಜರಾತ್ ಗಲಭೆ ಪ್ರಕರಣದಲ್ಲಿ ಮುಗ್ಧ ಜನರನ್ನು ಸಾಕ್ಷಿಗಳಾಗಿ ತಯಾರು ಮಾಡಿದ ಆರೋಪ ಮೇಲೆ ತೀಸ್ತಾ, ನಿವೃತ್ತ ಪೊಲೀಸ್ ಅಧಿಕಾರಿ ಆರ್.ಬಿ. ಶ್ರೀಕುಮಾರ್ ಸೇರಿದಂತೆ ಇತರರ ವಿರುದ್ಧ ಗುಜರಾತ್ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಈ ಪ್ರಕರಣದಲ್ಲಿ ತೀಸ್ತಾ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿತ್ತು. ಇದರ ಅವಧಿ ಮುಗಿದಿದ್ದರಿಂದ ಕೋರ್ಟ್‌ಗೆ ಶರಣಾಗುವಂತೆ ಹೈಕೋರ್ಟ್ ಸೂಚಿಸಿತ್ತು.

ಹಾಗಾಗಿ, ತ್ವರಿತವಾಗಿ ಜಾಮೀನು ಅರ್ಜಿ ವಿಚಾರಣೆ ನಡೆಸುವಂತೆ ತೀಸ್ತಾ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಅವರ ಸೂಚನೆ ಮೇರೆಗೆ ನ್ಯಾಯಾಲಯದ ಕಲಾಪ ಮುಗಿದ ಬಳಿಕ ಸಂಜೆ 6.30ಕ್ಕೆ ವಿಚಾರಣೆ ನಡೆಸಿದ ವಿಭಾಗೀಯ ಪೀಠವು ಈ ಬಗ್ಗೆ ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿತ್ತು.

'ತೀಸ್ತಾಗೆ ಶರಣಾಗಲು ಹೈಕೋರ್ಟ್ ಸ್ವಲ್ಪ ಕಾಲಾವಕಾಶ ನೀಡಬೇಕಿತ್ತು' ಎಂದು ನ್ಯಾಯಮೂರ್ತಿ ಓಕಾ ಹೇಳಿದರು.

ಸರ್ಕಾರದ ವಾದವೇನು?: ಗುಜರಾತ್ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಸರ್ಕಾರದ ವಿರುದ್ಧ ತೀಸ್ತಾ ಅವರು ಗಂಭೀರ ಆರೋಪ ಮಾಡಿದ್ದಾರೆ. ಸಾಕ್ಷ್ಯಾಧಾರಗಳನ್ನು ಸೃಷ್ಟಿಸಿದ ಆರೋಪ ಹೊತ್ತಿರುವ ಅವರು ಮಧ್ಯಂತರ ಜಾಮೀನಿಗೂ ಅರ್ಹರಿಲ್ಲ' ಎಂದು ವಾದಿಸಿದರು.

ಹಿರಿಯ ವಕೀಲ ಚಂದರ್ ಉದಯ್ ಸಿಂಗ್ ಮತ್ತು ವಕೀಲರಾದ ಅರ್ಪಣಾ ಭಟ್ ಅವರು, ತೀಸ್ತಾ ಪರ ಹಾಜರಾಗಿದ್ದರು.

ಗುಜರಾತ್ ಮುಖ್ಯಮಂತ್ರಿಯಾಗಿದ್ದ ವೇಳೆ ನರೇಂದ್ರ ಮೋದಿ ಅವರ ವರ್ಚಸ್ಸಿಗೆ ಕಳಂಕ ತರುವ ಉದ್ದೇಶದಿಂದ ಸುಳ್ಳು ಸಾಕ್ಷ್ಯಾಧಾರಗಳನ್ನು ಸೃಷ್ಟಿಸಿದ ಆರೋಪದ ಮೇಲೆ ತೀಸ್ತಾ ವಿರುದ್ಧ 2022ರ ಜೂನ್ 24ರಂದು ಎಫ್‌ಐಆರ್ ದಾಖಲಿಸಿ ಬಂಧಿಸಲಾಗಿತ್ತು.

ಐಎಸ್ ನಂಟು: ಎನ್‌ಐಎ ಪೂರಕ ಆರೋಪಪಟ್ಟಿ

ಒಂದನೇ ಪುಟದಿಂದ...

ಭಯೋತ್ಪಾದನಾ ಚಟುವಟಿಕೆಗಳು ಮತ್ತು ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ಸಲುವಾಗಿ ಶಾರಿಕ್, ಮುನೀರ್ ಮತ್ತು ಯಾಸಿನ್ ವಿದೇಶದಲ್ಲಿರುವ ಐಎಸ್ ಉಗ್ರರ ಜೊತೆ ಸೇರಿ ಕ್ರಿಮಿನಲ್ ಪಿತೂರಿ ನಡೆಸಿರುವುದು ತನಿಖೆಯಿಂದ ತಿಳಿದುಬಂದಿದೆ. ದೇಶದ ಸುರಕ್ಷತೆ, ಏಕತೆ ಮತ್ತು ಸಾರ್ವಭೌಮತೆಗೆ ಧಕ್ಕೆ ತರುವ ಉದ್ದೇಶದಿಂದ ಈ ಮೂವರು ಇತರ ಆರೋಪಿಗಳನ್ನು ತಮ್ಮ ಜೊತೆ ಸೇರಿಸಿಕೊಂಡಿದ್ದರು ಎಂದೂ ಎನ್‌ಐಎ ಹೇಳಿದೆ.

ಐಎಸ್ ಸಂಘಟನೆಯ ಕಾರ್ಯಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ನಿರ್ವಹಣೆ ಮಾಡುವವರು ಈ ಆರೋಪಿಗಳಿಗೆ ಕ್ರಿಪ್ಟೊ ಕರೆನ್ಸಿ ಮೂಲಕ ಹಣ ಒದಗಿಸಿದ್ದರು ಎಂದಿದೆ.

ಕಳೆದ ವರ್ಷ ಸೆಪ್ಟೆಂಬರ್ 19ರಂದು ಶಿವಮೊಗ್ಗ ಗ್ರಾಮೀಣ ಪೊಲೀಸರು ಮೊದಲು ಪ್ರಕರಣ ದಾಖಲಿಸಿಕೊಂಡಿದ್ದರು. ನವೆಂಬರ್ 15ರಂದು ಈ ಪ್ರಕರಣದ ತನಿಖೆಯನ್ನು ಎನ್‌ಐಎ ಕೈಗೆತ್ತಿಕೊಂಡಿತ್ತು.

ರಾಷ್ಟ್ರೀಯ ಈಜು: ರಾಜ್ಯದಿಂದ 30 ಮಂದಿಯ ತಂಡ

ಬೆಂಗಳೂರು: ಇದೇ ಭಾನುವಾರದಿಂದ ಜುಲೈ 5ರವರೆಗೆ ಹೈದರಾಬಾದ್‌ನ ಗಚಿಬೌಲಿ ಸ್ಟೇಡಿಯಂನಲ್ಲಿ ನಡೆಯಲಿರುವ 76ನೇ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ಸ್ಪರ್ಧೆಗೆ ಕರ್ನಾಟಕದ ಪುರುಷರ ಮತ್ತು ಮಹಿಳೆಯರ ತಂಡವನ್ನು ಪ್ರಕಟಿಸಲಾಗಿದೆ.

ಪುರುಷರ ತಂಡ: ಅನೀಶ್ ಎಸ್. ಗೌಡ, ಎಸ್. ಧನುಷ್, ಎಸ್. ದರ್ಶನ್, ಕಲ್ಪ್ ಎಸ್. ಬೋಹ್ರಾ, ಮಣಿಕಂಠ ಲಕ್ಷ್ಮಣ್, ಎಂ. ಪೃಥ್ವಿ, ಡಿ.ಎಸ್.ಪೃಥ್ವಿಕ್, ಶಿವಾಂಕ್ ವಿಶ್ವನಾಥ್, ಶೋನ್ ಗಂಗೂಲಿ, ಎಸ್. ಶಿವ, ತಾನಿಷ್ ಜಾರ್ಜ್ ಮ್ಯಾಥ್ಯೂ, ಉತ್ಕರ್ಷ್ ಎಸ್. ಪಾಟೀಲ, ಆರ್. ಸಂಭವ್, ವಿದಿತ್ ಎಸ್. ಶಂಕರ್.

ಮಹಿಳೆಯರ ತಂಡ: ಅದಿತಿ ಎನ್. ಮುಲಾಯ್, ಅಶ್ಮಿತಾ ಚಂದ್ರ, ಧಿನಿಧಿ ದೇಸಿಂಗು, ಹಷಿಕಾ ರಾಮಚಂದ್ರ, ಲತೀಶಾ ಮಂದಣ್ಣ, ಎ.ಕೆ. ಲಿನೇಶಾ, ಮಾನವಿ ವರ್ಮ, ನೀನಾ ವೆಂಕಟೇಶ್, ರಿಧಿಮಾ ವೀರೇಂದ್ರ ಕುಮಾರ್, ಬಿ.ಎಂ. ರಿತಿಕಾ, ಎಸ್. ಲಕ್ಷ್ಯಾ, ಶಾಲಿನಿ ಆರ್. ದೀಕ್ಷಿತ್, ಶಿರಿನ್, ಸುಹಾಸಿನಿ ಘೋಷ್, ಸುವನಾ ಸಿ. ಭಾಸ್ಕರ್, ವಿಹಿತಾ ನಯನಾ.

ಮ್ಯಾನೇಜರ್ ಎನ್.ರೋಹಿತ್ ಬಾಬು, ಕೋಚ್‌ಗಳಾದ ಎ.ಸಿ. ಜಯರಾಜನ್, ಜಾನ್ ಕ್ರಿಸ್ಟೋಫರ್, ಬಿ.ಎಂ. ಮಧುಕುಮಾರ್, ವಿ. ನಟರಾಜ್ ತಂಡದಲ್ಲಿದ್ದಾರೆ.

ಪುರಸಭೆ ಕಾರ್ಯಾಲಯ, ಗಜೇಂದ್ರಗಡ, ಜಿಲ್ಲಾ : ಗದಗ–582114
ದೂರವಾಣಿ ಸಂಖ್ಯೆ : 08381–262222
Email address : itstaff_ulb_gajendragad@yahoo.in
ಕ್ರಸಂ:ಪುಸಗ/ಆ.ವಿ/ಟೆಂಡರ/ಲೆಗೆಸಿವೇಷ್ಟ್/2023–24/57 ದಿ: 01–07–2023

ಇ–ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ

ಗಜೇಂದ್ರಗಡ ಪುರಸಭೆಯ ಸನ್ 2023–24 ನೇ ಸಾಲಿನ ಸ್ವಚ್ಛ ಭಾರತ ಮಿಷನ್ 2.0 ಹಾಗೂ ಪುರಸಭೆಯ ಇತರೆ ಅನುದಾನದಲ್ಲಿ ಗಜೇಂದ್ರಗಡ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿನ ಪಾರಂಪರಿಕ ತ್ಯಾಜ್ಯ ನಿರ್ವಹಣೆ ಮಾಡುವ (Bio-Remedation of Legacy Waste) ಕಾಮಗಾರಿ (ಇಂಡೆಂಟ ನಂ: **DMA/2023-24/OW/WORK_INDENT678**) ನಿರ್ವಹಿಸಲು ನಿಗದಿತ ದಸ್ತಾವೇಜ್‌ಗಳಲ್ಲಿ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ದಿನಾಂಕ : **31–07–2023** ರ ಸಂಜೆ 4:00 ಗಂಟೆಯ ಒಳಗಾಗಿ ಇಪ್ರೊಕ್ಯೂರಮೆಂಟ್ ಮೂಲಕವೇ ಟೆಂಡರ ಸಲ್ಲಿಸುವುದು. ಇ–ಪ್ರ್ಯೋಕ್ಯೂರಮೆಂಟ್ ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in/** ಹಾಗೂ **www.gajendragadatown.mrc.gov.in/** ಸಂಪರ್ಕಿಸುವುದು. ಹಾಗೂ ಟೆಂಡರ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ. ಈ ಟೆಂಡರ್‌ಗಳಿಗೆ ಸಂಬಂಧಿಸಿದ ಯಾವುದೇ ತಿದ್ದುಪಡಿಗಳನ್ನು ಇಪ್ರೊಕ್ಯೂರಮೆಂಟ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು ಯಾವುದೇ ಪೇಪರ್ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಗಜೇಂದ್ರಗಡ
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ ಗಜೇಂದ್ರಗಡ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/44/2023–24

ನಗರಸಭಾ ಕಾರ್ಯಾಲಯ, ಉಡುಪಿ, ಉಡುಪಿ ಜಿಲ್ಲೆ – 576101
Web: www.Udupicity.mrc.gov.in, Email: itstaff_ulb_udupi@yahoo.com
Phone: 0820-2520446/2520306, Fax : 0820-252436
No.: UCMC/HS/STP-MP/CR-36/2023-24 Date: 01.07.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ–8 ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 17.07.2023 ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳಿಗೆ ಇಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ	ಇ.ಎಂ.ಡಿ. ಮೊತ್ತ
1.	Tenders for the work of Providing Manpower Services like Plant Incharge, Supervisor, Helpers, Pump Operator, watchman, Mechanic Cum electrician to sewage treatment plant and Sucking Machine drivers cum Operators and sucking machine Helpers, weighbridge operator cum Computer Operator to STP in the limits of Udupi city municipal council (Total 26 Members)	DMA/2023-24/SE0183	Rs. 65,12,250.00/-	Rs. 97,684.00/-

ಸಹಿ/– ಪೌರಾಯುಕ್ತರು, ನಗರಸಭಾ ಕಾರ್ಯಾಲಯ, ಉಡುಪಿ – 576101

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2278480, ಫ್ಯಾಕ್ಸ್: 2275106, ಇ–ಮೇಲ್: itstaff_ulb_tumkur@yahoo.com ವೆಬ್‌ಸೈಟ್:www.tumkur city. mrc. gov.in
ಸಂ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/02/2023–24
ದಿನಾಂಕ: 30.06.2023

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗನರಪಾಲಿಕೆ ನಿಧಿಯಲ್ಲಿ ಹೊಸದಾಗಿ / ಮರು ಟೆಂಡರ್ ಕಾಮಗಾರಿಗಳನ್ನು ಕೈಗೊಳ್ಳಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumakuru city.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 30.06.2023 ರಿಂದ ದಿನಾಂಕ: 14.07.2023 ರವರೆಗೆ. 1. ಪ್ರಿ–ಬಿಡ್ ಮಿಟಿಂಗ್ ದಿನಾಂಕ: 05.07.2023 ಬೆಳಗ್ಗೆ 11.00 ಗಂಟೆಗೆ. 2. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 14.07.2023 ರಂದು ಸಾಯಂಕಾಲ 4.30 ಗಂಟೆವರೆಗೆ. 3. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 15.07.2023 ಬೆಳಗ್ಗೆ 4.35 ಗಂಟೆಗೆ 3. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 17.07.2023 ರ ಬೆಳಗ್ಗೆ 11.00 ಗಂಟೆಗೆ. 4. ಟೆಂಡರ್‌ನ ಯಶಸ್ವಿ ಬಿಡ್‌ದಾರರು ಕಾರ್ಯಾದೇಶ ಪಡೆಯುವ ಸಮಯದಲ್ಲಿ ಅಂದಾಜು ದರಕ್ಕಿಂತ ಕಡಿಮೆ ದರ ನಮೂದಿಸಿದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/62/KSMCA/2023-24

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401
(Autonomous Medical Institution, Government of Karnataka)
Phone: 08232-231003, 222086, 231197, 224040, Fax: 08232-231001
E-Mail Address: mimsmandyaoffice@gmail.com , mimsmandya@gmail.com

ಇ–ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ದತಿ)

ಸಂಖ್ಯೆ: ಮಿಮ್ಸ್/ಸರಬ(1)/ನೇ.ಚಿ&ಶ.ಚಿ/ಇ–ಟೆಂಡರ್/01/2023–24, ದಿ:26.06.2023
ಸಂಖ್ಯೆ: ಮಿಮ್ಸ್/ಸರಬ(1)/Physiology/E-tender/07/2022–23, ದಿ:26.06.2023

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ವಿವಿಧ ಐಟಂಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಮತ್ತಿತರ ವಿವರಗಳನ್ನು ಜಿಒಕೆ ಇ–ಪ್ರ್ಯೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ **https://kppp.karnataka.gov.in** ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.

ಕ್ರ. ಸಂ : **01**. ವಿವರಗಳು : **ನೇತ್ರಚಿಕಿತ್ಸಾ ವಿಭಾಗ– A-Scan Biometer.** ಟೆಂಡರ್‌ನ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : **3.25 ಲಕ್ಷಗಳು** (**ಇ.ಎಂ.ಡಿ ರೂ. 8.500**). **ಶಸ್ತ್ರಚಿಕಿತ್ಸಾ ವಿಭಾಗ– Plastic Surgery Instruments.** ಟೆಂಡರ್‌ನ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : **5.00 ಲಕ್ಷಗಳು** (ಇ.ಎಂ.ಡಿ ರೂ.12.500) ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ : **30.06.2023**. ಅರ್ಜಿ ಸಲ್ಲಿಕೆ ಅಂತಿಮ ದಿನಾಂಕ : **15.07.2023**.

ಕ್ರ. ಸಂ : **02**. ವಿವರಗಳು : ಶರೀರಕ್ರಿಯಾಶಾಸ್ತ್ರ ವಿಭಾಗ – ಇನ್ಸ್‌ಟ್ರುಮೆಂಟ್ಸ್ ಹಾಗೂ ಇತ್ಯಾದಿ ಐಟಂಗಳು. ಟೆಂಡರ್‌ನ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : **50.75 ಲಕ್ಷಗಳು** (ಇ.ಎಂ.ಡಿ ರೂ.1,01,500). ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ : **01.07.2023**. ಅರ್ಜಿ ಸಲ್ಲಿಕೆ ಅಂತಿಮ ದಿನಾಂಕ : **17.07.2023.**

ಸಹಿ/–ಮುಖ್ಯಆಡಳಿತಾಧಿಕಾರಿಗಳು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/85/2023–24

ಸೆಮಿಫೈನಲ್‌ಗೆ ಉತ್ತರ ವಲಯ

ದುಲೀಪ್ ಟ್ರೋಫಿ ಕ್ರಿಕೆಟ್: ಈಶಾನ್ಯ ವಲಯ ವಿರುದ್ಧ 511 ರನ್ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಶಾನ್ಯ ವಲಯ ತಂಡದ ವಿರುದ್ಧ 511 ರನ್‌ಗಳ ಭಾರಿ ಅಂತರದ ಗೆಲುವು ಸಾಧಿಸಿದ ಉತ್ತರ ವಲಯ ತಂಡ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಗೆಲುವಿಗೆ 666 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಈಶಾನ್ಯ ವಲಯ, ನಾಲ್ಕನೇ ದಿನವಾದ ಶನಿವಾರ 154 ರನ್‌ಗಳಿಗೆ ಆಲೌಟಾಯಿತು.

3 ವಿಕೆಟ್‌ಗಳಿಗೆ 58 ರನ್‌ಗಳಿಂದ ದಿನದಾಟ ಮುಂದುವರಿಸಿದ್ದ ಈಶಾನ್ಯ ವಲಯ ತಂಡದ ಬ್ಯಾಟರ್‌ಗಳು, ಉತ್ತರ ವಲಯದ ಬೌಲರ್‌ಗಳ ಶಿಸ್ತಿನ ದಾಳಿಯನ್ನು ಎದುರಿಸಿ ನಿಲ್ಲಲು ವಿಫಲರಾದರು. ಪಲ್ಜೋರ್ ತಮಾಂಗ್ (40) ಮತ್ತು ನಿಲೇಶ್ ಲಮಿಚಾನೆ (27) ಅವರು ಬೆಳಗ್ಗಿನ ಅವಧಿಯ ಕೆಲವು ಓವರ್‌ಗಳನ್ನು ಛಲದಿಂದ ಆಡಿ, ನಾಲ್ಕನೇ ವಿಕೆಟ್‌ಗೆ 57 ರನ್ ಸೇರಿಸಿದರು. ಈ ಪಂದ್ಯದಲ್ಲಿ ಈಶಾನ್ಯ ವಲಯ ತಂಡದ ಪರ ದಾಖಲಾದ ಅತಿದೊಡ್ಡ ಜತೆಯಾಟ ಇದು. ನಿಶಾಂತ್ ಸಿಂಧು ಅವರು ನಿಲೇಶ್ ವಿಕೆಟ್ ಪಡೆದು ಈ ಜತೆಯಾಟ ಮುರಿದರು.

ಆ ಬಳಿಕ ಆಫ್‌ಸ್ಪಿನ್ನರ್ ಪುಲ್ಕಿತ್ ನಾರಂಗ್ (43ಕ್ಕೆ 4) ಅವರ ಪರಿಣಾಮಕಾರಿ ದಾಳಿಗೆ ನಲುಗಿದ ರೊಂಗ್‌ಸೆನ್ ಜೊನಾಥನ್ ಬಳಗ, 154 ರನ್‌ಗಳಿಗೆ ಆಲೌಟಾಯಿತು.

ಈಶಾನ್ಯ ವಲಯದ ಪಲ್ಜೋರ್ ತಮಾಂಗ್ ಅವರ ವಿಕೆಟ್ ಗಳಿಸಿದ ಉತ್ತರ ವಲಯ ತಂಡ ಪುಲ್ಕಿತ್ ನಾರಂಗ್ (ಬಲದಿಂದ ಎರಡನೆಯವರು) ಸಹ ಆಟಗಾರರೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ದಕ್ಷಿಣ ವಲಯ –ಉತ್ತರ ವಲಯ ಪೈಪೋಟಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜುಲೈ 5 ರಿಂದ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ವಲಯ ಮತ್ತು ಉತ್ತರ ವಲಯ ತಂಡಗಳು ಪೈಪೋಟಿ ನಡೆಸಲಿವೆ. ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯಲಿರುವ ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಕೇಂದ್ರ ವಲಯವು ಪಶ್ಚಿಮ ವಲಯ ತಂಡವನ್ನು ಎದುರಿಸಲಿದೆ.

ಸೌರಭ್ ಕುಮಾರ್‌ಗೆ 8 ವಿಕೆಟ್: ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕೇಂದ್ರ ವಲಯ 170 ರನ್‌ಗಳಿಂದ ಪೂರ್ವ ವಲಯ ವಿರುದ್ಧ ಗೆದ್ದಿತು.

300 ರನ್‌ಗಳ ಗುರಿ ಬೆನ್ನಟ್ಟಿದ ಪೂರ್ವ ವಲಯ, 129 ರನ್‌ಗಳಿಗೆ ಆಲೌಟಾಯಿತು. 6 ವಿಕೆಟ್‌ಗಳಿಗೆ 69 ರನ್‌ಗಳಿಂದ ಆಟ ಮುಂದುವರಿಸಿದ ತಂಡವು ಸೌರಭ್ ಕುಮಾರ್ (64ಕ್ಕೆ 8) ಅವರ ಪರಿಣಾಮಕಾರಿ ದಾಳಿಗೆ ನಲುಗಿತು. ಮೊದಲ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಗಳಿಸಿದ್ದ ಸೌರಭ್ ಒಟ್ಟು 11 ವಿಕೆಟ್ ಪಡೆದ ಸಾಧನೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರ ವಲಯ: 136 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 540. ಈಶಾನ್ಯ ವಲಯ: 39.2 ಓವರ್‌ಗಳಲ್ಲಿ 134. ಎರಡನೇ ಇನಿಂಗ್ಸ್: ಉತ್ತರ ವಲಯ: 55.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 259 ಡಿಕ್ಲೇರ್ಡ್. ಈಶಾನ್ಯ ವಲಯ: 47.5 ಓವರ್‌ಗಳಲ್ಲಿ 154 (ಪಲ್ಜೋರ್ ತಮಾಂಗ್ 40, ನಿಲೇಶ್ ಲಮಿಚಾನೆ 27, ಪುಲ್ಕಿತ್ ನಾರಂಗ್ 43ಕ್ಕೆ 4, ನಿಶಾಂತ್ ಸಿಂಧು 25ಕ್ಕೆ 2) ಫಲಿತಾಂಶ: ಉತ್ತರ ವಲಯಕ್ಕೆ 511 ರನ್ ಗೆಲುವು

ಆಲೂರು ಕ್ರೀಡಾಂಗಣ: ಮೊದಲ ಇನಿಂಗ್ಸ್: ಕೇಂದ್ರ ವಲಯ: 71.4 ಓವರ್‌ಗಳಲ್ಲಿ 182, ಪೂರ್ವ ವಲಯ: 42.2 ಓವರ್‌ಗಳಲ್ಲಿ 122. ಎರಡನೇ ಇನಿಂಗ್ಸ್:ಕೇಂದ್ರ ವಲಯ: 87.5 ಓವರ್‌ಗಳಲ್ಲಿ 239. ಪೂರ್ವ ವಲಯ: 41.2 ಓವರ್‌ಗಳಲ್ಲಿ 129 (ಶಹಬಾಜ್ ನದೀಂ 14, ಆಕಾಶ್ ದೀಪ್ 14, ಸೌರಭ್ ಕುಮಾರ್ 64ಕ್ಕೆ 8) ಫಲಿತಾಂಶ: ಕೇಂದ್ರ ವಲಯಕ್ಕೆ 170 ರನ್ ಗೆಲುವು

ಏಷ್ಯನ್ ಗೇಮ್ಸ್: ಅಮಿತ್, ನೀತುಗೆ ಕೈತಪ್ಪಿದ ಸ್ಥಾನ

ಬಾಕ್ಸಿಂಗ್ ತಂಡಕ್ಕೆ ದೀಪಕ್, ನಿಶಾಂತ್

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ದೀಪಕ್ ಭೋರಿಯಾ (51 ಕೆ.ಜಿ) ಮತ್ತು ನಿಶಾಂತ್ ದೇವ್ (71 ಕೆ.ಜಿ) ಅವರು ಚೀನಾದ ಗುವಾಂಗ್ ಝೌನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲಿರುವ ಭಾರತ ಪುರುಷರ ಬಾಕ್ಸಿಂಗ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

2022 ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ಗೆದ್ದ ಪರ್ವೀನ್ ಹೂಡಾ (57 ಕೆ.ಜಿ), ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತೆ ಜೈಸ್ಮಿನ್ ಲಂಬೋರಿಯಾ (60 ಕೆ.ಜಿ), ಅರುಂಧತಿ ಚೌಧರಿ ಮತ್ತು ಪ್ರೀತಿ ಪವಾರ್ ಅನುಭವಿಗಳಾದ ನಿಖತ್ ಝರೀನ್ (51 ಕೆ.ಜಿ) ಮತ್ತು ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ) ಜೊತೆ ಮಹಿಳಾ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಏಷ್ಯನ್ ಕ್ರೀಡಾಕೂಟ ಸೆಪ್ಟೆಂಬರ್ 23 ರಿಂದ ಅಕ್ಟೋಬರ್ 8ರವರೆಗೆ ನಡೆಯಲಿದೆ.

ಮಾರ್ಚ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ತಲುಪಿದ ಕಾರಣ, ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಮತ್ತು ಟೋಕಿಯೊ ಒಲಿಂಪಿಕ್ಸ್ ಕಂಚು ಗೆದ್ದ ಲವ್ಲಿನಾ ಅವರು ನೇರವಾಗಿ ಅರ್ಹತೆ ಪಡೆದಿದ್ದಾರೆ.

ಏಷ್ಯನ್ ಕ್ರೀಡಾಕೂಟವು, 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಮೊದಲ ಅರ್ಹತಾ ಕೂಟವಾಗಿರುವ ಕಾರಣ ಏಷ್ಯಾದ ಬಾಕ್ಸರ್‌ಗಳಿಗೆ ಇದು ಮಹತ್ವಪೂರ್ಣವಾಗಿದೆ. ಏಷ್ಯನ್ ಗೇಮ್ಸ್ ಲೈಟ್ ಫ್ಲೈವೇಟ್ ವಿಭಾಗದ ಹಾಲಿ ಚಾಂಪಿಯನ್ ಅಮಿತ್ ಪಂಘಲ್ ಅವರು ಅರ್ಹತೆ ಪಡೆಯಲು ವಿಫಲರಾಗಿದ್ದಾರೆ.

ಭಾರತ ಬಾಕ್ಸಿಂಗ್ ಫೆಡರೇಷನ್ ಹೊಸ ಆಯ್ಕೆ ನೀತಿಯ ಪ್ರಕಾರ ಬಾಕ್ಸರ್ ಒಬ್ಬರ ಸಾಮರ್ಥ್ಯವನ್ನು 2 ರಿಂದ 3 ವಾರಗಳ ಅವಧಿಯಲ್ಲಿ ವಿವಿಧ ಮಾನದಂಡಗಳಡಿ ಅಳೆಯಲಾಗುತ್ತದೆ. ಇದರಡಿ ದೀಪಕ್ ಅವರು ಮೇ ತಿಂಗಳಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ ಆಯ್ಕೆಯಲ್ಲೂ, ಅಮಿತ್ ಪಂಘಲ್ ಅವರಿಗಿಂತ ಮುಂದಿದ್ದರು.

ದೀಪಕ್ ಮತ್ತು ನಿಶಾಂತ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಗಮನ ಸೆಳೆದಿದ್ದರು. ಸೆಮಿಫೈನಲ್‌ನಲ್ಲೂ ತೀವ್ರ ಹೋರಾಟ ಪ್ರದರ್ಶಿಸಿ ಸೋತು ಕಂಚಿನ ಪದಕ ಪಡೆದಿದ್ದರು.

ಮಹಿಳೆಯರ 48 ಕೆ.ಜಿ. ತೂಕ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿರುವ ನೀತು ಘಂಗಾಸ್ ಅವರು 54 ಕೆ.ಜಿ. ವಿಭಾಗದಲ್ಲಿ ಅರ್ಹತೆ ಪಡೆಯಲು ವಿಫಲರಾದರು. ಹರಿಯಾಣದ ಸ್ಪರ್ಧಿ, 19 ವರ್ಷದ ಪ್ರೀತಿ ಪವಾರ್, ನೀತು ಅವರನ್ನು ಹಿಂದೆಹಾಕಿದ್ದರು. ಒಲಿಂಪಿಕ್ಸ್‌ನಲ್ಲಿ 48 ಕೆ.ಜಿ. ತೂಕ ವಿಭಾಗ ಇರದ ಕಾರಣ ಮತ್ತು ನಿಖತ್ ಈಗಾಗಲೇ 51 ಕೆ.ಜಿ. ವಿಭಾಗದಲ್ಲಿ ಅರ್ಹತೆ ಪಡೆದಿರುವ ಕಾರಣ ನೀತು 54 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಬಯಸಿದ್ದರು.

ತಂಡ ಇಂತಿದೆ: ಮಹಿಳೆಯರು: ನಿಖತ್ ಝರೀನ್ (51 ಕೆ.ಜಿ.), ಪ್ರೀತಿ ಪವಾರ್ (54 ಕೆ.ಜಿ), ಪರ್ವೀನ್ ಹೂಡ (57 ಕೆ.ಜಿ), ಜೈಸ್ಮಿನ್ ಲಂಬೋರಿಯಾ (60 ಕೆ.ಜಿ), ಅರುಂಧತಿ ಚೌಧರಿ (66 ಕೆ.ಜಿ), ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ)

ಪುರುಷರು: ದೀಪಕ್ ಭೋರಿಯಾ (51 ಕೆ.ಜಿ), ಸಚಿನ್ ಸಿವಾಚ್ (57 ಕೆ.ಜಿ), ಶಿವ್ ಥಾಪಾ (63.5 ಕೆ.ಜಿ), ನಿಶಾಂತ್ ದೇವ್ (71 ಕೆ.ಜಿ), ಲಕ್ಷ್ಯ ಚಾಹರ್ (80 ಕೆ.ಜಿ), ಸಂಜೀತ್ (92 ಕೆ.ಜಿ) ಮತ್ತು ನರೇಂದರ್ ಬೆರ್ವಾಲ್ (+ 92 ಕೆ.ಜಿ).

ಎಲೊರ್ಡಾ ಕಪ್: ಭಾರತಕ್ಕೆ ಮತ್ತೆ ಎರಡು ಕಂಚು

ಅಸ್ತಾನಾ (ಪಿಟಿಐ): ಇಲ್ಲಿ ನಡೆಯುತ್ತಿರುವ ಎಲೊರ್ಡಾ ಕಪ್ ಬಾಕ್ಸಿಂಗ್ ಟೂರ್ನಿಯಲ್ಲಿ ಭಾರತದ ಬಾಕ್ಸರ್‌ಗಳು ಶನಿವಾರ ಎರಡು ಕಂಚು ಗೆಲ್ಲುವ ಮೂಲಕ ಅಭಿಯಾನ ಅಂತ್ಯಗೊಳಿಸಿದರು. ಈ ಮೂಲಕ ಟೂರ್ನಿಯಲ್ಲಿ ಭಾರತವು ಒಟ್ಟು 5 ಕಂಚಿನ ಪದಕ ಗೆದ್ದಿದೆ.

ಶನಿವಾರ ನಡೆದ 60 ಕೆ.ಜಿ. ವಿಭಾಗದ ಸೆಮಿಫೈನಲ್‌ನ ಸ್ಪರ್ಧೆಯಲ್ಲಿ ಭಾರತದ ವಿಜಯಕುಮಾರ್ 1-4ರಿಂದ ಆತಿಥೇಯ ಕಜಕಸ್ತಾನದ ಬೆಕನೂರ್ ಒಝುನೋವ್ ಎದುರು ಪರಾಭವಗೊಂಡು, ಕಂಚಿಗೆ ತೃಪ್ತಿಪಟ್ಟುಕೊಂಡರು.

81 ಕೆ.ಜಿ. ವಿಭಾಗದ ಸೆಮಿಫೈನಲ್ ಸ್ಪರ್ಧೆಯಲ್ಲಿ ಸುಷ್ಮಾ ಕಜಕಸ್ತಾನದ ಫರೀಜಾ ಶೋಲ್ಟೆ ವಿರುದ್ಧ 0-5ರಿಂದ ಪರಾಭವಗೊಂಡು, ಕಂಚಿನೊಂದಿಗೆ ಹೋರಾಟಕ್ಕೆ ತೆರೆ ಎಳೆದರು.

ಇದಕ್ಕೂ ಮೊದಲು ಕೀಷಮ್ ಸಂಜಿತ್ ಸಿಂಗ್ (48 ಕೆಜಿ), ನೀಮಾ (63 ಕೆಜಿ) ಮತ್ತು ಸುಮಿತ್ (86 ಕೆಜಿ) ಕಂಚಿನ ಪದಕ ಗೆದ್ದುಕೊಂಡಿದ್ದರು.

PROPERTY CORNER
ಕ್ಲಾಸಿಫೈಡ್ಸ್

OFFICE SPACE FOR RENT- 21,662 Sq.ft.
Fully furnished office space available for rent at :
Mfar Silverline Tech Park
2nd Floor, Plot No.180, EPIP II Phase, Whitefield, Bangalore-560066.
"Metro Station: 300 to 400 meters" distance from both sides of Kundanahalli and Vydehi Hospital.
Workstations 150nos, Cabin 13nos, Meeting Rooms 2nos, Discussion Room 4nos, with Centralized AC, Covered Car parking is 20nos, and Surface Car Parking is 17nos, Power Backup.
For Further Details Please contact :
Mr. Prashanth at +91 8095000300
or Email: prashanth@addgroup.co.in

INDUSTRIAL /COMMERCIAL PLOT REQUIREMENT
We are looking for an Industrial/Commercial plot in Bangalore having area in between 1800 to 3500 sq. ft. on an outright immediate purchase.
The plot should have good connectivity preferably within 1 km radius of any Metro Station.
Please contact :
Mr. Prashanth at +91 8095000300
or Email prashanth@addgroup.co.in

Premium Plots for Sale

- Gated Community
- with World Class Amenities
- RERA Approved
- All Leading Banks funding
- Ready to Registration
- Beautiful Nandi View
- 5 Star Club House
- Bang on State Highway, near Nandi Hills

Contact: 9060185719 | 9606617571 | 9060609166
Web: shrivasamontanavista.com

Soundarya PARADISE **@Jalahalli, BANGALORE**
Opposite to Kendriya Vidyalaya

BBMP APPROVED / CC / OC RECEIVED
'A' KHATA / RERA REGISTERED
FLAT FOR SALE
READY TO OCCUPY
Only Few Flats Left of **2 BHK & 3 BHK**
All Leading Banks Approved
+91-8217641880 / 7892914631

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Arkavathi Layout

ARKAVATHI LAYOUT BDA Site For Sale Near Manyatha tech park Commercial Measurement: 40×60, 2 Sites 4800 sq.ft, West Facing Ph: 9035151657

ARKAVATHI LAYOUT 30x30, Corner North West, 2nd block 20x30 30x40, Genuine Buyer's. :USR- 7019770736/ 8951614989.

Banashankari

"BANASHANKARI 2ND, 3rd, 6th Stage Residential/ Commercial 50x80, 40x60, 45x50, 30x50, Genuine Buyers Call: 9845286505"

AVAILABLE BDA Sites,Banshankari6th,Stage, Anjanapura Visweswaraiah LayoutJPNagar8th,9th,Phase 20x30,30x40 40x60, 50x80,Contact Genuine Buyers: 9945778333

COMMERCIAL SITE for SALE: North West Corner 80feet road and 40feet road BDA auction, 2nd Block BSK 6th Stage Bangalore, buyers only 9900195989. Brokers Excuse

BANASHANKARI KATRIGUPPE 1200 sqft Old House for sale., Clear titles, Going cheap. Phone. 8660514834 East

40X60, 50X80 AVAILABLE FOR SALE, NORTH. EAST FACE in BANASHANKARI 6th STAGE. CALL: MANOJ 9731410616

Bannerghatta Road

SALE SITE Akshaya Nagar 30x50, 40x60 Close to DLF Apartment Contact: 9844134068 9066399102

30X40 WF 30x50 WF 40x60 NWC 40x70 EF BBMP A-Katha Akshaynagar Near Hulimavu Metro: 9341238064

J P Nagar

SALE 40X60 WF, Royal County JP Nagar 8th Stage, Opposite Godavari Cafe, 15000/-Sft, Negotiable. 9845227242

HBR Layout

PREMIUM BDA Commercial sites for sale HBR Layout 80 Feet Road (Near BDA Complex) Contact 9844039482

HRBR Layout

HRBR 2ND Block North Facing 40x80 Site 50 Feet Road, Beautiful Location for Sale Rs 21,000 Negotiable Mobile: 73493-22223

Jayanagar

SALE BDA 30x50 old House North Facing opposite to Park Jayanagar 6th Block. Contact: 8123202299

Kanakapura Road

KANAKPURA ROAD Kaglipur Bustop Opp, Near Art of Living 30X40 Residential. Converted Site Sale 4000/- Psft: 9342552428

KANAKAPURA ROAD Kaggalipura BMRDA Approved 'E'Khata 30x40 E/F, 30X50 W/F, 3000/- Negotioble : 9740150364/9986146147

SALE 30X40 NF, BDA Approved Vajarahalli, Kanakapura Road Near Metro, Under Electric Line. Contact: 7483585591

K R Puram

30X40 PLOT for Sale. Near K.R.Puram Metro, Kagadaspura Main Road, Nagappa Reddy Layout, Genuine buyer Contact: 7358274782.

Kempegowda Layout

KEMPEGOWDA LAYOUT BDA Sites for Sale Commercial 40x60, 100ft Road Near BDA Complex Mysore Road Metro: 7899570235

"KEMPEGOWDA LAYOUT 6th Block H Sector 50ft Road 50x80 West facing Site Sale. 7019314962/ 9845500019"

KEMPEGOWDA LAYOUT Commercial and Residential Site for Sale 20x30, 30x40, 40x60 and 50x80. Kumar 9945112279

Nagarabhavi

"SALE 40X60,30X40 MPM-Layout near Ambedkar Engineering college, Good location, Genuine Buyers Contact: 7760388034/ 9242135834"

Nandini Layout

SALE BDA 37x40, South East Corner site for sale at Railway Layout, Nandini Layout Call 9844039482

Nelamangala

NELAMANGALA SITE For sale at E.K. Enclave just opp. to RTO Nelamangala. Contact Raju:- 9448082402.

Rajajinagar

***RAJAJINAGAR* INDUSTRIAL** Town BDA property 60x120 and 120x120 North-West corner site for sale. Contact: 9945079777

Rajarajeshwari Nagar

R.R.NAGARA BEML Layout 30X40 House Sale 1.60Cr. Javaregowdana Doddi 30x40 Site Sale 66L. 9148914809, 9740075563.

Sanjaynagar

SITES SALE RMV 2nd Stage 50X80 EF Sanjaynagar 30X50 NF Judicial Layout 60X90 NF: 7090777677

Uttarahalli

UTTARA HALLI Site for Sale Poorna Prajna Layout 40x60 Corner Site, Brokers Excuse Mob: 9972549472

FOR SALE 30×40 rent yielding property in Gowdanapalya and Hrishikesh Nagar, Bangalore South. Call 9611937546

Yelahanka

30x40 Converted Plot @ 1,65,000/-
138/- per sq.ft, 90 minutes Journey from Yelahanka
Ready for Registration
9343510635, 9010559539

Out-Station

KHB ALLOTTED 20x30 SITE IN HEBRI UDUPI BEAUTIFUL TOWN @ FOOT OF THE WESTERN GHATS PRICE 5.5L RAGHAVENDRA: 9606866368

Vishweshwariah Layout

"40X60 NF Residential BDA 5th Block Vishveshwaraiah Layout, 40X60 WF Railway Layout Sites Sale- 9845143579"

30X40 WF BBMP A-KATHA 40FT ROAD 8500/- MODERN LAYOUT NEAR VISHWESHWARAIAH LAYOUT 6TH BLOCK: 9916826976

Villas/Bunglows

Magadi Road

INDEPENDANT VILLA for Sale Spacious 6600 sq.ft. villa, built on 3600 sq.ft. East facing corner Site. 6 bedroom, 6 bathroom,Servant House, surrounded by garden on two Sides. Carpark. gated community with all amenities. No.5, Rashi Residency Located on 4 lane Magadi Road, Kadabagere Cross, Bangalore. Call: 9972300999

Thanisandra

SOBHA CITY Tanisandra Main Road, 5 BHK Row House villa for sale. Contact; Chandan: 9900665081

Rajarajeshwari Nagar

RR.NAGAR 50X80 VIJAYNAGAR 60x90 Basaveswarnagar Sadashivnagar Malleswaram Kumara Park RMV 2nd Stage 2years Old Architect BUNGLOW 5Carparks Generator Modern Office Terrace Garden 5BHK A/C, Basement Remote Car Garage Door Modern Pooja Room: 9845057822/ 9980830958

Agricultural Land Converted

Multiple Locations

SALE INDUSTRIAL/ Commercial/ Residential vacant land Bannerghatta Road 17000 to 70000sft, Hulimavu 3600 to 19700sft, Bidadi 17000to 87000sft. Visit vernadevelopers.com MG Road, Bangalore. 9353128035/ 9620253180

Commercial Building

Indiranagar

COMMERCIAL PROPERTY, 100 Feet Road, Indiranagar Bangalore is a treasure for Serious Investor' Whatsapp 84311 33959

Commercial Land

Mysore Road

LAND FOR SALE
Residential / Commercial / Educational Institutions / Industrial / Warehouse
Convertible Land
Attached to Bengaluru - Mysore Expressway (NH 274)
Near Ramnagar 3.08 Acres
Mobile: 98456 73081
98455 20505, 96634 52883
98862 57581

Commerical

Kengeri

SHOP FOR Sale Ground floor 10*30, 10*30 Kengeri, Kodipalya, Post office Road. N. Shiva: 9844195881

Flat

Rajajinagar

SALE NEAR Iskcon, Orion Mall, Opposite Park, Single BHK two Bathrooms, 425 Sqft, Second Floor Staircase, Plot 1823 Sqft, Land Share 233 Sqft, 34 Lakhs Owner: 9448313709

J P Nagar

SALE/ RENT JPNagar: 5th & 6th Phase, 1 BHK and 2 BHK Apartments. Owner: 9482839075.

Bannerghatta Road

3 BHK FLAT SALE

Duplex Semi Furnished 1725 sqft, @ Gottigere, Damden Zephyr, Big Car Park, Amenities, Rs. 90 Lac, Negotiable. CALL : 98452 06422

Rajarajeshwari Nagar

"FLAT FOR-SALE 2&3 BHK East facing Ready to move, Good location near Gnanakshi School Rajarajeshwari Nagar. 9019533999/ 9900275599"

Uttarahalli

IMAGE GREENS Apartment 1st Floor, 1300 Sqft. 2 BHK SALE. Poornaprajna Layout, 13 Years old. Call:9945724472

General

Multiple Locations

BUY, SELL, Rent Residential, industrial and farm land, office space available for rent. Contact. 9380586105.

House

Banashankari

ITTAMADU HOUSE SALE. Ground 2 BHK, 1st, 2nd Duplex. Car Parking, Site- South, Door- East. 9945724472.

Hanumanthnagar

"KATRIGUPPE A KATHA 30x43, old demolition House 2 Crore, 15x45 old demolition House 1.15 Crore. 9845286505"

Jayanagar

SALE 40X60 Jayanagar 7th Block North Facing old House Excellent Location Contact: 9844134068 9066399102

Kanakapura Road

VAKIL GARDEN CITY, 4BHK, INDEPENDENT HOUSE SALE 5.5CR PLOT 4200SFT 3500SFT BUILTUP 9845291967 9900743700

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Nagarabhavi

NAGARBHAVI NEAR Rajakaluve 28'x40' 55 lakhs. Kittanahalli 640 sft house under construction- 25 lakhs. 8197263750

Vidyaranyapura

SALE INDEPENDENT House North West Corner Plot 3120 Sqft Near HMT Water Tank with Clear Title: 9880515577

Industrial & Factory

Tumkur Road

SALE COMMERCIAL Converted Land. 12-22 Acres. Suitable for Warehouse, Logistics, Educational University. NAIK: 9141326819

Residential/ Commercial

Hosur Road

SITE FOR Sale Near Attibelle, Bangalore. Size 28 X 41.5 East Facing Mob: 8454046905

Marathahalli

1% RENTAL Getting Building at Marathahalli Near ITPL Road, Getting 2.90L, Sale 3.10cr. Contact: 9980577227.

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH FACING CONTACT OWNER 9844018823

REAL ESTATE BUYING

Agricultural Land Converted

Intl Airport Road

SALE: DC Converted 93,700sft land on six lane ring road, Nelamangala to Devenahalli Airport, 278feet frontage, suitable for Warehouse, International School, Housing. Asper Vastu. Kumar: 9886371998

Sarjapur Road

SALE 21 Guntas residentially converted land for sale at Sarjapura Road, Sixty feet inside from Main Road. Contact: 8310818291.

General

General

WANTED 1 to 10 Acres Land for Investment, with Road, water facility, level land without Encumbrance from Silk Board to Hosur side, 50 Kms stretch. Interested Land Owners Call: 9620728917

DC CONVERSION/ Change of land use, Phodi Durasti, NOC,Approvals, Khata, RERA Work,Para Legal Services.Barton Centre MG Road. 9916310226/ 9353128035. vernadevelopers.com

Sites

Anjanapura

WANTED SITES ANY MEASUREMENT Anjanapura, Banashankari 6th Stage, JP Nagar 8th/ 9th Phase, Narayana Nagar Kanakapura Road, CONTACT: 9845298419

Banashankari

WANTED BDASITES Banashankari 6th_Stg Vishweswaraiah Layout, Anjanapura,JPNagar8th,9th, Phase_20x30 30x40,40x60,50x80,Call GenuineSellers:9845812635

WANTED BDA site's bsk 6th stage, Anjanapura, Jp Nagar 8th and 9th Phase, vishweshwaraiah layout, Kempegowda, Arkavathy 20x30, 30x40, 40x60, 50x80. NRI buyers registration within 15 days. Contact Surya properties:- 9880659939/ 9916759939

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Vishweshwariah Layout

BDA-SITES WANTED Kempegowda Layout Vishveshwaraiah Layout Other BDA Approved Layouts 30x40, 40x60, 50x80 Immediate Settlement Call:8660220048 7676900174

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

***WANTED BDA** SITES* Vishveswarayya layout, Kempegowda layout, Nagarabavi.50x80, 40x60, 30x40, 20x30. Contact: 9902556939

BUILDERS ESSENTIAL

Building Contractors

WE WILL undertake building constructions & renovations M/s Samruddhi infrastructures Engineers & contractors 9980632771/ 9900434127

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

RENTAL PROPERTIES

Accommodation Available

Commercial

GROUND FLOOR available for Office space, Doctors, C.A.'s, Advocates available on Rent 1500 sft. 5th A Main road facing ,HRBR layout, Kammanahalli, Bengaluru. Contact - 9019146695

Industrial And Factory

MODULAR FURNITURE Factory 4000 sft, 40 HP, with 80 lakh worth Imported Machinery for rent at Peenya 2nd stage. Contact: 9845309926

Villas/Bunglows

INDEPENDENT DUPLEX VILLA FOR RENT, J.P.Nagar, Four Spacious attached, AC, Fully Furnished Rooms, Ample Parking Space Suitable for Corporate Guest Houses, Montessori Day Care, Film Shooting, 9341273990.

DH DECCAN HERALD ಪ್ರಜಾವಾಣಿ

BOOK YOUR REAL ESTATE
AD IN DECCAN HERALD ALL KARNATAKA & PRAJAVANI ALL KARNATAKA
@ 800/-* Per Sqcm Single Column
@ 900/-* Per Sqcm Multi Column
conditions apply*
For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

ADMISSION CORNER
ಕ್ಲಾಸಿಫೈಡ್ಸ್

MAKE A SUCCESSFUL CAREER AFTER 10th Std.

12th/PUC in Science or ITI completed students have direct lateral entry into 2nd year Diploma

Diploma in Engineering Courses
Minimum Eligibility: 10th Pass
Placement Assistance provided
LIMITED SEATS ONLY
- Aeronautical Engineering
- Automobile Engineering
- Mechanical Engineering
- Computer Science & Engg.

ADMISSIONS ARE OPEN
8971404357
9740037853
8050461016
(Approved by DTE & AICTE)
HEA POLYTECHNIC Bengaluru
P.B.No. 3776, Ashwathanagar, Marathahalli, Bengaluru-560037
Ph:080-25238650, 25232217 • Toll free: 18004258650
Email: admissions@hindustanacademy.edu.in
www.hindustanacademy.edu.in

ಅವಧಿ ಮುಗಿದ ಆಹಾರ ಪೊಟ್ಟಣ ಮಾರಾಟ: ದಾಳಿ

ಬೆಂಗಳೂರು: ಅವಧಿ ಮುಗಿದ ಆಹಾರ ವಸ್ತುಗಳನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ಆರೋಪದಡಿ ಅರಿಹಂತ್ ಟ್ರೇಡಿಂಗ್ ಕಂಪನಿ ಮಳಿಗೆ ಮೇಲೆ ಸಿಸಿಬಿ ಪೊಲೀಸರು ಹಾಗೂ ಆಹಾರ ಸುರಕ್ಷತೆ ಇಲಾಖೆ ಅಧಿಕಾರಿಗಳು ಜಂಟಿಯಾಗಿ ದಾಳಿ ನಡೆಸಿದ್ದು, ಹಲವು ತಿಂಗಳಿನಿಂದ ನಡೆಯುತ್ತಿದ್ದ ಅಕ್ರಮವನ್ನು ಪತ್ತೆ ಮಾಡಿದ್ದಾರೆ.

ಕಾಟನ್‌ಪೇಟೆ ಠಾಣೆ ವ್ಯಾಪ್ತಿಯ ನಲಬಂದ್ ಲೇನ್‌ನಲ್ಲಿರುವ ಎ.ಎಸ್. ಚಾರ್ ಸ್ಟ್ರೀಟ್‌ನಲ್ಲಿ 'ಅರಿಹಂತ್ ಟ್ರೇಡಿಂಗ್' ಕಂಪನಿ ಮಳಿಗೆ ಹಾಗೂ ಗೋದಾಮು ಇದೆ. ಅಲ್ಲಿಯೇ ಬಿಸ್ಕತ್, ಚಾಕೊಲೇಟ್, ಅಡುಗೆ ಎಣ್ಣೆ, ಹಾಲಿನ ಪೌಡರ್ ಹಾಗೂ ಇತರೆ ಆಹಾರ ವಸ್ತುಗಳ ಪೊಟ್ಟಣಗಳನ್ನು ಸಂಗ್ರಹಿಸಿಡಲಾಗಿತ್ತು.

'ಮಾರಾಟವಾಗದೇ ಉಳಿದ ಹಾಗೂ ಅವಧಿ ಮೀರಿದ ಆಹಾರ ಪೊಟ್ಟಣಗಳನ್ನು ಸಂಗ್ರಹಿಸಿಡಲಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಯಿತು' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

'ಕೆಲಸಗಾರರನ್ನು ವಿಚಾರಿಸಿದಾಗ ಆಹಾರ ಪದಾರ್ಥಗಳನ್ನು ಶ್ರೀಲಕ್ಷ್ಮಿ ಟ್ರೇಡರ್ಸ್ ಮಳಿಗೆಯಿಂದ ತಂದಿರುವುದಾಗಿ ಹೇಳಿದ್ದರು. ಬಳಿಕ, ಅಲ್ಲೂ ದಾಳಿ ಮಾಡಲಾಯಿತು' ಎಂದಿವೆ.

ಬೆಂಗಳೂರು ರೇಸ್

ಕೂಲ್ ರೈಡರ್ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲಾಂಗ್ ಲೀಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಗ್ರೂವಿನ್ 2, ಕಾಂಟಡೋರ್ 6, ಪ್ರಿನ್ಸೆಸ್ ಜಾಸ್ಮೈನ್ 8
2ನೇ ರೇಸ್: ಅಲ್ಡಿವ 1, ನ್ಯಾಯ 8, ಪ್ರಾಣ 5
3ನೇ ರೇಸ್: ವಿನ್ ಮೈ ಲುವ್ 2, ಅಹರ್ನೆ 4, ಮೆಷರ್ ಆಫ್ ಟೈಮ್ 8
4ನೇ ರೇಸ್: ರಿಕಾರ್ಡೋ 6, ಗ್ಯಾಂಡೊಲ್ಫಿನಿ 3, ನಾಟಿ ಚಾಲೆಂಜರ್ 4
5ನೇ ರೇಸ್: ಪಾವರೊಟ್ಟಿ 1, ಎರಿಡಾನಿ 4, ಫಾಂಡ್‌ನೆಸ್ ಆಫ್ ಯೂ 3
6ನೇ ರೇಸ್: ಯುಕಾನ್ 2, ಅಂಡೊರ 4, ಆರ್ಟೆಮಿಸ್ ಇಗ್ನೇಷಿಯಾ 6
7ನೇ ರೇಸ್: ಕೂಲ್ ರೈಡರ್ 6, ಈಸ್‌ನಾಟ್ ಶೀ ಬ್ಯೂಟಿಫುಲ್ 10, ಆಲ್
8ನೇ ರೇಸ್: ಆಲ್ವೇಸ್ ಹ್ಯಾಪಿ 1, ಜನರಲ್ ಪ್ಯಾಟನ್ 2, ಸಿಯೋಲ್ 5

ಉತ್ತಮ ಬೆಟ್: ಗ್ರೂವಿನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

₹10.48 ಕೋಟಿ ಮೌಲ್ಯದ ಭೂ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿವಿಧ ತಾಲ್ಲೂಕುಗಳ 4 ಎಕರೆ 12 ಗುಂಟೆ ಪ್ರದೇಶದ ಒತ್ತುವರಿ ತೆರವು
- ಒತ್ತುವರಿಯಾಗಿದ್ದ ಗುಂಡುತೋಪು, ಖರಾಬು ಜಾಗ ವಶ

ಬೆಂಗಳೂರು: 'ಬೆಂಗಳೂರು ನಗರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ 4 ಎಕರೆ 12 ಗುಂಟೆ ಪ್ರದೇಶದ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಅದರ ಮೌಲ್ಯ ₹ 10.48 ಕೋಟಿ' ಎಂದು ಜಿಲ್ಲಾಧಿಕಾರಿ ಕೆ.ಎ. ದಯಾನಂದ ತಿಳಿಸಿದ್ದಾರೆ.

ಬೆಂಗಳೂರಿನ ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿ ಶೀಗೇಹಳ್ಳಿ ಗ್ರಾಮದ ₹2.02 ಕೋಟಿ ಮೌಲ್ಯದ 1 ಎಕರೆ 20 ಗುಂಟೆ ವಿಸ್ತೀರ್ಣದ ಸರ್ಕಾರಿ ಗೋಮಾಳ, ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ-2 ಹೋಬಳಿಯ ಬೈಲಕೊನೇನಹಳ್ಳಿ ಗ್ರಾಮದಲ್ಲಿ ₹ 85 ಲಕ್ಷ ಮೌಲ್ಯದ 11 ಗುಂಟೆ ವಿಸ್ತೀರ್ಣದ ಸರ್ಕಾರಿ ಗೋಮಾಳ, ಯಶವಂತಪುರ-2 ಹೋಬಳಿಯ ಅಂದ್ರಹಳ್ಳಿ ಗ್ರಾಮದಲ್ಲಿ ₹ 40 ಲಕ್ಷ ಮೌಲ್ಯದ 2 ಗುಂಟೆ ಸ್ಮಶಾನ ಭೂಮಿ ಒತ್ತುವರಿ ತೆರವುಗೊಳಿಸಲಾಯಿತು.

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಹೊನ್ನಿಗನಹಟ್ಟಿ ಗ್ರಾಮದಲ್ಲಿ ₹ 5 ಕೋಟಿ ಮೌಲ್ಯದ 2 ಗುಂಟೆ ಗೋಮಾಳ ಜಮೀನು, ಕೆಂಗೇರಿ ಹೋಬಳಿಯ ಗುಡಿಮಾವು ಗ್ರಾಮದಲ್ಲಿ ₹ 40 ಲಕ್ಷ ಮೌಲ್ಯದ 7 ಗುಂಟೆ ಗುಂಡು ತೋಪು ಹಾಗೂ ಉತ್ತರಹಳ್ಳಿ ಹೋಬಳಿಯ ರಾವುಗೋಡ್ಲು ಗ್ರಾಮದಲ್ಲಿ ₹ 1 ಕೋಟಿ ಮೌಲ್ಯದ 23 ಗುಂಟೆ ಸ್ಮಶಾನ ಜಾಗ ವಶಪಡಿಸಿಕೊಳ್ಳಲಾಯಿತು.

ಯಲಹಂಕ ತಾಲ್ಲೂಕಿನ ಜಾಲ ಹೋಬಳಿಯ ದಾಸನಾಯ್ಕನಹಳ್ಳಿ ಗ್ರಾಮದಲ್ಲಿ ₹ 60 ಲಕ್ಷ ಮೌಲ್ಯದ 1 ಎಕರೆ ಸರ್ಕಾರಿ ಕಟ್ಟೆ, ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಹಲಸಹಳ್ಳಿ ತಿಪ್ಪಸಂದ್ರ ಗ್ರಾಮದಲ್ಲಿ ₹ 5 ಲಕ್ಷ ಮೌಲ್ಯದ 5 ಗುಂಟೆ ಸರ್ಕಾರಿ ಕುಂಟೆ, ಜಿಗಣಿ ಹೋಬಳಿಯ ಹಿನ್ನಕ್ಕಿ ಗ್ರಾಮದಲ್ಲಿ ₹ 6 ಲಕ್ಷ ಮೌಲ್ಯದ 2 ಗುಂಟೆ ಗುಂಡುತೋಪು ಹಾಗೂ ₹ 10 ಲಕ್ಷ ಮೌಲ್ಯದ 3 ಗುಂಟೆ ಖರಾಬು ಬಂಡೆಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಹಣ ದೋಚಲು ಯತ್ನಿಸಿ ಹಲ್ಲೆ: ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಯಂತ್ರದಿಂದ ಹಣ ದೋಚಲು ಯತ್ನಿಸಿ, ಗಸ್ತಿನಲ್ಲಿದ್ದ ಪೊಲೀಸರ ಮೇಲೆ ಹಲ್ಲೆ ಮಾಡಿದ್ದ ಅಪರಾಧಿ ನಮಶಿವಾಯ (36) ಎಂಬಾತನಿಗೆ ಮೂರೂವರೆ ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

2013ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು 64ನೇ ಸಿಸಿಎಚ್ ನ್ಯಾಯಾಧೀಶರಾದ ಅಣ್ಣುಗೌಡ ವಿ. ಪಾಟೀಲ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಶರಣಗೌಡ ಪಾಟೀಲ ವಾದಿಸಿದ್ದರು.

'ಚೆನ್ನೈನ ನಮಶಿವಾಯ, 2013ರಲ್ಲಿ ಬೆಂಗಳೂರಿಗೆ ಬಂದಿದ್ದ. ಜ್ಯೂಸ್ ಅಂಗಡಿ ಇಟ್ಟುಕೊಂಡಿದ್ದ. ಪತ್ನಿಯೂ ಅದೇ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ವ್ಯಾಪಾರದಲ್ಲಿ ನಷ್ಟವಾಗಿದ್ದರಿಂದ, ಭದ್ರತಾ ಸಿಬ್ಬಂದಿ ಇರದ ಎಟಿಎಂ ಘಟಕದ ಯಂತ್ರದಿಂದ ಹಣ ದೋಚಲು ಸಂಚು ರೂಪಿಸಿದ್ದ.'

'ಆರ್‌ಎಂಸಿ ಯಾರ್ಡ್ ಠಾಣೆ ವ್ಯಾಪ್ತಿಯಲ್ಲಿರುವ ಕಾರ್ಪೊರೇಷನ್ ಬ್ಯಾಂಕ್ ಎಟಿಎಂ ಘಟಕದಲ್ಲಿ ಕಳ್ಳತನಕ್ಕೆ ಯತ್ನಿಸಿದ್ದ ವೇಳೆ, ಸುಳಿವು ದೊರೆತ ಪೊಲೀಸರು ಆತನನ್ನು ಬಂಧಿಸಲು ಹೋದರು. ಆಗ ಅವರ ಮೇಲೆ ಹಲ್ಲೆ ಮಾಡಿ, ತಪ್ಪಿಸಿಕೊಳ್ಳಲು ಯತ್ನಿಸಿದ್ದ. ಆ ಸಂದರ್ಭದಲ್ಲಿ ಬೆನ್ನಟ್ಟಿ ಬಂಧಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಾ. ಬಿ.ಆರ್. ಅಂಬೇಡ್ಕರ್ ದಲಿತ ಹೋರಾಟಗಾರರ ಒಕ್ಕೂಟದ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬಜೆಟ್: ಅನುದಾನ ಹಂಚಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ಆಶಯಗಳಿಗೆ ತಕ್ಕಂತೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡಬೇಕು' ಎಂದು ಆಗ್ರಹಿಸಿ ಡಾ. ಬಿ.ಆರ್. ಅಂಬೇಡ್ಕರ್ ದಲಿತ ಹೋರಾಟಗಾರರ ಒಕ್ಕೂಟದ ಪದಾಧಿಕಾರಿಗಳು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ತಮ್ಮ ಬೇಡಿಕೆ ಈಡೇರಿಕೆಗಾಗಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ನೀಲಿ ಶಾಲು ಧರಿಸಿ, ನೀಲಿ ಧ್ವಜ ಹಿಡಿದು ಘೋಷಣೆ ಕೂಗಿದರು.

'ರಾಜ್ಯ ಸರ್ಕಾರ ಬಜೆಟ್ ಮಂಡನೆ ಮಾಡಲು ಸಜ್ಜಾಗಿದೆ. ಈ ಬಜೆಟ್‌ನಲ್ಲಿ, ಪರಿಶಿಷ್ಟರಿಗೆ ಸೂಕ್ತ ಅನುದಾನ ನೀಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದು ಪರಿಶಿಷ್ಟರಿಗೆ ಭೂ ನ್ಯಾಯ ನೀಡಬೇಕು. ಪರಿಶಿಷ್ಟ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಟ್/ಜೆಇಇ/ಸಿಇಟಿ ತರಬೇತಿ ನೀಡಬೇಕು. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದವರಿಗೆ ಹಾಗೂ ನೀಡಿದ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಬೇಕು. ರಾಜ್ಯದ 7 ಜಿಲ್ಲೆಗಳ 10 ಊರುಗಳಿಗೆ ಡಾ. ಬಿ.ಆರ್. ಅಂಬೇಡ್ಕರ್ ಭೇಟಿ ನೀಡಿದ್ದು, ಅಲ್ಲೆಲ್ಲ ಸ್ಮಾರಕಗಳನ್ನು ನಿರ್ಮಿಸಬೇಕು' ಎಂದು ಒತ್ತಾಯಿಸಿದರು.

'ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಶೇ 25ರಷ್ಟು ಅನುದಾನವನ್ನು ಪರಿಶಿಷ್ಟರಿಗೆ ಹಂಚಿಕೆ ಮಾಡಲು ಕಾಯ್ದೆ ಜಾರಿಗೊಳಿಸಬೇಕು. ಕೇಂದ್ರ ಸರ್ಕಾರದ ವಿವಿಧ ಇಲಾಖೆಯಲ್ಲಿ ಖಾಲಿ ಇರುವ 2 ಲಕ್ಷ ಬ್ಯಾಕ್‌ಲಾಗ್ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಬೇಕು. ಹೈಕೋರ್ಟ್/ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇಮಕಾತಿಯಲ್ಲಿ ಮೀಸಲಾತಿ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

FRANK PUBLIC SCHOOL, J.P.Nagar, 6th Phase, requires HIGH SCHOOL SOCIAL STUDIES TEACHERS MIDDLE SCHOOL MATHEMATICS TEACHERS. rumysud@gmail.com 7019301626

SV VN DEGREE COLLEGE
Neraluru, Attibele Indl. Area, Bengaluru - 562107
WANTED
Applications are invited from the eligible candidates for the following posts in SV VN Degree College, Neraluru. Bengaluru.

Sl. No	Post/ Designation	No. of Vacancy	Educational Qualification
1	Principal	1	MA/M.Com/MBA with PhD
2	Assistant Professor in Commerce and Management	3 (1SC)	M.Com / MBA
3	Assistant Professor in Computer Science	3 (1SC)	M.Sc.(CS) M.Sc (IT)/ MCA
4	Assistant Professor in Kannada	1	MA in Kannada
5	Assistant Professor in English	1	MA in English
6	Assistant Professor in Hindi	1	MA in Hindi
7	Physical Education Director	1	M.PEd
8	Librarian	1	M.Lib
9	Office Clerk	2 (1ST)	Any Graduation with Kannada & English Typing
10	Office Attender	1	SSLC

Note: 1. Please email your application and CV/Resume before 8.07.2023 at svvn.degreecollege@gmail.com
2. Preference will be given to the experienced, NET/KSET, PhD qualified Candidates.
3. Attractive salary is offered to the eligible candidates
Secretary

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org
Faculty Positions for Engineering & Polytechnic
Applications are invited for the posts of Professors, Associate Professors and Asst. Professors in the following Disciplines...

- Civil Engineering
- Mechanical Engineering
- Electrical & Electronics Engineering
- Electronics & Communication Engineering
- Computer Science & Engineering
- Information Science & Engineering
- Basic Science Department : Physics, Chemistry and Mathematics
- MBA (Marketing, Finance, HR)
- Physical Education Director
- Librarian and Asst. Librarian

Non Teaching Posts
- Placement officer
- Office Superintendent
- FDA, SDA, Accountants
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and attenders in the above departments

Qualification and Pay Scale: As per AICTE norms
Note: For the posts of Professor & Associate Professor, Candidates having Ph.D are only eligible. Apply Via email and hard copy so as to reach before 7 days from the date of advertisement along with your detailed CV & supporting documents.
Dr. H.D. Ramesh, Principal 98806 58861 / 77602 68213
Sri D.C. Venugopal Chairman

WANTED ENGLISH MEDIUM TRAINED Teachers for High school to teach Maths/ Science and lady teachers for Primary to teach English/ EVS. PUC passed for Nursery classes. Contact in person- Secretary, Deccan Educational Society®, No. 95, 3rd Cross, Srirampuram, Bengaluru-21 (Near Sampige Theatre, Malleswaram)

ST LAWRENCE SCHOOL Avalahalli Mysore Road, Near Satellite busstop/ Girinagar, B'lore-26 Mob 97401-54959/ 80738-57671. Wanted Trained & experienced MATHS TEACHER High School 30K- 40K, HINDI Teacher 15- 20K DRAWING TEACHER 15- 20K. WALK-IN on 3rd July Betn10 to 3

REQUIRED TEACHERS
PRIMARY English & Drawing
HIGH SCHOOL English & Social Science
Attractive salary, P.F & ESIC for deserving candidates, pick up and drop from Nelamangala to Jalahalli Cross
Send your resume to E-mail bmnrequest@gmail.com Or Whatsapp to 9513333834
Walk in interview Directly on working days with original Marks cards and a set of Xerox copies between 11am to 2:30pm
SRUSHTI PUBLIC SCHOOL (Recg. by Govt. of Karnataka)
B.M.N PUBLIC SCHOOL (Affiliated to CBSE, New Delhi)
Makali, Alur Road, Dasanapura (H), Near Himalaya Drug Co., (3 Kms from Jindal), Bengaluru North -562162.
Ph: 9513333834 / 8123333677

WANTED PRIMARY and HIGH SCHOOL TEACHERS for immediate appointment. Subjects:Chemistry Biology,Computer and Hindi. Contact: St.YASH PUBLIC SCHOOL. Kempegowdanagar, Magadi Main-road, Bangalore-91.Phone: 7204347583, 7204347584

SDA HIGHER Secondary School Fraser Town Bangalore-05. Wanted D.Ed/ BA B.Ed Teacher to teach Kannada for Middle School & BCA/ MCA with or Without B.Ed to teach Computer Science Contact: 8050500075

B.SC./M.SC. PCM, B.A./ M.A. English/ Social, Drawing TEACHERS WANTED. On spot Appointment, Attractive Salary. Contact: CAMLIN ENGLISH SCHOOL, 6th 'C' Main, Hampinagar, Bangalore. Phone: 23301363

REQUIRED EXPERIENCED Primary Hindi Teacher and Lady helpers (4). Contact: ROYAL PUBLIC SCHOOL,Ullal. 9035033560/ 8867569333

VALLABHA INTERNATIONAL School Somanahalli, Kanakapura Road requires Highschool Teachers for Maths & Science. Walk-in Call: 9606369681

VIKAS HIGH School BSK 3rd Stage Bangalore-85 Require B.E., BCA/ MCA Teacher for Computer Science. Contact: 9448110651/ 9620448778

WANTED PHYSICAL Education teacher 22K to 25K, Maths/ science Teacher primary. 18k to 22k, Computer Teacher/ Data entry 18 to 20k Matha's International School, Garuve bhavi palya, Bangalore-68 M: 9449814917

PHYSICS & MATH Teacher needed for Chitrakoota CBSE School in Nagarbhavi, Kengeri Ring Road, Call: 7829647333

Engg/ Production Technical

SALES SERVICE Executives and Engineers for Industrial Products and Compressors, Degree, PUC, ITI, DIP, Email: chandra@synergics.in/ Mob: 9341856562

General

WANTED (1)PLANT Manager (Food Technologist) 1:Post 5years`exp`in Food industry quality output operations Management equipment Maintenance (2)Production Executive 1:Post 3years`exp`in Mechanical Electrical Maintanence quality-Output Manpower Management (3)Machine Operator 1:Post 2+yrs`exp`in Inpack-machine operation, Pampack machine operation grinder/blender machine operation Qualification ITI/ Diploma Send-Mail svaindustriesblr @gmail.com Call:9886503283 9611347525

OFFICE EXECUTIVE for-Office and Marketing (Dental Equipments Pvt.Ltd. Company) preferably Female's-with MBA or any Graduation with good English,Hindi speaking & computer skills.Call:- 9980546442/ 9844016274

WORK FROM HOME, Golden Opportunity to earn more Income for the unemployed. Please Contact: 9341273990

Part-Time Jobs

LIMITED MNC COMPANY Lost Job, Provide Work From Home Earn 30K to 35K: 9886641282/ 7019215243

Marketing & Sales

WANTED: TELEMARKETING COMPUTER OPERATOR, HELPERS, COOKS. BELOW 30 YEARS FOR REALESTATE DEVELOPERS AT SANJAYNAGAR: 9035883017

Multiple Vacancy

MULTIPLE VACANCIES @ Convergent Technologies India Pvt Ltd 1.APPLICATION ENGINEER- Diploma/ Graduate in E&C or E&E with or without Experience. 2.SALES ENGINEER/ MANAGER- E&C having 2years of experience 3.SALES ENGINEER/ MANAGER- E&C having Networking backgroundwith cyber security knowledge having at least 2 years of Experience. If interested, send your CV's to gopal@convergenttech.in Contact: 9844441782

Receptionist/ Secretary

V&V GROUP, Bannerghatta Road. Wanted immediately LADY RECEPTIONIST, TELECALLING EXECUTIVES, Best Salary. Call: 99000-54461/62

EDUCATIONAL

Diploma Courses

DIPLOMA IN Student Counselling, 6-months, ONLINE, Starts:11-July WhatsApp: 9886044221 www.darwinpsychologycentre.com

ಕ್ಲಾಸಿಫೈಡ್ಸ್ **WEEKEND CORNER**

Site for Sale (40 ft x 30 ft)
For Rs. 15 Lakhs Only. Excellent Investment At Bharathnagar Between Bangarpet & KGF. Situated Close To BHEL R&D, BHEL Hydraulics Division, Sambram Medical College, Big Public Park & Opp. To Mars TV. Owner Selling To Meet Daughter's Marriage Expense. Market Going Rate 18-22 Lakhs. Clear Titles, Updated Khatha, Tax With Approved Building Plan. Fully Fenced.
Contact: 91139 47586

BEST INVESTMENT FOR PETROL BUNK
LEASE CUM SALE OR PARTNERSHIP
at Kanakapura Road NH 209 Highway
Contact: 9035963540

GURU PURNIMA
Three Layers of Reality
Discourse in English
All are Welcome
Sunday, 2nd July 2023
10:30 - 11.30 am
NMKRV College for Women
Shashwathi Auditorium
Jayanagar 3rd Block
Near Jayanagar Metro Station
Shri. Eswaran
Senior Disciple of Swami A. Parthasarathy
Sponsored by JGi JAIN DEEMED-TO-BE UNIVERSITY

BUSINESS

Business Offers

General

SUKHAM Senior Living Home for joyful retirement living. Contact: Shrinidhi Hemmige 9945112586 www.sukhamseniorliving.com

Machinery & Tools

CRUSHER FOR SALE
We have the following crushing equipments for sale:-
1. Cone crusher propel make AVC 220
2. Jaw Crusher sandvik make CJ411
3. Cone Crusher sandvik make CS430
4. Vibrating Screen sandvik make CS144
5. Sand washing plant - Dual Evo wash CDE Asia make
Parties interested to buy the same may contact Mr. G.G. Prabhu on 9922922123

AUTOMOTIVE

Four Wheelers Selling

Others

QUOTATION REQUIRED WITHOUT RC FOR RENAULT DUSTER-2013, DIESEL KA-53-MA7270, WITHIN A WEEK. INSPECTION AT INSURED'S. PREMISES-9900400053. SURVEYOR-9845079529.

Hyundai

FOR SALE I-10 Sportz2009, Red ATM- Lady owned. Sparingly Run Contact/ Massage: 9341306062 / 9341288380.

MATRIMONIAL

Brides Wanted

Brahmin

WANTED BRIDES BRAHMIN
Brahmin 89, 5'10" BE, Salary Rs.15 lakhs.
Brahmin 94, 5'8" BTech Bangalore, salary Rs.20 lakhs.
Brahmin 91, 5'11" BE, MBA salary Rs.25 lakhs, Bangalore.
Contact USHODHAYA 9611919477(whatsup) 9886884291

Christian

WANTED BRIDE
Wanted Bride Qualified as IAS, IPS, MD Doctors etc.,for My Son B.TECH and Masters, age 27 Working in Mercedes Benz 9035883017

Second Marriage

WANTED BRIDES SECOND MARRIAGE
Brahmin 81, BE, MBA, UK 5'8" settled in UK.
Brahmin 82, 5'10" BE, MS Bangalore.
Brahmin 80, 5'6" BE, MBA Bangalore.
Contact USHODHAYA 9611919477(whatsup) 9886884291

TOURS & TRAVEL

Travel

CONTACT ORCHID Travel and Tours, Basavanagudi to Book 20 Days Australia and Newzealand Group Tour, Package cost Includes Air Tickets, visa Accommodation in 4 Star Hotel, Indian Meal, Tour Manager from Bangalore, Call: 9900080796 9880100099

PERSONAL

Change of Name

CHANGE OF NAME
I, **HEMLATA** S/o #6463188N, Rank: Ex-NK, MG Bhoja Raju, R/at. # 128, Lakshmi Layout, 4th Cross, JP Nagar, 7th Phase, Bangalore-560078 have changed my name to **B K HEMALATHA** vide affidavit dated 01/07/2023 before Notary S.I. Balaguru, Bangalore

Ds Veeraiah
ACE INDIA IAS
A UNIT OF PANCHASHEELA WELFARE ASSOCIATION (R)
No.10, 21st Cross, BHEL Layout, Pattanagere, Rajarajeshwarinagar, Bangalore-560 098
COACHING CLASSES
ADMISSIONS OPEN
REGISTER NOW !!!
COURSES OFFERED
IAS / KAS-7 Months
PDO / PSI / KPSC GROUP C-3 Months
BANKING / SSC / RRB / C SAT-60 DAYS
Consession Available For Deserving Candidates
FIND US ON
CONTACT 9591844464, 9036222422, 9448669359

CHANGE OF NAME
I, **ANJU KUMARI. M,** Resding at No. 15/13, 2nd Cross, 2nd Stage, L.I.G., K.H.B. Colony, Basaveshwaranagar, Bangalore-560079, have changed my name to **ANJU KUMARI,** vide affidavit dated 30/06/2023, before notary S.R. Paramashivaiah, Bangalore. Henceforth I shall be called **ANJU KUMARI,** only.

I, Kudlu Annaiah Venkatesh Reddy aged 74 years, S/o. Annaiah Reddy, Residing at No. 100, 6th Cross, Dollars Colony, BTM 2nd Stage, Bangalore- 560076 have changed my name to K A VENKATESH Affidavit dated: 29/06/2023 B.M.Chandrashekar Bangalore

Lost

DOCUMENT LOST
I, **SHANNUMA,** W/o Ayub Pasha, R/at No.7/1 Raghavendra Colony, Chikkanahalli Main Road, Attibele, Bengaluru- 562107, have lost my original Sale deed document no. **ABL-1-05994-2012-13**
Finders, Please contact **K.Velayudham,** M.Sc., M.L., Advocate & Notary Public, Attibele, Bangalore-562107 **9443093345**

MORE **Classifieds** Ads on Subsequent Pages

ವಾಣಿಜ್ಯ ಬಳಕೆ ಸಿಲಿಂಡರ್ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ 19 ಕೆ.ಜಿ ತೂಕದ ಎಲ್‌ಪಿಜಿ ಸಿಲಿಂಡರ್ ದರವನ್ನು ಶನಿವಾರ ಹೆಚ್ಚಿಸಿವೆ. ದೆಹಲಿಯನ್ನು ಹೊರತುಪಡಿಸಿ ಪ್ರಮುಖ ನಗರಗಳಲ್ಲಿ ಏರಿಕೆ ಕಂಡಿದೆ.

'ಬೆಂಗಳೂರಿನಲ್ಲಿ ₹8ರಷ್ಟು ಏರಿಕೆ ಕಂಡಿದ್ದು, ₹1,860ಕ್ಕೆ ತಲುಪಿದೆ' ಎಂದು ಹೋಟೆಲ್ ಉದ್ಯಮದ ಮೂಲಗಳು ತಿಳಿಸಿವೆ.

ದೆಹಲಿಯಲ್ಲಿ ₹1,773 ಇದೆ. ಮುಂಬೈನಲ್ಲಿ ₹8.50ರಷ್ಟು ಹೆಚ್ಚಾಗಿ ₹1,733ಕ್ಕೆ ಏರಿಕೆ ಆಗಿದೆ. ಕೋಲ್ಕತ್ತದಲ್ಲಿ ₹20ರಷ್ಟು ಏರಿಕೆ ಕಂಡು ₹1,895ಕ್ಕೆ ತಲುಪಿದೆ. ಮನೆಗಳಲ್ಲಿ ಅಡುಗೆಗೆ ಬಳಸುವ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಪೆಟ್ರೋಲ್, ಡೀಸೆಲ್ ದರದಲ್ಲಿಯೂ ಬದಲಾವಣೆ ಆಗಿಲ್ಲ.

ವಿಮಾನ ಇಂಧನ ದರ ಏರಿಕೆ

ನವದೆಹಲಿ (ಪಿಟಿಐ): ವಿಮಾನ ಇಂಧನ ದರವನ್ನು (ಎಟಿಎಫ್) ಪ್ರತಿ ಕಿಲೋ ಲೀಟರಿಗೆ ₹1,476.79 ರಷ್ಟು (ಶೇ 1.65) ಹೆಚ್ಚಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ನಾಲ್ಕು ತಿಂಗಳ ಬಳಿಕ ದರ ಹೆಚ್ಚಳ ಮಾಡಿವೆ. ಈ ಪರಿಷ್ಕರಣೆಯಿಂದಾಗಿ ದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್ ದರ ₹90,779.88ಕ್ಕೆ ಏರಿಕೆ ಆಗಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್).

ಸ್ಥಳೀಯ ಮಾರಾಟ ತೆರಿಗೆ ಅಥವಾ ವ್ಯಾಟ್‌ಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಮಾರಾಟ ದರದಲ್ಲಿ ವ್ಯತ್ಯಾಸ ಆಗುತ್ತದೆ. ನಾಲ್ಕು ತಿಂಗಳಿನಿಂದ ಇಳಿಮುಖ ಆಗಿದ್ದ ಕಚ್ಚಾ ತೈಲ ದರ ಇದೀಗ ಏರಿಕೆ ಕಾಣುತ್ತಿದೆ. ಹೀಗಾಗಿ ಎಟಿಎಫ್ ದರ ಹೆಚ್ಚಳ ಮಾಡಿರುವುದಾಗಿ ಕಂಪನಿಗಳು ತಿಳಿಸಿವೆ.

ರಾಜ್ಯಗಳ ವರಮಾನ ಹೆಚ್ಚಿಸಲು ಜಿಎಸ್‌ಟಿ ನೆರವು: ನಿರ್ಮಲಾ

ನವದೆಹಲಿ: ರಾಜ್ಯಗಳ ವರಮಾನ ಸಂಗ್ರಹ ಹೆಚ್ಚಾಗಲು ಜಿಎಸ್‌ಟಿ ವ್ಯವಸ್ಥೆಯು ನೆರವಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದ್ದಾರೆ.

2023ರ ಜಿಎಸ್‌ಟಿ ದಿನದ ಅಂಗವಾಗಿ ಶನಿವಾರ ಮಾತನಾಡಿದ ಅವರು, ಜಿಎಸ್‌ಟಿ ವ್ಯವಸ್ಥೆಗೂ ಮೊದಲು ರಾಜ್ಯದ ವರಮಾನ ಸಂಗ್ರಹ ಶೇ 0.72ರಷ್ಟು ಇತ್ತು. ಜಿಎಸ್‌ಟಿ ಜಾರಿಗೆ ಬಂದ ಬಳಿಕ ಅದು ಶೇ 1.22ರಷ್ಟು ಆಗಿದೆ ಎಂದು ಮಾಹಿತಿ ನೀಡಿದ್ದಾರೆ.

ಜಿಎಸ್‌ಟಿ ಬಳಿಕ ಯಾವುದೇ ರಾಜ್ಯವೂ (ವರಮಾನ) ನಷ್ಟ ಅನುಭವಿಸಿಲ್ಲ ಎಂದು ನಿರ್ಮಲಾ ಹೇಳಿದ್ದಾರೆ.

'ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡ್ ಬಳಕೆಗೆ ಇಲ್ಲ ಟಿಸಿಎಸ್'

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡ್ (ಐಸಿಸಿ) ಬಳಸಿ ವಿದೇಶದಲ್ಲಿ ಮಾಡುವ ವೆಚ್ಚಗಳಿಗೆ ಮೂಲದಲ್ಲೇ ತೆರಿಗೆ ಸಂಗ್ರಹ (ಟಿಸಿಎಸ್) ಇರುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಟಿಸಿಎಸ್ ವಿಧಿಸುವ ಕುರಿತು ಸಾಕಷ್ಟು ವಿವಾದ, ಟೀಕೆಗಳು ಆರಂಭವಾಗಿದ್ದರಿಂದ ಸರ್ಕಾರವು ವಿದೇಶಿ ವಿನಿಮಯ ನಿರ್ವಹಣೆ (ಚಾಲ್ತಿ ಖಾತೆ ವರ್ಗಾವಣೆಗಳು) ನಿಯಮ–2000ಕ್ಕೆ ತಿದ್ದುಪಡಿ ತಂದಿದೆ. ಆ ಮೂಲಕ ಆರ್‌ಬಿಐನ ಉದಾರೀಕೃತ ಪಾವತಿ ವ್ಯವಸ್ಥೆಯಿಂದ (ಎಲ್‌ಆರ್‌ಎಸ್) ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡ್ ಅನ್ನು ಹೊರಗಿಟ್ಟಿದೆ.

ಮೇ 16ರಿಂದಲೇ ಪೂರ್ವಾನ್ವಯವಾಗಿ ಇದು ಜಾರಿಗೆ ಬರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಈ ಹಿಂದಿನ ಆದೇಶದಲ್ಲಿ ಎಲ್‌ಆರ್‌ಎಸ್ ಅಡಿ ವಿದೇಶದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ₹ 7 ಲಕ್ಷಕ್ಕಿಂತ ಹೆಚ್ಚಿನ ವೆಚ್ಚ ಮಾಡಿದರೆ ಅದಕ್ಕೆ ಶೇ 7ರಷ್ಟು ಟಿಸಿಎಸ್ ನೀಡಬೇಕಿತ್ತು. ವಿದೇಶಿ ಪ್ರವಾಸಕ್ಕೆ ಕ್ರೆಡಿಟ್ ಕಾರ್ಡ್ ಬಳಸಿದರೆ ಗರಿಷ್ಠ ಶೇ 20ರವರೆಗೆ ಟಿಸಿಎಸ್ ಕಟ್ಟಬೇಕಿತ್ತು.

ಮುಂಬೈ ಧಾರಣೆ

ಶೇಂಗಾ

1–7–2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	895 (880)
ಪಾಮ್ ವಾರದ ಡೆಲಿವರಿ	863 (848)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,100 (57,900)
ಬೆಳ್ಳಿ ಕೆ.ಜಿ 69,300 (68,450))

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮೆಕ್ಸಿಕೊ: ಅಪಹರಣಕ್ಕೆ ಒಳಗಾಗಿದ್ದ 16 ಪೊಲೀಸರ ಬಿಡುಗಡೆ

ತಪಚುಲಾ (ಮೆಕ್ಸಿಕೊ) (ಎಪಿ): ದಕ್ಷಿಣ ಮೆಕ್ಸಿಕೊದಲ್ಲಿ ಅಪಹರಣಕ್ಕೊಳಗಾಗಿದ್ದ 16 ಪೊಲೀಸರನ್ನು ಅಪಹರಣಕಾರರು ಮೂರು ದಿನಗಳ ಬಳಿಕ ಬಿಡುಗಡೆ ಮಾಡಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಚಿಯಾಪಾಸ್ ರಾಜ್ಯದ ಗವರ್ನರ್ ರುಟಿಲಿಯೊ ಎಸ್ಕಾಂಡನ್ ಅವರು, 'ಅಪಹರಣಕ್ಕೊಳಗಾಗಿದ್ದ 16 ಪೊಲೀಸರು ಶುಕ್ರವಾರ ಮಧ್ಯಾಹ್ನ ಬಿಡುಗಡೆಯಾಗಿದ್ದಾರೆ' ಎಂದು ಅವರು ಹೇಳಿದ್ದಾರೆ.

ಅಪಹರಣಕಾರರು, ಪೊಲೀಸರನ್ನು ಯಾವ ಆಧಾರದ ಮೇಲೆ ಬಿಡುಗಡೆ ಮಾಡಿದರು ಎಂಬ ಮಾಹಿತಿ ಲಭ್ಯವಿಲ್ಲ.

'ಮೂವರು ಪೊಲೀಸರನ್ನು ಕೆಲಸದಿಂದ ವಜಾ ಮಾಡಬೇಕು ಹಾಗೂ ಕಳೆದ ವಾರ ಗುಂಪೊಂದು ಅಪಹರಿಸಿದ್ದ ಸ್ಥಳೀಯ ಗಾಯಕ ನೆಯೆಲಿ ಸಿನ್‌ಒ ಅವರನ್ನು ಬಿಡುಗಡೆಗೊಳಿಸಬೇಕು' ಎಂದು ಇವರನ್ನು ಅಪಹರಿಸಿದ್ದ ಅಪಹರಣಕಾರರು ಬೇಡಿಕೆ ಇಟ್ಟಿದ್ದರು.

ಒಕೊಜಕೌಟ್ಲಾ– ತುಕ್ಸ್‌ಟ್ಲಾ ಹೆದ್ದಾರಿಯಲ್ಲಿ ಮಂಗಳವಾರದಂದು ಹಲವಾರು ವಾಹನಗಳಲ್ಲಿ ಬಂದಿದ್ದ ಬಂದೂಕುಧಾರಿಗಳು ಪೊಲೀಸ್ ಟ್ರಕ್‌ಗಳನ್ನು ಅಡ್ಡಗಟ್ಟಿ ಪೊಲೀಸರನ್ನು ಅಪಹರಿಸಿದ್ದರು. ಆದರೆ, ಟ್ರಕ್‌ಗಳಲ್ಲಿದ್ದ 17 ಮಹಿಳಾ ಪೊಲೀಸರನ್ನು ಅಪಹರಿಸಿರಲಿಲ್ಲ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹60,150
ಒಡವೆ ಚಿನ್ನ 1ಗ್ರಾಂ	₹5,534
ಬೆಳ್ಳಿ ಕೆ.ಜಿಗೆ	₹71,400

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹580
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹580

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹145.50
ಗುಡ್ ಲಾಟ್	₹127

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹960 (945)
ಸೂರ್ಯಕಾಂತಿ (ರಿಫೈನ್ಡ್)	₹960 (940)
ಪಾಮೋಲಿನ್	₹865 (850)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹233-455
ದ್ವಿತಳಿ (ಬಿ.ವಿ)	₹285-568

2023ರ ಜನವರಿ–ಜೂನ್ ಅವಧಿಗೆ ಪ್ರಯಾಣಿಕ ವಾಹನದ ಅಂಕಿ–ಅಂಶ

20 ಲಕ್ಷ ದಾಟಿದ ವಾಹನ ಮಾರಾಟ

ಜೂನ್ ತಿಂಗಳ ಮಾರಾಟ

- ಎರಡಂಕಿ ಮಾರಾಟ ಪ್ರಗತಿ ಸಾಧಿಸಿದ ಟೊಯೋಟ, ಎಂಜಿ ಮೋಟರ್
- ಕಿಯಾ, ಹೋಂಡಾ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಪ್ರಯಾಣಿಕ ವಾಹನ ಮಾರಾಟವು 2023ರ ಮೊದಲಾರ್ಧದಲ್ಲಿ (ಜನವರಿ–ಜೂನ್) ಇದೇ ಮೊದಲ ಬಾರಿಗೆ 20 ಲಕ್ಷ ದಾಟಿದೆ.

2022ರ ಜನವರಿ–ಜೂನ್ ಅವಧಿಯಲ್ಲಿ 18.31 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಆಗಿದ್ದವು. ಇದಕ್ಕೆ ಹೋಲಿಸಿದರೆ 2023ರ ಮೊದಲಾರ್ಧದಲ್ಲಿ ಶೇ 10ರಷ್ಟು ಹೆಚ್ಚಳ ಕಂಡುಬಂದಿದೆ ಎಂದು ಮಾರುತಿ ಸುಜುಕಿ ಇಂಡಿಯಾದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಈ ಅವಧಿಯಲ್ಲಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಮಾರಾಟವು 7.87 ಲಕ್ಷದಿಂದ 8.61 ಲಕ್ಷಕ್ಕೆ ಏರಿಕೆ ಕಂಡಿದೆ.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ಕಂಪನಿಯ ಎಸ್‌ಯುವಿ ಮಾರುಕಟ್ಟೆಯು ಶೇ 21ರಷ್ಟು ಬೆಳವಣಿಗೆ ಕಂಡಿದೆ. ಕಳೆದ ಅವಧಿಯಲ್ಲಿ ಶೇ 8.5ರಷ್ಟು ಬೆಳವಣಿಗೆ ಕಂಡಿತ್ತು ಎಂದು ಮಾಹಿತಿ ನೀಡಿದ್ದಾರೆ.

ಜಿಮ್ನಿ ತರಹದ ಹೊಸ ಮಾದರಿಗಳಿಂದಾಗಿ ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ಎಸ್‌ಯುವಿ ವಿಭಾಗದಲ್ಲಿ ಶೇ 25ರಷ್ಟು ಮಾರುಕಟ್ಟೆ ಪಾಲು ಹೊಂದುವ ವಿಶ್ವಾಸ ಇದೆ ಎಂದು ಶ್ರೀವಾಸ್ತವ ತಿಳಿಸಿದ್ದಾರೆ.

ಪೂರೈಕೆ ವ್ಯವಸ್ಥೆಯು ಪ್ರಸಕ್ತ ತ್ರೈಮಾಸಿಕದಲ್ಲಿ ಸುಧಾರಿಸುವ ನಿರೀಕ್ಷೆ ಹೊಂದಿರುವುದಾಗಿ ಅವರು ಹೇಳಿದ್ದಾರೆ. ಕಂಪನಿಯು ಈಗಾಗಲೇ ಬುಕಿಂಗ್ ಮಾಡಿರುವ3.55 ಲಕ್ಷ ಗ್ರಾಹಕರಿಗೆ ವಾಹನಗಳನ್ನು ಹಸ್ತಾಂತರಿಸಬೇಕಿದೆ.

> ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವುದು ಮತ್ತು ಮುಂಗಾರಿನ ಬಗ್ಗೆ ಅನಿಶ್ಚಿತತೆ ಎದುರಾಗಿರುವುದು ಮಾರಾಟಕ್ಕೆ ಸವಾಲಾಗಿವೆ
>
> **ಶಶಾಂಕ್ ಶ್ರೀವಾಸ್ತವ,** ಮಾರುತಿ ಸುಜುಕಿ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ

ಜೂನ್ ತಿಂಗಳಿನಲ್ಲಿ ಪ್ರಯಾಣಿಕ ವಾಹನಗಳ ವಿಭಾಗದಲ್ಲಿ ಮಾರುತಿ ಮತ್ತು ಹುಂಡೈ ಕಂಪನಿಗಳು ಒಂದಂಕಿ ಪ್ರಗತಿ ಕಂಡಿವೆ. ಟೊಯೋಟ ಮತ್ತು ಎಂಜಿ ಮೋಟರ್ ಕಂಪನಿಗಳು ಎರಡಂಕಿ ಪ್ರಗತಿ ಸಾಧಿಸಿವೆ. ಆದರೆ ಕಿಯಾ ಮಾರಾಟದಲ್ಲಿ ಇಳಿಕೆ ಕಂಡುಬಂದಿದೆ.

ಅರ್ಬನ್ ಕ್ರೂಸರ್ ಹೈರೈಡರ್ ಮತ್ತು ಇನೋವಾ ಹೈಕ್ರಾಸ್ ವಾಹನಗಳಿಗೆ ಗ್ರಾಹಕರಿಂದ ಉತ್ತಮ ಬೇಡಿಕೆ ಬರುತ್ತಿದೆ ಎಂದು ಟೊಯೋಟ ಕಿರ್ಲೋಸ್ಕರ್ ಮೋಟರ್‌ನ ಉಪಾಧ್ಯಕ್ಷ ಅತುಲ್ ಸೂದ್ ತಿಳಿಸಿದ್ದಾರೆ.

ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನ ಮಾರಾಟ (ವಿದ್ಯುತ್ ಚಾಲಿತ ವಾಹನ ಸೇರಿದಂತೆ) ಶೇ 5ರಷ್ಟು ಹೆಚ್ಚಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ಹೋಂಡಾ ಕಾರ್ಸ್ ಇಂಡಿಯಾದ ಮಾರಾಟ ಶೇ 35ರಷ್ಟು ಇಳಿಕೆ ಕಂಡಿದೆ.

ಒಟ್ಟಾರೆಯಾಗಿ ಜೂನ್‌ನಲ್ಲಿ 3.27 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಆಗಿದ್ದು, ಕಳೆದ ವರ್ಷದ ಜೂನ್‌ಗೆ ಹೋಲಿಸಿದರೆ ಶೇ 1.9ರಷ್ಟು ಹೆಚ್ಚಾಗಿದೆ.

ರಾಯಲ್ ಎನ್‌ಫೀಲ್ಡ್ ಕಂಪನಿಯು ಒಟ್ಟು 77,109 ದ್ವಿಚಕ್ರ ವಾಹನ ಮಾರಾಟ ಮಾಡಿದ್ದು, ಕಳೆದ ವರ್ಷದ ಜೂನ್‌ಗೆ ಹೋಲಿಸಿದರೆ ಶೇ 26ರಷ್ಟು ಏರಿಕೆ ಕಂಡುಬಂದಿದೆ. ದೇಶಿ ಮಾರಾಟ ಶೇ 34ರಷ್ಟು ಹೆಚ್ಚಾಗಿದೆ ಎಂದು ಕಂಪನಿಯು ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಶ್ರೀ ಎಸ್.ರಾಜಣ್ಣ, ಭಾ.ಅ.ಸೇ.
ನಿವೃತ್ತ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ನಿಧನ: 25-06-2023
ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 05-07-2023 ರ ಬುಧವಾರ ಬೆಳಿಗ್ಗೆ 10-00 ಗಂಟೆಗೆ ಮಾಂಬಳ್ಳಿ ಗ್ರಾಮದಲ್ಲಿರುವ ಗೂಳಿನಂಜಯ್ಯನವರ ನಿವಾಸದಲ್ಲಿ ಏರ್ಪಡಿಸಲಾಗಿದೆ. ಎಲ್ಲರೂ ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖ ತಪ್ತರು
ಗೂಳಿನಂಜಯ್ಯನವರ ಕುಟುಂಬವರ್ಗದವರು

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000- 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿಉತ್ತಮ	1600-1650
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-41500
ಹಳತು	48000-50500
ಕುಮಟಾ	
ಚಿಪ್ಪು	29999-32899
ಕೋಕ	21509-32509
ಹಳೆಚಾಲಿ	38509-40839
ಹೊಸಚಾಲಿ	36809-38599
ಕಾರ್ಕಳ	
ಹೊಸತು	30000-41500
ಹಳತು	40000-50000
ಸಿದ್ದಾಪುರ	
ಬಿಳಿಗೋಟು	30699-33099
ಚಾಲಿ	36309-39000
ಕೋಕ	28099-31899
ಕೆಂಪುಗೋಟು	---
ರಾಶಿ	45669-51099
ತಟ್ಟಿಬೆಟ್ಟೆ	38869-43169
ಶಿರಸಿ	
ಬೆಟ್ಟೆ	41899-48659
ಬಿಳಿಗೋಟು	27299-33899
ಚಾಲಿ	37399-39400
ಕೆಂಪುಗೋಟು	27899-37021
ರಾಶಿ	43899-50499
ಸೊರಬ	
ಬಿಳಿಗೋಟು	26300-30313
ಚಾಲಿ	32989-33199
ಕೋಕ	14989-30199
ಗೊರಬಲು	32989-36099
ರಾಶಿ	48399-52509
ಸಿಪ್ಪೆಗೋಟು	19100-19100
ತುಮಕೂರು	
ರಾಶಿ	50500-52100

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14400	14300	14600	159
ಎಸಿ	7280	7200	7400	
ಆರ್‌ಪಿ	10000	10300	10600	ಲಂಡನ್
ಆರ್‌ಸಿ	5950	236 on OT	6050	2491 ಡಾಲರ್ಸ್

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1500
ಮಧ್ಯಮ	₹800-1200
ಸಣ್ಣ	₹400-800

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪೊಲೀಸ್ ಗುಂಡಿಗೆ ಯುವಕನ ಸಾವು ಪ್ರಕರಣ: ನಿಲ್ಲದ ಹಿಂಸಾಚಾರ

ಫ್ರಾನ್ಸ್: ಒಂದೇ ದಿನ 1,311 ಮಂದಿ ಬಂಧನ

ಪ್ಯಾರಿಸ್ (ಎಪಿ): ಕಾರು ಚಾಲನೆ ಮಾಡುತ್ತಿದ್ದ 17 ವರ್ಷದ ಯುವಕನನ್ನು ಪೊಲೀಸ್ ಅಧಿಕಾರಿಗಳು ವಿನಾಕಾರಣ ಗುಂಡಿಟ್ಟು ಕೊಂದ ನಂತರ ಫ್ರಾನ್ಸ್‌ನಾದ್ಯಂತ ಭುಗಿಲೆದ್ದಿದ್ದ ಗಲಭೆ ನಾಲ್ಕನೇ ದಿನವೂ ಮುಂದುವರಿದಿತ್ತು. 45,000 ಪೊಲೀಸ್ ಸಿಬ್ಬಂದಿ ನಿಯೋಜನೆ ಮತ್ತು ಒಂದೇ ದಿನ 1,311 ಮಂದಿ ಬಂಧನದ ಹೊರತಾಗಿಯೂ ಕಾರುಗಳು, ಕಟ್ಟಡಗಳಿಗೆ ಬೆಂಕಿ ಇಡುವ ಮತ್ತು ಅಂಗಡಿ ಮುಂಗಟ್ಟುಗಳನ್ನು ಲೂಟಿ ಮಾಡುವ ಕೃತ್ಯಗಳು ನಡೆದಿವೆ.

ಈ ಮಧ್ಯೆ ಕುಟುಂಬಸ್ಥರು ಯುವಕ ನಹೇಲ್ ಅಂತ್ಯಸಂಸ್ಕಾರ ನಡೆಸಿದ್ದಾರೆ.

ತಮ್ಮ ಮಕ್ಕಳನ್ನು ಮನೆಯೊಳಗೇ ಇರಿಸಿಕೊಳ್ಳುವಂತೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಪೋಷಕರಲ್ಲಿ ಮನವಿ ಮಾಡಿದ್ದಾರೆ. ಆದರೂ ಯುವ ಪ್ರತಿಭಟನಕಾರರು ಮತ್ತು ಪೊಲೀಸರ ಮಧ್ಯೆ ಸಂಘರ್ಷ ಭುಗಿಲೆದ್ದಿದೆ. ಉದ್ರಿಕ್ತ ಪ್ರತಿಭಟನಕಾರರು ಈವರೆಗೆ ಸುಮಾರು 2,500 ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಿಂಸಾಚಾರ ಆರಂಭವಾದಾಗಿನಿಂದ ಈವರೆಗೆ ಪೊಲೀಸರು 2,400 ಮಂದಿಯನ್ನು ಬಂಧಿಸಿದ್ದಾರೆ. ಶಾಂತಿ ಪುನಃಸ್ಥಾಪಿಸಲು ಸರ್ಕಾರ ಹೆಣಗಾಡುತ್ತಿದ್ದು ಬಂಧಿತರ ಸಂಖ್ಯೆ ಏರಿಕೆಯಾಗುತ್ತಿದೆ. ಹಾಗಿದ್ದರೂ ಉದ್ರಿಕ್ತ ಗುಂಪುಗಳಿಂದ ಹಾನಿ ಮುಂದುವರಿದಿದೆ.

ಗಲಭೆಯಲ್ಲಿ ನೂರಾರು ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಗಾಯಗೊಂಡಿದ್ದಾರೆ. ಆದರೆ ಎಷ್ಟು ಮಂದಿ ಪ್ರತಿಭಟನಕಾರರು ಗಾಯಗೊಂಡಿದ್ದಾರೆ ಎಂಬ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿಲ್ಲ.

ಮಾರ್ಸೈಲ್ ನಗರದಲ್ಲಿ ಉದ್ರಿಕ್ತರು ಬಂದೂಕು ಅಂಗಡಿಯೊಳಗೆ ನುಗ್ಗಿ ಶಸ್ತ್ರಾಸ್ತ್ರಗಳನ್ನು ಅಪಹರಿಸಿದ್ದಾರೆ. ಇಲ್ಲಿ ಸಿಕ್ಕಸಿಕ್ಕ ಕಾರುಗಳಿಗೆ ಬೆಂಕಿ ಇಡುತ್ತಿದ್ದ ಮತ್ತು ಅಂಗಡಿಗಳ ಗಾಜುಗಳನ್ನು ಒಡೆಯುತ್ತಿದ್ದ ಸುಮಾರು 90 ಜನರಿದ್ದ ಗುಂಪನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಹಿಂದಿನ ರಾತ್ರಿಗಿಂತ ಕಡಿಮೆ ಕಾರುಗಳು ಮತ್ತು ಪೊಲೀಸ್ ಠಾಣೆಗಳು ಬೆಂಕಿಗೆ ಆಹುತಿಯಾಗಿವೆ. ಹಿಂಸಾಚಾರದ ತೀವ್ರತೆ ಕಡಿಮೆಯಾಗುತ್ತಿದೆ' ಎಂದು ಒಳಾಡಳಿತ ಸಚಿವ ಗೆರಾಲ್ಡ್ ದರ್ಮನಿನ್ ತಿಳಿಸಿದ್ದಾರೆ.

ಮಾರ್ಸೈಲ್ ನಗರದ ಚಿನ್ನಾಭರಣ ಅಂಗಡಿಯೊಂದನ್ನು ಉದ್ರಿಕ್ತರು ಧ್ವಂಸ ಮಾಡಿದ್ದು ಕೆಲಸಗಾರರು ಅವಶೇಷಗಳನ್ನು ತೆರವುಗೊಳಿಸಿದರು –ಎಎಫ್‌ಪಿ ಚಿತ್ರ

'ಗಲಭೆ ನಿಯಂತ್ರಿಸಲು ಯೋಗಿಯನ್ನು ಕಳುಹಿಸಿ'

ಲಖನೌ: ಗಲಭೆ ನಡೆಯುತ್ತಿರುವ ಫ್ರಾನ್ಸ್‌ಗೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಕಳುಹಿಸಿ ಎಂದು ಜರ್ಮನಿಯ ವೈದ್ಯರೊಬ್ಬರು ಟ್ವಿಟರ್‌ನಲ್ಲಿ ಸಲಹೆ ನೀಡಿರುವುದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಕಚೇರಿ, 'ಯೋಗಿ ಮಾದರಿಯು ಜಗತ್ತಿನಾದ್ಯಂತ ಜನಪ್ರಿಯವಾಗಿರುವುದಕ್ಕೆ ಈ ಟ್ವೀಟ್ ಸಾಕ್ಷಿ' ಎಂದು ಬಣ್ಣಿಸಿದೆ.

'ಭಾರತವು ಯೋಗಿ ಅವರನ್ನು ಫ್ರಾನ್ಸ್‌ಗೆ ಕಳುಹಿಸಿದರೆ 24 ಗಂಟೆಗಳೊಳಗೆ ಹಿಂಸಾಚಾರವು ನಿಯಂತ್ರಣಕ್ಕೆ ಬರಲಿದೆ' ಎಂದು ಜರ್ಮನಿಯ ಹೃದ್ರೋಗ ತಜ್ಞ ಎನ್ನಲಾದ ಪ್ರೊ. ಎನ್. ಜಾನ್ ಕ್ಯಾಮ್ ಟ್ವೀಟ್ ಮಾಡಿದ್ದರು.

ವಿರೋಧ ಪಕ್ಷಗಳ ನಾಯಕರು ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಹಲವರು ಎನ್. ಜಾನ್ ಕ್ಯಾಮ್ ಅವರ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದು, ಇದೊಂದು ನಕಲಿ ಖಾತೆ ಇರಬಹುದು ಎಂದು ಶಂಕಿಸಿದ್ದಾರೆ.

ಕೇನ್ಯಾ: ಅಪಘಾತಕ್ಕೆ 51 ಜನರ ಸಾವು

ನೈರೋಬಿ (ಎಪಿ): ಪಶ್ಚಿಮ ಕೇನ್ಯಾದಲ್ಲಿ ಶಿಪ್ಪಿಂಗ್ ಕಂಟೇನರ್ ಅನ್ನು ಹೊತ್ತೊಯ್ಯುತ್ತಿದ್ದ ಟ್ರಕ್‌ವೊಂದು ಇತರ ವಾಹನಗಳು ಮತ್ತು ಮಾರುಕಟ್ಟೆ ವ್ಯಾಪಾರಿಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ 51 ಜನರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೇನ್ಯಾದ ರಾಜಧಾನಿ ನೈರೋಬಿಯಿಂದ 200 ಕಿ.ಮೀ ದೂರವಿರುವ ಲೊಂಡಿಯಾನಿ ಪಟ್ಟಣದಲ್ಲಿ ಈ ಅಪಘಾತ ಶುಕ್ರವಾರ ಸಂಜೆ ಸಂಭವಿಸಿದೆ. ಪಾದಚಾರಿಗಳ ಮೇಲೂ ಟ್ರಕ್ ಹರಿದ ಪರಿಣಾಮ ಸಾವು ನೋವುಗಳು ಹೆಚ್ಚಾಗಿವೆ.

ಸದ್ಯಕ್ಕೆ 51 ಮೃತದೇಹಗಳನ್ನು ಪತ್ತೆಯಾಗಿವೆ. ಅವಶೇಷಗಳ ಅಡಿ ಇನ್ನಷ್ಟು ಜನರು ಸಿಲುಕಿರಬಹುದು ಎಂದು 'ರಿಫ್ಟ್ ವ್ಯಾಲಿ' ಠಾಣೆಯ ಪೊಲೀಸ್ ಕಮಾಂಡರ್ ಟಾಮ್ ಒಡೆರಾ ತಿಳಿಸಿದ್ದಾರೆ.

ಅಪಘಾತದಲ್ಲಿ ಗಾಯಗೊಂಡಿರುವ 32 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಕೇನ್ಯಾ ರೆಡ್ ಕ್ರಾಸ್ ಸೊಸೈಟಿ ತಿಳಿಸಿದೆ.

ಅಪಘಾತದಲ್ಲಿ ಧ್ವಂಸಗೊಂಡ ವಾಹನಗಳಲ್ಲಿ ಹಲವರು ಸಿಲುಕಿಕೊಂಡಿದ್ದಾರೆ. ಆದರೆ ಭಾರಿ ಮಳೆಯ ಕಾರಣ ರಕ್ಷಣಾ ಕಾರ್ಯಕ್ಕೆ ತೊಡಕಾಗಿದೆ ಎಂದು ರೆಡ್‌ಕ್ರಾಸ್ ಸೊಸೈಟಿ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಪಾಕ್: ಆರು ಉಗ್ರರ ಹತ್ಯೆ

ಪೇಶಾವರ (ಪಿಟಿಐ): ಖೈಬರ್ ಪಖ್ತುಂಕ್ವಾ ಪ್ರಾಂತ್ಯದ ಎರಡು ಜಿಲ್ಲೆಗಳಲ್ಲಿ ಪಾಕಿಸ್ತಾನ ಭದ್ರತಾ ಪಡೆ ಒಟ್ಟು ಆರು ಭಯೋತ್ಪಾದಕರನ್ನು ಕೊಂದಿದೆ. ಟ್ಯಾಂಕ್ ಜಿಲ್ಲೆಯ ಮಂಜೈ ಪ್ರದೇಶದಲ್ಲಿ ಭಯೋತ್ಪಾದಕರು ಮತ್ತು ಭದ್ರತಾ ಪಡೆ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಮೂವರು ಭಯತ್ಪಾದಕರನ್ನು ಹತ್ಯೆ ಮಾಡಲಾಗಿದೆ.

ಉತ್ತರ ವಜಿರಿಸ್ತಾನ ಜಿಲ್ಲೆಯ ರಜ್ಮಾಕ್ ಪ್ರದೇಶದಲ್ಲಿ ಭದ್ರತಾ ಪಡೆಗಳು ಇತರ ಮೂವರು ಉಗ್ರರನ್ನು ಹೊಡೆದುರುಳಿಸಿವೆ ಎಂದು ಸೇನೆಯ ಸಾರ್ವಜನಿಕ ಸಂಬಂಧಗಳ ಆಂತರಿಕ ವಿಭಾಗ (ಐಎಸ್‌ಪಿಆರ್) ತಿಳಿಸಿದೆ ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಪಾಕ್ ಜೈಲಿನಲ್ಲಿ ಭಾರತದ 308 ಕೈದಿಗಳು

ಇಸ್ಲಾಮಾಬಾದ್ (ಪಿಟಿಐ): ದ್ವಿಪಕ್ಷೀಯ ಒಪ್ಪಂದದ ಭಾಗವಾಗಿ, ಪಾಕಿಸ್ತಾನವು ತನ್ನ ದೇಶದ ಜೈಲಿನಲ್ಲಿರುವ 308 ಭಾರತೀಯ ಕೈದಿಗಳ ಪಟ್ಟಿಯನ್ನು ಭಾರತೀಯ ಹೈಕಮಿಷನ್‌ಗೆ ಶನಿವಾರ ಹಸ್ತಾಂತರಿಸಿದೆ. ಇವರಲ್ಲಿ 42 ಮಂದಿ ನಾಗರಿಕ ಕೈದಿಗಳಾಗಿದ್ದರೆ, 266 ಮಂದಿ ಮೀನುಗಾರರು.

'2008ರ ರಾಜತಾಂತ್ರಿಕ ಪರವಾನಗಿ ಒಪ್ಪಂದಕ್ಕೆ ಅನ್ವಯ ಈ ಪಟ್ಟಿಯನ್ನು ಹಸ್ತಾಂತರಿಸಲಾಗಿದೆ' ಎಂದು ವಿದೇಶಾಂಗ ಕಚೇರಿ (ಎಫ್‌ಒ) ತಿಳಿಸಿದೆ.

'ಭಾರತವು ನವದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್‌ಗೆ ಪಾಕಿಸ್ತಾನಿ ಕೈದಿಗಳ ಪಟ್ಟಿಯನ್ನು ನೀಡಿದ್ದು, ಅದರಲ್ಲಿ 417 ಕೈದಿಗಳ ಹೆಸರಿವೆ. ಇವರಲ್ಲಿ 343 ಮಂದಿ ನಾಗರಿಕ ಕೈದಿಗಳಿದ್ದರೆ, 74 ಮಂದಿ ಮೀನುಗಾರರಿದ್ದಾರೆ' ಎಂದು ಎಫ್‌ಒ ಹೇಳಿದೆ.

ಗುಜರಾತ್: ಭಾರಿ ಮಳೆ– ಹಲವೆಡೆ ಪ್ರವಾಹ ಪರಿಸ್ಥಿತಿ

ಅಹಮದಾಬಾದ್ (ಪಿಟಿಐ): ಕಳೆದ 24 ಗಂಟೆಗಳಲ್ಲಿ ಗುಜರಾತ್‌ನ ಹಲವೆಡೆ ಭಾರಿ ಮಳೆ ಸುರಿಯುತ್ತಿದ್ದು, ಹಲವೆಡೆ ಪ್ರವಾಹ ಪರಿಸ್ಥಿತಿ ಎದುರಾಗಿದೆ. ಶನಿವಾರ ಬೆಳಿಗ್ಗೆ 6ಗಂಟೆಗೆ ಕೊನೆಗೊಂಡು 24 ಗಂಟೆಗಳಲ್ಲಿ ಜುನಾಗಢ ಜಿಲ್ಲೆಯ ವಿಸಾವದರ್ ತಾಲೂಕಿನಲ್ಲಿ 39.8 ಮಿಮೀ ಮಳೆ ಬಿದ್ದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಬ್ಬರ ರಕ್ಷಣೆ: ಜುನಾಗಢದ ಸುತ್ರೇಜ್ ಗ್ರಾಮದ ತಗ್ಗು ಪ್ರದೇಶಗಳಲ್ಲಿ ನೀರು ಹರಿದಿದ್ದು, ನೀರಿನಲ್ಲಿ ಸಿಲುಕಿದ್ದ ಇಬ್ಬರನ್ನು ವಾಯುಪಡೆಯ ಹೆಲಿಕಾಪ್ಟರ್ ಬಳಸಿ ರಕ್ಷಿಸಲಾಗಿದೆ.

ಇಂಡೊನೇಷ್ಯಾದಲ್ಲಿ ಭೂಕಂಪ: 1 ಸಾವು

ಯೋಗ್ಯಕರ್ತ (ಎಪಿ): ಇಂಡೊನೇಷ್ಯಾದ ಪ್ರಮುಖ ದ್ವೀಪವಾದ ಜಾವಾ ಬಳಿ ಸಮುದ್ರದಾಳದಲ್ಲಿ 5.8ರಷ್ಟು ತೀವ್ರತೆಯ ಭೂಕಂಪ ಶುಕ್ರವಾರ ಸಂಭವಿಸಿದೆ. ಹಲವು ಕಟ್ಟಡಗಳು ಹಾನಿಗೀಡಾಗಿದ್ದು, ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಇಬ್ಬರು ಗಾಯಗೊಂಡಿದ್ದಾರೆ ಎಂದು ಅಲ್ಲಿಯ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ಮೃತಪಟ್ಟವರು ಬಂತುಲ್ ನಿವಾಸಿಯಾಗಿದ್ದಾರೆ. ಯೋಗ್ಯಕರ್ತ ಮತ್ತು ಅದರ ನೆರೆಯ ಪ್ರಾಂತ್ಯಗಳಾದ ಕೇಂದ್ರ ಜಾವಾ ಮತ್ತು ಪೂರ್ವ ಜಾವಾದಲ್ಲಿಯ ಶಾಲೆಗಳು, ಆರೋಗ್ಯ ಕೇಂದ್ರಗಳು, ಪ್ರಾರ್ಥನಾ ಮಂದಿರಗಳು, ಮನೆಗಳು ಸೇರಿ ಸುಮಾರು 93 ಕಟ್ಟಡಗಳು ಹಾನಿಗೀಡಾಗಿವೆ ಎಂದು ತಿಳಿಸಿದ್ದಾರೆ.

ಸುನಾಮಿಯ ಅಪಾಯವಿಲ್ಲ ಎಂದು ಇಂಡೊನೇಷ್ಯಾದ ಹವಾಮಾನ, ವಾಯುಗುಣ ಮತ್ತು ಭೂಭೌತಿಕ ಸಂಸ್ಥೆ ಹೇಳಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್..
ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು.
ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Uttarahalli
FOR SALE: 3BHK 1300 Sqft West Facing, 2nd Cross, Simhadri Layout, Uttarahalli Main Road, Small Apartment, Blore 560061. Contact: 9632072053/9449784158

EDUCATION CORNER
ಕ್ಲಾಸಿಫೈಡ್ಸ್
10ನೇ ತರಗತಿ ನಂತರದ ಉಜ್ವಲ ಭವಿಷ್ಯಕ್ಕಾಗಿ
12ನೇ/ಪಿಯುಸಿ ವಿಜ್ಞಾನ ವಿಭಾಗದಲ್ಲಿ ಅಥವಾ ITI ಪೂರ್ಣಗೊಳಿಸಿದ ವಿದ್ಯಾರ್ಥಿಗಳು 2ನೇ ವರ್ಷದ ಡಿಪ್ಲೋಮಾಗೆ ನೇರ ಪ್ರವೇಶ ಪಡೆಯುವ ಅವಕಾಶ ಹೊಂದಿರುತ್ತಾರೆ.
ತ್ವರೆ ಮಾಡಿ
ಇಂದೇ ಪ್ರವೇಶ ಪಡೆದುಕೊಳ್ಳಿ.
ಡಿಪ್ಲೋಮಾ ಇಂಜಿನಿಯರಿಂಗ್
ವಿದ್ಯಾರ್ಹತೆ: 10ನೇ ತರಗತಿ ಉತ್ತೀರ್ಣ
Placement Assistance provided
LIMITED SEATS ONLY
▸ಏರೋನಾಟಿಕಲ್ ಇಂಜಿನಿಯರಿಂಗ್
▸ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್
▸ಮೆಕಾನಿಕಲ್ ಇಂಜಿನಿಯರಿಂಗ್
▸ಆಟೋಮೊಬೈಲ್ ಇಂಜಿನಿಯರಿಂಗ್
ADMISSIONS ARE OPEN
8050461016
9740037853
(Approved by DTE & AICTE)
HEA ಪಾಲಿಟೆಕ್ನಿಕ್ ಬೆಂಗಳೂರು
P. B.No. 3776, Ashwathanagar, Marathahalli, Bengaluru-560037
Ph:080-25238650, 25232217 • Toll free: 18004258650
Email: admissions@hindustanacademy.edu.in
www.hindustanacademy.edu.in

ಉದ್ಯೋಗಾವಕಾಶ
ಬೇಕಾಗಿದ್ದಾರೆ
ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಕೆಲಸ ನಿರ್ವಹಿಸಲು ನುರಿತ ಬಸ್ ಚಾಲಕರು (ಕನಿಷ್ಠ 10ನೇ ತರಗತಿ ಉತ್ತೀರ್ಣ) ಬೇಕಾಗಿದ್ದಾರೆ. 3–4 ವರ್ಷದ ಅನುಭವ ಹಾಗೂ ಅಗತ್ಯ ಚಾಲನೆ ಪರವಾನಗಿ ಹೊಂದಿರಬೇಕು. ಆಸಕ್ತರು 10 ದಿನಗಳೊಳಗಾಗಿ
ಕಾರ್ಯದರ್ಶಿ,
ಶ್ರೀ ಕೃಷ್ಣದೇವರಾಯ ಶಿಕ್ಷಣ ದತ್ತಿ,
ನಂ.16, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು–560 080 ಇವರಿಗೆ ಅರ್ಜಿಯನ್ನು ಸಲ್ಲಿಸಬೇಕು.
ಇಮೈಲ್: sriket@gmail.com

General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

10TH ಪಾಸ್/ 12th ಪಾಸ್/ ಐಟಿಐ ಕ್ಯಾಂಡಿಡೇಟ್ಸ್ ಫ್ರೆಶರ್ಸ್ ಅಥವಾ ಗರಿಷ್ಠ ಎರಡು ವರುಷ ಅನುಭವ ಇರುವವರು ಮಿಷಿನರಿ ಅಸೆಂಬ್ಲಿ ಕೆಲಸಕ್ಕೆ ಬೇಕಾಗಿದ್ದಾರೆ Mobile: 7204593200

Drivers
ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9886683188/ 9738421001

ಸ್ಪರ್ಧಾಮಿತ್ರ ACADEMY
IAS / KAS Prelims &Mains
PSI / FDA / SDA Paper I & II
RRB Bank-Exams
Enroll for Test Series
Admission Open
Opp. Maruti Medicals, Attiguppe Metro Station, Vijayanagar, Bengaluru - 40.
9535111133 / 9535111199

Part-Time Jobs
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
To Place your ad in Deccan Herald & Prajavani Classifieds
For details contact :
9901641752 : 9886213331
9845114560 : 9731810277
080 - 45557163 / 164

ಕಾಳಿಂಗನ ಗೆದ್ದ ಗೌರಿಶಂಕರ 11


ಜಾಲತಾಣದ ಬೆಳ್ಳಿ-ಮಿಂಚು 'ಕಥಾಗುಚ್ಛ' 12

ಊಟಿಯಲ್ಲೊಂದು ಬ್ಯೂಟಿಫುಲ್ ಚರ್ಚ್ 13

ಅಪ್ಪ ಅಮ್ಮನೇ ಇಲ್ಲದ ಮಕ್ಕಳು

ಭ್ರೂಣಶಾಸ್ತ್ರದ ಹೊಸ ಹೆಜ್ಜೆ

ಕೇಂಬ್ರಿಜ್ ವಿವಿಯ ಡಾ. ಮ್ಯಾಗ್ದಲೀನಾ ಜೆರ್ನಿಕಾ-ಗೋಯೆಟ್ಜ್ ಎಂಬ ಭ್ರೂಣಶಾಸ್ತ್ರದ ವಿಜ್ಞಾನಿ ಹಾಗೂ ಇಸ್ರೇಲಿನ ವೈಜ್ಮನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಡಾ. ಜಾಕೋಬ್ ಹನ್ನಾ ನಾಯಕತ್ವದ ತಂಡಗಳು ಅಂಡಾಣು, ವೀರ್ಯಾಣುವಿನ ಹಂಗೇ ಇಲ್ಲದ ಕೃತಕ ಭ್ರೂಣವನ್ನು ಸೃಷ್ಟಿಸಿವೆ.



ಎಂ.ವಿ. ಕೇಶವ ಮೂರ್ತಿ

ಇದೇನಪ್ಪಾ ಡ್ರೈವರ್ ಇಲ್ಲದ ಕಾರುಗಳು, ಪೈಲೆಟ್ ಇಲ್ಲದ ವಿಮಾನಗಳು, ಬೀಜವಿಲ್ಲದ ಹಣ್ಣುಗಳು ಎಂದು ಹೇಳುವಂತೆ ಸುಲಭವಾಗಿ ಅಪ್ಪ ಅಮ್ಮ ಇಲ್ಲದ ಮಕ್ಕಳು ಎಂದು ಹೇಳುತ್ತಿದ್ದಾನೆಂದು ಗಾಬರಿಗೊಳ್ಳಬೇಡಿ, ಇದು ಸತ್ಯ. ಹೆಣ್ಣು, ಗಂಡುಗಳ ಮಿಲನವಿಲ್ಲದೆ ಪ್ರಯೋಗಾಲಯದಲ್ಲಿಯೇ ಮಾನವನ ವೀರ್ಯಾಣುಗಳಿಂದ ಅಂಡಾಣು ಫಲಿತಗೊಳ್ಳುವಂತೆ ಮಾಡಿ ಪ್ರನಾಳಶಿಶುಗಳನ್ನು ಸೃಷ್ಟಿ ಮಾಡುವ ತಂತ್ರಜ್ಞಾನ ಹೊಸದೇನಲ್ಲ. ವೀರ್ಯಾಣುಗಳ ಸಹಾಯವೇ ಇಲ್ಲದೆ ಅಂಡಾಣುವನ್ನು ಮಾತ್ರ ಫಲಿತಗೊಳಿಸಿ, ಅದರಿಂದ ಭ್ರೂಣೋತ್ಪತ್ತಿಯಾಗುವಂತೆ ಮಾಡುವ ವಿಧಾನವೂ ಪರಿಚಿತವೇ. ಅಂಡಾಣು, ವೀರ್ಯಾಣು ಇದಾವುದೂ ಇಲ್ಲದೆ ಭ್ರೂಣೋತ್ಪತ್ತಿ ಸಾಧ್ಯವೇ? ಹೀಗೊಂದು ಪ್ರಶ್ನೆಗೆ ಕೇಂಬ್ರಿಜ್ ಹಾಗೂ ಇಸ್ರೇಲಿನ ವಿಜ್ಞಾನಿಗಳು ನಡೆಸಿದ ಸಂಶೋಧನೆಯಲ್ಲಿ ಉತ್ತರ ಲಭಿಸಿದೆ.

ಸಂಪೂರ್ಣವಾಗಿ ಕೃತಕವಾಗಿರುವ ಹದಿನಾಲ್ಕು ದಿನಗಳ (ಸದ್ಯ ಚಾಲ್ತಿಯಲ್ಲಿರುವ ಕಾನೂನಿನ ಪ್ರಕಾರ ಹದಿನಾಲ್ಕು ದಿನಗಳಿಗಿಂತ ಜಾಸ್ತಿ ವಯಸ್ಸಿನ ಮಾನವ ಭ್ರೂಣವನ್ನು ಪ್ರಯೋಗಾಲಯದಲ್ಲಿ ಅಧಿಕೃತವಾಗಿ ಬೆಳೆಸುವಂತಿಲ್ಲ) ಭ್ರೂಣ ಇದು. ಹದಿನಾಲ್ಕು ದಿನ ವಯಸ್ಸಿನ ಸಹಜ ಭ್ರೂಣದಂತೆಯೇ ಇದೂ ಇದೆ. ಈ ಸಂಶೋಧನೆಯು ಪ್ರಸ್ತುತ ಭ್ರೂಣಶಾಸ್ತ್ರದ ವಿದ್ಯಮಾನಗಳಲ್ಲಿ ದೊಡ್ಡ ಮೈಲುಗಲ್ಲು ಎಂದೇ ಭಾವಿಸಲಾಗಿದೆ.

ಅಂಡಾಣುವಿನ ಸಂಪರ್ಕಕ್ಕೆ ಬಂದ ವೀರ್ಯಾಣುವು ಅಂಡಾಣುವನ್ನು ಫಲಿತಗೊಳ್ಳುವಂತೆ ಮಾಡಿ ಮುಂದಿನ ಬೆಳವಣಿಗೆಗೆ ದಾರಿ ಮಾಡಿಕೊಡುತ್ತದೆ. ಹೀಗೆ ಫಲಿತಗೊಂಡ ಅಂಡಾಣು ಮೈಟಾಸಿಸ್ ಎಂದು ಕರೆಯಲಾಗುವ ಕೋಶ ವಿಭಜನೆಗೆ ಈಡಾಗುತ್ತದೆ. ಇದರಿಂದಾಗಿ ಒಂದು ಇದ್ದ ಜೀವಕೋಶ ಎರಡು, ನಾಲ್ಕು ಎಂದು ವಿಭಜನೆಯಾಗುತ್ತಾ ಭ್ರೂಣ ಸೃಷ್ಟಿಯಾದ ದಿನದಿಂದ ಹದಿನಾಲ್ಕನೆಯ ದಿನ ತಲುಪುವ ಹೊತ್ತಿಗೆ 'ಗ್ಯಾಸ್ಟ್ರುಲಾ' ಎಂಬ ಹಂತವನ್ನು ತಲುಪುತ್ತದೆ. ಇದು ಭ್ರೂಣೋತ್ಪತ್ತಿಯ ಮೊದಲನೆಯ ಹಂತ. ಭವಿಷ್ಯದಲ್ಲಿ ಯಾವೆಲ್ಲಾ ಅಂಗಗಳು ಯಾವ ಜೀವಕೋಶಗಳಿಂದ ಉತ್ಪತ್ತಿಯಾಗಬೇಕು ಎಂದು ನಿರ್ಧಾರವಾಗುವುದು ಈ ಹಂತದಲ್ಲಿಯೇ. ಹೀಗಾಗಿ ಮುಂದೆ ಈ ಭ್ರೂಣಕ್ಕೆ ಒದಗಬಹುದಾದ ಸಮಸ್ಯೆಗಳ ಬಗ್ಗೆ ವೈಜ್ಞಾನಿಕವಾಗಿ ಅರಿಯಲೂ ಸಾಧ್ಯವಿದೆ.

ಏನೀ ಕೃತಕ ಭ್ರೂಣ?

ಕೃತಕ ಭ್ರೂಣದಲ್ಲಿಯೂ ಬೇರೆ ವಿಧಗಳಿವೆ. ಕೆಲವರು ಪ್ರಯೋಗಾಲಯದಲ್ಲಿ ಉತ್ಪಾದನೆಯಾದದ್ದೆಲ್ಲವೂ ಕೃತಕ ಎಂದು ಭಾವಿಸಿರುತ್ತಾರೆ, ವಾಸ್ತವದಲ್ಲಿ ಹಾಗಿಲ್ಲ. ಪ್ರಯೋಗಾಲಯದಲ್ಲಿ ಉತ್ಪತ್ತಿಯಾದರೂ ಅದರ ಅಂಡಾಣು ಹಾಗೂ ವೀರ್ಯಾಣುಗಳನ್ನು ಅರ್ಹ ದಂಪತಿಯಿಂದ ಅಥವಾ ಯಾರಾದರೂ ದಾನಿಗಳಿಂದ ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ಅವನ್ನು ಫಲಿತಗೊಳ್ಳುವಂತೆ ಮಾಡಿದರೆ ಅದು ಪ್ರನಾಳಶಿಶು ಎನಿಸಿಕೊಳ್ಳುತ್ತದೆ. ಕೃತಕ ಭ್ರೂಣವನ್ನು ಅಂಡಾಣು ಅಥವಾ ವೀರ್ಯಾಣುವಿನ ಹಂಗೇ ಇಲ್ಲದೆ ಸೃಷ್ಟಿಸಲಾಗುತ್ತದೆ.

ಕೃತಕ ಭ್ರೂಣವು ವಿಜ್ಞಾನಕ್ಕೆ ಹೊಸದೇನಲ್ಲ. ಕಳೆದ ವರ್ಷವೇ ಕೆಲವು ವಿಜ್ಞಾನಿಗಳು ಇಲಿಯ ಕೃತಕ ಭ್ರೂಣವನ್ನು ಸೃಷ್ಟಿ ಮಾಡಿದ್ದರು. ಈ ಭ್ರೂಣವು 'ಗ್ಯಾಸ್ಟ್ರುಲಾ' ಹಂತವನ್ನು ದಾಟಿ ಅಂಗಾಂಗಗಳ ಬೆಳವಣಿಗೆಯವರೆಗೂ ತಲುಪಿತ್ತು. ಹೃದಯ, ಮೆದುಳು ಮುಂತಾದವುಗಳು ರಚನೆಯಾದದ್ದು ಆ ಭ್ರೂಣದಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಸದ್ಯ ಮಾನವನ ಕೃತಕ ಭ್ರೂಣ ಸೃಷ್ಟಿ ಮಾಡಿರುವುದು ಹೊಸ ಮೈಲುಗಲ್ಲಾಗಿ ಪರಿಣಮಿಸಿದೆ.

ಕೃತಕ ಭ್ರೂಣ ಸೃಷ್ಟಿಯು ಸುಲಭವಾದ ಕೆಲಸವಲ್ಲ. ಇದಕ್ಕಾಗಿ ಮಾನವನ 'ಎಂಬ್ರಿಯಾನಿಕ್ ಸ್ಟೆಮ್ ಸೆಲ್' ಎಂದು ಕರೆಯಲಾಗುವ ಜೀವಕೋಶಗಳು ಬೇಕು. (ಸ್ಟೆಮ್ ಸೆಲ್ ಎಂದರೆ ಇವುಗಳನ್ನು ಪ್ಲಾಸೆಂಟಾದಿಂದ ಪಡೆದುಕೊಳ್ಳಲಾಗುತ್ತದೆ. ಇವು ಇತರ ಜೀವಕೋಶಗಳಂತಲ್ಲ. ಇವುಗಳ ಬೆಳವಣಿಗೆಗೆ ಸರಿಯಾದ ವಾತಾವರಣವನ್ನು ಪ್ರಯೋಗಾಲಯದಲ್ಲಿ ಕಲ್ಪಿಸಿದ್ದೇ ಆದಲ್ಲಿ ನಮಗೆ ಬೇಕಾದ ಅಂಗಾಂಗಗಳನ್ನು ಪಡೆಯಲು ಸಾಧ್ಯ. ಕೃತಕ ಚರ್ಮ, ಮೂತ್ರಪಿಂಡ ಅಥವಾ ಹೃದಯ ಹೀಗೆ ಯಾವುದನ್ನು ಬೇಕಾದರೂ ಸೃಷ್ಟಿಸಬಹುದು. ಸಸ್ಯಗಳಲ್ಲಿ ಈ ಪ್ರಯತ್ನ ಬಹಳ ಸುಲಭ. ಆದರೆ ಪ್ರಾಣಿಗಳಲ್ಲಿ ಈ ಪ್ರಕ್ರಿಯೆ ಬಹಳ ಕಠಿಣವಾದದ್ದು.) ಮಾನವ ಭ್ರೂಣವು ಬೆಳವಣಿಗೆ ಹೊಂದುವಾಗ ತಾಯಿಯ ಗರ್ಭಕೋಶದೊಳಗೆ ಎಷ್ಟು ವ್ಯವಸ್ಥಿತವಾದ ವಾತಾವರಣವಿರುತ್ತದೋ ಅದಕ್ಕೆ ಒಂದಿನಿತೂ ಧಕ್ಕೆ ಬರದಂತೆ ಪ್ರಯೋಗಾಲಯದಲ್ಲಿಯೂ ಸ್ಟೆಮ್ ಸೆಲ್‌ಗಳಿಗೆ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಸೂಕ್ಷ್ಮವನ್ನು ಗಮನದಲ್ಲಿಟ್ಟುಕೊಂಡೇ ಕೇಂಬ್ರಿಜ್ ವಿವಿಯ ಡಾ. ಮ್ಯಾಗ್ದಲೀನಾ ಜೆರ್ನಿಕಾ-ಗೋಯೆಟ್ಜ್ ಎಂಬ ಭ್ರೂಣಶಾಸ್ತ್ರದ ವಿಜ್ಞಾನಿ ಹಾಗೂ ಇಸ್ರೇಲಿನ ವೈಜ್ಮನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಡಾ. ಜಾಕೋಬ್ ಹನ್ನಾ ನಾಯಕತ್ವದ ತಂಡಗಳು ಯಶಸ್ವಿಯಾಗಿ ಸಂಶೋಧನೆ ನಡೆಸಿದವು. ಅಪ್ಪ ಅಮ್ಮನೇ ಇಲ್ಲದ ಮಾನವ ಭ್ರೂಣವನ್ನು ಸೃಷ್ಟಿಸಿರುವುದನ್ನು ಆ ತಂಡಗಳೇ ಹೇಳಿಕೊಂಡಿವೆ.

ಹೀಗೆ ಪ್ರಯೋಗಾಲಯದಲ್ಲಿ ತಯಾರಿಸಲಾದ ಕೃತಕ ಭ್ರೂಣದ ರಚನೆ ಹಾಗೂ ಭ್ರೂಣದ ಜೀನ್ ಪ್ರತಿಲೇಖನ ಪ್ರೊಫೈಲ್‌ಗಳನ್ನು ಗಮನಿಸಿದಾಗ, ಅದು ಸಹಜ ಭ್ರೂಣದ ರಚನೆ ಹಾಗೂ ಜೀನ್ ಪ್ರತಿಲೇಖನ ಪ್ರೊಫೈಲ್‌ಗಳಂತೆಯೇ ಇದೆ. (Gene transcription profiles ಎಂದರೆ ಒಂದು ನಿರ್ದಿಷ್ಟವಾದ ಸಮಯದಲ್ಲಿ ಭ್ರೂಣದಲ್ಲಿ ಯಾವ ವಂಶವಾಹಿಗಳು ಕೆಲಸ ಮಾಡುತ್ತಿವೆ ಎಂಬುದನ್ನು ಕಂಡು ಹಿಡಿಯುವುದು. ಎಲ್ಲಾ ಸಮಯದಲ್ಲಿ ಎಲ್ಲಾ ವಂಶವಾಹಿಗಳ ಕೆಲಸದ ಅವಶ್ಯಕತೆಯಿಲ್ಲದೇ ಇರುವುದರಿಂದ ವಂಶವಾಹಿಗಳ ಚಟುವಟಿಕೆಗಳ ಆಧಾರದಲ್ಲಿ ಭ್ರೂಣದ ವಯಸ್ಸನ್ನು ಅಂದಾಜಿಸಬಹುದು, ಅದನ್ನೇ ಇಲ್ಲಿ ಮಾಡಿದ್ದಾರೆ).

11ನೇ ಪುಟಕ್ಕೆ..

ಹೆಜ್ಜೇನು ಸಂಕುಲಕ್ಕೆ ರಾಮ ರಕ್ಷಣೆ

ಆಸಕ್ತರಿಗೆ ಜೇನು ತರಬೇತಿ ನೀಡುತ್ತಿರುವ ರಾಮಾ ಮರಾಠಿ

ಹೆಜ್ಜೇನು ತೆಗೆಯುವ ಮುನ್ನ ವಿಶೇಷ ವಸ್ತ್ರ ಧರಿಸಿರುವ ಮರಾಠಿ

ರಾಜೇಂದ್ರ ಹೆಗಡೆ

'ಜೇನ್ ಇದ್ರೆ ಮನುಷ್ಯರೂ ಇರ್ತಾರೆ ಸ್ವಾಮಿ. ಅದ್ ಇಲ್ದೆ ಇದ್ರೆ ಭೂಮಿ ಮ್ಯಾಲ್ ಏನ್ ಇರ್ತದ್ರ? ಹಂಗಾಗ್ ಅವು ಕಷ್ಟದಾಗಿದ್ರೆ ನಂಗ್ ಸುಮ್ನಿರೂಕ್ ಆಗುದಿಲ್ರ. ಅದ್ ಬಿಲ್ಡಿಂಗಾದ್ರೂ ಸೈ, ಟವರಾದ್ರೂ ಸೈ, ಅಲ್ಲಿಂದ್ ತೆಗ್ದ್ ಕಾಡೀಗ್ ಬಿಡೂದೇಯ....' ಹೀಗೆ ಜೇನು ಹುಳುಗಳ ಬಗ್ಗೆ ಅಪರಿಮಿತ ಪ್ರೀತಿಯ ಮಾತುಗಳನ್ನು ಆಡುತ್ತಾ ಯಲ್ಲಾಪುರದ ರಾಮಾ ಮರಾಠಿ ಸೇತುವೆಯೊಂದರ ಕೆಳಗೆ ಜೋಲುತ್ತಿದ್ದ ಹೆಜ್ಜೇನು ಗೂಡನ್ನು ನಿರಾಯಾಸವಾಗಿ ತಮ್ಮ ಬಲೆಯ ಚೀಲಕ್ಕಿಳಿಸಿದರು.

ನಿಧಾನಕ್ಕೆ ಅದನ್ನು ವಾಹನಕ್ಕೇರಿಸಿ ಬೇಡ್ತಿ ಕೊಳ್ಳದ ಅರಣ್ಯದ ಹಾದಿಯಲ್ಲಿ ಸಾಗುತ್ತ ಮಾತು ಮುಂದುವರಿಸಿದರು. 'ಹಿಂದೆಲ್ಲ ಹಿಂಗಿದ್ ವಾತಾವರಣ ಇಲ್ಲಾಗಿತ್ರ. ಈಗೊಂದ್ ಇಪ್ಪತ್ ವರ್ಷಾತು. ಜೇನ್ ಕಂಡ್ರೆ ವಿಷ ಹಾಕೂದು, ಕರೆಂಟ್ ಕೊಡೂರು, ಬೆಂಕಿ ಹಚ್ಚುದು ಹೆಚ್ಚದೆ. ಹಂಗಿದ್ ಘಟನೆ ಆದಾಗೆಲ್ಲ, ನಮಗೆ ನಾವೇ ವಿಷ ಹಾಕ್ಕಂಡಾಂಗೆ, ಬೆಂಕಿ ಇಟ್ಕಂಡಾಂಗೆ ಕಾಣ್ತದೆ' ಅನ್ನುತ್ತ ತಾವು ಚೀಲದಲ್ಲಿ ತುಂಬಿ ತಂದಿದ್ದ ಜೇನು ಕುಟುಂಬವನ್ನು ನಿಧಾನಕ್ಕೆ ದಟ್ಟಾರಣ್ಯದಲ್ಲಿ ಬಿಟ್ಟು ವಾಪಸ್ ಊರಿನತ್ತ ಹೊರಟರು. ಅವರಾಡಿದ ಮಾತು ಕಾಡು-ನಾಡಿಗೆ ಜೇನಿನ ಮಹತ್ವವನ್ನು ಸಾರುವಂತಿತ್ತು.

ಯಲ್ಲಾಪುರ ಮುದ್ದಿನಗದ್ದೆಯ ರಾಮಾ ಮರಾಠಿ ಅವರು ಜೇನು ನೊಣಗಳಿಗೆ ಸುರಕ್ಷಿತವಲ್ಲದ ದೊಡ್ಡ ಮರಗಳು, ಕಲ್ಲುಬಂಡೆ, ಸೇತುವೆಗಳು, ಅಣೆಕಟ್ಟೆಗಳು, ಎತ್ತರದ ಜಲ ಸಂಗ್ರಹಾಲಯಗಳು, ದೊಡ್ಡ ಮಹಡಿ ಮನೆಗಳು, ಕಚೇರಿಗಳ ಮೇಲೆ ಕಟ್ಟಿದ ಹೆಜ್ಜೇನು ಗೂಡುಗಳನ್ನು ಜತನದಿಂದ ತೆಗೆದು ಸಂರಕ್ಷಿಸುವ ಕಾರ್ಯವನ್ನು ಹಲವು ವರ್ಷಗಳಿಂದ ಮಾಡಿ ಸೈ ಎನಿಸಿಕೊಂಡಿದ್ದಾರೆ. ನಾಲ್ಕು ದಶಕಗಳಿಂದ ಜೇನು ದುಂಬಿಗಳನ್ನು ನಂಬಿ ಬದುಕುತ್ತಿರುವ ಇವರು, ಹೆಜ್ಜೇನಿನ ಗೂಡನ್ನು ಹುಳುಗಳಿಗೆ ಯಾವುದೇ ತೊಂದರೆ ಆಗದಂತೆ ಕಿತ್ತು ಚೀಲದಲ್ಲಿ ತುಂಬಿ ಹಗ್ಗದ ಸಹಾಯದಿಂದ ಇಳಿಸಿ, ವಾಹನದ ಮೂಲಕ ಅರಣ್ಯಕ್ಕೆ ತಂದು ಬಿಡುವ ಕೆಲಸವನ್ನು ತಮ್ಮ ಜೊತೆಗಾರರ ಜೊತೆ ಮಾಡುತ್ತಿದ್ದಾರೆ. ಇದು ಸ್ವಚ್ಛ ಪರಿಸರದಲ್ಲಿ ಹೆಜ್ಜೇನು ಸಂತತಿ ಅಭಿವೃದ್ಧಿಯಾಗಲು ಸಹಕಾರಿಯಾಗುತ್ತಿದೆ. ತಮ್ಮದೇ ಆದ ವಿಶಿಷ್ಟ ಆಕಾರದ ಬಲೆಯ ಚೀಲ, ದಿರಿಸು ತೊಟ್ಟು ಜೇನು ರಕ್ಷಣೆ ಸೇವೆ ಮಾಡುತ್ತಿದ್ದಾರೆ.

'ಅನಿವಾರ್ಯ ಕಾರಣಗಳಿಂದ ಹೆಜ್ಜೇನು ಪೇಟೆ ಪಟ್ಟಣಗಳ ಇಮಾರತ್ತಿನ ಮೇಲೆ ಗೂಡು ಕಟ್ಟುತ್ತದೆ. ಅಲ್ಲಿ ಅವು ಸುರಕ್ಷಿತವಾಗಿರಲು ಸಾಧ್ಯವಿಲ್ಲ. ಜೊತೆಗೆ ನಗರದ ಅಶುದ್ಧ ವಾತಾವರಣ ಜೇನಿನ ಸಂತಾನಾಭಿವೃದ್ಧಿ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ. ಹೀಗಾಗಿ ಜೇನು ಸಂತತಿ ವಿನಾಶದತ್ತ ಸಾಗುತ್ತಿದೆ. ಇದನ್ನು ತಪ್ಪಿಸುವ ಅಗತ್ಯವಿದೆ' ಎನ್ನುತ್ತಾರೆ ಅವರು. 'ಯಾವ ಕಾರಣಕ್ಕೂ ಹೆಜ್ಜೇನಿಗೆ ಔಷಧ ಹೊಡೆಯುವುದಾಗಲೀ, ಬೆಂಕಿ ಹಾಕುವುದಾಗಲೀ ಮಾಡಬಾರದು. ಕಾಡಿನಲ್ಲಿರಲಿ, ನಾಡಿನಲ್ಲಿರಲಿ, ವೈಜ್ಞಾನಿಕ ಕೊಯ್ಲು ಮುಖಾಂತರವಷ್ಟೆ ಹೆಜ್ಜೇನಿನ ಮರಿಭಾಗವನ್ನು ಬಿಟ್ಟು ತುಪ್ಪದ ಭಾಗ ಮಾತ್ರ ತೆಗೆಯಬೇಕು. ಈ ರೀತಿ ಹೆಜ್ಜೇನು ಕೊಯ್ಲು ಮಾಡುವುದರಿಂದ ಅವುಗಳ ಸಂತತಿ ವೃದ್ಧಿಸುತ್ತ ಹೋಗುತ್ತದೆ' ಎಂಬುದು ಅವರ ಅನುಭವದ ಮಾತು.

ಕಟ್ಟಡಗಳಲ್ಲಿ ಕಟ್ಟುವ ಹೆಜ್ಜೇನನ್ನು ಸುರಕ್ಷಿತವಾಗಿ ತೆಗೆದು ಕಾಡಿಗೆ ಬಿಡುತ್ತಾರೆ ರಾಮಾ ಮರಾಠಿ. ಇವರು ಜೇನು ಕೃಷಿಯಲ್ಲೂ ಪಳಗಿದವರು

ಈವರೆಗೆ ಶಿರಸಿ, ಹಳಿಯಾಳ, ಅಳ್ನಾವರ, ಬೆಳಗಲ್ ಪೇಟೆ, ಹಾವೇರಿ, ತಿಳುವಳ್ಳಿ, ಬಂಕಾಪುರ, ಹರಿಹರ, ನವಲಗುಂದ, ನರಗುಂದ, ಹಂಸಭಾವಿ, ಹಾನಗಲ್, ಮುಂಡಗೋಡ, ಧಾರವಾಡ, ಗದಗ, ರಾಣೆಬೆನ್ನೂರು, ಕಿರವತ್ತಿ, ಅಂಕೋಲಾ, ಗೋಕರ್ಣ, ಕಾರವಾರ ಸೇರಿ ಹೊರ ರಾಜ್ಯಗಳಲ್ಲಿಯೂ ಮೊಬೈಲ್ ಟವರ್ ಹಾಗೂ ಬೃಹತ್ ಕಟ್ಟಡಗಳಲ್ಲಿ ಕಟ್ಟಿರುವ ಹೆಜ್ಜೇನು ಗೂಡುಗಳನ್ನು ಸಂರಕ್ಷಿಸುವ ಕಾಯಕ ಮಾಡಿದ್ದಾರೆ. 30 ಸಾವಿರಕ್ಕೂ ಮಿಕ್ಕಿ ಜೇನುಗೂಡುಗಳನ್ನು ಸುರಕ್ಷಿತ ಪ್ರದೇಶಕ್ಕೆ ತಲುಪಿಸಿದ್ದಾರೆ. ಆದರೆ ಇದನ್ನು ಅವರು ಕೂಲಿಯಂತೆ ಮಾಡದೆ ಸೇವೆಯಂತೆ ಮಾಡುತ್ತಿದ್ದಾರೆ.

ಇವರು ಕೇವಲ ಹೆಜ್ಜೇನು ಸಂರಕ್ಷಣೆಗಷ್ಟೇ ಸೀಮಿತಗೊಂಡಿಲ್ಲ. ಜೇನು ಕೃಷಿಯಲ್ಲಿ ಕೂಡ ಪಳಗಿದ್ದಾರೆ. ಹೆಜ್ಜೇನು ಜೇನು ತುಪ್ಪ ತೆಗೆಯುವ ಮುನ್ನ ಗಣಪತಿ ಸ್ಮರಣೆ ಮಾಡಿ, ಮಕರಂದ ಲಭಿಸಿದ ನಂತರ ಜೇನುಮರಿಗಳಿಗೆ ತುಪ್ಪ ಉಣಿಸುವ ಮೂಲಕ ಮುಕ್ತಾಯ ಮಾಡುತ್ತಾರೆ. ತುಡವಿ, ಕೋಲುಜೇನುಗಳ ಬೇಟೆಗೆ ವಿಭಿನ್ನ ಸಂಪ್ರದಾಯ ಅನುಸರಿಸುವ ಇವರು, ಮಿಸರಿ ಜೇನು ತೆಗೆಯುವಾಗ ಹೆಚ್ಚಿನ ಶಿಸ್ತಿಲ್ಲದೆ ಸಾಗುತ್ತಾರೆ.

'ಹೆಜ್ಜೇನು ಕುಟುಂಬದಿಂದ ವರ್ಷಕ್ಕೆ ನಾಲ್ಕು ಬಾರಿ ಮಕರಂದ ಪಡೆಯಬಹುದು. ಆದರೆ ಅತಿಯಾಸೆಯಿಂದ ಸಂಪೂರ್ಣ ಜೇನುತುಪ್ಪ ತೆಗೆಯಬಾರದು. ಅಲ್ಲಿನ ದುಂಬಿಗಳಿಗೂ ಮಕರಂದ ಉಳಿಸಿದರೆ ಮುಂದಿನ ಬಾರಿ ಮತ್ತಷ್ಟು ಫಲ ಲಭಿಸುತ್ತದೆ' ಎಂಬ ಅನುಭವ ಹಂಚಿಕೊಳ್ಳುತ್ತಾರೆ ರಾಮಾ ಮರಾಠಿ.

ಏಳು ವರ್ಷಕ್ಕೊಮ್ಮೆ ಗುರಗಿ ಗಿಡಗಳು ಹೂ ಬಿಟ್ಟಾಗ ಜೇನುಗಳಿಗೆ ಹಬ್ಬದ ಸಂಭ್ರಮ. ಇದಲ್ಲದೆ ಮತ್ತಿ, ನಂದಿ, ಕಣಗಲ, ಮೇ ಫ್ಲವರ್, ನೇರಳೆ ಹೂಗಳಿಂದಲೂ ದುಂಬಿಗಳು ಮಕರಂದ ತಯಾರಿಸುತ್ತವೆ. ವಿಶೇಷ ಎಂದರೆ ಅಮಲು ತರಿಸುವ ತಾರಿ ಹೂ ಹಾಗೂ ವಿಷಕಾರಿ ಕಾಸರಕ ಹೂಗಳ ಮಕರಂದದಿಂದ ತಯಾರಾಗುವ ಮಧು ವಿಷಕಾರಿಯಲ್ಲ. ಬೆಡಸಲೆ ಹೂಗಳಿಂದ ತಯಾರಾದ ತುಪ್ಪ ಸದಾ ತಂಪಾಗಿರುತ್ತದೆ. ಜೇನುಗೂಡು ನಿರ್ಮಿಸಿ 15 ದಿನಗಳ ಒಳಗೆ ತುಪ್ಪ ತೆಗೆದರೆ ಆ ಕುಟುಂಬದ ಸಂತತಿ ನಾಶವಾಗುತ್ತದೆ. ಕನಿಷ್ಠ ಒಂದು ತಿಂಗಳ ನಂತರ ತುಪ್ಪ ತೆಗೆಯುವುದು ಉತ್ತಮ. ಶುದ್ಧ ಜೇನು ತುಪ್ಪ ತಿನ್ನುವಾಗ ನಗಬಾರದು, ಮಾತು ಮಿತಿಯಲ್ಲಿರಬೇಕು. ಜೇನಿದ್ದರೆ ಮಾತ್ರ ಕಾಡಲ್ಲಿ ಬೀಜ ಬಿದ್ದು ಸಸಿ ಆಗೋದು. ಹೆಜ್ಜೇನಿನ ಆಯುಸ್ಸು ಒಂದು ವರ್ಷ. ಮೊದಲೆಲ್ಲ ಒಂದು ಹೆಜ್ಜೇನು ಕುಟುಂಬದಿಂದ 70 ಕೆ.ಜಿ.ವರೆಗೆ ತುಪ್ಪ ಲಭಿಸುತ್ತಿತ್ತು. ಈಗ 30-40 ಕೆ.ಜಿ.ವರೆಗೆ ಮಾತ್ರ ಲಭಿಸುತ್ತದೆ... ಹೀಗೆ ಹಲವಾರು ವಿಷಯಗಳನ್ನು ಅವರು ಪಾಂಡಿತ್ಯಪೂರ್ಣವಾಗಿ ಹೇಳುತ್ತಾ ಸಾಗಿದರು. ತಮಗೆ ಲಭಿಸಿದ ಜೇನುತುಪ್ಪದ ಬಹುತೇಕ ಭಾಗವನ್ನು ಅನಾರೋಗ್ಯ ಪೀಡಿತರಿಗೆ ದಾನ ನೀಡುವಾಗಲೂ ಪರೋಪಕಾರಿ ಜೇನಿನೆಡೆ ಇವರದ್ದು ಧನ್ಯತೆಯ ಭಾವ.

ಇವರ ಜೇನು ಸಂರಕ್ಷಣೆ ಕಾಯಕ ಗಮನಿಸಿ ನ್ಯಾಶನಲ್ ಬೀ ಬೋರ್ಡ್, ರಾಜ್ಯಮಟ್ಟದ ಜೇನು ಕೃಷಿ ಕಾರ್ಯಾಗಾರ, ಧಾರವಾಡ ಕೃಷಿ ಮೇಳ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸ್ವರ್ಣವಲ್ಲೀ ಕೃಷಿ ಜಯಂತಿ, ಗಂಗಾವತಿ ಕೃಷಿ ವಿಜ್ಞಾನ ಕೇಂದ್ರ ಸೇರಿದಂತೆ ಹಲವೆಡೆ ಪ್ರಶಸ್ತಿ, ಪುರಸ್ಕಾರ, ಗೌರವಗಳು ಒಲಿದುಬಂದಿವೆ.

9591806525 ನಂಬರ್‌ಗೆ ಕರೆ ಮಾಡಿ, ಅವರ ಮನೆಗೆ ತೆರಳಿದರೆ ಅವರ ಸಾಧನೆ ಕಣ್ಣಾರೆ ಕಾಣಬಹುದಾಗಿದೆ.

ಶಾಂತಿ ಪ್ರೀತಿಯ ಸಂತ

ಎಸ್.ರವಿಪ್ರಕಾಶ್

'ದಯಮಾಡಿ ನಮ್ಮ ದೇಶವನ್ನು (ಪಾಕಿಸ್ತಾನ) ನಕಲು ಮಾಡಲು ಹೋಗಬೇಡಿ.... ನಾವು ನಾಶ ಆದಹಾಗೆ ನೀವೂ ನಾಶ ಹೊಂದಬೇಡಿ. ಭಾರತ ಒಂದು ಮಹಾನ್ ದೇಶ ಎಂಬುದು ಇಲ್ಲಿ ಬಂದು ನೋಡಿದಾಗ ಗೊತ್ತಾಗುತ್ತದೆ. ನಿಮ್ಮತನವನ್ನು ಕಾಪಾಡಿಕೊಳ್ಳಿ ... '

– ಹೀಗೆಂದು ಹೃದಯದಾಳದಿಂದ ಹೇಳಿದವರು ಪ್ರೊ. ಇಶ್ತಿಯಾಕ್ ಅಹಮದ್. ಇವರು ಸ್ವೀಡನ್‌ನ ಸ್ಟಾಕ್‌ಹೋಮ್ ವಿಶ್ವವಿದ್ಯಾಲಯದಲ್ಲಿ ಮಾನವಹಕ್ಕುಗಳ ಕುರಿತು ಹಲವು ದಶಕಗಳ ಕಾಲ ಬೋಧನೆ ಮಾಡಿದ್ದಾರೆ. ಪಾಕಿಸ್ತಾನ ಮತ್ತು ಸಿಂಗಾಪುರ ವಿಶ್ವವಿದ್ಯಾಲಯಗಳಲ್ಲಿ ಬೋಧನೆ ಮಾಡಿದ್ದಾರೆ. ಮೂಲತಃ ಪಾಕಿಸ್ತಾನದ ಲಾಹೋರ್‌ನವರಾದ ಇವರೀಗ ಸ್ವೀಡನ್‌ನಲ್ಲಿ ವಾಸವಿದ್ದಾರೆ. ಸದ್ಯ ಅವರು ಭಾರತದಲ್ಲಿ ಪ್ರವಾಸದಲ್ಲಿದ್ದಾರೆ.

ಇವರ ಮೂರು ಪುಸ್ತಕಗಳು ಭಾರತ ಮತ್ತು ಪಾಕಿಸ್ತಾನದಲ್ಲಿ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಮತ್ತು ವಿಮರ್ಶೆಗೆ ಕಾರಣವಾಗಿರುವುದೂ ಅಲ್ಲದೆ, ಎರಡು ಕೃತಿಗಳಿಗೆ ಭಾರತ ಮತ್ತು ಪಾಕಿಸ್ತಾನದಲ್ಲಿ ಹಲವು ಪ್ರಶಸ್ತಿಗಳೂ ಲಭಿಸಿವೆ. ಆ ಎರಡೂ ಕೃತಿಗಳೆಂದರೆ, 'Jinnah: His Successes, Failures and Role in History' ಮತ್ತು 'The Punjab Bloodied, Partitioned and Cleansed' (ಪ್ರಶಸ್ತಿ ಪುರಸ್ಕೃತ ಕೃತಿಗಳು), ಮಿಲಿಟರಿ ಸರ್ವಾಧಿಕಾರವನ್ನು ಅನಾವರಣಗೊಳಿಸುವ 'The Pakistan Garrison State: Origins, Evolution'.

ಇವರ ಕೃತಿಗಳು ಭಾರತದ ವಿಭಜನೆಗೆ ಹೊಸ ಹೊಳಹುಗಳನ್ನು ನೀಡಿದವು. ಅಖಿಲ ಭಾರತ ಕಾಂಗ್ರೆಸ್ ಮತ್ತು ನೆಹರೂ ಅವರೇ ವಿಭಜನೆಗೆ ಕಾರಣವೆಂದು ಪಾಕಿಸ್ತಾನದಲ್ಲಿ ಪ್ರತಿಪಾದಿಸುತ್ತಾ ಬಂದಿರುವುದನ್ನು ಖಂಡಿಸಿದವು. ಅಲ್ಲದೇ, ಮುಸ್ಲಿಂ ಲೀಗ್ ಮತ್ತು ಮೊಹಮದ್ ಅಲಿ ಜಿನ್ನಾ ಅವರೇ ವಿಭಜನೆಗೆ ಪ್ರಮುಖ ಕಾರಣರೆಂದು ಹಲವು ಸಾಕ್ಷ್ಯಗಳ ಮೂಲಕ ನಿರೂಪಿಸಿದ್ದಾರೆ. ತಮ್ಮ ಕೃತಿಯಲ್ಲಿನ ವಿಚಾರವನ್ನು ಭಾರತ ಮತ್ತು ಪಾಕಿಸ್ತಾನದಲ್ಲಿನ ಜನರಿಗೆ ಮುಟ್ಟಿಸಲು ಯೂಟ್ಯೂಬ್ ಚಾನೆಲ್ ಅನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಇಶ್ತಿಯಾಕ್ ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ 'ಪ್ರಜಾವಾಣಿ' ಜತೆ ಮಾತನಾಡಿದರು. ಅದರ ಸಾರಾಂಶ ಇಲ್ಲಿದೆ.

ಸ್ವೀಡನ್‌ನ ಸ್ಟಾಕ್‌ಹೋಮ್ ವಿಶ್ವವಿದ್ಯಾಲಯದಲ್ಲಿ ಮಾನವಹಕ್ಕುಗಳ ಕುರಿತು ಹಲವು ದಶಕಗಳ ಕಾಲ ಬೋಧನೆ ಮಾಡಿರುವವರು ಪಾಕಿಸ್ತಾನದ ಪ್ರೊ. ಇಶ್ತಿಯಾಕ್ ಅಹಮದ್ ಭಾರತ–ಪಾಕಿಸ್ತಾನದ ಶಾಂತಿ ಸಂಬಂಧಕ್ಕೆ ದಾರಿಗಳನ್ನು ಹುಡುಕುತ್ತಿರುವ ಅವರು ಮಾತಿಗೆ ಸಿಕ್ಕರು.

ಭಾರತದ ವಿಭಜನೆ ಆಗಬಾರದಿತ್ತು. ವಿಭಜನೆ ಆಗಿದ್ದು ದೊಡ್ಡ ಪ್ರಮಾದ. ಅದರ ಘೋರ ಪರಿಣಾಮವನ್ನು ಈಗಲೂ ಎರಡೂ ದೇಶಗಳು ಅನುಭವಿಸುತ್ತಿವೆ. ಧರ್ಮದ ಆಧಾರದಲ್ಲಿ ಪಾಕಿಸ್ತಾನ ನಿರ್ಮಾಣಗೊಂಡಿತು. ಅದೀಗ ವಿನಾಶದ ಅಂಚಿಗೆ ಬಂದು ತಲುಪಿದೆ. ಅಲ್ಲಿ ಇಸ್ಲಾಮ್ ಬಿಟ್ಟು ಅನ್ಯ ಧರ್ಮಗಳ ಜನರಿಗೆ ನೆಲೆಯೂ ಇಲ್ಲ ಬೆಲೆಯೂ ಇಲ್ಲ. ಮುಸ್ಲಿಮರಿಗೂ ನೆಮ್ಮದಿ ಇಲ್ಲ. ವಿಭಜನೆ ಭಾರತೀಯ ಉಪಖಂಡದ ಇತಿಹಾಸದಲ್ಲಾದ ದೊಡ್ಡ ತಿರುವು. ಈಗಲ್ಲದಿದ್ದರೂ ಮುಂದೊಂದು ದಿನ ಭಾರತ-ಪಾಕ್ ಗಡಿಗಳು ಮರೆಯಾಗಬಹುದು ಎಂಬ ವಿಶ್ವಾಸವಿದೆ. ಎರಡೂ ದೇಶಗಳ ಸಾಮರಸ್ಯಕ್ಕಾಗಿ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದೇನೆ. ಯುರೋಪಿಯನ್ ಯೂನಿಯನ್ ಮಾದರಿಯಲ್ಲಿ ಗಡಿಗಳನ್ನು ತೆಗೆಯಬೇಕು ಭಾರತ, ಪಾಕಿಸ್ತಾನ, ಬಾಂಗ್ಲಾ ದೇಶಗಳ ಮಧ್ಯೆ ಓಡಾಟ, ವ್ಯಾಪಾರ-ವಾಣಿಜ್ಯ ಸುಗಮವಾಗಿ ನಡೆಯಬೇಕು.

11ನೇ ಪುಟಕ್ಕೆ...

ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಕಾಳಿಂಗನ ಗೆದ್ದ ಗೌರಿಶಂಕರ

ಕಾಳಿಂಗ ಸರ್ಪಗಳ ಪ್ರಭೇದಗಳನ್ನು ಕಂಡುಹಿಡಿದು ಡಾಕ್ಟರೇಟ್ ಪಡೆದಿರುವ ಗೌರಿಶಂಕರ್, ಪುನೀತ್ ಅವರ 'ಗಂಧದಗುಡಿ' ಸಿನಿಮಾದಲ್ಲಿ ಕೂಡ ಕಾಣಿಸಿಕೊಂಡಿದ್ದವರು. ಕಾಳಿಂಗನ ಕುರಿತ ಅವರ ಜೀವನಾನುಭವ ಗಮನ ಸೆಳೆಯುವಂತಿದೆ.

ಕಾಳಿಂಗ ಸರ್ಪದೊಂದಿಗೆ ಗೌರಿಶಂಕರ್

ಆರ್. ಮಂಜುನಾಥ್

ಹಾವು ಎಂದ ಕೂಡಲೇ ಕಾಲು ಮಾರುದ್ದ ಹಿಂದೆ ಸರಿಯುತ್ತದೆ... ಇನ್ನು ಕಾಳಿಂಗ ಸರ್ಪ... ಎಂದರೆ, ಎಲ್ಲೆಂದರಲ್ಲಿ ಓಟ... ಅಷ್ಟು ಭಯ ಹುಟ್ಟಿಸುವ ಕಾಳಿಂಗ ಸರ್ಪದ ಜೊತೆಯೇ ಗೌರಿಶಂಕರ್ ಅವರದ್ದು ಸುದೀರ್ಘಾವಧಿ ಪಯಣ. ಅದರ ಸಂಶೋಧನೆಯಲ್ಲೇ ಎರಡು ದಶಕಗಳು ಉರುಳಿವೆ. ಕಾಳಿಂಗನ ಜೀವನಕ್ರಮ ಅರಿತು, ಪ್ರಭೇದಗಳನ್ನು ಶೋಧಿಸಿ ಅದನ್ನು ಮಹಾಪ್ರಬಂಧದಲ್ಲಿ ಮಂಡಿಸಿದ್ದಾರೆ. ಇದಕ್ಕಾಗಿ ಅವರಿಗೆ ಡಾಕ್ಟರೇಟ್ ಪದವಿ ಸಂದಿದೆ.

ಗೌರಿಶಂಕರ್ 2005ರಲ್ಲಿ ಈ ಪಯಣದ ಆರಂಭದಲ್ಲಿದ್ದಾಗ ಮೂರು ಕಾಳಿಂಗ ಸರ್ಪಗಳನ್ನು ರಕ್ಷಿಸುವ ಕಾರ್ಯಕ್ಕೆ ಮುಂದಾದರು. ಆಗ ಒಂದು ಕಾಳಿಂಗ ಸರ್ಪ ಇವರನ್ನು ಕಚ್ಚಿತು. ಹಲವು ಚಿಕಿತ್ಸಾ ಪ್ರಯೋಗಗಳ ನಂತರ ಗೌರಿಶಂಕರ್ ಬದುಕುಳಿದರು. ಅದಾದ ನಂತರ ಆರಂಭವಾಗಿದ್ದು ಕಾಳಿಂಗನ 'ಡಿಎನ್ಎ ಪ್ರೊಫೈಲ್' ಅಧ್ಯಯನ.

ಸೇನಾಧಿಕಾರಿ ಮಗನಾದ ಗೌರಿಶಂಕರ್ ಹುಟ್ಟಿದ್ದು-ಬೆಳೆದದ್ದು, ಕಲಿತದ್ದು-ಓದಿದ್ದು ಎಲ್ಲವೂ ಬೆಂಗಳೂರಿನಲ್ಲಿಯೇ. ಅವರು ಆಗ ವಾಸಿಸುತ್ತಿದ್ದ ಕೆ.ಆರ್. ಪುರ ಪ್ರದೇಶದಲ್ಲಿ ಹಾವುಗಳು ನೂರಾರು ಸಂಖ್ಯೆಯಲ್ಲಿರುತ್ತಿದ್ದವು. ಕೆಲವು ಮನೆಗೆ ಬಂದು ಸೇರಿಕೊಳ್ಳುತ್ತಿದ್ದವು. ಅವುಗಳಿಗೆ ಹಾನಿ ಮಾಡದೆ, ದೂರದ ಪ್ರದೇಶಕ್ಕೆ ಬಿಡುವುದನ್ನು ಅಭ್ಯಾಸ ಮಾಡಿಕೊಂಡರು. 13ನೇ ವಯಸ್ಸಿನಲ್ಲಿಯೇ ಹಾವುಗಳನ್ನು ರಕ್ಷಿಸುವ ಕಾಯಕ ಆರಂಭವಾಗಿತ್ತು. ಇಂತಹ ಆಸಕ್ತಿಯಿಂದಲೇ ಅವರ ಪದವಿ ಕೂಡ ಪರಿಸರಕ್ಕೆ ಸಂಬಂಧಿಸಿದ್ದೇ ಆಯಿತು. ಮದ್ರಾಸ್‌ನ ಕ್ರೊಕೊಡೈಲ್ ಬ್ಯಾಂಕ್‌ನಲ್ಲಿ ಶಿಕ್ಷಕರಾಗಿದ್ದರು. ನಂತರ, ಸಂರಕ್ಷಣಾಧಿಕಾರಿಯಾಗಿ ಆಗುಂಬೆ ರೈನ್ ಫಾರೆಸ್ಟ್ ಸಂಶೋಧನಾ ಕೇಂದ್ರ ಸ್ಥಾಪಿಸಲು ನೆರವಾದರು. 'ಕರುಣಾ'ದಲ್ಲಿ ಪ್ರಾಣಿಗಳ ಇನ್‌ಸ್ಪೆಕ್ಟರ್ ಆಗಿ ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆಯಲು ಕಾರ್ಯನಿರ್ವಹಿಸಿದರು. ನಂತರದ ಪಯಣ ಸಾಗಿದ್ದು ಸಂಶೋಧನೆಯತ್ತ.

ರೋಮುಲಸ್ ವೈಟೇಕರ್ ಅವರಿಗೆ ವನ್ಯಜೀವಿ ಸಾಕ್ಷ್ಯಚಿತ್ರಗಳನ್ನು ನಿರ್ಮಿಸುವ ಹಂತದಲ್ಲಿ ಕೆಲಸ ಮಾಡಿದರು. 'ದ ಕಿಂಗ್ ಆ್ಯಂಡ್ ಐ', 'ಸೀಕ್ರೆಟ್ಸ್ ಆಫ್ ದ ಕಿಂಗ್ ಕೋಬ್ರಾ', 'ಏಷ್ಯಾಸ್ ಡೆಡ್ಲಿಯೆಸ್ಟ್ ಸ್ನೇಕ್', 'ಒನ್ ಮಿಲಿಯನ್ ಸ್ನೇಕ್ ಬೈಟ್ಸ್' ಮತ್ತು 'ವೈಲ್ಡೆಸ್ಟ್ ಇಂಡಿಯಾ' ಸಾಕ್ಷ್ಯಚಿತ್ರಗಳ ನಿರ್ಮಾಣದಲ್ಲಿ ಇವರು ಭಾಗಿಯಾಗಿದ್ದಾರೆ. ಆಗುಂಬೆ ಸೇರಿದಂತೆ ಪಶ್ಚಿಮಘಟ್ಟದ ಕಾಡಿನಲ್ಲಿ ಕಾಳಿಂಗ ಸರ್ಪಗಳು, ಅವುಗಳ ಮೊಟ್ಟೆಗಳನ್ನು ರಕ್ಷಿಸುವ ಕಾಯಕವನ್ನೂ ಮಾಡುತ್ತಿದ್ದರು.

'ಆಗುಂಬೆ ಪ್ರದೇಶದಲ್ಲಿ ಮೂರು ಕಾಳಿಂಗ ಸರ್ಪಗಳನ್ನು ರಕ್ಷಿಸಬೇಕಾಗಿತ್ತು. ಕಾಳಿಂಗನನ್ನು ಹಾಕಿಕೊಳ್ಳುವ ಒಂದೇ ಚೀಲ ನನ್ನ ಬಳಿ ಇತ್ತು. ಒಂದನ್ನು ಹಾಕಿ, ಮತ್ತೊಂದನ್ನು ಗೋಣಿಚೀಲದಲ್ಲಿ ಹಾಕಿದೆವು. ಇನ್ನೊಂದು ಸರ್ಪವನ್ನು ಚಿಕ್ಕಬ್ಯಾಗ್‌ಗೆ ಹಾಕುವ ಸಂದರ್ಭದಲ್ಲಿ ಒಳಗಿನಿಂದಲೇ ಕಾಳಿಂಗ ನನ್ನ ಕೈಗೆ ಕಚ್ಚಿಬಿಟ್ಟ. ತಪ್ಪು ಅವನದ್ದಲ್ಲ, ನಾನು ಜಾಗೃತನಾಗಿರಲಿಲ್ಲ. ಅಲ್ಲಿಂದ 25 ಕಿ.ಮೀ ದೂರದ ಮಂಗಳೂರಿನಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ನನ್ನ ಸ್ನೇಹಿತ ಜೀಪ್‌ನಲ್ಲಿ ಕರೆದೊಯ್ದ. ಕಾಳಿಂಗ ಸರ್ಪದ ವಿಷಕ್ಕೆ ಮದ್ದಿಲ್ಲ ಎಂಬುದು ಗೊತ್ತಿತ್ತು. ಆದರೆ, ಥಾಯ್ಲೆಂಡ್‌ನಲ್ಲಿ ಬಳಸಲಾಗುತ್ತಿದ್ದ 'ಆಂಟಿ ವೆನಮ್' ನಮ್ಮಲ್ಲಿತ್ತು. ಅದು ಪ್ರಯೋಜನಕ್ಕೆ ಬರಲಿಲ್ಲ. ಮೂರು ದಿನ ಅನುಭವಿಸಿದ ಆ ಭಯಾಯನಕ ನೋವಿನಿಂದ ನನ್ನನ್ನು ಸಾಯಲು ಬಿಡಿ ಎಂದೂ ಕೇಳಿದ್ದೆ. ವೈದ್ಯರು ಚಿಕಿತ್ಸೆಯಲ್ಲಿ ಹಲವು ರೀತಿಯ ಪ್ರಯೋಗಗಳನ್ನು ಮಾಡಿದರು. ಕಾಳಿಂಗ ಸರ್ಪ ಕಚ್ಚಿದರೆ 30 ನಿಮಿಷದಲ್ಲಿ ಆನೆಯೇ ಸಾಯುತ್ತದೆ. ಆದರೆ, ಕಾಳಿಂಗನ ಕರುಣೆಯಿಂದ ಮೂರು ದಿನಗಳ ದೀರ್ಘ ಹೋರಾಟದ ನಂತರ ಬದುಕುಳಿದೆ' ಎಂದು ಗೌರಿಶಂಕರ್ ನೆನಪಿಸಿಕೊಂಡರು.

ಪಿಎಚ್‌ಡಿ: 9 ವರ್ಷಗಳ ಅಧ್ಯಯನ

'ಒಫಿಯಾಪಗಸ್ ಹ್ಯಾನ್ ಎಂದು ಕರೆಯಲಾಗುವ ಹಾವನ್ನೇ ತಿನ್ನುವ ಕಾಳಿಂಗ ಇದೆ. ಪ್ರಥಮವಾಗಿ 1836ರಲ್ಲಿ ಕಾಳಿಂಗ ಪ್ರಭೇದವನ್ನು ವರ್ಗೀಕರಿಸಲಾಗಿತ್ತು. 1945ರಲ್ಲಿ ವೈಜ್ಞಾನಿಕ ಹೆಸರು ನೀಡಲಾಯಿತು. ಇದಾದ ನಂತರ ಹೆಚ್ಚಿನ ಅಧ್ಯಯನ ನಡೆದಿರಲಿಲ್ಲ. ಪಶ್ಚಿಮ ಘಟ್ಟಗಳಲ್ಲಿ ಓಡಾಡಿದೆ. ಒಡಿಶಾದ ಬಾರಿಪಥದಲ್ಲಿರುವ ಶ್ರೀರಾಮಚಂದ್ರ ಭಂಜ ಡಿಯೊ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಮಾಡಲು ಪ್ರವೇಶ ಪಡೆದೆ. ಮಾರ್ಗದರ್ಶಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕಾರಣ ಆ ವಿವಿ ಆಯ್ಕೆ ಮಾಡಿಕೊಂಡೆ. ವಿದ್ಯಾರ್ಥಿಗಳ ವಿನಿಮಯದ ಕಾರ್ಯಕ್ರಮದಲ್ಲಿ 'ಎರಾಸ್ಮಸ್ ಮುಂಡಸ್' ಸ್ಕಾಲರ್‌ಶಿಪ್ ಪಡೆದು, ಸ್ವೀಡನ್‌ನ ಉಪ್ಪಸಲ ವಿಶ್ವವಿದ್ಯಾಲಯಕ್ಕೆ ಹೋದೆ. ಅಲ್ಲಿನ ಅಧ್ಯಯನದಿಂದ ಬೇರೆ ಭಾಗದ ಕಾಳಿಂಗ ಸರ್ಪದ ವಿಮರ್ಶೆ ಸಾಧ್ಯವಾಯಿತು. ಮಾಲಿಕ್ಯುಲರ್ ಟಾಕ್ಸೊನೊಮಿ ಮತ್ತು ಡಿಎನ್ಎ ಬಾರ್‌ಕೋಡಿಂಗ್ ನಂತರ ಹೊಸ ತಂತ್ರಜ್ಞಾನದಿಂದ ಕಾಳಿಂಗ ಸರ್ಪದ ಆನುವಂಶಿಕ ಮತ್ತು ಹೊರ ದೇಹದ ರಚನೆಯನ್ನು ಅರ್ಥೈಸಲು ಸಾಧ್ಯವಾಯಿತು. ಹೀಗಾಗಿ, ಪ್ರಪಂಚದಲ್ಲಿ ಒಂದು ಪ್ರಭೇದವಲ್ಲ, ನಾಲ್ಕು ಪ್ರಭೇದದ ಕಾಳಿಂಗ ಸರ್ಪಗಳಿವೆ ಎಂಬುದನ್ನು ಕಂಡುಹಿಡಿಯಲಾಯಿತು. ಅದಕ್ಕೇ ನನಗೆ ಆಗುಂಬೆಯಲ್ಲಿ ಕಚ್ಚಿದ ಕಾಳಿಂಗನ ವಿಷಕ್ಕೆ ಥಾಯ್ಲೆಂಡ್‌ನಿಂದ ತಂದ ಆಂಟಿ ವೆನಮ್ ಪರಿಣಾಮ ಬೀರಲಿಲ್ಲ' ಎನ್ನುತ್ತಾರೆ ಗೌರಿಶಂಕರ್.

ಸಾಧನೆ

ಪೂರ್ವ, ಉತ್ತರ ಭಾರತ, ಅಂಡಮಾನ್, ದಕ್ಷಿಣ ಚೀನ, ತೈವಾನ್, ಥಾಯ್ಲೆಂಡ್‌ನ ಕೇಂದ್ರಭಾಗದ ಇಂಡೊಚೈನೀಸ್ ಪೆನಿಸುಲದಲ್ಲಿ ಒಂದು ಪ್ರಭೇದವಿದ್ದರೆ, ಮತ್ತೊಂದು ಇಂಡೊನೇಷ್ಯಾ, ದಕ್ಷಿಣ–ಕೇಂದ್ರಭಾಗದ ಫಿಲಿಪೀನ್ಸ್‌ನಲ್ಲಿ ಕಂಡುಬರುವ ಈ ಕಾಳಿಂಗ ಸರ್ಪಗಳನ್ನು ಒಫಿಫೀಗುಸ್ ಬಂಗಾರಸ್ ಎಂದು ವರ್ಗೀಕರಿಸಲಾಗಿದೆ. ಇದಲ್ಲದೆ, ಇನ್ನೆರಡು ಪ್ರಭೇದಗಳು ಭಾರತದ ಪಶ್ಚಿಮ ಘಟ್ಟ ಪ್ರದೇಶ ಹಾಗೂ ಫಿಲಿಪೀನ್ಸ್‌ನ ಉತ್ತರ ಭಾಗದ ಲೂಜಾನ್ ಪ್ರದೇಶದಲ್ಲಿವೆ. 2014ರಲ್ಲಿ ಆರಂಭವಾದ ಈ ಅಧ್ಯಯನ 2023ರ ಮೇನಲ್ಲಿ ಡಾಕ್ಟರೇಟ್ ಪಡೆದಾಗ ಒಂದು ಹಂತಕ್ಕೆ ಸಾಕಾರಗೊಂಡಿತು.

ಗೌರಿಶಂಕರ್ ಅವರು ತಮ್ಮ ಮೂರು ದಶಕಗಳ ಸಂಶೋಧನಾ ಸಂದರ್ಭದಲ್ಲಿ ಈವರೆಗೆ 400ಕ್ಕೂ ಕಾಳಿಂಗ ಸರ್ಪಗಳನ್ನು ರಕ್ಷಿಸಿ, ಸುರಕ್ಷತಾ ತಾಣಗಳಿಗೆ ಬಿಟ್ಟಿದ್ದಾರೆ. 50ಕ್ಕೂ ಹೆಚ್ಚು ಕಾಳಿಂಗ ಸರ್ಪಗಳ ಗೂಡುಗಳನ್ನು ನಿಗಾವಹಿಸಿದ್ದಾರೆ. ಕಾಳಿಂಗ ಸರ್ಪಗಳ ಮೇಲಿನ ಪ್ರಥಮ ಪ್ರಯೋಗವಾದ ರೇಡಿಯೊ ಟೆಲಿಮೇಟರಿ ಅಧ್ಯಯನದಿಂದ ಇವರನ್ನು 'ಕಿಂಗ್ ಕೊಬ್ರಾ ಮ್ಯಾನ್ ಆಫ್ ಇಂಡಿಯಾ' ಎಂದೂ ಕರೆಯಲಾಗುತ್ತದೆ.

ಗೌರಿಶಂಕರ್ ತಮ್ಮ ಕನಸಿನಂತೆ ಆಗುಂಬೆಯಲ್ಲಿ 'ಕಾಳಿಂಗ ಸೆಂಟರ್ ಫಾರ್ ರೈನ್‌ಫಾರೆಸ್ಟ್ ಎಕೊಲಜಿ' (ಕೆಸಿಆರ್‌ಇ) ಅನ್ನು ತಮ್ಮ ಪತ್ನಿ ಶರ್ಮಿಳಾ ಅವರೊಂದಿಗೆ 2012ರಲ್ಲಿ ಸ್ಥಾಪಿಸಿದ್ದಾರೆ. ಶಿವಮೊಗ್ಗ ತೀರ್ಥಹಳ್ಳಿ ತಾಲ್ಲೂಕು, ಆಗುಂಬೆಯ ಗುಡ್ಡೇಕೆರೆಯಲ್ಲಿರುವ 'ಕಾಳಿಂಗ ಮನೆ'ಯಲ್ಲಿ ಗೌರಿಶಂಕರ್ ಹಾಗೂ ಕುಟುಂಬದ ವಾಸ. ಇದು ಕೆಸಿಆರ್‌ಇ ತಾಣವೂ ಹೌದು.

ಅವಿಸ್ಮರಣೀಯ ಆ ಮೂರು ದಿನ...

ಕನ್ನಡ ಚಿತ್ರರಂಗದ ಮೇರುನಟ ಪುನೀತ್ ರಾಜ್‌ಕುಮಾರ್, ಎಲ್ಲರ ಮೆಚ್ಚಿನ ಅಪ್ಪು ಅವರೊಂದಿಗೆ ಕಳೆದ ಮೂರು ದಿನ ಜೀವನದ ಅತ್ಯಂತ ಅವಿಸ್ಮರಣೀಯ ಸಮಯ. 'ಗಂಧದ ಗುಡಿ'– ಚಿತ್ರಕ್ಕಾಗಿ ಕ್ಯಾಮೆರಾ ಚಾಲನೆಯಾಗಿದ್ದು ನಮ್ಮ ಕಾಳಿಂಗ ಸೆಂಟರ್ ಫಾರ್ ರೈನ್‌ಫಾರೆಸ್ಟ್ ಎಕೊಲಜಿಯಲ್ಲೇ (ಕೆಸಿಆರ್‌ಇ). ಚಿತ್ರದಲ್ಲಿ ಅದು ಮಧ್ಯದಲ್ಲಿ ಬರುತ್ತದೆ. ನನ್ನ ಗೆಳೆಯ ಅಮೋಘ ಅವರು ಪುನೀತ್ ಅವರನ್ನು ಪರಿಚಯ ಮಾಡಿಸಿದರು. ಅವರು ತುಂಬಾ ಸರಳ, ಹಸನ್ಮುಖಿ. ನಮ್ಮ ಕಾಳಿಂಗ ಸರ್ಪ ಕಂಡಾಗಲಂತೂ ತುಂಬಾ ಭಯ ಪಟ್ಟಿದ್ದರು. ಕಾಳಿಂಗನ ಶೂಟಿಂಗ್ ಮಾಡುವಾಗ ಮೂರು ಅಡಿ ಎತ್ತರ ಹಲಗೆ ಮೇಲೆ ನಿಂತಿದ್ದರು. ನಂತರ, ಆಸಕ್ತಿಯಿಂದ ಸಾಕಷ್ಟು ಪ್ರಶ್ನೆಗಳನ್ನು ಕೇಳಿದ್ದರು. ನಮ್ಮೊಂದಿಗೆ ಕುಳಿತು ಊಟ ಮಾಡಿದರು, ತಿಂದ ತಟ್ಟೆಯನ್ನು ತೊಳೆದರು. ತಮ್ಮ ತಂದೆಯವರ ಬಗ್ಗೆ, ಚಿತ್ರದಲ್ಲಿ ಹಾವು ಸುತ್ತಿಕೊಂಡ ಬಗ್ಗೆಯ ಸನ್ನಿವೇಶವನ್ನೆಲ್ಲ ಹೇಳಿದರು. ವಾಹ್.. ಇಂತಹ ಅತ್ಯಂತ ಸರಳ ಹಾಗೂ ಮಹಾನ್ ವ್ಯಕ್ತಿಯನ್ನು ನಾನು ಭೇಟಿಯೇ ಮಾಡಿರಲಿಲ್ಲ. ನಾನು ಪ್ರಥಮ ಬಾರಿಗೆ ಒಬ್ಬ ವ್ಯಕ್ತಿಯ ಅಭಿಮಾನಿಯಾಗಿಬಿಟ್ಟಿದ್ದೇನೆ... ಎಂದು ಪುನೀತ್ ರಾಜ್‌ಕುಮಾರ್ ಅವರ ಬಗ್ಗೆ ಹೇಳುವಾಗ ಗೌರಿಶಂಕರ್ ಮಾತಿನಲ್ಲಿ ಹೆಮ್ಮೆ ಇತ್ತು, ಗೌರವಪೂರ್ವಕ ಮಾತುಗಳಲ್ಲಿ ಅಭಿಮಾನವಿತ್ತು.

ಭ್ರೂಣಶಾಸ್ತ್ರದ ಹೊಸ ಹೆಜ್ಜೆ

10ನೇ ಪುಟದಿಂದ...

International Society for Stem Cell Research ಎಂಬ ಸಂಸ್ಥೆಯೊಂದು ಭ್ರೂಣ ಸಂಬಂಧಿತ ಸಂಶೋಧನೆಗಳ ಬಗ್ಗೆ ನಿಗಾ ವಹಿಸುತ್ತದೆ. ಸಾಧಾರಣವಾಗಿ ಹದಿನಾಲ್ಕನೆಯ ದಿನದಿಂದ ಮಾನವನ ಭ್ರೂಣದಲ್ಲಿ ವಿವಿಧ ಅಂಗಾಂಗಗಳ ಬೆಳವಣಿಗೆ ಆರಂಭವಾಗುತ್ತದೆ. ಆದ್ದರಿಂದ ಹದಿನಾಲ್ಕು ದಿನಗಳಿಗಿಂತ ಜಾಸ್ತಿ ಮಾನವನ ಭ್ರೂಣವನ್ನು ಸದ್ಯ ಪ್ರಯೋಗಾಲಯದಲ್ಲಿ ಬೆಳೆಸುವಂತಿಲ್ಲ ಎಂದು International Society for Stem Cell Research ಸಂಸ್ಥೆಯು ನಿರ್ದೇಶನಗಳನ್ನು ನೀಡಿದೆ.

ಸತ್ಯಾಸತ್ಯತೆ, ನೈತಿಕತೆಯ ಪ್ರಶ್ನೆ

ಮೇಲೆ ಹೆಸರಿಸಲಾದ ಎರಡೂ ವಿಜ್ಞಾನಿಗಳ ತಂಡದವರು ತಾವು ನಡೆಸಿರುವ ಸಂಶೋಧನೆಗಳನ್ನು 'Biorxiv' ಎಂಬ ಪ್ರಕಟಣಾಪೂರ್ವ ಅಂತರಾಷ್ಟ್ರೀಯ ನಿಯತಕಾಲಿಕೆಯಲ್ಲಿ ಪ್ರಕಟಿಸಿದ್ದಾರೆ. ಈ ನಿಯತಕಾಲಿಕೆಯ ವಿಶೇಷತೆ ಏನೆಂದರೆ, ಇಲ್ಲಿ ಏನು ಪ್ರಕಟವಾದರೂ ಅದು ಅಧಿಕೃತವಾದ ಮಾಹಿತಿ ಎನಿಸಿಕೊಳ್ಳುವುದಿಲ್ಲ. ಅಧಿಕೃತವಾಗಿ ಪ್ರಕಟವಾಗುವ ಮೊದಲಿನ ಹಸ್ತಪ್ರತಿಯ ರೀತಿ ಎನ್ನಬಹುದೇನೋ. ಈ ಪತ್ರಿಕೆಗಳನ್ನು ಯಾವುದಾದರೂ ಪ್ರತಿಷ್ಠಿತ ನಿಯತಕಾಲಿಕೆಗಳಿಗೆ ಕಳುಹಿಸಿ, ಅಲ್ಲಿ ತಜ್ಞರಿಂದ ಪರಿಶೀಲನೆಗೊಳಗಾಗಿ ಆನಂತರ ಪ್ರಕಟವಾದರಷ್ಟೇ ಈ ಮಾಹಿತಿ ಅಧಿಕೃತ ಎನಿಸಿಕೊಳ್ಳುತ್ತದೆ. ಅದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಹೀಗಾಗಿ ಅಧಿಕೃತವಾದ ಯಾವುದಾದರೂ ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಪ್ರಕಟವಾಗದ ಹೊರತು ಅದನ್ನು ಸಾರಸಗಟಾಗಿ ಒಪ್ಪಲಾಗದು. ಸ್ಪೇನ್ ದೇಶದ ಪೊಂಪೆ ಫಾಬ್ರಾ ವಿಶ್ವವಿದ್ಯಾಲಯದ ಭ್ರೂಣಶಾಸ್ತ್ರಜ್ಞರಾದ ಅಲ್ಫೊನ್ಸೊ ಮಾರ್ಟಿನೆಜ್ ಏರಿಯಾಸ್ ಎಂಬುವವರು, 'ಮಾನವನ ಹದಿನಾಲ್ಕನೆಯ ದಿನದ ಭ್ರೂಣಕ್ಕೆ ಹೋಲುವಂತಹ ಯಾವುದೇ ರಚನೆಗಳು ನನಗೆ ಈ ಸಂಶೋಧನೆಯಲ್ಲಿ ತೋರುತ್ತಿಲ್ಲ, ಬದಲಾಗಿ ಜೀವಕೋಶಗಳು ಅಲ್ಲಲ್ಲಿ ಕುಪ್ಪೆಯಾಗಿರುವಂತೆ ತೋರುತ್ತಿವೆ' ಎಂದು ಹೇಳಿದ್ದಾರೆ. ಹೀಗಾಗಿ ಈ ಸಂಶೋಧನೆಯ ಸತ್ಯಾಸತ್ಯತೆಗಳು ಮುಂದಷ್ಟೇ ಪರಿಶೀಲನೆಗೆ ಒಳಪಡಬೇಕಿವೆ.

ಸಹಜ ಭ್ರೂಣಗಳನ್ನು ಪ್ರಯೋಗಾಲಯದಲ್ಲಿ ಸೃಷ್ಟಿ ಮಾಡಲು ಸಾಧ್ಯವಿರುವಾಗ, ಕೃತಕ ಭ್ರೂಣವನ್ನು ಸೃಷ್ಟಿಸಿ ಯಾಕೆ ಕಷ್ಟಪಡಬೇಕು ಎಂಬುದು ಹಲವರ ಅಂಬೋಣ. ಆದರೆ ಸಹಜ ಭ್ರೂಣಗಳ ವಿಚಾರದಲ್ಲಿ ಒಂದು ಸಮಸ್ಯೆ ಇದೆ. ಅದು ಮಾನವೀಯತೆ ಹಾಗೂ ನೈತಿಕತೆಯ ಸಮಸ್ಯೆ. ಮಾನವನ ಭ್ರೂಣವನ್ನು ಹಾಗೆ ಮನಬಂದಂತೆ ಬೆಳೆಸಬಹುದೇ? ಇದುವರೆಗೂ ಹದಿನಾಲ್ಕು ದಿನಗಳಿಗಿಂತ ಹೆಚ್ಚು ಕಾಲ ಮಾನವ ಭ್ರೂಣವನ್ನು ಪ್ರಯೋಗಾಲಯದಲ್ಲಿ ಬೆಳೆಸಿಲ್ಲ. ಸದ್ಯದ ತಂತ್ರಜ್ಞಾನದಲ್ಲಿ ಅದು ಸಾಧ್ಯವೂ ಇಲ್ಲ. ಒಂದು ವೇಳೆ ನಾಳೆ ಬೆಳೆಸಿದವೆಂದೇ ಇಟ್ಟುಕೊಳ್ಳೋಣ. ಆಗ ಆ ಮಗುವಿಗೆ ತಂದೆ ತಾಯಿ ಯಾರು? ಅದನ್ನು ಸಾಕುವವರು ಯಾರು? ಸಾಕುವುದು ಹೇಗೆ? ಇತ್ಯಾದಿ ಸಮಸ್ಯೆಗಳು ಧುತ್ತನೆ ಎದ್ದುಬಿಡುತ್ತವೆಯಲ್ಲವೇ?

ಹಲವಾರು ಭ್ರೂಣಶಾಸ್ತ್ರದ ವಿಜ್ಞಾನಿಗಳು ಈ ಸಂಶೋಧನೆಯ ಬಗ್ಗೆ ಬಹಳವಾದ ಸಂತೋಷವನ್ನೇನೂ ವ್ಯಕ್ತಪಡಿಸಿಲ್ಲ. ಮೇಲೆ ಹೇಳಲಾದ ನೈತಿಕತೆಯ ಪ್ರಶ್ನೆಗಳ ಜೊತೆಗೇ ಈ ಸಂಶೋಧನೆಯಿಂದ ಮುಂದೊದಗಬಹುದಾದ ಕ್ಲಿಷ್ಟ ಸಮಸ್ಯೆಗಳ ಬಗೆಗೆ ಕಳವಳ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೇ ಬಹಳ ಗಂಭೀರವಾದ ಪ್ರಶ್ನೆಗಳನ್ನೂ ಎತ್ತಿದ್ದಾರೆ.

ಈ ಕೃತಕ ಭ್ರೂಣವು ಮೇಲ್ನೋಟಕ್ಕಷ್ಟೇ ಹದಿನಾಲ್ಕು ದಿನದ ಭ್ರೂಣದಂತೆ ತೋರುತ್ತಿದೆಯೇ ಹೊರತು ವಾಸ್ತವವಾಗಿ ಅದರ ರಚನೆ ಹಾಗೂ ಜೀವರಾಸಾಯನಿಕಗಳು ಹೇಗಿವೆ? ಅದರ ವರ್ತನೆಗಳು ಹೇಗೆ? ಅದರಿಂದಾಗುವ ಪರಿಣಾಮಗಳೇನು? ಎನ್ನುವ ಬಗ್ಗೆ ಅಧಿಕೃತವಾಗಿ ತಿಳಿಯುವವರೆಗೂ ಸಂಶೋಧನೆಗಳನ್ನು ನಂಬಲು ಸಾಧ್ಯವಿಲ್ಲ ಹಾಗೂ ಕೃತಕ ಭ್ರೂಣವನ್ನು ಸಹಜಭ್ರೂಣಕ್ಕೆ ಹೋಲಿಸಲು ಸಾಧ್ಯವಿಲ್ಲ. ಅಲ್ಲದೇ ನಮಗೆ ಕೃತಕ ಭ್ರೂಣ ಸೃಷ್ಟಿಸಲು ಸಾಧ್ಯವಿದೆ ಎಂದಮಾತ್ರಕ್ಕೆ ಅದನ್ನು ಪ್ರಯೋಗಾಲಯದಲ್ಲಿ ಬೆಳೆಸಬಹುದು ಎಂದು ನಾವು ಭಾವಿಸಲಾಗದು. ಅದಕ್ಕಿರುವ ಕಾನೂನಿನ ಹಾಗೂ ನೈತಿಕತೆಯ ತೊಡಕುಗಳನ್ನು ನಾವು ಗಂಭೀರವಾಗಿ ಅಧ್ಯಯನ ಮಾಡಿ, ಆನಂತರ ನಿರ್ಧಾರವನ್ನು ಅಂತರಾಷ್ಟ್ರೀಯಮಟ್ಟದಲ್ಲಿ ಎಲ್ಲರೂ ಒಟ್ಟಾಗಿ ತೆಗೆದುಕೊಳ್ಳಬೇಕಿದೆ. ಸದ್ಯ ಇಂಗ್ಲೆಂಡಿನ ಕಾನೂನು ತಜ್ಞರು ಈ ಸಂಶೋಧನೆಯನ್ನು ಕಾನೂನಿನ ಚೌಕಟ್ಟಿನೊಳಗೆ ತರಲು ಪ್ರಾಥಮಿಕ ತಯಾರಿಗಳನ್ನು ಮಾಡುತ್ತಿದ್ದಾರೆ.

ಇಷ್ಟೆಲ್ಲಾ ಆದರೂ ಕೃತಕಭ್ರೂಣದಿಂದ ಅಸಂಖ್ಯ ಲಾಭಗಳಿವೆ. ಇದುವರೆಗೂ ಮಾನವನ ಭ್ರೂಣದ ಬೆಳವಣಿಗೆ, ಅವುಗಳ ಬಗ್ಗೆ ಸಮಗ್ರವಾಗಿ ನಮಗೆ ತಿಳಿದಿರುವುದು ಹದಿನಾಲ್ಕನೆಯ ದಿನದವರೆಗೆ ಮಾತ್ರ. ಅಲ್ಲಿಂದ ಮುಂದೆ ಏನಾಗುತ್ತದೆ ಎಂದು ತಿಳಿಯಬೇಕಾದರೆ ಇಲಿಯ ಭ್ರೂಣದ ಅಧ್ಯಯನ ಮಾಡಿ ಮನುಷ್ಯನದ್ದೂ ಹೀಗೆಯೇ ಆಗುತ್ತದೆ ಎಂದು ಊಹಿಸಲಾಗುತ್ತದೆ ಅಥವಾ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಮುಖಾಂತರ ತಿಳಿಯಬೇಕಾಗುತ್ತದೆ. ಆದರೆ ಕೃತಕ ಭ್ರೂಣವನ್ನು ಹದಿನಾಲ್ಕು ದಿನಗಳಿಗಿಂತ ಕೇವಲ ಒಂದು ವಾರ ಹೆಚ್ಚು ಬೆಳೆಸಲು ಅವಕಾಶ ಲಭಿಸಿದರೆ ಮಾನವ ಭ್ರೂಣದ ಬೆಳವಣಿಗೆ, ರಚನೆಯ ಬಗ್ಗೆ ನಮ್ಮ ಅರಿವನ್ನು ಹೆಚ್ಚಿಸಿಕೊಳ್ಳಲು ರಹದಾರಿ ಲಭಿಸಿದಂತೆ ಆಗುತ್ತದೆ.

ಎಲ್ಲಕ್ಕೂ ಮೀರಿ ಮಕ್ಕಳಿಲ್ಲದ ದಂಪತಿಗಳ ಕೊರಗನ್ನು ನೀಗಿಸುವ ಹೊಸ ತಂತ್ರಜ್ಞಾನವೊಂದು ಉದಯವಾಯಿತೆಂದು ಸಂತೋಷಿಸಬಹುದೇನೋ?

(ಲೇಖಕರು ಪ್ರಾಣಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರು)

ಶಾಂತಿ ಪ್ರೀತಿಯ ಸಂತ

10ನೇ ಪುಟದಿಂದ...

ಯುರೋಪಿನ ದೇಶಗಳು ಪ್ರಥಮ ಮತ್ತು ದ್ವಿತೀಯ ಮಹಾ ಯುದ್ಧಗಳಲ್ಲಿ ಮತ್ತು ಅದಕ್ಕೂ ಹಿಂದೆ ಹಲವು ಘೋರ ಯುದ್ಧಗಳನ್ನು ಮಾಡಿದ್ದವು. ಈಗ ಅವೆಲ್ಲವನ್ನೂ ಮರೆತಿವೆ.

ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಈ ಸ್ಥಿತಿ ನಿರ್ಮಾಣ ಆಗುವುದು ಸುಲಭವಲ್ಲ. ಆದರೆ ಅಸಂಭವವಲ್ಲ. ಭಯೋತ್ಪಾದನೆ ಮೂಲೋತ್ಪಾಟನೆ ಮಾಡದೇ ಮಾತುಕತೆ ಇಲ್ಲ ಎಂದು ಭಾರತ ಹೇಳುತ್ತದೆ. ಈ ವಾದ ಸರಿಯಾಗಿದೆ. ಪಾಕಿಸ್ತಾನವು ಭಯೋತ್ಪಾದಕರಿಗೆ ನೀಡುತ್ತಿರುವ ನೆರವನ್ನು ಸಂಪೂರ್ಣ ನಿಲ್ಲಿಸಬೇಕು. ರಷ್ಯಾ ವಿರುದ್ಧ ಅಫ್ಘಾನಿಸ್ತಾನದಲ್ಲಿ ಪಾಕಿಸ್ತಾನ ಆರಂಭಿಸಿದ ಜಿಹಾದ್, ರಷ್ಯಾದ ಸೇನೆ ನಿರ್ಗಮನದ ಬಳಿಕ ಆ ಭಯೋತ್ಪಾದಕ ಗುಂಪುಗಳು ಭಾರತಕ್ಕೆ ಕಾಲಿಟ್ಟಿದ್ದು ಸುಳ್ಳಲ್ಲ. ಲಷ್ಕರ್, ಜೈಷೆ ಮುಂತಾದ ಉಗ್ರ ಸಂಘಟನೆಗಳನ್ನು ಪಾಕಿಸ್ತಾನ ನಿಗ್ರಹಿಸಬೇಕು. ಅದೇ ರೀತಿ ಬಲೂಚಿಸ್ತಾನದಲ್ಲಿ ಅಲ್ಲಿನ ಪ್ರತ್ಯೇಕತಾವಾದಿಗಳಿಗೆ ಭಾರತ ಬೆಂಬಲ ನೀಡುತ್ತಿದ್ದರೆ ಅದನ್ನೂ ನಿಲ್ಲಿಸಬೇಕು. ಕಾಶ್ಮೀರದಲ್ಲಿ 370ನೇ ವಿಧಿ ರದ್ದು ಮಾಡಿದ ಕಾರಣಕ್ಕೆ ವ್ಯಾಪಾರ–ವಾಣಿಜ್ಯ ಸಂಪೂರ್ಣ ನಿಲ್ಲಿಸಿದ ಪಾಕಿಸ್ತಾನದ ಕ್ರಮವಂತೂ ಮೂರ್ಖತನದ್ದು. ಇದರಿಂದ ಪಾಕಿಸ್ತಾನಕ್ಕೆ ಭಾರಿ ನಷ್ಟವಾಗಿದೆ.

ಭಾರತ ಮತ್ತು ಹಿಂದೂಗಳ ವಿರುದ್ಧ ಸದಾ ವಿಷ ಕಾರುವ ಪಾಕಿಸ್ತಾನ ತನ್ನ ಮನಃಸ್ಥಿತಿ ಬದಲಿಸಿಕೊಳ್ಳಬೇಕು. ಶಾಲೆಗಳಲ್ಲಿ ಭಾರತದ ವಿರುದ್ಧ ದ್ವೇಷವನ್ನೇ ಬೋಧಿಸಲಾಗುತ್ತಿದೆ. ಅದನ್ನೂ ನಿಲ್ಲಿಸಬೇಕು. ಕಾಶ್ಮೀರಕ್ಕಾಗಿ ನಾಲ್ಕು ಯುದ್ಧಗಳನ್ನು ಆರಂಭಿಸಿದ ಪಾಕಿಸ್ತಾನಕ್ಕೆ ಈವರೆಗೂ ಕಾಶ್ಮೀರ ಪಡೆಯಲು ಸಾಧ್ಯವಾಗಲಿಲ್ಲ. ಯುದ್ಧದ ದುಸ್ಸಾಹಸ ನಿಲ್ಲಿಸುವುದು ಆ ದೇಶದ ಜನರ ಹಿತದೃಷ್ಟಿಯಿಂದ ಒಳಿತು.

ಕಳೆದ 75 ವರ್ಷಗಳಲ್ಲಿ ಭಾರತ ಎಲ್ಲ ಕ್ಷೇತ್ರಗಳಲ್ಲೂ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದೆ. ಇಲ್ಲಿನ ಯಾವುದೇ ನಗರಗಳಿಗೆ ಹೋದರೂ ಬೆಳವಣಿಗೆ ನಿಚ್ಚಳವಾಗಿ ಕಾಣುತ್ತದೆ. ಇಲ್ಲಿ ಯಾವುದೇ ಪಕ್ಷದ ಸರ್ಕಾರ ಇದ್ದರೂ ದೇಶದ ಹಿತಕ್ಕಾಗಿ ಟೊಂಕ ಕಟ್ಟಿ ಶ್ರಮಿಸಿವೆ. ಪಾಕಿಸ್ತಾನದಲ್ಲಿ ಅಧಿಕಾರಸ್ಥರು ಲೂಟಿ ಮಾಡಿದ್ದೇ ಹೆಚ್ಚು. ಆರಂಭದಲ್ಲಿ ಪಾಕಿಸ್ತಾನವು ಭಾರತಕ್ಕಿಂತ ಉತ್ತಮ ಪ್ರಗತಿ ಸಾಧಿಸುವ ಹಾದಿಯಲ್ಲಿತ್ತು. ಆದರೆ, ಕಾಶ್ಮೀರವನ್ನು ತನ್ನ ಬಗಲಿಗೆ ಹಾಕಿಕೊಳ್ಳುವ ಭ್ರಮೆಗೆ ಸಿಲುಕಿ 1962ರಲ್ಲಿ ಭಾರತದ ಮೇಲೆ ಯುದ್ಧ ಸಾರಿ ಅಭಿವೃದ್ಧಿಯ ಹಾದಿಯಿಂದ ಪ್ರಪಾತಕ್ಕೆ ಜಾರಿತು. ಭಾರತದ ಈಗಿನ ಅಭಿವೃದ್ಧಿಯ ವೇಗ ನೋಡಿದರೆ ಅತಿ ಬೇಗನೇ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯ ರಾಷ್ಟ್ರ ಆಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಈ ಹಿಂದೆಯೂ ಒಮ್ಮೆ ಭಾರತಕ್ಕೆ ಭೇಟಿ ನೀಡಿದ್ದೆ. ಆಗಲೂ ಕೆಲವು ನಗರಗಳಿಗೆ ಭೇಟಿ ನೀಡಿದ್ದೆ. ಈ ಬಾರಿ ಭಾರತದ ಹಲವು ನಗರಗಳಿಂದ ನನಗೆ ಆಹ್ವಾನ ಬಂದಿದೆ. ಹೋದ ಕಡೆಗಳಲ್ಲಿ ಅತ್ಯಂತ ಪ್ರೀತಿ ಮತ್ತು ವಿಶ್ವಾಸದಿಂದ ಕಾಣುತ್ತಿದ್ದಾರೆ. ವಿಮಾನ ನಿಲ್ದಾಣವಿರಲಿ, ಹೊಟೇಲ್‌ನಲ್ಲಿರಲಿ ಜನ ನನ್ನನ್ನು ಗುರುತು ಹಿಡಿದು ಬಂದು ಮಾತನಾಡಿಸುತ್ತಾರೆ. ಇದು ಯೂಟ್ಯೂಬ್ ಉಪನ್ಯಾಸದ ಪರಿಣಾಮ. ಬೆಂಗಳೂರು ಅತಿ ದೊಡ್ಡ ಹೈಟೆಕ್ ಸಿಟಿ. ಇಲ್ಲಿನ ಜನ ಉತ್ತರ ಭಾರತದ ಹಾಗಲ್ಲ, ಮೃದು ಭಾಷಿಗಳು. ಇಲ್ಲಿನ ಆಹಾರಗಳ ವೈವಿಧ್ಯವೂ ಅಸಾಧಾರಣ.

ಭಾರತದಲ್ಲಿ ಕಂಡ ಮತ್ತೊಂದು ಮಹತ್ವದ ಅಂಶ ಎಂದರೆ ಇಲ್ಲಿ ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯವಿದೆ. ರಾತ್ರಿ ವೇಳೆಯೂ ನಿರ್ಭೀತರಾಗಿ ಓಡಾಡುವುದನ್ನು ಹಲವು ನಗರಗಳಲ್ಲಿ ಕಂಡಿದ್ದೇನೆ. ವಿಶೇಷವಾಗಿ ಮುಸ್ಲಿಮ್ ಮಹಿಳೆಯರೂ ಬುರ್ಖಾ, ಹಿಜಾಬ್ ಸೇರಿದಂತೆ ತಮಗಿಷ್ಟವಾದ ಉಡುಪುಗಳಲ್ಲಿ ಓಡಾಡುತ್ತಾರೆ. ಆದರೆ, ಪಾಕಿಸ್ತಾನದಲ್ಲಿ ಕತ್ತಲಾದ ಬಳಿಕ ಹೆಣ್ಣುಮಕ್ಕಳು ಮನೆಯಿಂದ ಹೊರಗೆ ಕಾಲಿಡಲು ಸಾಧ್ಯವಿಲ್ಲ. ಶ್ರೀಮಂತರ ಮಕ್ಕಳು ಕಾರಿನಲ್ಲಿ ಓಡಾಡುತ್ತಾರೆ.

ಭಾರತದ ಮುಸ್ಲಿಮರು ಇಲ್ಲಿ ನೆಲದ ಸಂಸ್ಕೃತಿಗೆ ತಕ್ಕಂತೆ ಇರಬೇಕು. ಅತ್ಯುತ್ತಮ ಶಿಕ್ಷಣ ಪಡೆದು ವೈಜ್ಞಾನಿಕ ಮನೋಭಾವದೊಂದಿಗೆ ಉತ್ತಮ ಬದುಕನ್ನು ರೂಪಿಸಿಕೊಳ್ಳಬೇಕು. ಹಿಂದೂ ಧರ್ಮ ಅತ್ಯಂತ ಸಹಿಷ್ಣುತೆ ಹೊಂದಿರುವ ಧರ್ಮ. ಆದರೆ, ಮುಸ್ಲಿಮರ ಬಗ್ಗೆ ಹಿಂದೂಗಳು ಅನಗತ್ಯ ಸಂಶಯಪಡುವುದು ಸರಿಯಲ್ಲ. ಬಹುಪತ್ನಿತ್ವ, ಹೆಚ್ಚು ಮಕ್ಕಳನ್ನು ಹುಟ್ಟಿಸುತ್ತಾರೆ, ಭಯೋತ್ಪಾದನೆ ಮಾಡುತ್ತಾರೆ ಎಂಬ ಮನೋಭಾವ ಸರಿಯಲ್ಲ. ಹಿಂದೂ– ಮುಸ್ಲಿಮ್ ಇಬ್ಬರೂ ಒಂದಾಗಿ ಮುನ್ನಡೆದರೆ ಭಾರತವನ್ನು ತಡೆಯುವ ಶಕ್ತಿ ಇಲ್ಲ. ಅದೇ ರೀತಿ ಪಾಕಿಸ್ತಾನ– ಭಾರತದ ಮಧ್ಯೆ ಶತ್ರುತ್ವ ಮರೆಯಾಗಿ, ಶಾಂತಿಯಿಂದ ಬದುಕುವ ಹಾಗೆ ಆಗಬೇಕು.

ಮೂಲಭೂತವಾದಿಗಳ ಚಿತಾವಣೆಯಿಂದ ಧರ್ಮದ ಆಧಾರದಲ್ಲಿ ಜನ್ಮ ತಳೆದ ಪಾಕಿಸ್ತಾನ ಈಗ ವಿಫಲಗೊಂಡ ರಾಷ್ಟ್ರವಾಗಿದೆ. 1930ರಷ್ಟು ಹಿಂದೆಯೆ ಭಾರತದ ವಿಭಜನೆ ಮೊಳಕೆಯೊಡೆದಿತ್ತು. ಪಾಕಿಸ್ತಾನ ಮಾತ್ರವಲ್ಲ, ದ್ರಾವಿಡ ದೇಶದ ಸೃಷ್ಟಿಯ ಬೀಜವನ್ನೂ ಜಿನ್ನಾ ಬಿತ್ತಿದ್ದರು. ಈ ಬಗ್ಗೆ ಪೆರಿಯಾರ್ ಜತೆಗೂ ಮಾತನಾಡಿದ್ದರು. ಆದರೆ ಜಿನ್ನಾ ಆಸೆ ಈಡೇರಲಿಲ್ಲ. ಅಂದಿನ ಕಾಂಗ್ರೆಸ್ ನಾಯಕರ ವಿಶಾಲ ದೃಷ್ಟಿ ಮತ್ತು ಮುತ್ಸದ್ದಿತನದಿಂದ ಭಾರತ ಜಾತ್ಯತೀತ ತಳಹದಿಯ ಮೇಲೆ ಯಾನ ಆರಂಭಿಸಿತು. ಅದರ ಪರಿಣಾಮ ಭಾರತ ಇಂದು ವಿಶ್ವದ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿದೆ. ಕೆಲವು ಅಪವಾದಗಳನ್ನು ಹೊರತುಪಡಿಸಿ ಎಲ್ಲ ಜಾತಿ, ಧರ್ಮ ಮತ್ತು ಸಮುದಾಯಗಳ ಜನ ಸಾಮರಸ್ಯದಿಂದ ಬದುಕುತ್ತಿರುವುದು, ನಿಜಕ್ಕೂ ಒಂದು ಯಶಸ್ಸಿನ ಕಥೆ. ಹೀಗಾಗಿ ಪಾಕಿಸ್ತಾನದ ಹಾದಿಯಲ್ಲಿ ಅಪ್ಪಿತಪ್ಪಿಯೂ ಕಾಲಿಡಬಾರದು. ಅಂದರೆ, ಇಸ್ಲಾಮಿಕ್ ದೇಶಗಳ ಮಾದರಿಯಲ್ಲಿ ಭಾರತ ಹಿಂದು ರಾಷ್ಟ್ರ ಆಗಬಾರದು. ಎಲ್ಲರನ್ನೂ ಒಳಗೊಳ್ಳುವ, ಎಲ್ಲರನ್ನು ಗೌರವಿಸುವ, ಎಲ್ಲರ ಅಭಿವೃದ್ಧಿಯಲ್ಲಿ ಭಾರತದ ಹಿತ ಅಡಗಿದೆ.

ಪ್ರತಿಕ್ರಿಯೆಗಳು

25 ಜೂನ್ ನ ಪುರವಣಿಯಲ್ಲಿ 'ಸಂಚಾರಕ್ಕೆ ಸಂಚಕಾರ...' (ಸುಧೀಂದ್ರ ಪ್ರಸಾದ್ ಇ.ಎಸ್.) ಬರಹದಲ್ಲಿ ಹೇಳಿದಂತೆ ತಂತ್ರಜ್ಞಾನಕ್ಕಿಂತ ಮೂಲ ಸೌಕರ್ಯ ಹೆಚ್ಚಳವೇ ಮುಖ್ಯ. ಇದಕ್ಕೆ ಉತ್ತಮ ಸಾರ್ವಜನಿಕ ಸಾರಿಗೆ ಅತ್ಯವಶ್ಯ. ನಾನು ಕಂಡಂತೆ ಮುಂಬೈ ನಗರದಲ್ಲಿ ಆಟೋಗಳು ಕೆಲವೊಂದು ಜನನಿಬಿಡ ಪ್ರದೇಶಗಳಲ್ಲಿ ಸಂಚರಿಸುವಂತಿಲ್ಲ. ಅಲ್ಲಿಗೆ ಹೋಗಲು ಟ್ಯಾಕ್ಸಿ ವ್ಯವಸ್ಥೆ ಇದೆ. ಇನ್ನು ಬ್ರೆಜಿಲ್ ದೇಶದಲ್ಲಿ ಕೆಲವು ಪ್ರದೇಶಗಳಿಗೆ ಖಾಸಗಿ ವಾಹನ ಪ್ರವೇಶವಿಲ್ಲ. ಬದಲಿಗೆ ಒಂದು ನಿರ್ದಿಷ್ಟ ಸ್ಥಳದಿಂದ ಮುಂದೆ ಸಾರ್ವಜನಿಕ ಸಾರಿಗೆ ಬಳಕೆ ಕಡ್ಡಾಯ. ಇದನ್ನು ಬಹಳ ವರ್ಷಗಳ ಹಿಂದೆಯೇ ಅಲ್ಲಿ ವ್ಯವಸ್ಥಿತವಾಗಿ ಜಾರಿಗೆ ತಂದಿದ್ದರು. ನಮ್ಮ ನಗರಗಳಲ್ಲಿ ಇಂತಹ ಪ್ರಯತ್ನ ಮಾಡಬೇಕು. ಇದಲ್ಲದೆ ನಮ್ಮಲ್ಲಿ ಸರ್ಕಾರದ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳು ಸಾರ್ವಜನಿಕ ಸಾರಿಗೆ ಬಳಸುವುದು ಅಪರೂಪ. ಹೀಗಾಗಿ ಅವರಿಗೆ ಸಾರ್ವಜನಿಕರ ಸಮಸ್ಯೆ ತಿಳಿಯುವುದೇ ಇಲ್ಲ.

ಕೆ.ಎಸ್.ಸೋಮೇಶ್ವರ, ಬೆಂಗಳೂರು

ಕಾಸರಗೋಡಿನ ಕೆ.ವಿ. ರಮೇಶ್ ಅವರ ಸೂತ್ರದ ಗೊಂಬೆ ಆಟ ಕುರಿತ ಪರಿಚಯಾತ್ಮಕ ಲೇಖನ ಸೊಗಸಾಗಿದೆ. ಭಾರತೀಯರ ಪಾರಂಪರಿಕ ಕಲೆಯಾದ ತೊಗಲು ಗೊಂಬೆ, ಸೂತ್ರದ ಗೊಂಬೆ ಆಟಗಳು ಯಕ್ಷಗಾನ ಸ್ವರೂಪದ ಕಲೆಗಳು. ಜಾನಪದ ಸೊಗಡಿನ ಸಂಗೀತ, ನಡುಗನ್ನಡ ಶೈಲಿಯ ಮಾತುಗಾರಿಕೆ, ಪೌರಾಣಿಕ ಸ್ವರೂಪದ ವೇಷಭೂಷಣ, ನೃತ್ಯ ಈ ಮಿಶ್ರಿತ ಕಲೆಗಳ ಆಕರ್ಷಣ ರೂಪ ನೋಡುಗರನ್ನು ರೋಮಾಂಚನಗೊಳಿಸುತ್ತವೆ. ಆದರೆ ಈ ಅಪರೂಪದ ಕಲೆ ಇಂದು ಇಲ್ಲ ಎಂಬ ಸ್ಥಿತಿ ತಲುಪಿದೆ. ಇಂಥ ಸಂದರ್ಭದಲ್ಲೂ ಕಲಾವಿದ ರಮೇಶ್ ಹಾಗೂ ಅವರ ಕುಟುಂಬ ಈ ಕಲೆಗೆ ಪುನಶ್ಚೇತನ ನೀಡುವ ಯತ್ನದಲ್ಲಿ ಇರುವುದು ಮೆಚ್ಚಲೇಬೇಕಾದ ಕೆಲಸ. ಅರ್ಪಣಾ ಮನೋಭಾವದ ಈ ಗಡಿನಾಡ ಕನ್ನಡಿಗನ ಸಾಹಸ, ಪರಿಶ್ರಮದಿಂದಾಗಿ ಈ ಕಲೆ ವಿದೇಶಗಳಲ್ಲಿಯೂ ಸೊಬಗು ಮೂಡಿಸಿರುವುದು ಹೆಮ್ಮೆಯ ಸಂಗತಿ. ನಾನು ಇತ್ತೀಚೆಗೆ ಗುಜರಾತ್‌ನ ವಾಪಿಯಲ್ಲಿ ಇವರ 'ಗರುಡ ಪುರಾಣ' ಪ್ರಸಂಗವನ್ನು ವೀಕ್ಷಿಸಿದೆ. ಅದ್ಭುತ ಎನಿಸಿತು. ಪ್ರತಿಭೆ, ಸಾಹಸ, ಜಾಣ್ಮೆಗಳ ಸಂಗಮರೂಪದ ಕೆ.ವಿ. ರಮೇಶ್ ಅವರ ಯಶೋಗಾಥೆಯನ್ನು ಗಣೇಶ್ ಚಂದನಶಿವ ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ.

ಪ್ರೊ. ಚಿಕ್ಕಣ್ಣ ಯಣ್ಣೆಕಟ್ಟೆ

'ಆ ಸಲ ಕಪ್ ನಮ್ದೇ' (ಗಿರೀಶ ದೊಡ್ಡಮನಿ) ಲೇಖನ 1983ರ ವಿಶ್ವಕಪ್ ಗೆಲುವಿನ ಆತ್ಮವನ್ನು ಕಾಣಿಸಿದ ಸುಂದರ ಭಾವಗೀತೆಯಂತೆ ಇತ್ತು. ಆ ಗೆಲುವಿನ ಸ್ಮರಣೆಯ ಜತೆಗೆ ಈಗಿನ ಸ್ಥಿತಿಯ ಅವಲೋಕನ ಮಾಡಿದ ರೀತಿಯೂ ಹಿಡಿಸಿತು.

ಜಯದೇವ್ ಆರ್.ಕೆ.

ಮುನ್ನೋಟ 02-07-2023 ರಿಂದ 08-07-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅತಿಯಾದ ಆತ್ಮ ಗೌರವದ ಜೊತೆಗೆ ಅಹಂ ಭಾವದ ಕುರುಹು ಕಾಣುತ್ತಿವೆ. ಆರ್ಥಿಕ ಸ್ಥಿತಿಯು ನಿಮ್ಮ ಬೇಡಿಕೆಯನ್ನು ಪೂರೈಸುತ್ತದೆ. ಬಾಂಧವರೊಡನೆ ವ್ಯಾವಹಾರಿಕವಾಗಿ ಸಂಬಂಧ ಕುದುರಿಸುವಿರಿ ಹಾಗೂ ನಿಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಯತ್ನಿಸುವಿರಿ. ಹೆಂಡತಿಗೆ ಆಭರಣಗಳು ದೊರೆಯುವ ಸಾಧ್ಯತೆ ಇದೆ. ವೃತ್ತಿಯಲ್ಲಿ ಸ್ವಲ್ಪ ಅಭಿವೃದ್ಧಿ ಕಾಣಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸರ್ಕಾರಿ ಸಂಬಂಧಿತ ಸಾಲಗಳು ಅಥವಾ ಸಹಾಯಧನಗಳು ಖಂಡಿತವಾಗಿ ಸಿಗುತ್ತವೆ. ನಿಮ್ಮೆಲ್ಲಾ ಕೆಲಸಗಳಿಗೆ ಒಡಹುಟ್ಟಿದವರು ಅಥವಾ ಸೋದರಿಯರ ಸಹಾಯ ಸಿಗುತ್ತದೆ. ಸ್ಥಿರಾಸ್ತಿಯನ್ನು ಈಗ ಖರೀದಿ ಮಾಡಬಹುದು. ಭೂಮಿಯ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಫಲಿತಾಂಶಗಳು ದೊರಕುತ್ತವೆ. ಉದರ ಸಂಬಂಧಿ ರೋಗಗಳು ಸ್ವಲ್ಪ ಕಾಣಿಸಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ಆತ್ಮಗೌರವ ಹೆಚ್ಚುತ್ತದೆ. ಉತ್ತಮ ವಾಗ್ಮಿಯಾಗಿ ಹೊರಹೊಮ್ಮುವಿರಿ. ಬಂಧುಗಳೊಡನೆ ಬಾಂಧವ್ಯವನ್ನು ಸುಧಾರಣೆ ಮಾಡಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಶೀತ ಸಂಬಂಧಿ ಕಾಯಿಲೆಗಳು ಇದ್ದವರಿಗೆ ಸ್ವಲ್ಪ ಪರಿಹಾರ ಕಾಣುತ್ತದೆ. ಸಂಗಾತಿಯ ಗಳಿಕೆಯಲ್ಲಿ ಹೆಚ್ಚಳವನ್ನು ಕಾಣಬಹುದು. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸಂಗೀತಾಸಕ್ತರು ತಮ್ಮ ಸಂಗೀತದ ಮಟ್ಟವನ್ನು ತೋರಿಸಲು ಬೇಕಾದ ಅವಕಾಶ ಸಿಗುತ್ತದೆ. ಕೃಷಿಯಿಂದ ಲಾಭ ಇರುತ್ತದೆ ಹಾಗೂ ಕೃಷಿಕರಿಗೆ ಈಗ ಬೇಕಾದ ಹಣದ ಸೌಲಭ್ಯಗಳು ದೊರೆಯುತ್ತವೆ. ನಿಮ್ಮ ಬಂಧುಗಳೊಂದಿಗಿನ ವ್ಯಾಜ್ಯಗಳು ಕೋರ್ಟ್ ಕಚೇರಿ ಮೆಟ್ಟಿಲೇರಬಹುದು, ಮಾತುಕತೆಯಿಂದ ಬಗೆಹರಿಸಿಕೊಳ್ಳಿ. ಮಕ್ಕಳ ಏಳಿಗೆ ಉತ್ತಮವಾಗಿರುತ್ತದೆ ಹಾಗೂ ಅವರ ಬಗ್ಗೆ ಶುಭ ವಾರ್ತೆಗಳನ್ನು ಕೇಳುವಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಈ ವಾರ ಹೆಚ್ಚು ಶಕ್ತಿ ಸಾಮರ್ಥ್ಯಗಳನ್ನು ಹೊಂದುವ ಎಲ್ಲಾ ಅವಕಾಶಗಳಿವೆ. ಮಾತನಾಡುವಾಗ ಸ್ವಲ್ಪ ಎಚ್ಚರವಿರಲಿ. ನೀವು ಮಾಡುವ ಟೀಕೆ ಟಿಪ್ಪಣಿಗಳು ನಿಮಗೇ ವಾಪಸ್ಸು ಬರಬಹುದು. ವಿದೇಶದಲ್ಲಿ ನೆಲೆಸಿರುವವರಿಗೆ ಆಸ್ತಿ ಮಾಡುವ ಯೋಗ ಇದೆ. ಧರ್ಮ ಪ್ರಚಾರಕರಿಗೆ ಅನಿರೀಕ್ಷಿತವಾಗಿ ವಿದೇಶಯಾನ ಯೋಗ ದೊರೆಯುತ್ತದೆ. ವೃತ್ತಿಯಲ್ಲಿ ನಿರೀಕ್ಷಿಸಿದ್ದ ಸ್ಥಾನ ದೊರೆಯದಿರಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವೃತ್ತಿಯಲ್ಲಿ ಅಭಿವೃದ್ಧಿ ಇದ್ದು ಉನ್ನತ ಸ್ಥಾನ ಸಿಗುವ ಸಾಧ್ಯತೆ ಇದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ನಿಮ್ಮ ಕೆಲಸಗಳಿಗೆ ತಾಯಿಯಿಂದ ಸೂಕ್ತ ಸಹಕಾರ ದೊರೆಯುತ್ತದೆ. ಆಸ್ತಿ ವಿಚಾರದಲ್ಲಿ ತಗಾದೆಗಳು ಆಗುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಸಂಪೂರ್ಣ ಯಶಸ್ಸು ಸಿಗುವುದು ಕಷ್ಟ ಹಾಗೂ ಹೆಚ್ಚು ಶ್ರಮ ಹಾಕಬೇಕಾದ ಪರಿಸ್ಥಿತಿ ಇದೆ. ಪಿತ್ರಾರ್ಜಿತ ಆಸ್ತಿಗಳು ಸಿಗುವ ಸಾಧ್ಯತೆಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಆಲಸಿತನ ನಿಮ್ಮನ್ನು ಕಾಡಬಹುದು. ನಿಮ್ಮ ಕೆಲಸಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಕೃಷಿ ಭೂಮಿಯನ್ನು ಹದ ಮಾಡುವುದರಲ್ಲಿ ಯಶಸ್ವಿ ಆಗುವಿರಿ. ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಹೆಚ್ಚು ಶ್ರಮವನ್ನು ಹಾಕಲೇ ಬೇಕಾದ ಅನಿವಾರ್ಯತೆ ಇರುತ್ತದೆ. ಸಾಲ ಕೊಟ್ಟಿರುವವರು ಹಣ ವಾಪಸ್ ಕೇಳಲು ಈಗ ಬರಬಹುದು. ಸಂಗಾತಿಯ ಆದಾಯದಲ್ಲಿ ದಿಡೀರ್ ಹೆಚ್ಚಳವನ್ನು ಕಾಣಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಒಂದು ರೀತಿ ಮನಸ್ಸು ಪ್ರಫುಲ್ಲವಾಗಿರುತ್ತದೆ. ಹಣದ ಒಳಹರಿವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ಶತ್ರುಗಳನ್ನು ಅವರದೇ ವಿಧಾನಗಳಿಂದ ಮಣಿಸುವಿರಿ ಹಾಗೂ ಅವರಿಗೆ ಎಚ್ಚರಿಕೆ ನೀಡುವಿರಿ. ಕೃಷಿಕರಿಗೆ ಅನುಕೂಲತೆಗಳು ಒದಗಿಬರುತ್ತವೆ. ವಿದ್ಯಾರ್ಥಿಗಳಿಗೆ ಸ್ವಲ್ಪ ಗಲಿಬಿಲಿಯಾಗಿ ಫಲಿತಾಂಶಗಳು ಕಡಿಮೆಯಾಗಬಹುದು. ಚಿನ್ನದ ಕುಸುರಿ ಆಭರಣ ತಯಾರಕರಿಗೆ ಬೇಡಿಕೆ ಹೆಚ್ಚಾಗುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಿದ್ಯಾರ್ಥಿಗಳಿಗೆ ಉತ್ತಮ ಕಾಲವಿರುತ್ತದೆ. ಅದರಲ್ಲೂ ವಿದೇಶದಲ್ಲಿ ವ್ಯಾಸಂಗ ಮಾಡಬೇಕೆಂಬ ಆಸೆ ಇರುವವರಿಗೆ ಅನುಕೂಲಗಳಾಗುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿ ಇರುವುದರಿಂದ ಖರ್ಚು ಕಡಿಮೆ ಮಾಡಿ ಹಣ ನಿರ್ವಹಣೆ ಮಾಡಿರಿ. ಶತ್ರುಗಳು ನಿಮ್ಮ ತಂಟೆಗೆ ಬರುವುದನ್ನು ಅವರೇ ಕಡಿಮೆ ಮಾಡುವರು. ಸ್ಥಿರಾಸ್ತಿ ವಿಷಯದಲ್ಲಿ ಈಗ ಮುಂದುವರೆಯಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ದೇವರ ದರ್ಶನಕ್ಕಾಗಿ ಕುಟುಂಬ ಸಮೇತರಾಗಿ ಹೋಗುವ ಸಾಧ್ಯತೆ ಇದೆ. ಹಣದ ಒಳಹರಿವು ಕಡಿಮೆ ಇದ್ದರೂ ಅಗತ್ಯವನ್ನು ಪೂರೈಸುತ್ತದೆ. ಮಾತಿನಲ್ಲಿ ಕಠಿಣತೆ ಬೇಡ. ಸ್ಥಿರಾಸ್ತಿಯಲ್ಲಿ ತಕರಾರುಗಳು ಬರುವ ಸಾಧ್ಯತೆಗಳಿವೆ. ಸಂಗಾತಿಯ ಓದಿಗೆ ಸಾಕಷ್ಟು ಅನುಕೂಲಗಳು ದೊರೆಯುತ್ತವೆ. ಕಣ್ಣಿನ ತೊಂದರೆ ಮತ್ತು ತಲೆ ನೋವುಗಳು ಕಾಣಿಸಬಹುದು. ಕೃಷಿಕರಿಗೆ ಆದಾಯ ಕಡಿಮೆಯಾಗಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬಹಳ ಶ್ರಮಪಟ್ಟು ಕೆಲಸ ಮಾಡುವಿರಿ. ಬಂಧುಗಳೊಡನೆ ಸಂಬಂಧವನ್ನು ವೃದ್ಧಿ ಮಾಡಿಕೊಳ್ಳುವಿರಿ. ವಿದೇಶದಲ್ಲಿ ಕೆಲಸ ಮಾಡುತ್ತಿರುವವರ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ. ಆಸ್ತಿ ಮಾರಾಟ ಮಾಡಿಸುವವರಿಗೆ ಕಮಿಷನ್ ಕಡಿಮೆಯಾಗಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ದೊರೆಯುತ್ತದೆ. ಮೂತ್ರದ ತೊಂದರೆ ಅಥವಾ ಗುಹ್ಯ ರೋಗಗಳು ಇರುವವರಿಗೆ ಆರೋಗ್ಯ ವ್ಯತ್ಯಾಸಗಳು ಆಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿಯಾದ ಕೊಂಕು ಮಾತು ನಿಮ್ಮ ಗೌರವವನ್ನು ಕಳೆಯಬಹುದು. ಹಣದ ಒಳಹರಿವು ಮಧ್ಯಮಗತಿಯಲ್ಲಿರುತ್ತದೆ. ವಿದೇಶದಲ್ಲಿರುವ ಮಕ್ಕಳಿಂದ ಧನಸಹಾಯ ದೊರೆಯುವ ಸಾಧ್ಯತೆ ಇದೆ. ಬಂಧುಗಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತದೆ. ಭೂಮಿ ವ್ಯವಹಾರ ಮಾಡುವ ವರಿಗೆ ಸ್ವಲ್ಪಮಟ್ಟಿನ ಸುಧಾರಣೆ ಇರುತ್ತದೆ.

ಪದಬಂಧ 2796



ಮೇಲಿನಿಂದ ಕೆಳಕ್ಕೆ

1. ಸರ್ವಜ್ಞನ ವಚನದಲ್ಲಿ ಈತ ಬಂದರೆ ಇಬ್ಬದಿಯ ಕೀಲು ಮುರಿದಂತೆ 3
2. ಯೌವನಕ್ಕೆ ಕಾಲಿಟ್ಟ ವೃಕ್ಷದಂತಹ ಹೆಣ್ಣು 3
3. ಅಗಸ ಮೇಲೆ ನೋಡಿದಾಗ ಕಾಣುವ ಆಕಾಶ 3
4. ಅ, ಆ, ಇ, ಈ, ಎ ಸ್ವರಗಳ ಮುಂದೆ ಸ್ವರಗಳು ಬಂದಾಗ ಆಗಮಿಸುವ ಮೊದಲ ಅವರ್ಗೀಯ ವ್ಯಂಜನದ ಅಲ್ಪಕಾರ 3
7. ಪಾತಾಳಕ್ಕೆ ಇಳಿದ ಮೇಲೆ ತಲೆಗೊಂದು ಸಿಗುವ ಲೋಕ 4
9. ನೀರಿನಲ್ಲಿ ಹುಟ್ಟಿದವಳು 3
11. ಮೀನಿನ ನಯನದ ಚೆಲುವೆ ಮಧುರೈನ ದೇವತೆ 3
12. ಎಲ್ಲೆಯನ್ನು ಕಾಣದ ಪರಿಣ ತ 3
13. ಸತಿಯೊಡನೆ ಬಾಳ್ವೆ ನಡೆಸುವ ವಾಸಗೃಹ ತಲೆಕೆಳಗು 3
15. ಪಂಡಿತನಲ್ಲದ ಅಶಿಕ್ಷಿತ 3
16. ಬಯಸಿದ್ದನ್ನೆಲ್ಲಾ ಕೊಡುವ ಹಸು 4
17. ಬೇಲೂರು ಕಲಾಕೃತಿಯ ಶಿಲ್ಪಿ 3
19. ತಾಯಿ ಮಗುವಿಗೆ ಅಂಟಿದ ಕೊಂಡಿ 3
20. ದೇವತೆಗಳ ವಿರುದ್ಧ ಸಮರ ಸಾರುವ ದಾನವ 3
21. ಮನೆಕಟ್ಟುವ ಕೆಲಸಗಾರನ ಕೈ ಸಲಕರಣೆ 3
22. ಅಲ್ಲಲ್ಲಿ ತಲೆಯೆತ್ತುತ್ತಿದ್ದ ನಾಯಿಕೊಡೆ ಇದೀಗ ಕೃಷಿ ಪದಾರ್ಥ 3
23. ಹನಿ ಹನಿಯಾಗಿ ಬಿಡದೆ ಬೀಳುವ ಧಾರೆ 3

ಎಡದಿಂದ ಬಲಕ್ಕೆ

1. ಸರಸ್ವತಿಯ ಲೋಕಕ್ಕೆ ಸೇರಿದ ಜ್ಞಾನಿಗಳು 4
3. ಆಯದಲ್ಲಿ ಬರುವ ಭರವಸೆ 3
5. ಪರಮಶಿವನನ್ನು ಒಲಿಸಿಕೊಳ್ಳುವ ಯಜ್ಞ 4
6. ಇಷ್ಟಪಟ್ಟಿದ್ದು ಅಥವಾ ಬಯಸಿದ್ದು ಕೊನೆಯಲ್ಲಿ ಮಿತವಾಗಿರಲೇಬೇಕು 3
8. ಪಕ್ಕವಾದ್ಯದಂತೆ ಗಟ್ಟಿಯಾಗಿ ದಬಾಯಿಸುವ ಹೆಣ್ಣು 4
10. ಮೀರಳ ಜೊತೆ ಬರುವ ವಾಯುಪುತ್ರ 3
12. ಮೇಲ್ನೋಟಕ್ಕೆ ಕಾಣಿಸದ ಸತ್ಯವಾದ ವಿಚಾರ 5
14. ತಿರುಗುವ ಭೂಮಿಯ ಒಡೆಯ 4
16. ಬಯಕೆಯ ದೊರೆ 4
18. ಬಣ್ಣ ಬಣ್ಣಗಳ ಬೆರೆಕೆ ಜಾತಿಗಳ ನಡುವೆಯೂ ಆಗಿದೆ 5
20. ಚುಚ್ಚು ಮಾತಿನ ಹಾಸ್ಯ 3
22. ಸದಾ ಕಣ್ಣೀರು ತುಂಬಿದ ವದನ 4
24. ವಾಹನ ದಟ್ಟಣೆಯಲ್ಲಿ ಗಾಡಿಗಳನ್ನು ಸ್ಥಳವಿಲ್ಲದಿದ್ದರು ಮುಂದೆ ತಳ್ಳು 3
25. ಸೌರವ್ಯೂಹದ ಗುಂಪು 4
26. ಮಣಿಗೆ ಹೋಲಿಸಬಹುದಾದ ಸತಿ 3
27. ಅಚ್ಚರಿಯ ನೋಟಕ್ಕೊಳಗಾಗು 4

ಪದಬಂಧ ಉತ್ತರ -2795

ಮೇಲಿಂದ ಕೆಳಕ್ಕೆ

1. ವಿಕಲ 2.ತಡಿಕೆ 3.ಉಳುಮೆ 5.ರಿಷಭ 7.ಲಕ್ಷ್ಮಣ 9.ಕುಡಿಕೆಹಣ 10.ದುಷ್ಟರಕ್ಷಕ 11.ಆಸನ 12. ತಿವಾರಿ 16.ಗಮಕ 17.ತಣಿಸು 19.ಹಣತೆ 20. ಕವಿತೆ 21.ಸಮಾನ

ಎಡದಿಂದ ಬಲಕ್ಕೆ

1. ವಿಶ್ವವಿಖ್ಯಾತ 3.ಉದ್ಧಾರ(ಲ)ಕ 4.ಡಿಕ್ಷನರಿ 6.ಲವಲವಿಕೆ 8.ಮೆಲುಕು 10.ದುರ್ಲಭ 11.ಆಣತಿ 13.ಮನೆಕೆಲಸ 14.ವಾನರರೂಪ 15.ನಗರಿ 17.ತಲ್ಲಣ 18.ಕಲಹ 20.ಕನಕದಾಸ 22.ಸುಖಜೀವಿ 23.ಮಾನವತೆ 24.ತೆರೆದಮನ

ನಿರ್ಮಮಕಾರ ದನಿಯ ವಸ್ತುನಿಷ್ಠ ಜೀವನ ಚರಿತ್ರೆ



ಜಿ.ಎನ್. ರಂಗನಾಥ ರಾವ್

ವಿಮರ್ಶೆ

'ಅಜ್ಜ-ಅಜ್ಜಿ' ಮಹಾನುಭಾವರಿಬ್ಬರ ಅದ್ಭುತವಾದ ಒಂದು ಜೀವನ ಗಾಥೆ. ಇಲ್ಲಿ ಪ್ರೀತಿ ಇದೆ, ಗೌರವ ಇದೆ, ಸಂಬಂಧಗಳ ಪ್ರಿಯ-ಅಪ್ರಿಯ ಸಂಗತಿಗಳಿವೆ, ವ್ಯಾವಹಾರಿಕ ಸಂಬಂಧಗಳಿವೆ. ಇವೆಲ್ಲದರ ಸತ್ಯಶೋಧನೆಯ ಇಂಗಿತವಿದೆ. ಮಿಗಿಲಾಗಿ ಮಾನವೀಯತೆಯನ್ನು ಎತ್ತಿಹಿಡಿಯುವ ಸಂಕಲ್ಪ ಶಕ್ತಿ ಮತ್ತು ಅಭಿಲಾಷೆ ಇದೆ. ಎಂದೇ ಹರಿ ಕುಮಾರ್ ಅವರು ತಮ್ಮ ಅಜ್ಜ, ಅಜ್ಜಿಯರ ಬಗ್ಗೆ ಬರೆದಿರುವ ಈ ಪುಸ್ತಕ ವಸ್ತುನಿಷ್ಠ ಪರಾಮರ್ಶೆಯ ಗುಣಧರ್ಮಗಳಿಂದ ಹಿರಿದಾದುದು.

ಭಾರತೀಯ ಕಾಲಮಾನದಲ್ಲಿ ಕನ್ನಡ ಪತ್ರಿಕೆಗಳನ್ನು ಎರಡು ಘಟ್ಟಗಳಲ್ಲಿ ಗುರುತಿಸಲಾಗಿದೆ. ಒಂದು: ಸ್ವಾತಂತ್ರ್ಯಪೂರ್ವದ ಪತ್ರಿಕಾ ವ್ಯವಸಾಯ. ಎರಡು: ಸ್ವಾತಂತ್ರ್ಯೋತ್ತರ ಪತ್ರಿಕೋದ್ಯಮ. ಸ್ವಾತಂತ್ರ್ಯ ಪೂರ್ವದಲ್ಲಿ ಲಾಭ-ನಷ್ಟಗಳನ್ನು ಲೆಕ್ಕಿಸದ ಪತ್ರಿಕಾ ವ್ಯವಸಾಯಕ್ಕೆ, ಸ್ವಾತಂತ್ರ್ಯ ಹೋರಾಟ ಮತ್ತು ಸ್ವಾತಂತ್ರ್ಯ ಗಳಿಕೆಯೇ ಗುರಿಗಮ್ಯತೆಗಳಾಗಿದ್ದವು. ಆ ಕಾಲದಲ್ಲಿ ಕನ್ನಡದಲ್ಲಿ ಪತ್ರಿಕಾ ವ್ಯವಸಾಯವನ್ನು ಕೈಗೊಂಡು ಬೆಳೆಸಿದ ತಾತಯ್ಯ ವೆಂಕಟಕೃಷ್ಣಯ್ಯನವರನ್ನು ಕನ್ನಡ ಪತ್ರಿಕೋದ್ಯಮದ ಪಿತಾಮಹ ಎಂದೇ ಇತಿಹಾಸ ಗುರುತಿಸಿದೆ. ಸ್ವಾತಂತ್ರ್ಯಾನಂತರ ಭಾರತದ ಪತ್ರಿಕಾ ವ್ಯವಸಾಯವು ಉದ್ಯಮದ ಸ್ವರೂಪ ಪಡೆದುಕೊಂಡಿತು. ಕನ್ನಡದಲ್ಲೂ ಪತ್ರಿಕಾ ವ್ಯವಸಾಯ ಲಾಭ-ನಷ್ಟದ ಉದ್ಯಮವಾಯಿತು. ಸ್ವಾತಂತ್ರ್ಯ ಬಂದ ಮರು ವರ್ಷವೇ ಬೆಳಕು ಕಂಡ 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಪತ್ರಿಕೆಗಳು ಇದಕ್ಕೆ ನಾಂದಿ ಹಾಡಿದವು. ಅಬಕಾರಿ ಉದ್ಯಮಿಯಾಗಿದ್ದ ಕೆ.ಎನ್.ಗುರುಸ್ವಾಮಿಯವರ ನಾಯಕತ್ವದಲ್ಲಿ, ಮಾರ್ಗದರ್ಶನದಲ್ಲಿ ಈ ಪತ್ರಿಕೆಗಳು ಜ್ಞಾನ ಪ್ರಸಾರ, ಪತ್ರಿಕಾ ಧರ್ಮ ಪಾಲನೆ, ವೃತ್ತಿಪರತೆ, ಓದುಗರಲ್ಲಿ ಹೊಸ ವಾಚನಾಭಿರುಚಿ ಬೆಳೆಸುವುದು, ನೂತನ ಮುದ್ರಣ ತಂತ್ರಜ್ಞಾನ ಅಳವಡಿಸಿಕೊಳ್ಳುವುದು ಇವುಗಳಲ್ಲಿ ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ಬೆಳಕಿಂಡಿಯಾದವು. 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ'ಗಳ ಈ ಎಲ್ಲ ಸಾಧನೆಗಳಲ್ಲಿ ಕೆ.ಎನ್.ಗುರುಸ್ವಾಮಿಯವರ ದೂರದೃಷ್ಟಿಯ ಚಿಂತನೆ ಮತ್ತು ಪರಿಶ್ರಮಗಳು ಹಾಸುಹೊಕ್ಕಾಗಿವೆ. ಎಂದೇ ಕೆ.ಎನ್. ಗುರುಸ್ವಾಮಿಯವರನ್ನು ಆಧುನಿಕ ಕನ್ನಡ ಪತ್ರಿಕೋದ್ಯಮದ ಪಿತಾಜಿ ಎಂದು ಕರೆದರೆ ಅತಿಶಯೋಕ್ತಿ ಆಗಲಾರದು.

> ಹರಿ ಕುಮಾರ್ ತಮ್ಮ ಅಜ್ಜ–ಅಜ್ಜಿಯವರ ಜೀವನ ಚರಿತ್ರೆ ಬರೆಯುವಾಗ, ಬಣ್ಣ ಕಟ್ಟದೆ ಕಪ್ಪು-ಬಿಳುಪಿನಲ್ಲಿ ಅವರನ್ನು ಕಂಡು ಅರ್ಥೈಸುವ ಸ್ತುತ್ಯರ್ಹ ಪ್ರಯತ್ನ ಮಾಡಿದ್ದಾರೆ

'ಅಜ್ಜ-ಅಜ್ಜಿ' ಕೆ.ಎನ್.ಗುರುಸ್ವಾಮಿಯವರ ಮೊಮ್ಮಗ ಕೆ.ಎನ್.ಹರಿ ಕುಮಾರ್ ರಚಿಸಿರುವ ತಮ್ಮ ಅಜ್ಜ-ಅಜ್ಜಿಯರ ಜೀವನ ಚರಿತ್ರೆ. ಇದಕ್ಕೆ ಒಂದು ಐತಿಹಾಸಿಕ ಮಹತ್ವ ಇರುವುದರಿಂದ ಕೆಲವೊಂದು ಪೀಠಿಕಾ ಮಾತುಗಳನ್ನು ಹೇಳುವುದು ಅನಿವಾರ್ಯವಾಯಿತು.

ಈ ಗ್ರಂಥದ ಮೊದಲ ಎರಡು ಅಧ್ಯಾಯಗಳಲ್ಲಿ ವಂಶವೃಕ್ಷ ಮತ್ತು ಅಜ್ಜ, ಅಜ್ಜಿ ಕಥಾನಕವಿದೆ. ಜೀವನ ಕಥಾನಕದಲ್ಲಿ, ಅಜ್ಜನ ಬಾಹ್ಯ ವ್ಯಕ್ತಿತ್ವ, ಜೀವನ ಪ್ರೀತಿ, ಅತಃಸತ್ವ, ಆತ್ಮವಿಶ್ವಾಸ, ಉದ್ಯಮಶೀಲತೆ ಇತ್ಯಾದಿ ವೈವಿಧ್ಯಮಯವಾದ ಆಸಕ್ತಿಗಳನ್ನು ಹಾಗೂ 'ಕೊಟ್ಟ ಮಾತಿನಂತೆ ನಡೆಯುವ' ಗುಣಶೀಲತೆಯನ್ನು, ತಮ್ಮನ್ನು ಪ್ರೀತಿಯಿಂದ ಬೆಳೆಸಿದ ಪರಿಯನ್ನು ಹರಿ ಕುಮಾರ್ ಅತಿಶಯೋಕ್ತಿಯಾಗದಂತೆ ಎಚ್ಚರದಿಂದ, ನಿರ್ಮಮಕಾರದಿಂದ, ಬೆಚ್ಚನೆಯ ಅನುಭವವಾಗುವಂತೆ ನಿರೂಪಿಸಿದ್ದಾರೆ. ಚಿತ್ರ ಸಂಪುಟ ಗುರುಸ್ವಾಮಿಯವರ ಜೀವನ ಪ್ರೀತಿ, ಶ್ರದ್ಧೆ, ಕುಟುಂಬ ವಾತ್ಸಲ್ಯ, ಅಶ್ವಗಳು ಮತ್ತು ರೇಸ್ ಕ್ಲಬ್, ಶಿಕಾರಿ ಮೊದಲಾದವುಗಳಲ್ಲಿನ ಆಸಕ್ತಿಗಳು, ಅವರ ಉದ್ಯಮಶೀಲತೆ, ಪತ್ರಿಕೆಗಳನ್ನು ಪ್ರಾರಂಭಿಸಿ ಬೆಳೆಸಿದ್ದು, ಸಾರ್ವಜನಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಅವರು ತೋರಿದ ಪ್ರಾಮಾಣಿಕ ಕಾಳಜಿ ಮೊದಲಾದವುಗಳ ದೃಶ್ಯರೂಪಿ ಸಂಕಥನವಾಗಿದೆ. ಕೊನೆಯ ಎರಡು ಭಾಗಗಳಲ್ಲಿ 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಹಳೆಯ ಸಂಚಿಕೆಗಳ ಪುಟಗಳನ್ನೂ ಸಂಬಂಧಿತ ಪುಸ್ತಕಗಳ ಆಯ್ದ ಪುಟಗಳನ್ನು ಕೊಡಲಾಗಿದೆ.

ಗುರುಸ್ವಾಮಿಯವರಲ್ಲಿದ್ದ ರಾಜಕ್ರೀಡೆ ಎನಿಸಿದ ಶಿಕಾರಿ ಹಾಗೂ ಅಶ್ವಗಳು ಮತ್ತು ರೇಸ್‌ನಲ್ಲಿದ್ದ ಗಾಢ ಆಸಕ್ತಿ,, ಕಳ್ಳು ಮತ್ತು ಸಾರಾಯಿ ಹಾಗೂ ಪತ್ರಿಕೋದ್ಯಮದಲ್ಲಿ ಅವರು ತೋರಿದ ಉದ್ಯಮಶೀಲತೆ-ಕಾಳಜಿಗಳು, ಶ್ರೀಯುತರಾದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್, ಗರುಡಾಚಾರ್, ವೆಂಕಟಸ್ವಾಮಿ ಮೊದಲಾದವರೊಂದಿಗೆ ಅವರು ಹೊಂದಿದ್ದ ಸ್ನೇಹ ಸಂಬಂಧಗಳು, 'ಡೆಕ್ಕನ್ ಹೆರಾಲ್ಡ್', 'ಪ್ರಜಾವಾಣಿ' ಪತ್ರಿಕೆಗಳನ್ನು ಪ್ರಾರಂಭಿಸಿದ್ದು, ಅಜ್ಜನ ವ್ಯಕ್ತಿತ್ವ ಮತ್ತು ಅತಃಸತ್ವ ಇವೆಲ್ಲವನ್ನೂ ಅವಲೋಕಿಸುವಾಗ ಹರಿ ಕುಮಾರ್ ಪಾಲಿಸಿರುವ ವಸ್ತುನಿಷ್ಠತೆ, ನಿರ್ಲಿಪ್ತತೆ, ಶಿಸ್ತು, ಸಂಯಮಗಳು ಈ ಗ್ರಂಥದ ಪ್ರಶಂಸನೀಯ ಗುಣಗಳು. ಈ ಮಾತಿಗೆ ನಿದರ್ಶನವಾಗಿ ಒಂದೆರಡು ಪ್ರಸಂಗಗಳನ್ನು ಗಮನಿಸಬಹುದು.

'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಪತ್ರಿಕೆಗಳು ಜನಿಸಿದ ಹಿನ್ನೆಲೆಯನ್ನು ಹರಿ ಕುಮಾರ್ ಸ್ವಲ್ಪ ವಿಸ್ತಾರವಾಗಿಯೇ ವಿಶ್ಲೇಷಿಸಿದ್ದಾರೆ. ಪ್ರೇರಣೆ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರದಿರಬಹುದು, ಪ್ರೋತ್ಸಾಹಗಳು ಗರುಡಾಚಾರ್ ಆದಿಯಾಗಿ ಹಲವರದಿರಬಹುದು. ಆದರೆ ಕೆ.ಎನ್.ಗುರುಸ್ವಾಮಿಯವರು ಈ ಪತ್ರಿಕೆಗಳ ಸಂಸ್ಥಾಪಕರು ಎನ್ನುವುದು ನಿರ್ವಿವಾದಾತ್ಮಕ. ಆದರೂ 1975ರಲ್ಲಿ, ಗುರುಸ್ವಾಮಿಯವರ ಜೀವಮಾನದ ಗೆಳೆಯರಾದ ವೆಂಕಟಸ್ವಾಮಿಯವರು ಹೊರತಂದ 'ದಿ ಸ್ಟೋರಿ ಆಫ್ ಡೆಕ್ಕನ್ ಹೆರಾಲ್ಡ್' ಎಂಬ ಕಿರುಹೊತ್ತಿಗೆಯಲ್ಲಿ, 'ಮೈಸೂರು ಸಂಸ್ಥಾನದ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿಯವರ ಸಲಹೆಯಂತೆ 1948ರಲ್ಲಿ ಪತ್ರಿಕೆ ಶುರುವಾಗಲು ತಾವೇ ಕಾರಣ' ಎಂದು ಪ್ರತಿಪಾದಿಸಿಕೊಂಡಿದ್ದರು. ಇದು 'ಡೆಕ್ಕನ್ ಹೆರಾಲ್ಡ್' ಸಂಸ್ಥಾಪಕರು ಯಾರು ಎಂಬ ಒಂದು ಸಣ್ಣ ವಿವಾದವನ್ನು ಸೃಷ್ಟಿಸಿತು. ಸ್ವಾರಸ್ಯಕರ ಅಂಶವೆಂದರೆ, ಗುರುಸ್ವಾಮಿಯವರು ಈ ಕಿರುಹೊತ್ತಿಗೆಗೆ ಮುನ್ನುಡಿ ಬರೆದಿದ್ದಾರೆ. ಆದರೆ ಅವರು ವೆಂಕಟಸ್ವಾಮಿಯವರ ಮೇಲಿನ ಮಾತನ್ನು ಉಪೇಕ್ಷಿಸಿದಂತೆ ತೋರುತ್ತದೆ. ಇದು ಗುರುಸ್ವಾಮಿಯವರ ನಿಸ್ವಾರ್ಥ ಮನೋಭಾವವನ್ನು ಸೂಚಿಸುತ್ತದೆ. ಹರಿ ಕುಮಾರ್ ಅವರು ಸತ್ಯ ತಿಳಿಯಲು ಹಲವಾರು ಪುಸ್ತಗಳನ್ನೂ ಲೇಖನಗಳನ್ನೂ ಪರಾಮರ್ಶಿಸಿ ಸಂಶೋಧನೆ ಮಾಡುತ್ತಾರೆ. ಸತ್ಯ ಮನಗಂಡರೂ ವಿವಾದವನ್ನು ಬೆಳೆಸಲು ಇಚ್ಛಿಸುವುದಿಲ್ಲ. 'ಯಶಸ್ಸಿಗೆ ಹಲವು ಅಪ್ಪಂದಿರು, ಸೋಲು ಅನಾಥ' ಎಂಬ ಗಾದೆ ಮಾತನ್ನು ಉಲ್ಲೇಖಿಸಿ ಹರಿ ಕುಮಾರ್ ಪ್ರಬುದ್ಧತೆಯನ್ನು ಮೆರೆಯುತ್ತಾರೆ.

ಹರಿ ಕುಮಾರ್ ಬಾಲ್ಯದಲ್ಲಿ ಅಜ್ಜಿ ಕದಿರಮ್ಮನವರ ಪ್ರೀತಿಯ ಮಡಿಲಲ್ಲಿ ಬೆಳೆದವರು. 'ನಾನು ನನ್ನಜ್ಜಿ ಕದಿರಮ್ಮಳಿಗೆ ಆತುಕೊಂಡು ಬೆಳೆದೆ. ವಿದ್ಯಾವಂತ ಹಾಗೂ ನಗರ ಸಮಾಜಕ್ಕೆ ಹೊರತಾದ ವಾತಾವರಣದಲ್ಲಿ ಬೆಳೆದಿದ್ದ ಅವರು ಸ್ವತಂತ್ರ ಮನೋಭಾವದ, ಪ್ರಬಲ ಇಚ್ಛಾಶಕ್ತಿಯುಳ್ಳ ಸಮರ್ಥ ಮಹಿಳೆಯಾಗಿದ್ದರು' ಎನ್ನುವ ಹರಿ ಕುಮಾರ್, ಸಹಬಾಳ್ವೆಯ ಜಾನಪದ ಸಂಸ್ಕೃತಿ ಮತ್ತು ಪರಂಪರೆಗೆ ಓದುಗರನ್ನು ಒಯ್ದು ಬಿಡುತ್ತಾರೆ. ಈ ಸಾಕಮ್ಮ ಅಜ್ಜಿಯಂತೂ ಬಹುತ್ವ ಜೀವನದ ಪ್ರತೀಕ. 'ತಾವು ಆರಾಧಿಸುತ್ತಿದ್ದ ಹಿಂದೂ-ಮುಸ್ಲಿಂ ಭಾವೈಕ್ಯ ಸಂತ ಮತ್ತು ಅವರ ಪಂಥದನುಯಾಯಿಗಳಿಗೆ ಆಶ್ರಮವೊಂದನ್ನು ನಿರ್ಮಾಣ ಮಾಡುವುದಕ್ಕಾಗಿ ಅಜ್ಜನನ್ನು ತುಂಬಾ ಪೀಡಿಸುತ್ತಿದ್ದುದು ಹಾಗೂ ಅದಕ್ಕೆ ಒಪ್ಪಿಗೆ ಪಡೆಯುವತನಕ ಅವರಿಗೆ ನಿದ್ರೆ ಮಾಡಲೂ ಬಿಡದೆ ಪಟ್ಟು ಹಿಡಿಯುತ್ತಿದ್ದುದು'-ಧಾರ್ಮಿಕ ಸಾಮರಸ್ಯ ಸೂಚಿಸುವ ಸಾಕಮ್ಮಜ್ಜಿಯವರ ಈ ನಿಲುವನ್ನು ದಾಖಲಿಸುತ್ತಲೇ ಹರಿ ಕುಮಾರ್ ಇಂಥ ಪರಂಪರೆಯ ಪ್ರಸ್ತುತತೆಯನ್ನು, ವರ್ತಮಾನ ಕಾಲ ಮನಗಾಣಬೇಕಾದ ಅಗತ್ಯವನ್ನೂ ಸೂಚಿಸಿಬಿಡುತ್ತಾರೆ. ಇದು ಅವರ ಪ್ರಬುದ್ಧ ಜೀವನ ದೃಷ್ಟಿಗೆ ಮತ್ತೊಂದು ನಿದರ್ಶನವಾದೀತು.

ಗುರುಸ್ವಾಮಿಯವರ ರಸಮಯವೂ ವೈವಿಧ್ಯಮಯವೂ ಆದ ಬದುಕಿನಲ್ಲಿ ಕುದುರೆ ರೇಸ್, ರೇಸ್ ಕ್ಲಬ್ ಆಡಳಿತ ನಿರ್ವಹಣೆ, ಕುದುರೆ ತಳಿ ಅಭಿವೃದ್ಧಿ, ಶಿಕಾರಿ ಮೊದಲಾದವು ಅವರ ಜೀವನ ಶೈಲಿಯ ಜ್ವಲಂತ ನಿದರ್ಶನಗಳು. ಅವರು ರೇಸ್ ಪ್ರಿಯರಾಗಿದ್ದೂ ಎಂದಿಗೂ ಕುದುರೆ ಜೂಜು ಆಡಿದವರಲ್ಲ. ಶಿಕಾರಿ ಪ್ರಿಯರಾಗಿದ್ದರೂ 'ಹೆಚ್ಚುತ್ತಿದ್ದ ವಯಸ್ಸು, ಕಡಿಮೆಯಾಗುತ್ತಿದ್ದ ಅರಣ್ಯ ಪ್ರದೇಶ ಹಾಗೂ ಇಳಿಮುಖವಾಗುತ್ತಿರುವ ಕಾಡು ಪ್ರಾಣಿಗಳ ಸಂಖ್ಯೆಯ ಕಾರಣ ಬೇಟೆಯಿಂದ ಹಿಂದೆ ಸರಿದಿದ್ದರು' ಎನ್ನುವಂಥ ಹಲವಾರು ಸ್ವಾರಸ್ಯಕರ ಸಂಗತಿಗಳು ಈ ಪುಸ್ತಕದಲ್ಲಿವೆ.

ಹರಿ ಕುಮಾರ್ ತಮ್ಮ ಅಜ್ಜ-ಅಜ್ಜಿಯರ ಬದುಕನ್ನು ಎಷ್ಟು ಪಾರದರ್ಶಕವಾಗಿ ಬರಹದಲ್ಲಿ ಮೂಡಿಸಿದ್ದಾರೋ ಅಷ್ಟೇ ಪಾರದರ್ಶಕವಾಗಿ ಈ ದಂಪತಿಯ ಜೀವನ ಶೈಲಿಯನ್ನು ಸಚಿತ್ರವಾಗಿ ದರ್ಶನ ಮಾಡಿಸುವ ಚಿತ್ರ ಸಂಪುಟ ಈ ಗ್ರಂಥದ ಅಮೂಲ್ಯವಾದ ಸಂಪತ್ತು. ಪಾರದರ್ಶಕವಾದ ಕಪ್ಪು ಬಿಳುಪಿನ ನಿರೂಪಣೆಯಂತೆ ಅಷ್ಟೇ ನಯನ ಮನೋಹರವಾದ ಕಪ್ಪು ಬಿಳುಪಿನ ಚಿತ್ರಗಳು ಗುರುಸ್ವಾಮಿಯವರ ಕೌಟುಂಬಿಕ, ಸಾರ್ವಜನಿಕ ಮತ್ತು ಸಾಮಾಜಿಕ ಬದುಕಿನ ಬಗ್ಗೆ ಮಾತನಾಡುತ್ತಿವೆ ಎಂದು ಭಾಸವಾಗುವ ರೀತಿಯಲ್ಲಿ ಪಡಿಮೂಡಿವೆ. 'ದಿ ಸ್ಟೋರಿ ಆಫ್ ಡೆಕ್ಕನ್ ಹೆರಾಲ್ಡ್' ಲೇಖನ, ಪ್ರಥಮ ಸಂಪಾದಕ ಸ್ಕಾಟ್ ಅವರ ಬರಹ, ಸಂಪಾದಕೀಯದ ಮಾದರಿ, 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಪತ್ರಿಕೆಗಳ ಮುಖಪುಟಗಳ ಚಿತ್ರಗಳು ಆ ಕಾಲದ ಸುದ್ದಿ ಪ್ರಾಶಸ್ತ್ಯ, ಪುಟ ವಿನ್ಯಾಸ ಮೊದಲಾದುವುಗಳನ್ನು ಪರಿಚಯಿಸಿರುವುದರಲ್ಲಿ ಇವತ್ತಿನ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ನೋಟಗಳಿವೆ. ಇಲ್ಲಿನ ಚಿತ್ರಗಳ ಆಯ್ಕೆಯಲ್ಲೂ ಹರಿ ಕುಮಾರ್ ಅವರ ರಸಾಭಿಜ್ಞತೆ ಮತ್ತು ಸೌದರ್ಯಾಭಿಜ್ಞತೆಗಳು ನಮ್ಮನ್ನು ಚಕಿತಗೊಳಿಸುತ್ತವೆ.

ಸಾಮಾನ್ಯವಾಗಿ ಜೀವನ ಚರಿತ್ರೆಗಳೆಂದರೆ, ಅದರಲ್ಲೂ ಬಂಧುಬಾಂಧವರ ಜೀವನ ಚರಿತ್ರೆಗಳೆಂದರೆ ಹೊಗಳಿಕೆ, ಪ್ರಶಂಸೆಗಳು ಪ್ರಾಧಾನ್ಯ ಪಡೆದು ವರ್ಣರಂಜಿತವಾಗಿ ವಸ್ತುನಿಷ್ಠತೆ ಹಿಂದೆ ಬೀಳುತ್ತದೆ. 'ಅವರು ನಮಗೆ ಗೊತ್ತಿರುವವರು' ಎಂಬ ಶೈಲಿಯಲ್ಲಿ ಬರೆಯುವ ವಿಧಾನವನ್ನು ನಾವು ಕಾಣುತ್ತೇವೆ. ಹರಿ ಕುಮಾರ್ ತಮ್ಮ ಅಜ್ಜ-ಅಜ್ಜಿಯವರ ಜೀವನ ಚರಿತ್ರೆ ಬರೆಯುವಾಗ ಈ ವಿಧಾನ ಅನುಸರಿಸಿಲ್ಲ. ಬಣ್ಣ ಕಟ್ಟದೆ ಕಪ್ಪು-ಬಿಳುಪಿನಲ್ಲಿ ಅವರನ್ನು ಕಂಡು ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಗ್ರಂಥವೂ ಕಪ್ಪು ಬಿಳುಪಿನಲ್ಲೇ ಪ್ರಕಟವಾಗಿರುವುದು ಅರ್ಥಪೂರ್ಣ. ನಿರೂಪಣೆ, ಪುಸ್ತಕದ ಮುಖಪುಟ ಮತ್ತು ಒಳ ಪುಟಗಳ, ಚಿತ್ರಗಳ ವಿನ್ಯಾಸ ಮತ್ತು ಮುದ್ರಣ, ಘನತೆವೆತ್ತ ಗುರುಸ್ವಾಮಿಯವರ ಬದುಕು ಓದುಗರಲ್ಲಿ ಪ್ರಭಾವ ಬೀರುವಷ್ಟು ಆಪ್ತತೆ ಮೂಡಿಸುತ್ತವೆ. 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಈ ವರ್ಷದಲ್ಲಿ ಹರಿಕುಮಾರ್ ಅವರು ಇಂಥದೊಂದು ಅಮೂಲ್ಯವಾದ ಕೊಡುಗೆಯನ್ನು ಕನ್ನಡಿಗರಿಗೆ ಕೊಟ್ಟಿರುವುದು ಸ್ತುತ್ಯರ್ಹವಾದುದು. ❖

'ಕಥಾಗುಚ್ಛ'ದ ಕ್ರಿಯಾಶೀಲರು

ಜಾಲತಾಣದ ಬೆಳ್ಳಿಮಿಂಚು 'ಕಥಾಗುಚ್ಛ'

ಪಟ್ನಂ ಅನಂತಪದ್ಮನಾಭ

ಸಾಮಾಜಿಕ ಜಾಲತಾಣಗಳ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಕೆಲವರು ಅವುಗಳ ಬಗ್ಗೆ ಒಲವನ್ನು ತೋರಿದರೆ ಮತ್ತೆ ಕೆಲವರು ಅವು ಕೆಲಸಕ್ಕೆ ಬಾರದವು ಎಂಬ ಅಸಡ್ಡೆ ತೋರುತ್ತಾರೆ. ಈ ಸಾಮಾಜಿಕ ಜಾಲತಾಣದಿಂದಲೇ ಸದ್ದಿಲ್ಲದೇ ಕನ್ನಡ ಸಾಹಿತ್ಯ ಸೇವೆಯನ್ನು ಅಭೂತಪೂರ್ವವಾಗಿ ಮಾಡಬಹುದು ಎಂಬುದನ್ನು ಕನ್ನಡ 'ಕಥಾಗುಚ್ಛ' (ಬರಹಗಳ ಕೈಪಿಡಿ) ತೋರಿಸಿಕೊಟ್ಟಿದೆ.

ಇದೊಂದು ಫೇಸ್ಬುಕ್ ಗುಂಪು. ಈ ಗುಂಪಿನ ಸದಸ್ಯರ ಸಂಖ್ಯೆ 60 ಸಾವಿರದ ಗಡಿಯಲ್ಲಿದೆ! ಹೆಸರು 'ಕಥಾಗುಚ್ಛ' ಎಂದಿದ್ದರೂ ಇದು ಕೇವಲ ಕಥೆಗಳಿಗೆ ಸೀಮಿತವಾಗಿಲ್ಲ. ಇದರಲ್ಲಿ ಸಾಹಿತ್ಯ ಪ್ರಾಕಾರದ ಎಲ್ಲವೂ ಇದೆ. ಕಥೆ, ಕವನ, ಧಾರಾವಾಹಿ, ಪ್ರವಾಸ ಕಥನ ಮುಂತಾದವುಗಳು ಇವೆ.

ಇಲ್ಲಿನ ವಿಶೇಷವೆಂದರೆ, ವಾರದ ಎಲ್ಲಾ ದಿನಗಳಲ್ಲಿ ಒಂದೊಂದು ಪ್ರಕಾರಕ್ಕೆ ಒತ್ತುಕೊಡುವುದು. ಸೋಮವಾರ 'ವಾರದ ವಿಶೇಷ' ವಿಷಯವೊಂದನ್ನು ನೀಡಲಾಗುತ್ತದೆ. ಅದಕ್ಕೆ ಅನುಗುಣವಾಗಿ ಬರಹ, ಕತೆ ಬರೆಯಬಹುದು. ಮಂಗಳವಾರ 'ನನ್ನಿಷ್ಟದ ಬರಹ' ಕಳುಹಿಸಲು ಅವಕಾಶ. ಬುಧವಾರ ಶೀರ್ಷಿಕೆಯೊಂದನ್ನು ನೀಡಲಾಗುತ್ತದೆ. ಅದಕ್ಕೆ ಪೂರಕವಾಗಿ ಕಥೆಯನ್ನು ಹೆಣೆಯಬೇಕು. ಗುರುವಾರ ಅಪೂರ್ಣ ಕತೆಯನ್ನು ಪೂರ್ಣಗೊಳಿಸುವವರಿಗೆ ಮುಕ್ತ ಅವಕಾಶ. ಶುಕ್ರವಾರ ಕೂಡ 'ನನ್ನಿಷ್ಟದ ಬರಹ' ಕಳುಹಿಸಲು ಅವಕಾಶ. ಶನಿವಾರ ತುಣುಕು ಮಿಣುಕು, ನ್ಯಾನೋ ಕಥೆ ಬರೆಯಬಹುದು. ಭಾನುವಾರ ಪದಬಂಧಕ್ಕೆ ಮೀಸಲು. ಭಾನುವಾರವೇ ಮುದ್ದುರಾಮನ ಚೌಪದಿಯ ಕಥಾ ಅಭಿಯಾನಕ್ಕೆ ಮುಕ್ತಕವನ್ನು ನೀಡಲಾಗುತ್ತದೆ. ಅದನ್ನು ಕೆ.ಸಿ.ಶಿವಪ್ಪ ಅವರ 'ಮುದ್ದುರಾಮನ ಮನಸು' ಇಂದ ಆಯ್ದುಕೊಳ್ಳಲಾಗುತ್ತದೆ. ಮುಕ್ತಕದ ಭಾವಾರ್ಥಕ್ಕೆ ಸರಿಹೊಂದುವ ಕಥೆಯನ್ನು ರಚಿಸಲು ಅವಕಾಶ ನೀಡಲಾಗುತ್ತದೆ.

ಚಿತ್ರವೊಂದನ್ನು ನೀಡಿ ಅದಕ್ಕೆ ಅನುಗುಣವಾಗಿ ಕವನ ರಚಿಸಲು ಕವಿತಾಪ್ರಿಯರಿಗೆ ಅವಕಾಶ ಕೊಡುತ್ತಾರೆ. ಅಲ್ಲದೇ ಆಗಿಂದಾಗ್ಗೆ 'ಕವನ ಸ್ಪರ್ಧೆ'ಯನ್ನು ಹಮ್ಮಿಕೊಂಡು ಕವನಪ್ರಿಯರ ಕವನಗಳ ರಚನೆಗೆ ಸದವಕಾಶ, ಇದೇ ರೀತಿ 'ಕಥಾ ಸ್ಪರ್ಧೆ' ನಡೆಸಿ ವಿಜೇತರಿಗೆ ಬಹುಮಾನ ನೀಡಲಾಗುತ್ತದೆ.

ಕಥಾಗುಚ್ಛದ 'ಚಿಂತನ ಮಂಥನ' ಅಂಕಣ ಆಸಕ್ತಿಕರ. ಪ್ರಬುದ್ಧ ಬರಹಗಾರರ ತಂಡವೊಂದನ್ನು ರಚಿಸಲಾಗುತ್ತದೆ. ತಂಡದ ಪ್ರತಿಯೊಬ್ಬ ಬರಹಗಾರ ಹದಿನೈದು ದಿನಗಳಿಗೊಮ್ಮೆ ಒಂದು ವಿಷಯದ ಬಗ್ಗೆ ಬರೆಯುವುದು ಹಾಗೂ ಅದೇ ವಿಷಯವನ್ನು ಅಂಕಣದ ರೀತಿಯಲ್ಲಿ ಮುಂದುವರೆಸುವುದೇ ಈ ಅಂಕಣ. ಇದರಲ್ಲಿ ಸೀರೆಯ ಕುರಿತ ಬರಹವೂ ಇದ್ದುದು ವಿಷಯ ವೈವಿಧ್ಯಕ್ಕೆ ಉದಾಹರಣೆ.

> ಸಮಾನಮನಸ್ಕರ ಬರಹದ ತುಡಿತ 'ಕಥಾಗುಚ್ಛ' ಎನ್ನುವ ಆನ್‌ಲೈನ್ ವೇದಿಕೆ ಹುಟ್ಟಿಗೆ ಕಾರಣವಾಯಿತು. ಇಲ್ಲಿನ ಸೃಜನಶೀಲರೆಲ್ಲ ಈಗ ಐದನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿದ್ದಾರೆ.

ಸದಸ್ಯರೇ ಬರಹಗಾರರಿಗೆ ಪ್ರೋತ್ಸಾಹ ನೀಡುವ ಕ್ರಮ ಇಲ್ಲಿನ ವಿಶೇಷ. ಮಕ್ಕಳ-ಮೊಮ್ಮಕ್ಕಳ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ ಇದ್ದಾಗ ನಗದು, ಪುಸ್ತಕ, ಪ್ರಶಸ್ತಿಪತ್ರ ಮುಂತಾದವುಗಳನ್ನು ಪ್ರಾಯೋಜಿಸುತ್ತಾರೆ. ಪ್ರತಿ ವರ್ಷ ನವೆಂಬರ್ ತಿಂಗಳು ಪೂರ್ತಿ ಪ್ರತಿದಿನ 'ಕನ್ನಡದ ತೇರು' ಎಂಬ ಹೆಸರಿನಲ್ಲಿ ಪುಸ್ತಕವನ್ನು ಬಹುಮಾನವಾಗಿ ಕೊಡುವ ಪ್ರಾಯೋಜಕರೂ ಇಲ್ಲಿದ್ದಾರೆ.

ಕ್ಲಬ್ ಹೌಸ್: ಪ್ರತಿ ಭಾನುವಾರ ಸಂಜೆ 6ರಿಂದ 7ರವರೆಗೆ ನಡೆಯುವ ಸಾಹಿತ್ಯ ಸಂಜೆಯಲ್ಲಿ ಸದಸ್ಯರು ತಾವೇ ಬರೆದ ಕತೆ ಅಥವಾ ಮತ್ತೊಬ್ಬರ ಕತೆಯನ್ನು ವಾಚಿಸಬಹುದು. ಸದಸ್ಯರು ವಾಚನ ಮತ್ತು ಕತೆಯ ಬಗ್ಗೆ ವಿಮರ್ಶಿಸಿ ಮಾತನಾಡಲು, ತಮ್ಮ ಅನಿಸಿಕೆ ತಿಳಿಸಲು ಅವಕಾಶವಿದೆ. ಕ್ಲಬ್ ಹೌಸ್‌ನಲ್ಲಿ ಇತ್ತೀಚೆಗೆ 'ಪುಸ್ತಕ ಪರಿಚಯ' ಕಾರ್ಯಕ್ರಮ ಆರಂಭಿಸಲಾಗಿದೆ. ಪ್ರತಿ ಬುಧವಾರ ಪುಸ್ತಕ ಬರೆದವರಿಗಾಗಿ ಅದನ್ನು ಪರಿಚಯಿಸುವ ಹಾಗೂ ಶ್ರೋತೃಗಳ ಜೊತೆ ಅದರ ಬಗ್ಗೆ ಸಂಭಾಷಿಸುವ ಅವಕಾಶವಿದೆ.

ಸಾಹಿತ್ಯದ ಬಗ್ಗೆ ಅಮಿತಾಸಕ್ತಿ ಹೊಂದಿರುವ ಲತಾ ಜೋಶಿ ಅವರಿಗೆ ಎಷ್ಟು ಓದಿದರೂ ಸಾಕಾಗುತ್ತಿರಲಿಲ್ಲ. ಏನಾದರೂ ಮಾಡಬೇಕು ಎಂದುಕೊಂಡು ಗೆಳತಿ ಸುಮಾ ಕಳಸಾಪುರ ಅವರ ಜೊತೆ ಚರ್ಚಿಸಿದ್ದರ ಪರಿಣಾಮವೇ ಕನ್ನಡ ಕಥಾಗುಚ್ಛದ ಹುಟ್ಟು. ಐದು ವರ್ಷಗಳಲ್ಲಿ 60 ಸಾವಿರ ಸದಸ್ಯರನ್ನು ಹೊಂದಿರುವುದು ವಿಶೇಷ. ಈ ಗುಂಪಿಗೊಂದು ಸುಂದರವಾದ ಲೋಗೋ ಅನ್ನು ಲತಾ ಜೋಶಿ ಅವರ ಪುತ್ರಿ ರಚಿಸಿಕೊಟ್ಟಿದ್ದಾರೆ.

ಲತಾ ಜೋಶಿ, ಸುಮಾ ಕಳಸಾಪುರ ಸೇರಿ ಒಂದು ಡಜನ್ ನಿರ್ವಾಹಕಿಯರು ಈ ಗುಂಪಿನಲ್ಲಿದ್ದಾರೆ. ಬರಹಗಳ ಉಸ್ತುವಾರಿಯನ್ನು ನಿರ್ವಾಹಕಿಯರು ನೋಡಿಕೊಂಡರೆ ನವ(ಒಂಬತ್ತು) ಪುರುಷ ಸಂಘಟಕರು ಕಥಾಗುಚ್ಛ ನಡೆಸುವ ಕಾರ್ಯಕ್ರಮಗಳಲ್ಲಿ ಶ್ರದ್ಧೆಯಿಂದ ಸೇವೆ ಸಲ್ಲಿಸುತ್ತಾರೆ.

ಸಾಹಿತ್ಯದ ಆಚೆ : ಲಾಕ್ಡೌನ್ ಸಮಯದಲ್ಲಿ ಸದಸ್ಯರೊಬ್ಬರು ತಮ್ಮ ತಾಯಿ ಹಾಡಿದ 'ಹೋಗಿ ಬಾರಮ್ಮ ಗಂಡನ ಮನೆಗೆ' ಜನಪದ ಹಾಡನ್ನು ಜನರ ಮನರಂಜನೆ ಮತ್ತು ತಮ್ಮ ಖುಷಿಗಾಗಿ ಕಥಾಗುಚ್ಛದಲ್ಲಿ ಹಂಚಿಕೊಂಡಿದ್ದರು. ಇದನ್ನು ಸಹಸ್ರಾರು ಸದಸ್ಯರು ಮೆಚ್ಚಿದರು. ಸದಸ್ಯರೊಬ್ಬರು ₹5000 ಗೌರವಧನ ನೀಡುವ ಮೂಲಕ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದರು. ತೀರಾ ತುರ್ತಿನ ಅಗತ್ಯವಿದ್ದ ಸಮಯವದು. ದಿನಸಿಗಾಗಿ ಅದನ್ನು ಅವರು ಬಳಸಿಕೊಂಡಿದ್ದರು. ಕಳೆದ ವರ್ಷದ ರಾಜ್ಯೋತ್ಸವ ಪ್ರಶಸ್ತಿಯನ್ನು ರಾಯಚೂರು ಜಿಲ್ಲೆಯ ಬುರ್ರಕಥಾ ಕಮಲಮ್ಮ ಪಡೆದರು. ಮೇಲೆ ತಿಳಿಸಿದ ವ್ಯಕ್ತಿ ಅವರೇ. ಕಥಾಗುಚ್ಛ ಹಲವಾರು ಪುಸ್ತಕಗಳನ್ನು ಕೂಡ ಹೊರತಂದಿದೆ.

ಮುಖಾಮುಖಿ: ಫೇಸ್ಬುಕ್ ಮೂಲಕ ಪರಿಚಯವಾಗಿ ಆತ್ಮೀಯರಾದವರು ಮುಖಾಮುಖಿಯಾದರೆ ಹೇಗೆ ಎಂಬ ಚಿಂತನೆ ನಡೆಸಿದ ಕೆಲವು ಸದಸ್ಯರು, ಮೊದಲ ಬಾರಿ ಬೆಂಗಳೂರಿನ ರಾಮಾಂಜನೇಯ ಗುಡ್ಡದಲ್ಲಿ ಸೇರಿ ಸಂಭ್ರಮಿಸಿದರು.

ಆನಂತರ ನಿಯಮಿತವಾಗಿ ವಾರ್ಷಿಕೋತ್ಸವ ಮತ್ತು ಸ್ನೇಹ ಕೂಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಆತ್ಮೀಯ ಬಂಧುಗಳಿಗಿಂತ ಮಿಗಿಲಾಗಿ ಸದಸ್ಯರು ಭಾಗಿಯಾಗುತ್ತಿದ್ದಾರೆ. ಒಂದೇ ಕಾರ್ಯಕ್ರಮದ ಬಗ್ಗೆ ವಿಭಿನ್ನವಾಗಿ ನೂರಾರು ಕೋನಗಳಿಂದ ಆಲೋಚಿಸಿ ನೂರಾರು ಬರಹಗಳನ್ನು ಸೃಷ್ಟಿಸುತ್ತಾರೆ.

ವಾರ್ಷಿಕೋತ್ಸವಗಳು ಧಾರವಾಡ, ಬೆಂಗಳೂರು, ಚಿತ್ರದುರ್ಗದಲ್ಲಿ ನಡೆದರೆ, ಕುಪ್ಪಳ್ಳಿ, ಮೈಸೂರು, ಪುತ್ತೂರು, ಹಾಸನದ ಪುಷ್ಪಗಿರಿಯಲ್ಲಿ ಸ್ನೇಹ ಕೂಟಗಳು ನಡೆದಿವೆ.

(ಇಂದು, ಜುಲೈ 2ರ ಭಾನುವಾರ ಹಂಪಿನಗರ ಪಶ್ಚಿಮ ವಲಯದ ಕೇಂದ್ರ ಗ್ರಂಥಾಲಯದಲ್ಲಿ ಕಥಾಗುಚ್ಛದ ಐದನೇ ವಾರ್ಷಿಕೋತ್ಸವ ನಡೆಯಲಿದೆ) ❖

ಮೊದಲ ಓದು

ಕೌಟುಂಬಿಕ ವ್ಯಾಜ್ಯಗಳ ಬೇರಿಗೆ ಬೆಳಕು

ವಕೀಲ ವೃಂದದಲ್ಲಿ ಮಹಿಳೆಯರ ಸಂಖ್ಯೆ ಯಾವತ್ತೂ ಕಡಿಮೆಯೇ. ಅದರಲ್ಲೂ ವಕೀಲಿಕೆಯ ಕುರಿತು ಸಾಹಿತ್ಯ ಕೃಷಿ ಮಾಡುವ ವಕೀಲರಂತೂ ಇನ್ನೂ ವಿರಳ. ಈ ಮಾತಿಗೆ ಅಪವಾದ ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲೆ ಎಸ್. ಸುಶೀಲ ಚಿಂತಾಮಣಿ. ಅವರ ಇತ್ತೀಚಿನ ಕೃತಿ, 'ವಿವಾಹ ಒಂದು ಚಿಂತನ' ಈಗ ಮಾರುಕಟ್ಟೆಯಲ್ಲಿದೆ. ಪುಸ್ತಕದ ಹೆಸರೇ ಸೂಚಿಸುವಂತೆ, ಇದೊಂದು ಕೌಟುಂಬಿಕ ವ್ಯಾಜ್ಯಗಳ ಉದ್ಭವಕ್ಕೆ ಕಾರಣವೇನು ಎಂಬುದನ್ನು ಬಿಡಿಸಿಡುವ ಪ್ರಯತ್ನದ ಅಪರೂಪದ ಕೃತಿ. ಸಾಮಾನ್ಯವಾಗಿ ದಂಪತಿಗಳು ಇಂದಿನ ದಿನಮಾನಗಳಲ್ಲಿ ಒತ್ತಡದ ನೊಗವನ್ನೆಳೆಯುತ್ತಲೇ ಪರಸ್ಪರರ ಮಧ್ಯೆ ಹೇಗೆ ಭಿನ್ನವಾಗುತ್ತಾ ಸಂಘರ್ಷದ ಹಾದಿ ತುಳಿಯುತ್ತಾರೆ ಎಂಬುದನ್ನು ಲೇಖಕಿ ಅತ್ಯಂತ ಸರಳ ಮತ್ತು ಆಪ್ತ ಬಾಷೆಯ ಶೈಲಿಯಲ್ಲಿ ಹಿಡಿದಿಟ್ಟಿದ್ದಾರೆ. 50ಕ್ಕೂ ಹೆಚ್ಚು ಬಿಡಿ ಲೇಖನಗಳ ಈ ಹೊತ್ತಗೆ ಎಲ್ಲ ವರ್ಗದ ಓದುಗರಿಗೂ ಇಷ್ಟವಾಗಬಲ್ಲದು. ಗಾಢವಾದ ಇಚ್ಛಾಶಕ್ತಿಯಿಂದ ಸಂಗಾತಿಯ ಬೇಕು–ಬೇಡಗಳನ್ನು ಗುರುತಿಸಿ ಅರ್ಥಮಾಡಿಕೊಂಡಲ್ಲಿ ದಾಂಪತ್ಯದ ಸೊಗಸನ್ನು ಸವಿಯಬಹುದು ಎಂದು ಹೇಳುತ್ತಲೇ ಅನಿವಾರ್ಯ ಸಂದರ್ಭಗಳಲ್ಲಿ ಪತಿ ಅಥವಾ ಪತ್ನಿ ಮನಸ್ತಾಪಗಳನ್ನು ಪರಿಹರಿಸಿಕೊಳ್ಳಲು ಕಂಡುಕೊಳ್ಳಬಹುದಾದ ಸಕಾರಾತ್ಮಕ ಮಾರ್ಗಗಳೇನು ಎಂಬುದನ್ನು ಪುಸ್ತಕ ನಮಗೆ ದರ್ಶನ ಮಾಡಿಸುತ್ತದೆ. ಲೇಖಕಿ ಮೂಲತಃ ಸಮಾಜಶಾಸ್ತ್ರದ ವಿದ್ಯಾರ್ಥಿನಿ ಆಗಿರುವ ಕಾರಣದಿಂದ ಕೆಲವು ಅಧ್ಯಾಯಗಳಲ್ಲಿ ಬರವಣಿಗೆ ಮನುಷ್ಯ ಸ್ವಭಾವಗಳು ಮತ್ತು ಗುಣಗಳನ್ನು ವಿಶೇಷ ನೋಟದ ಮೂಲಕ ತೆರೆದಿಡುತ್ತದೆ.



ಪು: 320
₹350

ವಿವಾಹ ಒಂದು ಚಿಂತನ
ಲೇ: ಎಸ್.ಸುಶೀಲ ಚಿಂತಾಮಣಿ
ಪ್ರ: ವಿಕಾಸ ಪ್ರಕಾಶನ, ಬೆಂಗಳೂರು
ಸಂ: 99000-95204

ಬ್ರಿಟಿಷ್ ಸಾಮ್ರಾಜ್ಯದ 'ಕಗ್ಗತ್ತಲ ಕಾಲ'

'**ಭಾರತದಲ್ಲಿನ** 200 ವರ್ಷಗಳ ಸಾಮ್ರಾಜ್ಯಶಾಹಿ ಆಡಳಿತದ ಸಂಕೇತವಾಗಿ ಭಾರತಕ್ಕೆ ವರ್ಷವೊಂದಕ್ಕೆ ಒಂದು ಪೌಂಡ್‌ನಂತೆ 200 ವರ್ಷಗಳವರೆಗೆ ಪ್ರಾಯಶ್ಚಿತ್ತದ ರೂಪದಲ್ಲಿ ಬ್ರಿಟನ್ ಋಣ ಸಂದಾಯ ಮಾಡಬೇಕು' ಎಂದು ಲೇಖಕ ಡಾ. ಶಶಿ ತರೂರ್ ಅವರು 2015ರಲ್ಲಿ ಆಕ್ಸ್‌ಫರ್ಡ್ ಯೂನಿಯನ್‌ನಲ್ಲಿ ಮಾಡಿದ ಭಾಷಣ ಸಾಕಷ್ಟು ಚರ್ಚೆ ಹುಟ್ಟುಹಾಕಿತ್ತು.

ಅಂತರ್ಜಾಲದಲ್ಲಿ ಹಲವು ಲಕ್ಷ ವೀಕ್ಷಣೆ ಕಂಡ ಈ ಭಾಷಣವನ್ನು ನಂತರ ಡಾ. ತರೂರ್ ಅವರು ಪುಸ್ತಕ ರೂಪಕ್ಕೆ ತರಲು ನಿರ್ಧರಿಸಿದರು. 'ಆನ್ ಎರಾ ಆಫ್ ಡಾರ್ಕ್‌ನೆಸ್ – ಬ್ರಿಟಿಷ್ ಎಂಪೈರ್ ಇನ್ ಇಂಡಿಯಾ' ಎಂಬ ಕೃತಿಯನ್ನು 2016ರಲ್ಲಿ ಪ್ರಕಟಿಸಿದರು. ಇದೇ ಕೃತಿಗೆ 2019ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿತು. ಈ ಕೃತಿಯನ್ನು ಕನ್ನಡಕ್ಕೆ ಎಸ್.ಬಿ.ರಂಗನಾಥ್ ಅವರು ಅನುವಾದಿಸಿದ್ದಾರೆ. ಅದಕ್ಕೆ 'ಕಗ್ಗತ್ತಲ ಕಾಲ' ಎಂಬ ಶೀರ್ಷಿಕೆ ನೀಡಲಾಗಿದೆ.

ರೇಷ್ಮೆ, ಸಂಬಾರ ಪದಾರ್ಥಗಳ ವ್ಯಾಪಾರಕ್ಕೆಂದು 1600ರಲ್ಲಿ ಭಾರತಕ್ಕೆ ಬಂದ ಈಸ್ಟ್ ಇಂಡಿಯಾ ಕಂಪನಿ, ಷಡ್ಯಂತ್ರಗಳಿಂದ ಬಲಾಢ್ಯ ಶಕ್ತಿಯಾಗಿ ಬೆಳೆದ ಘಟನೆಯಿಂದ ಹಿಡಿದು, ಸ್ವಾತಂತ್ರ್ಯಾ ನಂತರದ ಸ್ಥಿತಿಯನ್ನೂ ಈ ಕೃತಿ ಹೇಳುತ್ತದೆ. ಭಾರತವನ್ನು ಗೆದ್ದುಕೊಂಡ ಒಂದು ಕಾರ್ಪೋರೇಷನ್‌ನಿಂದ ಭಾರತದ ಕೈಗಾರಿಕೆಗಳು ಹಾಗೂ ಜವಳಿ ಉದ್ಯಮ ನಾಶವಾದ ಬಗೆಯಿಂದ ಹಿಡಿದು ಕೈಗಾರಿಕಾ ಕ್ರಾಂತಿ ತಪ್ಪಿಸಿಕೊಂಡ ಭಾರತದಂತಹ ವಿಷಯಗಳನ್ನೂ ಕೃತಿ ಪ್ರಸ್ತಾಪಿಸಿದೆ. ಪಾಶ್ಚಿಮಾತ್ಯ ಆಲೋಚನೆಗಳು ಇಲ್ಲಿನ ಜಾತಿ ಮತ್ತು ಶಿಕ್ಷಣ ವ್ಯವಸ್ಥೆ ಮೇಲೆ ಬೀರಿರುವ ಪರಿಣಾಮಗಳ ಕುರಿತು ಡಾ. ತರೂರ್ ಚರ್ಚಿಸಿದ್ದಾರೆ.

ಇವುಗಳೊಂದಿಗೆ ಬ್ರಿಟಿಷರು ಭಾರತಕ್ಕೆ ರಾಜಕೀಯ ಒಗ್ಗಟ್ಟು ಕೊಟ್ಟರೇ? ಪ್ರಜಾಪ್ರಭುತ್ವ, ಮುದ್ರಣ ಮಾಧ್ಯಮ, ಸಂಸದೀಯ ವ್ಯವಸ್ಥೆ ಮತ್ತು ಕಾನೂನುಬದ್ಧ ಆಡಳಿತ ನೀಡಿದರೇ? ಅವರ ಬ್ರಿಟಿಷರ ಒಡೆದು ಆಳುವ ನೀತಿ ಹೇಗಿತ್ತು? ಅಂತಿಮವಾಗಿ ಸಾಮ್ರಾಜ್ಯಕ್ಕೆ ಉಳಿದದ್ದು ಏನು? ಎಂಬುದಕ್ಕೆ ಉತ್ತರ ಹುಡುಕುವ ಪ್ರಯತ್ನವನ್ನು ಈ ಕೃತಿ ಮಾಡುತ್ತದೆ. ಅನುವಾದಕರೇ ಹೇಳುವಂತೆ ಮೂಲ ಕೃತಿಯಲ್ಲಿ ಡಾ. ಶಶಿ ತರೂರ್ ಅವರ ಭಾಷಾ ಪಾಂಡಿತ್ಯವನ್ನು ಅರ್ಥಕೋಶದ ನೆರವಿನಿಂದಲೇ ಅರ್ಥ ಮಾಡಿಕೊಳ್ಳಬೇಕು. ದೀರ್ಘವಾದ ಬರವಣಿಗೆ ಹಾಗೂ ಧಾರಾಳವಾಗಿದ್ದ ಕಠಿಣ ಶಬ್ದ ಸಂಪತ್ತುಗಳನ್ನು ಎಸ್.ಬಿ.ರಂಗನಾಥ್ ಅವರು ಸರಳಗೊಳಿಸುವ ಪ್ರಯತ್ನವನ್ನು 'ಕಗ್ಗತ್ತಲ ಕಾಲ'ದಲ್ಲಿ ಮಾಡಿದ್ದಾರೆ.

ಪು: 340
₹320

ಕಗ್ಗತ್ತಲ ಕಾಲ
ಲೇ: ಡಾ. ಶಶಿ ತರೂರ್ (ಅನುವಾದ: ಎಸ್.ಬಿ.ರಂಗನಾಥ್)
ಪ್ರ: ಸಾಹಿತ್ಯ ಅಕಾಡೆಮಿ, ದೆಹಲಿ
ಸಂ: 011-23386626/27/28

'ಗಾಡ್‌ಫಾದರ್'ನ ರೋಚಕ ಕಥನ

ಅಮೆರಿಕದ ಕ್ರೈಂ ಥ್ರಿಲ್ಲರ್ ಕಾದಂಬರಿಕಾರ ಪೂಜೋ ಅವರ 'ಗಾಡ್‌ಫಾದರ್' ಜನಪ್ರಿಯವಾಗಿತ್ತು. ನಂತರ ಸಿನಿಮಾ ಆಗಿ ವಿಶ್ವವ್ಯಾಪಿ ಮನ್ನಣೆ ಪಡೆಯಿತು. 'ಗಾಡ್‌ಫಾದರ್' ಯಶಸ್ಸಿನ ಬಳಿಕ ಅದರ ಮುಂದುವರಿದ ಕಥೆಗಳು ಹಲವು ಭಾಗಗಳಲ್ಲಿ ತೆರೆಕಂಡವು. ಅಂತಹ ಜನಪ್ರಿಯ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ ಡಾ.ನೇಸರ ಕಾಡನಕುಪ್ಪೆ.

'ಅಮೆರಿಕದ ನ್ಯೂಯಾರ್ಕ್ ನಗರದಲ್ಲಿನ ಇಟಲಿಯ ಮಾಫಿಯಾ ಕುಟುಂಬದವರ ಜೀವನದ ಸುತ್ತ ಹೆಣೆದ ಕಾಲ್ಪನಿಕ ಕಥೆ ಒಳಗೊಂಡ ಕೃತಿಯಿದು. ಡ್ರಗ್ಸ್, ಕೊಲೆ, ಸುಲಿಗೆ, ಬಂದೂಕಿನಂತಹ ಭೂಗತ ಚಟುವಟಿಕೆಗಳನ್ನು ಚಿತ್ರಿಸಿರುವ ಗಾಡ್‌ಫಾದರ್ ಚಲನಚಿತ್ರವಾಗಿ 1970ರ ದಶಕದಲ್ಲಿ ಅದ್ಭುತ ಯಶಸ್ಸು ಕಂಡಿತು. ಫ್ರಾನ್ಸಿಸ್ ಫೋರ್ಡ್ ಕೋಪ್ಪಾಲಾನ ಅತ್ಯಂತ ಶ್ರೇಷ್ಠ ಚಿತ್ರ. ಇಂತಹ ಕೃತಿಯನ್ನು ಬಹಳ ಪ್ರಬುದ್ಧವಾಗಿ ಅನುವಾದಿಸಿದ್ದಾರೆ ನೇಸರ' ಎಂದು ಬೆನ್ನುಡಿಯಲ್ಲಿ ಪ್ರೊ.ಎನ್.ಉಷಾರಾಣಿ ಬರೆದಿದ್ದಾರೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ಅನುವಾದ ಕಾರ್ಯಕ್ಕೆ ಸ್ಫೂರ್ತಿ ಎಂದಿರುವ ನೇಸರ, 'ಗಾಡ್‌ಫಾದರ್'ನಂತಹ ಸಂಕೀರ್ಣವಾದ ಕಾದಂಬರಿಯನ್ನು ಬಹಳ ಸರಳವಾಗಿ ಕನ್ನಡಿಗರಿಗೆ ಅರ್ಥಮಾಡಿಸುವ ಯತ್ನ ಮಾಡಿದ್ದಾರೆ. ಪಾತ್ರಗಳ ಹೆಸರುಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ಘಟನೆಗಳು ನಮ್ಮ ನೆಲದಲ್ಲಿಯೇ ನಡೆದಿವೆ ಎನ್ನುವಷ್ಟು ಭಾಷಾಂತರ ಸೊಗಸಾಗಿದೆ. ಕಾದಂಬರಿಗೆ ತಕ್ಕಂತೆ ಕಥನ ಶೈಲಿಯನ್ನು ರೋಚಕವಾಗಿಸಿದ್ದಾರೆ. ಇಲ್ಲಿನ ಪಾತ್ರಗಳ ವಿವರಣೆ ರಾಜಾ ಚೆಂಡೂರ್ ಅನುವಾದದ ಯಂಡಮೂರಿಯವರ ಥ್ರಿಲ್ಲರ್ ಕಾದಂಬರಿಗಳನ್ನು ಮತ್ತೆ ನೆನಪಿಸುತ್ತದೆ.



ಪು: 240
₹250

ಗಾಡ್‌ಫಾದರ್–1
ಮೂಲ:ಮಾರಿಯೋ ಪೂಜೋ
ಕನ್ನಡಕ್ಕೆ: ಡಾ.ನೇಸರ ಕಾಡನಕುಪ್ಪೆ
ಪ್ರ: ಸಂವಹನ, ಮೈಸೂರು
ಸಂ:9844206083

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಸಂತೆಬೆನ್ನೂರು ಫೈಜ್ನಟ್ರಾಜ್ ಅವರ
ಗೆದ್ದಲ ಮನೆಯಲ್ಲಿ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

'ಪ್ರಜಾವಾಣಿ@75', 'ವೀರಲೋಕ' ಪ್ರಕಾಶನದ ಸಹಯೋಗದಲ್ಲಿ ಆಯೋಜಿಸಿದ್ದ 'ಕಾವ್ಯ ಸಂಕ್ರಾಂತಿ-2023'ರ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಕವನ
ಕವನ
ದೀಪಾ ಹಿರೇಗುತ್ತಿ ಅವರ
ಆಕ್ರಮಣ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಊಟಿಯಲ್ಲೊಂದು ಬ್ಯೂಟಿಫುಲ್ ಚರ್ಚ್



ಮದ್ರಾಸ್ ರೆಜಿಮೆಂಟಿನ ಕ್ಯಾಪ್ಟನ್ ಜಾನ್ ಜೇಮ್ಸ್ ಅಂಡರ್‌ವುಡ್ (ಜೆ.ಜೆ. ಅಂಡರ್‌ವುಡ್) ವಾಸ್ತುಶಿಲ್ಪದಲ್ಲಿ ಪುಟ್ಟ ಗುಡ್ಡದ ಮೇಲೆ 193 ವರ್ಷಗಳಷ್ಟು ಹಿಂದೆಯೇ ತಲೆಯೆತ್ತಿದ್ದು ಸೇಂಟ್ ಸ್ಟೀಫನ್ಸ್ ಚರ್ಚ್. ಊಟಿಯ ಈ ಪ್ರಮುಖ ಪಾರಂಪರಿಕ ಕಟ್ಟಡದ ಒಳ-ಹೊರಗು ಚಿತ್ತಾಕರ್ಷಕ.



ಚರ್ಚ್‌ನ ಕಿಟಕಿ ಗಾಜಿನ ಮೇಲಿನ ಆಕರ್ಷಕ ವರ್ಣಚಿತ್ರ

ಬಿ.ಎಂ. ಹನೀಫ್

ಬ್ರಿಟಿಷರ ಬೇಸಿಗೆ ರಾಜಧಾನಿಯಾಗಿದ್ದ ಉದಕಮಂಡಲ (ಊಟಿ) ವರ್ಷದ 12 ತಿಂಗಳೂ ನೈಸರ್ಗಿಕ 'ಸೆಂಟ್ರಲ್ ಏಸಿ' ಹೊಂದಿರುವ ಊರು. ಇಲ್ಲಿ ಬಹುತೇಕ ಹೋಟೆಲ್ ಕೋಣೆಗಳಲ್ಲಿ ಫ್ಯಾನ್‌ಗಳಿಲ್ಲ. ಏಸಿ ರೂಮ್- ನಾನ್ ಏಸಿ ರೂಮ್ ವಿಂಗಡಣೆಯೂ ಇಲ್ಲ. ನಗರದ ಬೇಕರಿಗಳಲ್ಲಿ ಐಸ್‌ಕ್ರೀಮ್‌ಗಳು ಗಾಜಿನೊಳಗೆ ಡಿಸ್‌ಪ್ಲೇ ಆಗಿರುತ್ತವೆ, ಕರಗುವ ಭಯವಿಲ್ಲ! ನಾನು ಊಟಿಗೆ ಪ್ರವಾಸ ಹೋದದ್ದು ಪ್ರವಾಸಿ ಋತುವಿನ ಕೊನೆಯ ಭಾನುವಾರ ದಾಟಿದ ಬಳಿಕ. ಮಳೆಗಾಲ ಶುರುವಾದ ಬಳಿಕ ಊಟಿಗೆ ಜನಪ್ರವಾಹ ತೆಳ್ಳಗಾಗುತ್ತದೆ ಎಂದು ಅಲ್ಲಿನ ಹೋಟೆಲ್ ಮಾಲೀಕರು ಹೇಳುತ್ತಿದ್ದರು. ಆದರೆ ಈ ಸಲ ಮಳೆ ಬರುವುದು ಒಂದು ವಾರ ತಡವಾಯಿತು. ನಾನು ಮರಳುವ ದಿನ ಊಟಿಯಲ್ಲಿ ಧಾರಾಕಾರ ಮಳೆ ಸುರಿಯಲು ಶುರುವಾಯಿತು.

ಹಾಗೆ ನೋಡಿದರೆ ಈ ಸಲ ಊಟಿಗೆ ಏಪ್ರಿಲ್ ತಿಂಗಳಲ್ಲೇ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದ್ದಾರೆ. ಜೂನ್ 20ರಂದು ಸರ್ಕಾರಿ ಬೊಟಾನಿಕಲ್ ಗಾರ್ಡನ್‌ಗೆ ಭೇಟಿ ಕೊಟ್ಟಿದ್ದಾಗಲೂ ಪ್ರವಾಸಿಗರಿಂದ ಗಿಜಿಗುಡುತ್ತಿತ್ತು.

ಸೇಂಟ್ ಸ್ಟೀಫನ್ಸ್ ಚರ್ಚ್

ದೊಡ್ಡಬೆಟ್ಟದಿಂದ ಊಟಿ ನಗರ ಹೀಗೆ ಕಾಣುತ್ತದೆ...

ಪ್ರವಾಸ

ಬೊಟಾನಿಕಲ್ ಗಾರ್ಡನ್ ಮೂಲಗಳ ಪ್ರಕಾರ, 2022ರ ಏಪ್ರಿಲ್‌ನಲ್ಲಿ ಗಾರ್ಡನ್ನಿಗೆ 2.21 ಲಕ್ಷಕ್ಕೂ ಹೆಚ್ಚು ಜನರು ಭೇಟಿ ಕೊಟ್ಟಿದ್ದರೆ, ಈ ವರ್ಷ (2023) ಏಪ್ರಿಲ್‌ನಲ್ಲಿ 3.45 ಲಕ್ಷಕ್ಕೂ ಹೆಚ್ಚು ಜನ ಭೇಟಿ ನೀಡಿದ್ದಾರೆ. ಅಂದರೆ ಶೇಕಡಾ 56ರಷ್ಟು ಏರಿಕೆ! ಇವತ್ತಿಗೂ ಊಟಿ 'ಭಾರತದ ಗಿರಿಧಾಮಗಳ ರಾಣಿ'ಯೇ ಸರಿ.

ಊಟಿಗೆ ಹೋಗುವ ಬಹುತೇಕ ಪ್ರವಾಸಿಗರು ಬೊಟಾನಿಕಲ್ ಗಾರ್ಡನ್, ರೋಸ್ ಗಾರ್ಡನ್, ಚಹಾ ತೋಟ, ಹೆರಿಟೇಜ್ ರೈಲು ಪ್ರಯಾಣ, ಶೂಟಿಂಗ್ ಸ್ಥಳಗಳ ಭೇಟಿ, ಗುಡ್ಡ ಬೆಟ್ಟಗಳ ಸುತ್ತಾಟಕ್ಕೆ ಆದ್ಯತೆ ಕೊಡುತ್ತಾರೆ. ಊಟಿ ಪಟ್ಟಣದ ಮಧ್ಯೆಯೇ ಜಿಲ್ಲಾಧಿಕಾರಿ ಕಚೇರಿಯ ಬಳಿ ಇರುವ ಈ ಸೇಂಟ್ ಸ್ಟೀಫನ್ಸ್ ಚರ್ಚ್‌ಗೆ ಭೇಟಿ ಕೊಡುವವರ ಸಂಖ್ಯೆ ಕಡಿಮೆಯೇ. ನೀಲಗಿರಿ ಜಿಲ್ಲೆಯ ಅತ್ಯಂತ ಪುರಾತನ ಕಟ್ಟಡಗಳಲ್ಲಿ ಈ ಚರ್ಚ್ ಕೂಡ ಸೇರಿದೆ. 1829ರ ಏಪ್ರಿಲ್‌ನಲ್ಲಿ ಮದ್ರಾಸಿನ ಬ್ರಿಟಿಷ್ ಗವರ್ನರ್ ಸ್ಟೀಫನ್ ಲುಂಬೋಲ್ಡ್ ಲುಷಿಂಗ್ಟನ್ ಈ ಚರ್ಚ್ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದ್ದು. ನಾಲ್ಕನೇ ಕಿಂಗ್ ಜಾರ್ಜ್ ಹುಟ್ಟುಹಬ್ಬದ ದಿನ ಕೆಲಸ ಶುರುವಾಗಿದ್ದು, 1831ರ ಏಪ್ರಿಲ್‌ನ ಈಸ್ಟರ್ ಸಂಡೇಯಂದು ಭಕ್ತರಿಗೆ ಬಾಗಿಲು ತೆರೆಯಲಾಯಿತು. ಮದ್ರಾಸ್ ರೆಜಿಮೆಂಟಿನ ಕ್ಯಾಪ್ಟನ್ ಜಾನ್ ಜೇಮ್ಸ್ ಅಂಡರ್‌ವುಡ್ (ಜೆ.ಜೆ.ಅಂಡರ್‌ವುಡ್) ಈ ಚರ್ಚ್‌ನ ವಾಸ್ತುಶಿಲ್ಪಿ. ಪುಟ್ಟ ಗುಡ್ಡದ ಮೇಲಿರುವ, 193 ವರ್ಷಗಳಷ್ಟು ಪುರಾತನ ಚರ್ಚ್, ಊಟಿಯ ಪ್ರಮುಖ ಪಾರಂಪರಿಕ ಕಟ್ಟಡವೂ ಹೌದು.

ಹಾಗೆ ನೋಡಿದರೆ ಇದು ನಮ್ಮ ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚಿನಂತೆ ಮುಗಿಲೆತ್ತರದ ಆಕಾರದ್ದಲ್ಲ; ಊಟಿ ನಗರದ ಗಾತ್ರಕ್ಕೆ ತಕ್ಕಂತೆ ಪುಟ್ಟ ಚರ್ಚ್. ಆದರೆ ಇದರ ಒಳಾಂಗಣ ವಿನ್ಯಾಸ ಮತ್ತು ಕಿಟಕಿಗಳ ಗಾಜಿನ ಮೇಲಿರುವ ವರ್ಣಚಿತ್ರಗಳ ಅವರ್ಣನೀಯ ಸೌಂದರ್ಯ ಪ್ರವಾಸಿಗರನ್ನು ತನ್ಮಯಗೊಳಿಸುತ್ತದೆ.

ಈ ಚರ್ಚ್‌ಗೂ ಮೈಸೂರು ರಾಜ್ಯಕ್ಕೂ ಒಂದು ಸಂಬಂಧವಿದೆ! ಈ ಚರ್ಚ್‌ಗೆ ಬಳಸಲಾದ ಮರದ ಬೃಹತ್ ತೊಲೆಗಳು ಮತ್ತು ಇತರ ಮರಮಟ್ಟುಗಳ ಕೆತ್ತನೆಗಳನ್ನು ಬ್ರಿಟಿಷರು ಶ್ರೀರಂಗಪಟ್ಟಣದ ಟಿಪ್ಪೂ ಸುಲ್ತಾನನ ಅರಮನೆಯಿಂದ ತಂದು ಕೂರಿಸಿದ್ದಾರೆ. ಸಿಗೂರ್ (ಈಗಿನ ಕಲ್ಲಟ್ಟಿ) ಘಾಟ್ ಮೂಲಕ ಮರಮಟ್ಟುಗಳನ್ನು ಸಾಗಿಸಲಾಗಿದ್ದು, ಆ ಕಾಲದಲ್ಲಿ ಚರ್ಚ್ ನಿರ್ಮಾಣಕ್ಕೆ ₹24,000 ಖರ್ಚಾಗಿತ್ತಂತೆ. ಮರದ ಕಂಬಗಳು, ಕಿಟಕಿಗಳ ವಿನ್ಯಾಸ ಮತ್ತು ಚಾವಣಿಯ ಒಳಭಾಗದ ಮರದ ಕೆತ್ತನೆಗಳು ಒಟ್ಟಾರೆ ಗಾಥಿಕ್ ಶೈಲಿಯಲ್ಲಿವೆ. ಕಿಟಕಿಗಳ ಗಾಜಿನಲ್ಲಿ ಇರುವ ವರ್ಣಚಿತ್ರಗಳ ಸೌಂದರ್ಯವನ್ನು ಬಣ್ಣಿಸುವುದು ಕಷ್ಟ; ನೋಡಿಯೇ ಮನ ತಣಿಯಬೇಕು. ಮೇರಿಮಾತೆ ಬಾಲ ಯೇಸುವನ್ನು ಎತ್ತಿಕೊಂಡಿರುವುದು, ಶಿಲುಬೆಯಲ್ಲಿರುವ ಏಸು ಸಹಿತ ಜೀಸಸ್ ಜೀವನದ ಪ್ರಮುಖ ಘಟನೆಗಳನ್ನು ಈ ವರ್ಣಚಿತ್ರಗಳು ಬಿಂಬಿಸುತ್ತಿವೆ. ಚರ್ಚ್‌ನ ಒಳಭಾಗದ ಪಶ್ಚಿಮ ಗೋಡೆಯಲ್ಲಿ ಯೇಸು ಕ್ರಿಸ್ತರ 'ಕೊನೆಯ ಊಟ'ದ (ದಿ ಲಾಸ್ಟ್ ಸಪ್ಪರ್) ವರ್ಣಚಿತ್ರವೊಂದಿದೆ ಹಾಗೂ ಶ್ರೀರಂಗಪಟ್ಟಣದ ಟಿಪ್ಪೂ ಅರಮನೆಯಿಂದ ತಂದ ಮರದ ಕೆತ್ತನೆಯ ಸುಂದರ ಆನೆಯ ಪ್ರತಿಕೃತಿಯೊಂದಿದೆ ಎನ್ನುವುದನ್ನು ಪುಸ್ತಕಗಳಲ್ಲಿ ಓದಿದ್ದೆ. ಇಂಟರ್‌ನೆಟ್‌ನಲ್ಲೂ ಹಲವು ಸಂದರ್ಶಕರು ಅದರ ಪ್ರಸ್ತಾಪ ಮಾಡಿದ್ದಾರೆ. ಆದರೆ ಅಲ್ಲಿ ಅವೆರಡೂ ಕಾಣಿಸಲಿಲ್ಲ. ಅಲ್ಲಿದ್ದ ಸಹೃದಯಿ ವಾಚ್‌ಮನ್ ಕರುಣಾಕರನ್ ಜೊತೆಗೆ ಆ ಬಗ್ಗೆ ವಿಚಾರಿಸಿದಾಗ 'ಅಂತಹದ್ದು ಯಾವುದೂ ಇಲ್ಲಿಲ್ಲ' ಎಂದರು. ಅವರು ಕಳೆದ 30 ವರ್ಷಗಳಿಂದ ಅಲ್ಲಿ ವಾಚ್‌ಮನ್ ಆಗಿ ದುಡಿಯುತ್ತಿದ್ದಾರಂತೆ. ಒಳಗಿರುವ ಅಷ್ಟೂ ಕಂಬಗಳು ಮರದ್ದೇ ಆಗಿವೆ, ಆದರೆ ಕೆಲವು ಕಂಬಗಳಿಗೆ ಹೊರಗೆ ಬಿಳಿಯ ಬಣ್ಣ ಬಳಿದು ಒಟ್ಟು ಸೌಂದರ್ಯಕ್ಕೆ ಹೊಸ ಹೊಳಪು ನೀಡಲಾಗಿದೆ. ಚರ್ಚ್‌ನ ಹಿಂಭಾಗದಲ್ಲಿರುವ ಪುಟ್ಟ ಸ್ಮಶಾನವೂ ಮನ ಸೆಳೆಯುವಂತಿದೆ.

ಈ ಚರ್ಚ್‌ನ ವಾಸ್ತುಶಿಲ್ಪಿ ಕ್ಯಾಪ್ಟನ್ ಜೆ.ಜೆ.ಅಂಡರ್‌ವುಡ್ ಆ ಕಾಲದಲ್ಲಿ ತನ್ನ ಎಂಜಿನಿಯರಿಂಗ್ ಕೌಶಲದ ಮೂಲಕ ಭಾರಿ ಹೆಸರು ಮಾಡಿದವರು. 1800ರ ಮಧ್ಯಾವಧಿಯಲ್ಲಿ ಈತ ವಿನ್ಯಾಸ ಮಾಡಿರುವ ಚೆನ್ನೈಯ ಅಡ್ಯಾರ್‌ನ ಎಲ್ಫಿನ್‌ಸ್ಟೋನ್ ಬ್ರಿಡ್ಜ್, ದಿ ಐಸ್ ಹೌಸ್, ಮರೀನಾದಲ್ಲಿರುವ ಡಿ.ಜಿ.ಪಿ ಬಿಲ್ಡಿಂಗ್ (ಹಳೆಯ ಹೆಸರು- ದಿ ಮ್ಯಾಸೊನಿಕ್ ಟೆಂಪಲ್) ಮತ್ತು ಮದ್ರಾಸಿನ ಜನರಲ್ ಹಾಸ್ಪಿಟಲ್‌ನ ಹಳೆಯ ಬ್ಲಾಕ್ ಈಗಲೂ ಎಂಜಿನಿಯರಿಂಗ್ ಕೌಶಲಕ್ಕೆ ಸಾಕ್ಷಿಯಾಗಿ ನಿಂತಿವೆ. ಐಸ್ ಹೌಸ್ ಅನ್ನು ವಿವೇಕಾನಂದ ಇಲ್ಲಂ ಎಂದು ಹೆಸರಿಸಲಾಗಿದೆ. 1897ರಲ್ಲಿ ಮದ್ರಾಸಿಗೆ ಬಂದಿದ್ದ ಸ್ವಾಮಿ ವಿವೇಕಾನಂದರು ಈ ಕಟ್ಟಡದಲ್ಲೇ ಉಳಿದುಕೊಂಡಿದ್ದರು. ಈಗ ರಾಮಕೃಷ್ಣ ಆಶ್ರಮವು ಭೋಗ್ಯಕ್ಕೆ ಪಡೆದು ಕಟ್ಟಡವನ್ನು ನಿರ್ವಹಿಸುತ್ತಿದೆ. ಈ ಕಟ್ಟಡದಲ್ಲಿ ಆ ಕಾಲದಲ್ಲಿ ಅಮೆರಿಕದ ಟ್ಯುಡೋರ್ ಐಸ್ ಕಂಪನಿಯ ಮಂಜುಗಡ್ಡೆಯ ಗೋದಾಮು ಇತ್ತು. ದಾಸ್ತಾನು ಮಾಡಲಾದ ಐಸ್ ಕರಗದಂತೆ ಮಾಡಲು, ಸಿರಿಯಾದ ಚಾವಣಿಗಳಲ್ಲಿ ಬಳಸುತ್ತಿದ್ದ (ಮರರಹಿತ ಕಟ್ಟಡದ) ತಂತ್ರಜ್ಞಾನವನ್ನು ಜೆ.ಜೆ.ಅಂಡರ್‌ವುಡ್ ಇಲ್ಲಿಯೂ ಬಳಸಿದ್ದು ಆಗ ಬಹುದೊಡ್ಡ ಸುದ್ದಿಯಾಗಿತ್ತು.

ಊಟಿಯಲ್ಲಿ ಕ್ರಿಶ್ಚಿಯನ್ನರ ಜನಸಂಖ್ಯೆ ಶೇ 21ರಷ್ಟಿದ್ದು, ಒಟ್ಟು 14 ಚರ್ಚ್‌ಗಳಿವೆ. ಸೇಂಟ್ ಸ್ಟೀಫನ್ಸ್ ಚರ್ಚ್ ಈ ಪಟ್ಟಿಯಲ್ಲಿ ವಾಸ್ತುಶಿಲ್ಪ ಮತ್ತು ಆಧ್ಯಾತ್ಮಿಕ ಪರಿಸರದ ಹಿನ್ನೆಲೆಯಲ್ಲಿ ಮೊದಲ ಸ್ಥಾನದಲ್ಲಿದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಮಿಂಚಿನ ವೇಗದ ಲೆಕ್ಕಗಳು

1. ಎರಡಂಕಿಯ ಸಂಖ್ಯೆಗೆ 11ರಿಂದ ಗುಣಿಸುವುದು

-ಕೊಟ್ಟ ಗುಣ್ಯ ಸಂಖ್ಯೆಗೆ ಅದರ ದಶಕ ಸ್ಥಾನದ ಅಂಕಿಯನ್ನು ಕೂಡಿಸಿ ಬರುವ ಸಂಖ್ಯೆಗೆ ಗುಣ್ಯ ಸಂಖ್ಯೆಯ ಬಿಡಿಸ್ಥಾನದ ಅಂಕಿಯನ್ನು ಜೋಡಿಸಿ ಬರೆದರೆ ಉತ್ತರ ಸಿದ್ಧ

ಉದಾ: 58
x 11

ಇಲ್ಲಿ ಗುಣ್ಯ 58ಕ್ಕೆ ಇದರ ದಶಕ ಸ್ಥಾನದ ಅಂಕಿ 5 ಕೂಡಿಸಿದರೆ 58 + 5 = 63 ಇದಕ್ಕೆ ಬಿಡಿ ಅಂಕಿ 8 ಜೋಡಿಸಿದರೆ 638

ಉತ್ತರ: 638

2. ಎರಡಂಕಿಯ ಸಂಖ್ಯೆಗೆ 99ರಿಂದ ಗುಣಿಸುವುದು

-ಕೊಟ್ಟ ಗುಣ್ಯ ಸಂಖ್ಯೆಯಲ್ಲಿ 1 ಕಳೆದು ಬರುವ ಸಂಖ್ಯೆಯನ್ನು ಎಡಭಾಗದಲ್ಲಿ ಹಚ್ಚುವುದು. ನಂತರ ಅದೇ ಸಂಖ್ಯೆಯನ್ನು 99ರಲ್ಲಿ ಕಳೆದು ಬಲಭಾಗದಲ್ಲಿ ಹಚ್ಚುವುದು. ಎರಡೂ ಸೇರಿ ಉತ್ತರವಾಗುವುದು.

ಉದಾ: 65
x 99

-ಇಲ್ಲಿ ಗುಣ್ಯ 65-1 = 64 ಎಡಭಾಗದ ಸಂಖ್ಯೆ. ಇದನ್ನೇ 99ರಲ್ಲಿ ಕಳೆದರೆ: 99-64 = 35 ಬಲಭಾಗದ ಸಂಖ್ಯೆ

ಎರಡನ್ನೂ ಜೋಡಿಸಿ ಬರೆದರೆ

65
x 99
64/35 -ಉತ್ತರ

ಮೇಲಿನ ಎರಡೂ ರೀತಿಯ ಲೆಕ್ಕಗಳನ್ನು ಹಾಳೆ-ಪೆನ್ನು ಬಳಸದೇ ಬರೀ ಬಾಯಿಯಿಂದಲೇ ಮಿಂಚಿನ ವೇಗದಲ್ಲಿ ಮಾಡಬಹುದು. ಪ್ರಯತ್ನಿಸಿ.

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1. ಮುಗುಳು: ____________
2. ನದಿ ಮುಂಭಾಗ: ____________
3. ಮಾವಿನಮರ: ____________
4. ಹಸು ಕಾಣಬೇಕು: ____________

ಡಶ್ಗ ಚಕ್ಕು ಕೇಶ್ರುಷ್ಣು ಕಥೆಯ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಪುಂಗಿ ಜೋಗುಳ!



ಜಾಣಪದ ಆಟ

1. ಇಲ್ಲಿ ಕೊಟ್ಟಿರುವ ಒಂದಕ್ಷರಕ್ಕೆ 'ವ'ಕಾರ ಬಳ್ಳಿಯ ಎರಡಕ್ಷರ ತುಂಬಿ ಮೂರಕ್ಷರದ ಪದ ಮಾಡಿ

1.			ರ
2.			ಸ್ತ್ರ
3.			ದ
4.			ಹ
5.			ಧ
6.			ಕ

2. ಇಲ್ಲಿ ಕೊಟ್ಟಿರುವ ಒಂದಕ್ಷರಕ್ಕೆ 'ರ'ಕಾರ ಬಳ್ಳಿಯ ಎರಡಕ್ಷರ ತುಂಬಿ ಮೂರಕ್ಷರದ ಪದ ಮಾಡಿ

1.	ಶ		
2.	ಪ		
3.	ಜ		
4.	ಮು		
5.	ಕ		
6.	ಊ		

ಪುಟಾಣಿ ಪದಬಂಧ

					ಸುಳಿವು
1			ರ	ಸ	ರಸಗುಲ್ಲ ತರಿಸಿದ್ದು ಇದೇ ಊರಿನಿಂದ
2			ಲ	ಕ	ಲಕ-ಲಕ ಹೊಳೆಯುವ ಸರಧರಿಸಿರುವ ಈತ ಅನುಯಾಯಿ
3			ಹಾ	ರ	ಹಾರ ಕಟ್ಟುವ ವ್ಯಾಪಾರ
4			ಗ	ಣ	ಗಣತಂತ್ರ ಹಬ್ಬದಲ್ಲಿ ಸೇರಿರುವ ನಟ ನಟಿಯರ ಗುಂಪು
5			ಮಾ	ನ	ಮಾನ ಕಾಪಾಡಿಕೊಂಡಿರುವ ಒಡೆಯ

ಸ್ವಾರಸ್ಯಕರ ಸಮೀಕರಣ

ಮಹಾಭಾರತದಲ್ಲಿರುವ ಒಟ್ಟು ಪರ್ವಗಳು ಎಷ್ಟು?	x	19	+	ಸೀತೆ ವನವಾಸಕ್ಕೆ ಹೋಗಿದ್ದು ಎಷ್ಟು ವರ್ಷ	x	47	=	1000

ಸ್ವಲ್ಪ ಯೋಚ್ನೆ ಮಾಡಿ

ಚಕ್ಕಡಿಯಲ್ಲಿ 'ಗಿ'ಯಿಂದ ಕೊನೆಗೊಳ್ಳುವ ಐದು ಪದಗಳನ್ನು ಹೇಳಿ ನೋಡೋಣ..

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1. ತಿದ್ದುಪಡಿ
2. ಪರಿವಾರ
3. ಗುಡಗುಡಿ
4.ಸಬಕಾರ 5.ಕಿರಿಕಿರಿ

ಅದಲು ಬದಲು ಕಂಚಿ ಕದಲು
1. ಬಿಳಿಹಲ್ಲು
2. ಕಾಡುನಾಯಿ 3.ಮಾನವ ರಹಿತ 4. ಗುರಿಮಾಡಿ

ಜಾಣಪದ ಆಟ
1. ಅಂಗಾಂಗ 2. ಪಂಚಾಂಗ
3. ಸಂಬಂಧ 4. ಪಿಂಡಾಂಡ
5. ಅಂಗಾಂಶ 6. ಸಂಕ್ರಾಂತಿ
7. ನಂಜುಂಡ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಬೃಂದಾ ಭಾರದ್ವಾಜ್
ಚಿಕ್ಕಮಗಳೂರು

ಹರ್ಷವರ್ಧನ್ ಕೆ.ಎಂ.
ದಾವಣಗೆರೆ

ಪ್ರತೀಕ್ಷಾ ಜೋಯ್ಸ್
ಸಾಗರ

ಸ್ಯಾಫ್ ಫುಟ್‌ಬಾಲ್: ಪೆನಾಲ್ಟಿ ಶೂಟೌಟ್‌ನಲ್ಲಿ ಲೆಬನಾನ್ ವಿರುದ್ಧ 4–2 ಜಯ

ಫೈನಲ್‌ಗೆ ಲಗ್ಗೆ ಹಾಕಿದ ಚೆಟ್ರಿ ಬಳಗ

• ಮಹಮ್ಮದ್ ನೂಮಾನ್

ಬೆಂಗಳೂರು: ಪೆನಾಲ್ಟಿ ಶೂಟೌಟ್‌ನಲ್ಲಿ ಲೆಬನಾನ್ ತಂಡವನ್ನು 4–2 ರಲ್ಲಿ ಮಣಿಸಿದ ಭಾರತ ತಂಡ, ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ಸೇರಿದ್ದ ಸುಮಾರು 20 ಸಾವಿರ ಪ್ರೇಕ್ಷಕರನ್ನು ಮೈನವಿರೇಳಿಸುವಂತೆ ಮಾಡಿದ ಆತಿಥೇಯ ತಂಡ, ಸತತ 9ನೇ ಬಾರಿ ಪ್ರಶಸ್ತಿ ಸುತ್ತು ತಲುಪಿದೆ.

ನಿಗದಿತ ಹಾಗೂ ಹೆಚ್ಚುವರಿ ಅವಧಿಯ ಆಟದಲ್ಲಿ ಗೋಲು ದಾಖಲಾಗದ ಕಾರಣ ಪೆನಾಲ್ಟಿ ಶೂಟೌಟ್ ಮೊರೆಹೋಗಲಾಯಿತು. ಭಾರತ ತಂಡದ ಪರ ನಾಯಕ ಸುನಿಲ್ ಚೆಟ್ರಿ, ಅನ್ವರ್ ಅಲಿ, ಮಹೇಶ್ ಸಿಂಗ್ ಮತ್ತು ಉದಾಂತ ಸಿಂಗ್ ಅವರು ಶೂಟೌಟ್‌ನಲ್ಲಿ ಚೆಂಡನ್ನು ಗುರಿ ಸೇರಿಸಿದರು.

ಲೆಬನಾನ್ ತಂಡದ ಪರ ನಾಯಕ ಹಸನ್ ಮತೂಕ್ ಅವರ ಮೊದಲ ಕಿಕ್‌ಅನ್ನು ಭಾರತದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಎಡಕ್ಕೆ ನೆಗೆದು ತಡೆದರು. ಎರಡು ಮತ್ತು ಮೂರನೇ ಕಿಕ್‌ಗಳಲ್ಲಿ ಗೋಲುಗಳು ಬಂದವು. ಖಲೀಲ್ ಬದೆರ್ ಅವರ ನಾಲ್ಕನೇ ಕಿಕ್‌ನಲ್ಲಿ ಚೆಂಡು ಗೋಲ್‌ಪೋಸ್ಟ್ ಮೇಲಿಂದ ಹೊರಕ್ಕೆ ಹೋಗುತ್ತಿದ್ದಂತೆಯೇ, ಭಾರತದ ಆಟಗಾರರು ಸಂಭ್ರಮಿಸಿದರು. ಪ್ರೇಕ್ಷಕರು ಕುಣಿದು, ಗೆಲುವಿನ ಕೇಕೆ ಹಾಕಿದರು.

ಇದಕ್ಕೂ ಮುನ್ನ ನಿಗದಿತ ಹಾಗೂ ಹೆಚ್ಚುವರಿ ಅವಧಿಯಲ್ಲಿ ಚೆಟ್ರಿ ಬಳಗ, ದೈಹಿಕವಾಗಿ ತಮಗಿಂತ ಬಲಿಷ್ಠ ಆಟಗಾರರನ್ನು ಒಳಗೊಂಡಿದ್ದ ಲೆಬನಾನ್ ತಂಡದ ಆಕ್ರಮಣಕಾರಿ ಆಟವನ್ನು ತಂತ್ರಗಾರಿಕೆ ಮೂಲಕ ಬದಿಗೊತ್ತುವಲ್ಲಿ ಯಶಸ್ವಿಯಾಗಿತ್ತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡದ ನಾಯಕ ಸುನಿಲ್ ಚೆಟ್ರಿ, ಲೆಬನಾನ್ ವಿರುದ್ಧ ಗೋಲು ಗಳಿಸಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ.

ಜುಲೈ 4 ರಂದು ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡ ಕುವೈತ್ ವಿರುದ್ಧ ಪೈಪೋಟಿ ನಡೆಸಲಿದೆ. ದಿನದ ಮೊದಲ ಸೆಮಿಫೈನಲ್‌ನಲ್ಲಿ ಕುವೈತ್ 1-0 ಗೋಲಿನಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿತು.

ಪ್ರಬಲ ಪೈಪೋಟಿ: ಮೊದಲ 90 ನಿಮಿಷಗಳ ಆಟದಲ್ಲಿ ತುರುಸಿನ ಪೈಪೋಟಿ ನಡೆಯಿತು. ಆರಂಭಿಕ 10 ನಿಮಿಷಗಳಲ್ಲಿ ಭಾರತದ ಗೋಲು ಆವರಣದತ್ತ ಬೆನ್ನುಬೆನ್ನಿಗೆ ಚೆಂಡು ಕೊಂಡೊಯ್ದ ಲೆಬನಾನ್ ತಂಡ ಒತ್ತಡ ಹೇರಿತು. ಆದರೆ ನಿಧಾನವಾಗಿ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಭಾರತ, ಪ್ರತ್ಯಾಕ್ರಮಣ ನಡೆಸಿತು.

13ನೇ ಬಾರಿ ಫೈನಲ್‌ಗೆ

ಭಾರತ ತಂಡ ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ 13 ನೇ ಬಾರಿ ಫೈನಲ್ ಪ್ರವೇಶಿಸಿದೆ. ಒಟ್ಟಾರೆಯಾಗಿ ಇದು 14ನೇ ಟೂರ್ನಿ ಆಗಿದ್ದು, ಒಮ್ಮೆ ಮಾತ್ರ ಪ್ರಶಸ್ತಿ ಸುತ್ತು ತಲುಪಲು ವಿಫಲವಾಗಿತ್ತು. 2003 ರಲ್ಲಿ ಮೂರನೇ ಸ್ಥಾನ ಗಳಿಸಿತ್ತು. ಭಾರತ ತಂಡ 8 ಬಾರಿ ಚಾಂಪಿಯನ್ ಹಾಗೂ 4 ಸಲ ರನ್ನರ್ಸ್ ಅಪ್ ಆಗಿದೆ.

41 ನೇ ನಿಮಿಷದಲ್ಲಿ ಲೆಬನಾನ್ ತಂಡದ ಹಸನ್ ಮತೂಕ್ ಅವರು ಫ್ರೀ ಕಿಕ್‌ನಲ್ಲಿ ಬಿರುಸಿನಿಂದ ಒದ್ದ ಚೆಂಡನ್ನು, ಭಾರತದ ಗೋಲ್ ಕೀಪರ್ ಗುರುಪ್ರೀತ್ ಸಿಂಗ್ ಸಂಧು ಮೇಲಕ್ಕೆ ನೆಗೆದು ಅಮೋಘವಾಗಿ ಹೊರಕ್ಕೆ ಅಟ್ಟಿದರು. ಆಕ್ರಮಣ ಮತ್ತು ಮರು ಆಕ್ರಮಣದಿಂದಾಗಿ ಎರಡನೇ ಅವಧಿಯ ಆಟ ರೋಚಕತೆಯಿಂದ ಕೂಡಿತ್ತಾದರೂ, ಗೋಲು ಮಾತ್ರ ಬರಲಿಲ್ಲ.

ಹೆಚ್ಚುವರಿ ಅವಧಿಯ ಆರಂಭದಲ್ಲಿ ಚೆಟ್ರಿ ಎರಡು ಅತ್ಯುತ್ತಮ ಪ್ರಯತ್ನ ನಡೆಸಿದರು. 94ನೇ ನಿಮಿಷದಲ್ಲಿ ಅವರು ಒದ್ದ ಚೆಂಡನ್ನು ಲೆಬನಾನ್ ಗೋಲ್‌ಕೀಪರ್ ಮೆಹ್ದಿ ಖಲೀಲ್ ತಡೆದರು. 96ನೇ ನಿಮಿಷದಲ್ಲಿ ಉದಾಂತ ಸಿಂಗ್ ಅವರ ಕ್ರಾಸ್‌ನಲ್ಲಿ ಲಭಿಸಿದ ಚೆಂಡನ್ನು ಚೆಟ್ರಿ ಗುರಿಯತ್ತ ಒದ್ದರೂ, ಕ್ರಾಸ್‌ಬಾರ್ ಮೇಲಿಂದ ಹೋಯಿತು.

120 ನಿಮಿಷಗಳ ಬಳಿಕವೂ ಉಭಯ ತಂಡಗಳು ಪಟ್ಟುಬಿಡದ ಕಾರಣ, ಪಂದ್ಯ ಪೆನಾಲ್ಟಿ ಶೂಟೌಟ್‌ಗೆ ಸಾಗಿತು.

ಸತತ 2ನೇ ಚಿನ್ನ ಗೆದ್ದ ನೀರಜ್

ಡೈಮಂಡ್ ಲೀಗ್: ಮುರಳಿ ಶ್ರೀಶಂಕರ್‌ಗೆ ಐದನೇ ಸ್ಥಾನ

ಲುಸಾನ್ (ಫ್ರಾನ್ಸ್), (ಪಿಟಿಐ): ಒಲಿಂಪಿಕ್ ಜಾವೆಲಿನ್ ಚಾಂಪಿಯನ್ ನೀರಜ್ ಚೋಪ್ರಾ, ಪ್ರತಿಷ್ಠಿತ ಡೈಮಂಡ್ ಲೀಗ್‌ನಲ್ಲಿ ಸತತ ಎರಡನೇ ಚಿನ್ನ ಗೆದ್ದುಕೊಂಡರು. ಶುಕ್ರವಾರ ನಡೆದ ಈ ಕೂಟದಲ್ಲಿ ಅವರು 87.66 ಮೀಟರ್ ಸಾಧನೆಯೊಡನೆ ಅಗ್ರಸ್ಥಾನ ಪಡೆದರು.

ಆದರೆ, 90 ಮೀ. ದಾಟುವ ಅವರ ಗುರಿ ಈಡೇರಲಿಲ್ಲ. ಸ್ನಾಯು ನೋವಿನಿಂದ ಸುಮಾರು ಒಂದು ತಿಂಗಳ ಕಾಲ ವಿಶ್ರಾಂತಿಯಲ್ಲಿದ್ದ ಅವರು ಇಲ್ಲಿ ತಮ್ಮ ಅತ್ಯುತ್ತಮ 10 ಥ್ರೋಗಳ ಒಳಗಿನ ಸಾಧನೆ ದಾಖಲಿಸಲಿಲ್ಲ. ಆದರೆ ಅದರಿಂದ ಚಿನ್ನ ಗೆಲ್ಲುವುದಕ್ಕೆ ಸಮಸ್ಯೆಯಾಗಲಿಲ್ಲ.

25 ವರ್ಷದ ಚೋಪ್ರಾ, ಮೇ ತಿಂಗಳಲ್ಲಿ ದೋಹಾದಲ್ಲಿ ನಡೆದ ಋತುವಿನ ಮೊದಲ ಡೈಮಂಡ್ ಲೀಗ್‌ನಲ್ಲಿ ತಮ್ಮ ವೃತ್ತಿಜೀವನದ ನಾಲ್ಕನೇ ಅತ್ಯುತ್ತಮ ಥ್ರೊ (88.67 ಮೀ.) ದಾಖಲಿಸಿ ಚಿನ್ನ ಗೆದ್ದಿದ್ದರು. ನಂತರ ಮೂರು ಪ್ರಮುಖ ಕೂಟಗಳಲ್ಲಿ ಪಾಲ್ಗೊಂಡಿರಲಿಲ್ಲ.

ಆರಂಭದ ಸುತ್ತುಗಳಲ್ಲೇ ತಮ್ಮ ಉತ್ತಮ ಥ್ರೊ ದಾಖಲಿಸುವ ಚೋಪ್ರಾ, ಇಲ್ಲಿ ಲೀಡ್ ಪಡೆಯಲು ಐದನೇ ಯತ್ನದವರೆಗೆ ಕಾಯಬೇಕಾಯಿತು. ನಾಲ್ಕನೇ ಸುತ್ತಿನ ನಂತರ ಅವರು ಎರಡನೇ ಸ್ಥಾನದಲ್ಲಿದ್ದರು.

‘ಗಾಯಾಳಾಗಿ ಮರಳಿದ್ದರಿಂದ ಸ್ವಲ್ಪ ನರ್ವಸ್ ಆಗಿದ್ದೆ. ಇಲ್ಲಿ ಚಳಿಯೂ ತೀವ್ರವಾಗಿತ್ತು. ನನ್ನ ಉತ್ತಮ ಪ್ರಯತ್ನಕ್ಕಿಂತ ಕೆಳಗೆ ಇದ್ದೆ. ಆದರೆ ಹೊತ್ತುಹೋದಂತೆ ಸುಧಾರಿತ ಪ್ರದರ್ಶನ ನೀಡಿದೆ’ ಎಂದು ಗೆಲುವಿನ ಬಗ್ಗೆ ಚೋಪ್ರಾ ಪ್ರತಿಕ್ರಿಯಿಸಿದರು.

ನೀರಜ್ ಚೋಪ್ರಾ –ಎಎಫ್‌ಪಿ ಚಿತ್ರ

ಅವರ ಮೊದಲ ಯತ್ನ ಫೌಲ್ ಆಯಿತು. ನಂತರ 83.52 ಮತ್ತು 85.04 ಮೀ. ಥ್ರೊ ದಾಖಲಿಸಿದರು. ನಾಲ್ಕನೇ ಸುತ್ತಿನಲ್ಲಿ ಮತ್ತೊಮ್ಮೆ ಫೌಲ್ ಆಯಿತು. ಆದರೆ ಐದನೇ ಸುತ್ತಿನ 87.66 ಮೀ.ಗಳ ಎಸೆತ ಅವರಿಗೆ ಚಿನ್ನದ ಪದಕ ಖಚಿತಪಡಿಸಿತು.

ಜರ್ಮನಿಯ ಜೂಲಿಯನ್ ವೇಬರ್ 87.03 ಮೀ. ಸಾಧನೆಯೊಡನೆ ಎರಡನೇ ಸ್ಥಾನ ಪಡೆದರೆ. ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ, ಈ ಋತುವಿನ ಶ್ರೇಷ್ಠ ಸಾಧನೆ ದಾಖಲಿಸಿರುವ ಜೆಕ್ ರಿಪಬ್ಲಿಕ್‌ನ ಯಾಕುಬ್ ವಾಡ್ಲೆಚ್ 86.13 ಮೀ. ಥ್ರೊದೊಡನೆ ಮೂರನೇ ಸ್ಥಾನ ಪಡೆದರು.

ಶ್ರೀಶಂಕರ್‌ಗೆ 5ನೇ ಸ್ಥಾನ: ಪುರುಷರ ಲಾಂಗ್‌ಜಂಪ್‌ನಲ್ಲಿ ಭಾರತದ ಮುರಳಿ ಶ್ರೀಶಂಕರ್ ಅಷ್ಟೇನೂ ಉತ್ತಮ ಸಾಧನೆ ತೋರದೇ, 7.88 ಮೀ. ಜಿಗಿತದೊಡನೆ ಐದನೇ ಸ್ಥಾನ ಪಡೆದರು. 24 ವರ್ಷದ ಶ್ರೀಶಂಕರ್ ಈ ದೂರವನ್ನು ಮೂರನೇ ಸುತ್ತಿನಲ್ಲಿ ದಾಖಲಿಸಿದರು.

‘ಮುಂದಿನ ಸ್ಪರ್ಧೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ’

ನವದೆಹಲಿ (ಪಿಟಿಐ): ಚಾಂಪಿಯನ್ ಜಾವೆಲಿನ್ ಸ್ಪರ್ಧಿ ನೀರಜ್ ಚೋಪ್ರಾ ಅವರು ವಿಶ್ವ ಚಾಂಪಿಯನ್‌ಷಿಪ್‌ವರೆಗೆ ಬೇರಾವುದೇ ಕೂಟಗಳಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದಾರೆ. ಹಂಗೆರಿಯ ಬುಡಾಪೆಸ್ಟ್‌ನಲ್ಲಿ ಆಗಸ್ಟ್ 19ರಿಂದ ವಿಶ್ವ ಚಾಂಪಿಯನ್‌ಷಿಪ್ ನಡೆಯಲಿದೆ. ‘ನನ್ನ ಮುಂದಿನ ಸ್ಪರ್ಧೆ ಬುಡಾಪೆಸ್ಟ್‌ನಲ್ಲಿದ್ದು, ನನ್ನ ಪಾಲಿಗೆ ಅತಿ ದೊಡ್ಡದು’ ಎಂದು ಚೋಪ್ರಾ ಲುಸಾನ್‌ನಲ್ಲಿ ಡೈಮಂಡ್ ಲೀಗ್ ಚಿನ್ನ ಗೆದ್ದ ನಂತರ ತಿಳಿಸಿದ್ದಾರೆ.

ಆ್ಯಷಸ್: ಸಂಕಷ್ಟದಲ್ಲಿ ಇಂಗ್ಲೆಂಡ್

ಲಂಡನ್ (ಎಪಿ): ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಶನಿವಾರ ಗೆಲುವಿಗೆ 371 ರನ್‌ಗಳ ಸವಾಲು ಎದುರಿಸಿರುವ ಆತಿಥೇಯ ಇಂಗ್ಲೆಂಡ್ ಆರಂಭದಲ್ಲೇ ತೊಂದರೆಗೆ ಸಿಲುಕಿದೆ. ಲಾರ್ಡ್ಸ್‌ನಲ್ಲಿ ಇದು ದಾಖಲೆ ಮೊತ್ತದ ಗುರಿಯಾಗಿದ್ದು, ಆತಿಥೇಯ ತಂಡ 2ನೇ ಇನಿಂಗ್ಸ್‌ನಲ್ಲಿ ದಿನದಾಟದ ಅಂತ್ಯಕ್ಕೆ 4 ವಿಕೆಟ್ ಕಳೆದುಕೊಂಡು 114 ರನ್ ಗಳಿಸಿದೆ.

ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್ ಅವರು ಆರಂಭ ಆಟಗಾರ ಜಾಕ್ ಕ್ರಾಲಿ ಮತ್ತು ಓಲಿ ಪೋಪ್ ಅವರ ವಿಕೆಟ್‌ಗಳನ್ನು ಪಡೆದರು. ಬೆನ್ ಡಕೆಟ್ (ಬ್ಯಾಟಿಂಗ್ 50) ಮತ್ತು ಬೆನ್ ಸ್ಟೋಕ್ಸ್ (ಬ್ಯಾಟಿಂಗ್ 29) ಹೋರಾಟ ಮುಂದುವರಿಸಿದ್ದಾರೆ.

ಮೊದಲ ಇನಿಂಗ್ಸ್‌ನಲ್ಲಿ 91 ರನ್‌ಗಳ ಮುನ್ನಡೆ ಪಡೆದಿದ್ದ ಆಸ್ಟ್ರೇಲಿಯಾ (ಶುಕ್ರವಾರ: 2 ವಿಕೆಟ್‌ಗೆ 130) ಶನಿವಾರ ಆಟ ಮುಂದುವರಿಸಿ ಚಹ ವಿರಾಮದ ವೇಳೆಗೆ 279 ರನ್‌ಗಳಿಗೆ ಆಲೌಟ್ ಆಯಿತು.

ಉಸ್ಮಾನ್ ಖ್ವಾಜಾ 77 ರನ್ ಗಳಿಸಿದರು. ಇತರೆ ರೂಪದಲ್ಲಿ 36 ರನ್‌ಗಳು ಬಂದವು.

ಸತತ 100ನೇ ಟೆಸ್ಟ್ ಆಡಿದ ಆಫ್ ಸ್ಪಿನ್ನರ್ ನಥಾನ್ ಲಯನ್ ಅವರು ಗುರುವಾರ ಫೀಲ್ಡ್ ಮಾಡುವ ವೇಳೆ ಮೀನಖಂಡದ ಗಾಯದಿಂದ ಬಳಲಿದ್ದರು. ಅವರು ಬ್ಯಾಟ್ ಮಾಡಲು ಬಂದಾಗ ಪ್ರೇಕ್ಷಕರು ಎದ್ದು ನಿಂತು ಕರತಾಡನ ಮಾಡಿದರು. ಅವರು ಎರಡನೇ ಇನಿಂಗ್ಸ್‌ನಲ್ಲಿ ಬೌಲಿಂಗ್ ಮಾಡುವುದು ಅನುಮಾನ.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 416, ಇಂಗ್ಲೆಂಡ್: 325; ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 101.5 ಓವರುಗಳಲ್ಲಿ 279 (ಉಸ್ಮಾನ್ ಖ್ವಾಜಾ 77, ಸ್ಮಿತ್ 34, ಅಲೆಕ್ಸ್ ಕ್ಯಾರಿ 21, ಮಿಚೆಲ್ ಸ್ಟಾರ್ಕ್ ಔಟಾಗದೇ 15; ಸ್ಟುವರ್ಟ್ ಬ್ರಾಡ್ 65ಕ್ಕೆ4, ಟಂಗ್ 53ಕ್ಕೆ2, ಒಲಿ ರಾಬಿನ್ಸನ್ 48ಕ್ಕೆ2), ಇಂಗ್ಲೆಂಡ್: 32 ಓವರುಗಳಲ್ಲಿ 4 ವಿಕೆಟ್‌ಗೆ 114 (ಬೆನ್ ಡಕೆಟ್ ಬ್ಯಾಟಿಂಗ್ 50, ಬೆನ್ ಸ್ಟೋಕ್ಸ್ ಬ್ಯಾಟಿಂಗ್ 29, ಸ್ಟಾರ್ಕ್ 17ಕ್ಕೆ2, ಪ್ಯಾಟ್ ಕಮಿನ್ಸ್ 20ಕ್ಕೆ 2)

ಜಿಪಿಬಿಎಲ್ ಆವೃತ್ತಿ: ತಂಡಗಳ ಬಿಡ್ಡಿಂಗ್

ಬೆಂಗಳೂರು: ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್ (ಜಿಪಿಬಿಎಲ್) 2ನೇ ಆವೃತ್ತಿಗೆ ತಂಡಗಳ ಹರಾಜು ಪ್ರಕ್ರಿಯೆಯು ಆನ್‌ಲೈನ್ ಮೂಲಕ ಶನಿವಾರ ನಡೆಯಿತು.

10 ತಂಡಗಳಿಗೆ ಬಿಡ್ ಆಹ್ವಾನಿಸಲಾಗಿತ್ತು. ಅದರಲ್ಲಿ 8 ತಂಡಗಳು ಮಾರಾಟವಾಗಿದ್ದು, ಎರಡು ತಂಡಗಳಿಗೆ ಸಂಬಂಧಿಸಿದಂತೆ ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

ಬೆಂಗಳೂರು ಫ್ರಾಂಚೈಸಿ ಗರಿಷ್ಠ ಮೊತ್ತಕ್ಕೆ ಮಾರಾಟವಾದರೆ, ಚೆನ್ನೈ 2ನೇ ಸ್ಥಾನದಲ್ಲಿದೆ. ಮಾರಾಟವಾದ ಇತರ ತಂಡಗಳಲ್ಲಿ ಮುಂಬೈ, ಹೈದರಾಬಾದ್, ಪುಣೆ, ಕೇರಳ, ಅಹಮದಾಬಾದ್ ಮತ್ತು ದೆಹಲಿ ಸೇರಿವೆ.

ಇದೇ ತಿಂಗಳ ಮೂರನೇ ವಾರದಲ್ಲಿ ಆಟಗಾರರ ಹರಾಜಿಗೆ ತಂಡಗಳು ಸಿದ್ಧತೆ ನಡೆಸುತ್ತಿವೆ. 67 ಅಂತರರಾಷ್ಟ್ರೀಯ ಆಟಗಾರರು ಸೇರಿದಂತೆ 453 ಮಂದಿ ನೋಂದಾಯಿಸಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇನ್ನಷ್ಟು ಕ್ರೀಡಾ ಸುದ್ದಿಗಳು 08

ಚೆಸ್: ಫೈನಲ್‌ಗೆ ತ್ರಿವೇಣಿ ಕಾಂಟಿನೆಂಟಲ್ಸ್

ದುಬೈ: ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ತಂಡ 11–6 ರಿಂದ ವಿಶ್ವನಾಥನ್ ಆನಂದ್ ನಾಯಕತ್ವದ ಗಂಗಾಸ್ ಗ್ರ್ಯಾಂಡ್‌ಮಾಸ್ಟರ್ಸ್ ತಂಡವನ್ನು ಸೋಲಿಸಿ ವಿಶ್ವ ಗ್ಲೋಬಲ್ ಚೆಸ್ ಲೀಗ್‌ನ ಫೈನಲ್ ತಲುಪಿದ ಮೊದಲ ತಂಡ ಎನಿಸಿತು.

ಶನಿವಾರ ನಡೆದ ಇನ್ನೊಂದು ಪಂದ್ಯದಲ್ಲಿ ಚಿಂಗಾರಿ ಗಲ್ಫ್ ಟೈಟಾನ್ಸ್ ತಂಡ 8–7 ರಿಂದ ಎಸ್‌.ಜಿ.ಅಲ್ಪೈನ್ ವಾರಿಯರ್ಸ್ ಮೇಲೆ ಗೆಲುವು ದಾಖಲಿಸಿತು. ಕಾರ್ಲ್‌ಸನ್ ಅವರ ಅಲ್ಪೈನ್ ವಾರಿಯರ್ಸ್ ತಂಡ ಕೊನೆಯ 3 ಪಂದ್ಯಗಳಲ್ಲಿ ಸೋಲನುಭವಿದಂತಾಯಿತು.

ತ್ರಿವೇಣಿ ತಂಡಕ್ಕೆ ಕಣದಲ್ಲಿ ಉಳಿಯಲು ಗೆಲುವು ಅನಿವಾರ್ಯವಾಗಿತ್ತು. ಇನ್ನೊಂದೆಡೆ ‘ಡ್ರಾ’ ಆದರೂ ಗಂಗಾಸ್ ತಂಡ ಫೈನಲ್ ತಲುಪುತ್ತಿತ್ತು. ಮೊದಲ ಪಂದ್ಯದಲ್ಲಿ ಲೆವೊನ್ ಅರೋನಿಯನ್, ಆನಂದ್ ಜೊತೆ ‘ಡ್ರಾ’ ಮಾಡಿಕೊಂಡಿದ್ದರು.

ತ್ರಿವೇಣಿ ಒಟ್ಟು 18 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನಕ್ಕೇರಿತು.

ರಾಷ್ಟ್ರೀಯ ಸ್ಪರ್ಧಾತ್ಮಕ ಪರೀಕ್ಷೆ: ಎಕ್ಸಲೆಂಟ್ ಮೂಡುಬಿದಿರೆಯಲ್ಲಿ ಸಾಮಾನ್ಯ ವಿದ್ಯಾರ್ಥಿಗಳ ಅಸಾಮಾನ್ಯ ಸಾಧನೆ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಗುರುಕುಲ ಮಾದರಿಯಲ್ಲಿ ಶಿಕ್ಷಣ ನೀಡುತ್ತಿರುವ ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಎಕ್ಸಲೆಂಟ್ ಮೂಡು ಬಿದಿರೆ ವಿದ್ಯಾಸಂಸ್ಥೆ ರಾಷ್ಟ್ರ ಮಟ್ಟದ ವೈದ್ಯಕೀಯ ಅರ್ಹತಾ ಪರೀಕ್ಷೆ ನೀಟ್ 2023, ಸಿ.ಇ.ಟಿ, ಜೆಇಇ ಅಡ್ವಾನ್ಸ್ಡ್‌ನಲ್ಲಿ ಅಭೂತಪೂರ್ವ ಸಾಧನೆಗೈದಿದೆ. 2023ರ ಪದವಿ ಪೂರ್ವ ಶಿಕ್ಷಣ ಮಂಡಳಿ ನಡೆಸಿದ ಬೋರ್ಡ್ ಎಕ್ಸಾಂನಲ್ಲಿ ಮೊದಲ ಹತ್ತರಲ್ಲಿ 6 ರ್‍ಯಾಂಕ್ ಪಡೆದು ಗಮನ ಸೆಳೆದಿದ್ದ ಸಂಸ್ಥೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲೂ ರಾಷ್ಟ್ರ, ರಾಜ್ಯ ಮಟ್ಟದಲ್ಲೂ ರ್‍ಯಾಂಕ್‌ಪಡೆದು ಅಸಾಮಾನ್ಯ ಸಾಧನೆಗೈದಿದೆ.

ರಾಷ್ಟ್ರ ಮಟ್ಟದ ವೈದ್ಯಕೀಯ ಪರೀಕ್ಷೆಯಲ್ಲಿ 2023ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಂಸ್ಥೆಯಿಂದ ಅರ್ಹತಾ ಪರೀಕ್ಷೆ ಬರೆದ ಎಲ್ಲಾ 383 ವಿದ್ಯಾರ್ಥಿಗಳು ಅರ್ಹತೆಯನ್ನು ಪಡೆದಿದ್ದಾರೆ. ಇಬ್ಬರು ವಿದ್ಯಾರ್ಥಿಗಳು 650 ಕ್ಕಿಂತ ಹೆಚ್ಚಿನ ಅಂಕ, 10 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚಿನ ಅಂಕವನ್ನು ಗಳಿಸಿರುತ್ತಾರೆ. ವೈಶಾಕ್ ಎಂ (686), ಅನಂತ್ ಕೃಷ್ಣ ದೇಸಾಯಿ (663), ಲೋಚನ್ ಗೌಡ ಜಿ ಎನ್(640), ಸ್ವಜನ್ ಆರ್ ಶೆಟ್ಟಿ (637), ಶರಣಬಸವ ಆರ್ ಸೊನ್ನಾಡ್ (625), ಜೀವನ್ ಆಶ್ರಿತ್ ಪಿರ್ರೈರಾ (621), ರಂಗಸ್ವಾಮಿ ಕೆ(617), ಮೋಹಿತ್ ಎಲ್ (612), ಬಿ ಲಕ್ಷ್ಮೀ ಕಾರ್ತಿಕೇಯ (610), ಪುಷ್ಪಾ ಎಂ.ಡಿ (602) 600 ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಾಧಕ ವಿದ್ಯಾರ್ಥಿಗಳು. 27 ವಿದ್ಯಾರ್ಥಿಗಳು 550 ಕ್ಕಿಂತಲೂ ಹೆಚ್ಚಿನ ಅಂಕ, 68 ವಿದ್ಯಾರ್ಥಿಗಳು 500 ಕ್ಕಿಂತ ಹೆಚ್ಚಿನ ಅಂಕ, 112 ವಿದ್ಯಾರ್ಥಿಗಳು 450 ಕ್ಕಿಂತ ಹೆಚ್ಚಿನ ಅಂಕ, 250 ವಿದ್ಯಾರ್ಥಿಗಳು 300 ಕ್ಕಿಂತ ಹೆಚ್ಚಿನ ಅಂಕ ಗಳಿಸಿದ್ದಾರೆ.

ರಾಷ್ಟ್ರ ಮಟ್ಟದ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ಚಿನ್ಮಯ್ ಬೋರ್ಕರ್ ಅಖಿಲ ಭಾರತ ಮಟ್ಟದಲ್ಲಿ 1398ನೇ ರ್‍ಯಾಂಕ್, ಸಾತ್ವಿಕ್ ಪೈ 4334ನೇ ರ್‍ಯಾಂಕ್ ಮತ್ತು ವೈಶಾಕ್ ಎಂ 7993ನೇ ರ್‍ಯಾಂಕ್ ಪಡೆದಿರುತ್ತಾರೆ. ಪರೀಕ್ಷೆ ಬರೆದ ಒಟ್ಟು 32 ವಿದ್ಯಾರ್ಥಿಗಳಲ್ಲಿ 14 ವಿದ್ಯಾರ್ಥಿಗಳು 90 ಪರ್ಸಂಟೈಲ್‌ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದು ಉತ್ತಮ ಸಾಧನೆಯನ್ನು ಮಾಡಿರುತ್ತಾರೆ.

ಸಿಇಟಿಯಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಬಿಎನ್‌ವೈಎಸ್, ಪಶು ವೈದ್ಯಕೀಯ, ಕೃಷಿ ವಿಜ್ಞಾನ, ಡಿ-ಫಾರ್ಮ ಹಾಗೂ ಎಂಜಿನಿಯರಿಂಗ್ ವಿಭಾಗದಲ್ಲಿ ಒಟ್ಟು 5 ರ್‍ಯಾಂಕ್‌ಗಳು ಬಂದಿದೆ. ಬಿಎನ್‌ವೈಎಸ್ ವಿಭಾಗದಲ್ಲಿ ವೈಶಾಕ್ ಎಂ ರಾಜ್ಯಕ್ಕೆ 7ನೇ ರ್‍ಯಾಂಕ್ ಪಡೆದಿದ್ದಾರೆ. ಉಳಿದಂತೆ ಪಶು ವೈದ್ಯಕೀಯದಲ್ಲಿ 14ನೇ ರ್‍ಯಾಂಕ್, ಕೃಷಿ ವಿಜ್ಞಾನದಲ್ಲಿ 16ನೇ ರ್‍ಯಾಂಕ್, ಡಿ-ಫಾರ್ಮದಲ್ಲಿ 31ನೇ ರ್‍ಯಾಂಕ್ ಮತ್ತು ಎಂಜಿನಿಯರಿಂಗ್ ವಿಭಾಗದಲ್ಲಿ ಚಿನ್ಮಯಿ ಬೋರ್ಕರ್ 92 ನೇ ರ್‍ಯಾಂಕ್ ಪಡೆದಿದ್ದಾರೆ. ಸಂಸ್ಥೆಯು ಪ್ರತಿ ವರ್ಷದಂತೆ ಈ ವರ್ಷವೂ ಅತ್ಯುತ್ತಮ ಫಲಿತಾಂಶವನ್ನು ದಾಖಲಿಸಿದ್ದು 100 ರ್‍ಯಾಂಕ್‌ನ ಒಳಗೆ 12 ವಿದ್ಯಾರ್ಥಿಗಳು 500 ರ್‍ಯಾಂಕ್‌ನ ಒಳಗೆ 31 ವಿದ್ಯಾರ್ಥಿಗಳು, 1000 ರ್‍ಯಾಂಕ್‌ನೊಳಗೆ 84 ವಿದ್ಯಾರ್ಥಿಗಳು, 2000 ರ್‍ಯಾಂಕ್ ಒಳಗೆ 136 ವಿದ್ಯಾರ್ಥಿಗಳು ಸಾಧನೆಗೈದಿದ್ದಾರೆ.

ಹತ್ತನೇ ತರಗತಿಯಲ್ಲಿ ಶೇಕಡ 80ರ ಅಸುಪಾಸಿನ ಅಂಕ ಪಡೆದ ವಿದ್ಯಾರ್ಥಿಗಳು ನೀಟ್‌ನಲ್ಲಿ 600ಕ್ಕಿಂತ ಹೆಚ್ಚಿನ ಅಂಕಗಳ ಅಸಾಮಾನ್ಯ ನಿರ್ವಹಣೆ, ಎಸ್ಸೆಸ್ಸೆಲ್ಸಿಯಲ್ಲಿ ಶೇಕಡ 60ರ ಅಸುಪಾಸಿನ ವಿದ್ಯಾರ್ಥಿಗಳು ಸಿಇಟಿಯಲ್ಲಿ 5000 ರ್‍ಯಾಂಕ್‌ನ ಒಳಗಿನ ಸಾಧನೆ. ಜೆಇಇಯಲ್ಲಿ ಶೇ 95 ಕ್ಕಿಂತ ಹೆಚ್ಚಿನ ಸಾಧನೆ ಮೂಲಕ ಎಕ್ಸಲೆಂಟ್ ವಿದ್ಯಾಸಂಸ್ಥೆ ವಿಶ್ವಾಸಕ್ಕೆ ಪಾತ್ರವಾಗಿದೆ.

ವಿದ್ಯಾರ್ಥಿಗಳ ಸಾಧನೆಗೆಸಂಸ್ಥೆ ಅಧ್ಯಕ್ಷ ಯುವರಾಜ ಜೈನ್, ಕಾರ್ಯದರ್ಶಿ ರಶ್ಮಿತಾ ಜೈನ್, ಪ್ರಾಂಶುಪಾಲ ಪ್ರದೀಪ್ ಕುಮಾರ್ ಶೆಟ್ಟಿ, ನೀಟ್ ಸಂಯೋಜಕ ಡಾ.ಪ್ರಶಾಂತ್ ಹೆಗ್ಡೆ, ಜೆಇಇ ಸಂಯೋಜಕ ರಾಮಮೂರ್ತಿ, ಸಿಇಟಿ ಸಂಯೋಜಕ ಮನೋಜ್ ಕುಮಾರ್, ಉಪನ್ಯಾಸಕರು ಅಭಿನಂದಿಸಿದ್ದಾರೆ.

ಏಕದಿನ ವಿಶ್ವಕಪ್: ಅರ್ಹತೆ ಪಡೆಯಲು ವಿಂಡೀಸ್ ವಿಫಲ

ಒಂದನೇ ಪುಟದಿಂದ

ಸ್ಕಾಟ್ಲೆಂಡ್ ಒಟ್ಟು ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದ್ದು, ಜಿಂಬಾಬ್ವೆ ಮತ್ತು ನೆದರ್ಲೆಂಡ್ಸ್ ವಿರುದ್ಧ ಪಂದ್ಯಗಳು ಬಾಕಿ ಇರುವ ಕಾರಣ ಆ ತಂಡಕ್ಕೆ ಅರ್ಹತೆಯ ಬಾಗಿಲು ಇನ್ನೂ ತೆರೆದಿದೆ.

1975 ಮತ್ತು 1979ರ ಮೊದಲ ಎರಡು ವಿಶ್ವಕಪ್‌ಗಳನ್ನು ಅಮೋಘ ರೀತಿಯಲ್ಲಿ ಗೆದ್ದ ವೆಸ್ಟ್ ಇಂಡೀಸ್, 1983ರಲ್ಲಿ ನಡೆದ 3ನೇ ವಿಶ್ವಕಪ್‌ನ ಫೈನಲ್‌ನಲ್ಲಿ ಭಾರತಕ್ಕೆ ಸೋತಿತ್ತು.

ತಂಡದ ಹೀನಾಯ ಸ್ಥಿತಿಗೆ ಕೋಚ್ ಡ್ಯಾರೆನ್ ಸಮಿ ಸ್ವತಃ ಆಕ್ರೋಶ ವ್ಯಕ್ತಪಡಿಸಿದ್ದಾರೆ. ‘ನಾವು ಟೂರ್ನಿಯಲ್ಲೇ ಅತ್ಯಂತ ಕಳಪೆ ಫೀಲ್ಡಿಂಗ್ ತಂಡವಾಗಿದ್ದೆವು. ಶನಿವಾರದ ಪಂದ್ಯದಲ್ಲೂ ಅದು ಕಳಪೆಯಾಗೇ ಇತ್ತು’ ಎಂದಿದ್ದಾರೆ.

‘ಯಾವುದೇ ಪಂದ್ಯದಲ್ಲಿ ನೂರಕ್ಕೆ ನೂರರಷ್ಟು ಪ್ರಯತ್ನ ಹಾಕಲಿಲ್ಲ’ ಎಂದು ನಾಯಕ ಶಾಯಿ ಹೋಪ್ ಹೇಳಿದ್ದಾರೆ.

ತಂಡದ ಕೆಲವರು ಅಸ್ವಸ್ಥಗೊಂಡಿದ್ದು, ಗಾಯಾಳಾಗಿದ್ದು ವಿಂಡೀಸ್‌ನ ಈ ಪರಿಸ್ಥಿತಿಗೆ ಕೆಲಮಟ್ಟಿಗೆ ಕಾರಣವಾಗಿರಬಹುದು. ಆದರೆ ಅರ್ಹತಾ ಸುತ್ತಿನಲ್ಲಿ ತಂಡ ಗೆದ್ದಿದ್ದು ಎರಡೇ ಪಂದ್ಯಗಳನ್ನು. ಅದೂ ಇದ್ದುದರಲ್ಲಿ ದುರ್ಬಲ ಎನಿಸಿದ ನೇಪಾಳ ಮತ್ತು ಅಮೆರಿಕ ತಂಡಗಳ ವಿರುದ್ಧ ಎನ್ನುವುದು ಅದರ ದಯನೀಯ ಸ್ಥಿತಿಯನ್ನು ತೋರಿಸಿತು.

ವಿಂಡೀಸ್ ತಂಡಕ್ಕೆ ಕ್ರೇಗ್ ನಾಯಕ

ಆ್ಯಂಟಿಗಾ (ಪಿಟಿಐ): ಇದೇ ತಿಂಗಳು ಪ್ರವಾಸಿ ಭಾರತ ತಂಡದ ಎದುರು ಸರಣಿ ಆಡಲಿರುವ ವೆಸ್ಟ್ ಇಂಡೀಸ್ ತಂಡವನ್ನು ಆಯ್ಕೆ ಮಾಡಲಾಗಿದೆ.

ಕ್ರೇಗ್ ಬ್ರಾಥ್‌ವೇಟ್ ನಾಯಕತ್ವದ ತಂಡದಲ್ಲಿ 18 ಆಟಗಾರರು ಇದ್ದಾರೆ. ಮೊದಲ ಟೆಸ್ಟ್ ಪಂದ್ಯವು 12ರಂದು ಇಲ್ಲಿಯೇ ಮೊದಲ ಟೆಸ್ಟ್ ನಡೆಯಲಿದೆ.

27ರಿಂದ ಮೂರು ಏಕದಿನ ಪಂದ್ಯಗಳ ಸರಣಿಯೂ ಆರಂಭವಾಗಲಿದೆ. ಆ.3ರಿಂದ ಐದು ಟಿ20 ಪಂದ್ಯಗಳ ಸರಣಿ ನಡೆಯಲಿದೆ. ಹೊಸಪ್ರತಿಭೆಗಳಾದ ಕೇವಮ್ ಹಾಜ್, ಅಲಿಕ್ ಅಥಾಂಜೆ ಮತ್ತು ಜೇರ್ ಮೆಕ್‌ಅಲಿಸ್ಟರ್ ಸ್ಥಾನ ಪಡೆದಿದ್ದಾರೆ.

ತಂಡ: ಕ್ರೇಗ್ ಬ್ರಾಥ್‌ವೇಟ್ (ನಾಯಕ), ಅಲಿಕ್ ಅಥಾಂಜೆ, ಜರ್ಮೈನ್ ಬ್ಲ್ಯಾಕ್‌ವುಡ್, ಎನ್‌ಕ್ರುಮಾ ಬಾನರ್, ತೇಜನಾರಾಯಣ ಚಂದ್ರಪಾಲ್, ರಖೀಮ್ ಕಾರ್ನವೆಲ್, ಜೊಶುವಾ ಡಿಸಿಲ್ವಾ, ಶಾನನ್ ಗ್ಯಾಬ್ರಿಯಲ್, ಕೇವಮ್ ಹಾಜ್, ಅಕೀಮ್ ಜೋರ್ಡನ್, ಜೈರ್ ಮ್ಯಾಕ್ ಅಲಿಸ್ಟರ್, ಕಿರ್ಕ್ ಮೆಕೆಂಜಿ, ಮಾರ್ಕಿನೊ ಮಿಂಡ್ಲೆ, ಆ್ಯಂಡರ್ಸನ್ ಫಿಲಿಪ್, ರೇಮನ್ ರೀಫರ್, ಕೆಮರ್ ರೋಚ್, ಜೇಡನ್ ಸೀಲ್ಸ್, ಜೊಮೆಲ್ ವಾರಿಕನ್.